ಬುಧವಾರ, ಸೆಪ್ಟೆಂಬರ್ 6, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕೃಷ್ಣ ಜನ್ಮಾಷ್ಟಮಿಯ ಶುಭಾಶಯಗಳು

ಮಂದಹಾಸ
'ಜಾನೆ ಜಾನ್' ಸಿನಿಮಾ ಟ್ರೇಲರ್ ಬಿಡುಗಡೆ ಕಾರ್ಯಕ್ರಮದಲ್ಲಿ ನಟ ಕರೀನಾ ಕಪೂರ್

ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ.

ಕರ್ನಾಟಕ ವಾರ್ತೆ

ಪ್ರಾಣಿಗಳ ದಾಳಿಯಿಂದ 15 ದಿನಗಳಲ್ಲಿ 11 ಸಾವು • ವನ್ಯಜೀವಿಗಳು ನಾಡಿಗೆ ಬರುವುದನ್ನು ತಡೆಯಲು ಸಿ.ಎಂ ಸೂಚನೆ

‘ವನ್ಯಜೀವಿ–ಮಾನವ ಸಂಘರ್ಷ ತಗ್ಗಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಹೆಚ್ಚುತ್ತಿರುವ ವನ್ಯಜೀವಿ– ಮಾನವ ಸಂಘರ್ಷ ತಗ್ಗಿಸಲು ಮತ್ತು ವನ್ಯಜೀವಿಗಳು ನಾಡಿಗೆ ಬರುವುದನ್ನು ತಡೆಯಲು ವೈಜ್ಞಾನಿಕ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಮುಖ್ಯಮಂತ್ರಿಯವರ ಗೃಹ ಕಚೇರಿ ‘ಕೃಷ್ಣಾ’ದಲ್ಲಿ ಅರಣ್ಯ ಸಚಿವರು ಮತ್ತು ಅರಣ್ಯ ಇಲಾಖೆ ಅಧಿಕಾರಿಗಳ ಜತೆ ಮಂಗಳವಾರ ಸಭೆ ನಡೆಸಿ ಮಾತನಾಡಿದರು. ‘ಕಾಡು ಪ್ರಾಣಿಗಳು ನಾಡಿಗೆ ಬರುವುದನ್ನು ತಡೆಯಲು ಅರಣ್ಯದೊಳಗೆ ಅವುಗಳಿಗೆ ಸಾಕಷ್ಟು ಪ್ರಮಾಣದ ಆಹಾರ ಮತ್ತು ನೀರು ಲಭ್ಯವಾಗುವಂತೆ ಕ್ರಮಕೈಗೊಳ್ಳಬೇಕು. ಅವುಗಳನ್ನು ನಿಯಂತ್ರಿಸಲು ಸ್ಪಷ್ಟ ಕ್ರಮಗಳನ್ನು ತೆಗೆದುಕೊಳ್ಳಬೇಕು’ ಎಂದು ಸೂಚಿಸಿದರು.

ಆನೆಗಳು ನಾಡಿಗೆ ಬಾಬರುವುದನ್ನು ತಡೆಯಲು ರೈಲ್ವೆ ಕಂಬಿಗಳ ತಡೆಗೋಡೆ ಮತ್ತು ಸೌರ ವಿದ್ಯುತ್ ತಂತಿ ಬೇಲಿ ಅಳವಡಿಕೆ ಮತ್ತು ಆನೆ ಕಂದಕಗಳನ್ನು ತೋಡಲು ಬಜೆಟ್‌ನಲ್ಲಿ ಅನುದಾನ ನೀಡಲಾಗಿದೆ. ಹೆಚ್ಚುವರಿಯಾಗಿ ನೀಡಲಾಗುವ ₹100 ಕೋಟಿ ವೆಚ್ಚದಲ್ಲಿ ಕಾಮಗಾರಿ ಆರಂಭಿಸಬೇಕು ಎಂದು ಸೂಚನೆ ನೀಡಿದರು.

15 ದಿನಗಳಲ್ಲಿ 11 ಸಾವು: ಇದಕ್ಕೂ ಮುನ್ನ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಇಲಾಖೆ ಅಧಿಕಾರಿಗಳ ಸಭೆ ನಡೆಸಿ ವನ್ಯಜೀವಿ– ಮಾನವ ಸಂಘರ್ಷ ಮತ್ತು ಪ್ರಾಣ ಹಾನಿಯ ಕುರಿತು ಸಭೆ ನಡೆಸಿದರು.

ಬಳಿಕ ಸುದ್ದಿಗಾರರ ಜತೆ ಮಾತನಾಡಿ, ಕಳೆದ 15 ದಿನಗಳ ಅಂತರದಲ್ಲಿ ಮಾನವ– ವನ್ಯಜೀವಿ ಸಂಘರ್ಷದಲ್ಲಿ 11 ಜನರು ಸಾವಿಗೀಡಾಗಿದ್ದಾರೆ. ಅಮೂಲ್ಯ ಜೀವ ಹಾನಿ ತಪ್ಪಿಸಲು ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

ರಾಜ್ಯದಲ್ಲಿ ಆನೆಗಳ ದಾಳಿಯಿಂದಲೇ ಅಧಿಕ ಸಾವು ಸಂಭವಿಸುತ್ತಿವೆ. ಕಳೆದ ಐದೂವರೆ ವರ್ಷದಲ್ಲಿ ಕಾಡಾನೆಗಳ ದಾಳಿಯಿಂದ 148 ಮಂದಿ ಮೃತ-ಪಟ್ಟಿದ್ದಾರೆ. ಆನೆ ಕಾರ್ಯಾಚರಣೆ ವೇಳೆ ಶಾರ್ಪ್ ಶೂಟರ್ ವೆಂಕಟೇಶ್ ಸೇರಿ ಇಬ್ಬರು ಹೊರ ಗುತ್ತಿಗೆ ಸಿಬ್ಬಂದಿ ಮೃತಪಟ್ಟಿದ್ದಾರೆ ಎಂದರು.

ಹೆಗ್ಗಡದೇವನಕೋಟೆ ಬಳಿ 7 ವರ್ಷದ ಬಾಲಕ ಚರಣ್ ನಾಯಕ್‌ನನ್ನು ಹುಲಿ ಕೊಂದಿರುವ ವಿಷಯ ಸಭೆಯಲ್ಲಿ ಪ್ರಸ್ತಾಪವಾಯಿತು. ಕುಮಾರ್ ಪುಷ್ಕರ್ ಅವರನ್ನು ಸ್ಥಳಕ್ಕೆ ಕಳಹಿಸಿದ್ದು, ಹುಲಿ ಹಿಡಿಯಲು ಕಾರ್ಯಾಚರಣೆ ಆರಂಭಿಸಲಾಗಿದೆ ಎಂದರು.

ಕಾಡುಪ್ರಾಣಿಗಳ ದಾಳಿಯಿಂದ ಆದ ಜೀವ ಹಾನಿ

ಆನೆ	22
ಕರಡಿ	2
ಹುಲಿ	1
ಚಿರತೆ	2
ಕಾಡುಹಂದಿ	1

(ಈ ವರ್ಷ ಏಪ್ರಿಲ್‌ನಿಂದ ಈವರೆಗೆ ಆಗಿರುವ ವನ್ಯಜೀವಿ ದಾಳಿ)

‘ಗಣೇಶ್‌ಗೆ ನೀಡಿದ್ದ ಅನುಮತಿ ರದ್ದು’

ಚಲನಚಿತ್ರ ನಟ ಗಣೇಶ್ ಅವರಿಗೆ ಬಂಡೀಪುರ ಅರಣ್ಯದ ಸಮೀಪ ಗುಂಡ್ಲುಪೇಟೆ ತಾಲ್ಲೂಕಿನ ಜಕ್ಕಳ್ಳಿಯ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ತಾತ್ಕಾಲಿಕ ಶೆಡ್ ನಿರ್ಮಿಸಲು ನಿಯಮಬದ್ಧವಾಗಿ ಅರಣ್ಯ ಇಲಾಖೆ ಅನುಮತಿ ನೀಡಿತ್ತು. ಆದರೆ, ಅವರು ಶಾಶ್ವತ ಕಟ್ಟಡ ನಿರ್ಮಿಸುತ್ತಿದ್ದಾರೆ ಎಂಬ ದೂರುಗಳು ಬಂದ ಹಿನ್ನೆಲೆಯಲ್ಲಿ ಅನುಮತಿ ರದ್ದು ಮಾಡಲಾಗಿದೆ ಎಂದು ಸಚಿವ ಈಶ್ವರ ಖಂಡ್ರೆ ಹೇಳಿದರು.

ಈಗ ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಿದ್ದು, ಪ್ರಕರಣ ನ್ಯಾಯಾಲಯದಲ್ಲಿದೆ. ಈ ಬಗ್ಗೆ ಹೆಚ್ಚು ಮಾತನಾಡುವುದಿಲ್ಲ ಎಂದರು.

ಹುಲಿ ಸೆರೆ ಕಾರ್ಯಾಚರಣೆಗೆ ‘ಅರ್ಜುನ’

ಮೈಸೂರು/ಎಚ್.ಡಿ.ಕೋಟೆ: ನಾಗರಹೊಳೆ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ ಕಾಡಂಚಿನ ಕಲ್ಲಹಟ್ಟಿ ಗ್ರಾಮದಲ್ಲಿ ಬಾಲಕನನ್ನು ಕೊಂದ ಹುಲಿ ಸೆರೆಗೆ ಅರಣ್ಯ ಇಲಾಖೆ ಕಾರ್ಯಾಚರಣೆ ಆರಂಭಿಸಿದ್ದು, ದಸರೆ ಆನೆ ‘ಅರ್ಜುನ’ ಮಂಗಳವಾರ ತೆರಳಿದ್ದಾನೆ. ಅದರಿಂದ ಗಜಪಡೆ ಅರಮನೆ ಪ್ರವೇಶ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿಲ್ಲ.

‘ಅರ್ಜುನ’ನೊಂದಿಗೆ ಮಹಾರಾಷ್ಟ್ರದ ‘ಭೀಮ’ ಹಾಗೂ ಅಶ್ವತ್ಥಾಮ ಆನೆಗಳೂ ‘ಕೂಂಬಿಂಗ್’ ಕಾರ್ಯಾ-ಚರಣೆಯಲ್ಲಿ ಪಾಲ್ಗೊಂಡಿದ್ದು, 12 ಬೋನುಗಳನ್ನು ಇರಿಸಿರುವ ಇಲಾಖೆಯು ಕಾರ್ಯಾಚರಣೆಗೆ 150ಕ್ಕೂ ಹೆಚ್ಚು ಸಿಬ್ಬಂದಿಯನ್ನು ನಿಯೋಜಿಸಿದೆ.

ಕರು ಸಾವು: ಕಲ್ಲಹಟ್ಟಿ ಸಮೀಪದ ಸಿದ್ದಾಪುರದಲ್ಲಿ ಹುಲಿಯು ಮಂಗಳವಾರ ಜಯಮ್ಮ ಎಂಬವರ ಕರುವನ್ನು ತಿಂದಿದೆ.

‘ಮೇಟಿಕುಪ್ಪೆ ವನ್ಯಜೀವಿ ವಲಯದ ಕಲ್ಲಹಟ್ಟಿ, ಸಿದ್ದಾಪುರದಲ್ಲಿ ಹುಲಿಯ ಚಲನವಲನ ಗಮನಿಸಲು 25 ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ದಾಳಿ ನಡೆಸಿದ, ಹುಲಿಯ ಹೆಜ್ಜೆ ಗುರುತುಗಳು ಕಂಡು ಬಂದ ಸ್ಥಳದ ಅಕ್ಕ-ಪಕ್ಕದ ಪ್ರದೇಶಗಳಲ್ಲೂ ಕ್ಯಾಮೆರಾ ಇರಿಸಲಾಗಿದೆ. ಡ್ರೋನ್ ಕ್ಯಾಮೆರಾಗಳಿಂದಲೂ ಪತ್ತೆ ಕಾರ್ಯ ನಡೆದಿದೆ’ ಎಂದು ವಲಯ ಅರಣ್ಯಾಧಿಕಾರಿ ಕೆ.ಎನ್.ಹರ್ಷಿತ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕಾರ್ಯಾಚರಣೆಯಲ್ಲಿ ಹುಲಿ ಯೋಜನೆ ನಿರ್ದೇಶಕ ಹರ್ಷಕುಮಾರ ಸಿ. ನರಗುಂದ, ಎಸಿಎಫ್ ಕೆ.ಎನ್. ರಂಗಸ್ವಾಮಿ, ಆರ್‌ಎಫ್‌ಒ ಅರುಣ್, ಪಿ ಸಿದ್ದರಾಜು, ಪಶುವೈದ್ಯ ಡಾ.ರಮೇಶ್ ಪಾಲ್ಗೊಂಡಿದ್ದಾರೆ’ ಎಂದರು.

ರಕ್ಷಣೆಗೆ ಕ್ರಮ: ‘ಜಿಲ್ಲೆಯಲ್ಲಿ ಮಾನವ ಮತ್ತು ಪ್ರಾಣಿ ಸಂಘರ್ಷದ ಬಗ್ಗೆ ಅರಣ್ಯ ಸಚಿವರೊಂದಿಗೆ ಚರ್ಚಿಸಲಾಗಿದ್ದು, ಹುಲಿ ಸೆರೆಗೆ ಸರ್ಕಾರ ಸೂಚಿಸಿದೆ. ಕಾಡಂಚಿನ ಜನರಿಗೆ ರಕ್ಷಣೆ ನೀಡಿ ಜಾಗೃತಿ ಮೂಡಿಸಲಾಗುವುದು’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಹೇಳಿದರು.

‘ಗಜಪಡೆಯ ಎರಡನೇ ತಂಡದೊಂದಿಗೆ ಅರ್ಜುನನ್ನು ಅರಮನೆ ಅಂಗಳಕ್ಕೆ ಕರೆತರಲಾಗುವುದು’ ಎಂದರು.

ಕಲ್ಲಹಟ್ಟಿಯ ಕೃಷ್ಣ ನಾಯಕ್ ಪುತ್ರ ಚರಣ್ ನಾಯಕ್ (8) ಹುಲಿದಾಳಿಯಿಂದ ಸೋಮವಾರ ಮೃತಪಟ್ಟಿದ್ದ. ಅವನ ತೊಡೆ, ಕೈ ಭಾಗವನ್ನು ಹುಲಿ ತಿಂದಿತ್ತು.

ಮೈಸೂರು ಜಿಲ್ಲೆ ಎಚ್‌.ಡಿ.ಕೋಟೆ ತಾಲ್ಲೂಕು ಕಲ್ಲಹಟ್ಟಿಯಲ್ಲಿ ಮಂಗಳವಾರ ಹುಲಿಸೆರೆಗೆ ಅರಣ್ಯ ಇಲಾಖೆ ಸಿಬ್ಬಂದಿ ಬೋನು ನಿರ್ಮಿಸಿದರು –ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

‘ಮಳೆ ಕೊರತೆ: ಲೋಡ್‌ಶೆಡ್ಡಿಂಗ್ ಅನಿವಾರ್ಯವಾಗಬಹುದು’

ಬೆಂಗಳೂರು: ‘ರಾಜ್ಯದಲ್ಲಿ ಮಳೆ ಕೊರತೆಯಾಗಿದ್ದು, ವಿದ್ಯುತ್ ಬೇಡಿಕೆಯೂ ಹೆಚ್ಚಾಗಿದೆ. ಇದೇ ಪರಿಸ್ಥಿತಿ ಮುಂದುವರಿದರೆ ಲೋಡ್‌ಶೆಡ್ಡಿಂಗ್ ಅನಿವಾರ್ಯವಾಗಬಹುದು’ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಹೇಳಿದರು.

ನಗರದ ಮಲ್ಲೇಶ್ವರದಲ್ಲಿ ಮಂಗಳವಾರ ನೆಲದಡಿಯಲ್ಲಿನ ವಿದ್ಯುತ್ ಪರಿವರ್ತಕ ಕೇಂದ್ರಕ್ಕೆ ಚಾಲನೆ ನೀಡಿದ ನಂತರ ಸುದ್ದಿ-ಗಾರರೊಂದಿಗೆ ಮಾತನಾಡಿದ ಅವರು, ‘ಸದ್ಯ ಲೋಡ್‌ಶೆಡ್ಡಿಂಗ್ ಪರಿಸ್ಥಿತಿ ಇಲ್ಲ. ಆದರೆ, ಬೇಸಿಗೆ ಸಂದರ್ಭದಲ್ಲಿ ಇರುವಷ್ಟು ವಿದ್ಯುತ್ ಬೇಡಿಕೆ ಈಗಾಗಲೇ ಉಂಟಾಗಿದ್ದು, ಮುಂದಿನ ದಿನಗಳಲ್ಲಿ ಪರಿಸ್ಥಿತಿ ಬಿಗಡಾಯಿಸಬಹುದು’ ಎಂದು ಹೇಳಿದರು.

‘ಮಳೆಯಾಗದೆ, ವಿದ್ಯುತ್ ಕೊರತೆ ಮುಂದುವರಿದರೆ ಅಧಿಕೃತವಾಗಿ ಲೋಡ್ ಶೆಡ್ಡಿಂಗ್ ಮಾಡಬೇಕಾಗುತ್ತದೆ. ಅಂತಹ ಸ್ಥಿತಿ ಸೃಷ್ಟಿಯಾಗದಂತೆ ಪ್ರಾರ್ಥಿಸುತ್ತೇನೆ. ವಿದ್ಯುತ್ ಉತ್ಪಾದನೆಯಲ್ಲಿ 17 ದಶಲಕ್ಷ ಯೂನಿಟ್ ಕಡಿಮೆಯಾಗಿತ್ತು. ಇಂತಹ ಸಂದರ್ಭದಲ್ಲಿ ಇದನ್ನು ನಮ್ಮ ಎಂಜಿನಿಯರ್‌ಗಳು ಸಮತೋಲನ ಮಾಡಬೇಕಾ-ಗುತ್ತದೆ. ಆಗ ತಾತ್ಕಾಲಿಕವಾಗಿ ಕಡಿತಗೊಂಡಿರುತ್ತದೆ. ಕೆಲವು ಸಲ ನಿರ್ವಹಣೆ ಅಥವಾ ವಿದ್ಯುತ್ ಪರಿವರ್ತಕಗಳ ದುರಸ್ತಿಗೆ ವಿದ್ಯುತ್ ಕಡಿತವಾಗಿರುತ್ತದೆ. ಜನ ಅದನ್ನು ಲೋಡ್‌ಶೆಡ್ಡಿಂಗ್ ಎಂದು ಭಾವಿಸಿಕೊಂಡಿದ್ದಾರೆ’ ಎಂದು ಸಮಜಾಯಿಷಿ ನೀಡಿದರು.

ಹೊಸ ನೋಂದಣಿ ಪ್ರಕ್ರಿಯೆ ಮತ್ತೆ ಆರಂಭ: ಹೆಬ್ಬಾಳಕರ

ಬೆಳಗಾವಿ: ‘ನೋಂದಾಯಿತ ಫಲಾನುಭವಿಗಳ ಬ್ಯಾಂಕ್ ಖಾತೆಗೆ ₹2 ಸಾವಿರ ಜಮೆಗೊಳಿಸುವ ಪ್ರಕ್ರಿಯೆಯಲ್ಲಿ ಗೊಂದಲವಾಗದಿರಲೆಂದು ಗೃಹಲಕ್ಷ್ಮಿ ಯೋಜನೆಯ ಹೊಸ ನೋಂದಣಿ ಪ್ರಕ್ರಿಯೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾ-ಗಿದೆ. ಎಲ್ಲ ಫಲಾನುಭವಿಗಳಿಗೆ ಹಣ ತಲುಪಿದ ಬಳಿಕ ಮತ್ತೆ ಪ್ರಕ್ರಿಯೆ ಆರಂಭಿಸ-ಲಾಗುವುದು’ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಹೇಳಿದರು.

‘ಫಲಾನುಭವಿಗಳ ಬ್ಯಾಂಕ್ ಖಾತೆ ನಿಷ್ಕ್ರಿಯಗೊಂಡಿದ್ದರಿಂದ 7ರಿಂದ 8 ಲಕ್ಷ ಫಲಾನುಭವಿಗಳಿಗೆ ಹಣ ಜಮೆಗೊಳಿಸಲು ತೊಡಕಾಗಿದೆ. ಶೀಘ್ರ ಅದನ್ನು ಸರಿ-ಪಡಿಸುತ್ತೇವೆ. ಖಜಾನೆಗೆ ಹಣ ಬಿಡುಗಡೆ ಮಾಡಲಾಗಿದ್ದು, 1 ಕೋಟಿ ಫಲಾನು-ಭವಿಗಳಿಗೆ 2ರಿಂದ 3 ದಿನಗಳಲ್ಲಿ ಹಣ ಜಮೆಯಾಗಲಿದೆ’ ಎಂದರು.

ಪ್ರಜ್ವಲ್ ಪ್ರಕರಣ: ಆಕ್ಷೇಪಣೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನ ಲೋಕಸಭಾ ಕ್ಷೇತ್ರದಿಂದ ತಮ್ಮ ಆಯ್ಕೆಯನ್ನು ಅಸಿಂಧುಗೊಳಿಸಿರುವ ಆದೇಶಕ್ಕೆ ತಡೆ ನೀಡುವಂತೆ ಕೋರಿ ಪ್ರಜ್ವಲ್ ರೇವಣ್ಣ ಸಲ್ಲಿಸಿರುವ ಮಧ್ಯಂತರ ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ಅರ್ಜಿದಾರ ಜಿ. ದೇವರಾಜೇಗೌಡ ಅವರಿಗೆ ಹೈಕೋರ್ಟ್ ಕಾಲಾವಕಾಶ ನೀಡಿದೆ.

ಈ ಕುರಿತಂತೆ ಪ್ರಜ್ವಲ್ ಪರ ವಕೀಲರು ಮಂಗಳವಾರ ಬೆಳಿಗ್ಗೆ ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠದ ಮುಂದೆ ಹಾಜರಾಗಿ, ಅರ್ಜಿಯನ್ನು ವಿಚಾರಣೆಗೆ ಕೈಗೆತ್ತಿಕೊಳ್ಳುವಂತೆ ಕೋರಿದರು.

‘ಸುಪ್ರಿಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗುವುದು. ಅಲ್ಲಿಯವರೆಗೆ ಅಸಿಂಧು ಆದೇಶಕ್ಕೆ ತಡೆ ನೀಡಬೇಕು‘ ಎಂದು ಕೋರಿದರು. ಈ ವೇಳೆ ಹಾಜರಿದ್ದ ಮೂಲ ಅರ್ಜಿದಾರ ಜಿ. ದೇವರಾಜೇಗೌಡ ಪರ ಹಿರಿಯ ವಕೀಲೆ ಪ್ರಮೀಳಾ ನೇಸರ್ಗಿ ಅವರು, ‘ಅಸಿಂಧು ಆದೇಶಕ್ಕೆ ತಡೆ ನೀಡಬಾರದು‘ ಎಂದು ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ ಆಕ್ಷೇಪಣೆ ಸಲ್ಲಿಸುವಂತೆ ವಿಚಾರಣೆಯನ್ನು ಇದೇ 8ಕ್ಕೆ ಮುಂದೂಡಿತು.

ಪಂಪ್‌ಸೆಟ್‌ಗಳಿಗೆ ವಿದ್ಯುತ್ ಕಡಿತ: ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೃಷಿ ಪಂಪ್‌ಸೆಟ್‌ಗಳಿಗೆ ಕೇವಲ 2 ರಿಂದ 3 ಗಂಟೆಗಳಷ್ಟು ವಿದ್ಯುತ್ ಪೂರೈಕೆ ಮಾಡುತ್ತಿದ್ದು, ಇದರಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಬಿಜೆಪಿ ಶಾಸಕ ವಿ.ಸುನಿಲ್‌ಕುಮಾರ್ ದೂರಿದ್ದಾರೆ. ಅಲ್ಲದೇ, ಲೋಡ್ ಶೆಡ್ಡಿಂಗ್ ಮೂಲಕ ಇಡೀ ರಾಜ್ಯವನ್ನೇ ಕತ್ತಲೆಗೆ ದೂಡಲಾಗಿದೆ, ಜನಸಾಮಾನ್ಯರು ಪರಿತಪಿಸುವಂತಾಗಿದೆ ಎಂದು ಅವರು ಮಂಗಳವಾರ ಸುದ್ದಿ-ಗೋಷ್ಠಿಯಲ್ಲಿ ಆರೋಪಿಸಿದರು.

ಪದವಿ ಪಡೆದವರೇ ಜಾತಿವಾದಿಗಳು: ಸಿ.ಎಂ

ರಾಜ್ಯ ಮಟ್ಟದ ಶಿಕ್ಷಕರ ದಿನಾಚರಣೆ ಸಮಾರಂಭದಲ್ಲಿ 43 ಸಾಧಕ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪದವಿ ಪಡೆದವರೇ ಹೆಚ್ಚೆಚ್ಚು ಜಾತಿವಾದಿಗಳಾದರೆ, ಈ ಚೆಂದಕ್ಕೆ ಶಿಕ್ಷಣ ಏಕೆ ಪಡೆಯಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಉನ್ನತ ಶಿಕ್ಷಣ ಇಲಾಖೆ ಜಂಟಿಯಾಗಿ ಮಂಗಳವಾರ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಆಯೋಜಿಸಿದ್ದ ಶಿಕ್ಷಣ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ, 43 ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

'ಪದವಿ ಮತ್ತು ಡಾಕ್ಟರೇಟ್ ಪಡೆದರೂ ಅವರಲ್ಲಿ ವೈಜ್ಞಾನಿಕ ಮನೋಭಾವ, ವೈಚಾರಿಕತೆ ಬೆಳೆಯದಿದ್ದರೆ, ತಲೆಯೊಳಗೆ ಮೌಢ್ಯ ತುಂಬಿಕೊಂಡಿದ್ದರೆ ಅವರನ್ನು ಸುಶಿಕ್ಷಿತರು ಎಂದು ಕರೆಯಲು ಸಾಧ್ಯವಿಲ್ಲ' ಎಂದು ಹೇಳಿದರು.

'ಶೂದ್ರರು ಮತ್ತು ಹೆಣ್ಣು ಮಕ್ಕಳನ್ನು ಶಿಕ್ಷಣದಿಂದ ಹೊರಗೆ ಇಡಲಾಗಿತ್ತು. ಆದರೆ, ನಮ್ಮ ಸಂವಿಧಾನ ಎಲ್ಲರಿಗೂ ಶಿಕ್ಷಣದ ಅವಕಾಶವನ್ನು ಒದಗಿಸಿತು. ಈಗ ಈ ಸಂವಿಧಾನಕ್ಕೆ ಅಪಾಯ ಬಂದೊದಗಿದೆ. ಆದ್ದರಿಂದ ಸಂವಿಧಾನವನ್ನು ರಕ್ಷಿಸಿಕೊಳ್ಳುವ ಹೊಣೆ ನಮ್ಮೆಲ್ಲರ ಮೇಲಿದೆ' ಎಂದರು.

'ಶಿಕ್ಷಕ ವೃತ್ತಿಗೆ ಬರುವಾಗ ಎಲ್ಲಾ ಶಿಕ್ಷಕರಿಗೂ ಒಂದೇ ರೀತಿಯ ತರಬೇತಿ ಇರುತ್ತದೆ. ಆದರೆ, ಬೇರೆ ಬೇರೆ ಜಿಲ್ಲೆಗಳ ಫಲಿತಾಂಶದ ಪ್ರಮಾಣ, ಶೈಕ್ಷಣಿಕ ಗುಣಮಟ್ಟ ಭಿನ್ನವಾಗಿರುವುದು ಏಕೆ ಎನ್ನುವುದನ್ನು ಪ್ರತಿಯೊಬ್ಬ ಶಿಕ್ಷಕರೂ ಪ್ರಶ್ನಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಶಿವಾಜಿ ನಗರ ಶಾಸಕ ರಿಜ್ವಾನ್ ಅರ್ಷದ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಮಾತನಾಡಿದರು.

ಪ್ರಶಸ್ತಿ ವಿಜೇತ ಶಿಕ್ಷಕರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಶಾಲಾ ಶಿಕ್ಷಣ ಸಚಿವ ಮಧುಬಂಗಾರಪ್ಪ, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಶಾಸಕ ರಿಜ್ವಾನ್ ಅರ್ಷದ್ ಮತ್ತು ಇತರರು ಇದ್ದರು

‘ರಾಜಪ್ಪ ಮೇಷ್ಟ್ರಿಂದ ಬದುಕೇ ಬದಲು’

‘ನಾನು ಇಂದು ಈ ಸ್ಥಾನದಲ್ಲಿ ನಿಲ್ಲಲು ಶಿಕ್ಷಕರೇ ಕಾರಣ’ ಎಂದು ತಮ್ಮ ಬಾಲ್ಯದ ದಿನಗಳನ್ನು ಸ್ಮರಿಸಿದ ಸಿದ್ದರಾಮಯ್ಯ, ‘ನಮ್ಮ ಊರಿಗೆ ರಾಜಪ್ಪ ಮೇಷ್ಟ್ರು ಬಾರದೇ ಇದ್ದಿದ್ದರೆ, ನಾನು ಇಂದು ಇಲ್ಲಿ ನಿಲ್ಲಲು ಸಾಧ್ಯವಿರಲಿಲ್ಲ. ಶಿಕ್ಷಕರು ವಿದ್ಯಾರ್ಥಿಗಳಿಗೆ ಸರಿ ದಾರಿ ತೋರಿಸಿದರೆ ವಿದ್ಯಾರ್ಥಿಗಳು ಎಂದಿಗೂ ನೆನಪಿನಲ್ಲಿ ಇಟ್ಟುಕೊಳ್ಳುತ್ತಾರೆ’ ಎಂದು ಹೇಳಿದರು.

‘ನಾನು ಎಮ್ಮೆ ಕಾಯುತ್ತಿದ್ದೆ. ನನ್ನ ತಂದೆ ನನ್ನನ್ನು ಶಾಲೆಗೆ ಕಳುಹಿಸಿರಲಿಲ್ಲ. ಆಗ ನಮ್ಮೂರಿನಲ್ಲಿದ್ದ ನಂಜೇಗೌಡರು ನನ್ನನ್ನು ವೀರ ಮಕ್ಕಳ ಕುಣಿತಕ್ಕೆ ಸೇರಿಸಿಕೊಂಡರು. ಆದರೆ ನಮ್ಮ ಊರಿಗೆ ಹೊಸದಾಗಿ ಬಂದ ಸಕಲೇಶಪುರ ಕಡೆಯ ರಾಜಪ್ಪ(ಮುಖ್ಯ ಶಿಕ್ಷಕ) ಅವರು ನಮ್ಮ ಅಪ್ಪನಿಗೆ ತಿಳಿಹೇಳಿ ನೇರವಾಗಿ 5ನೇ ತರಗತಿಗೆ ಪ್ರವೇಶ ಕೊಡಿಸಿದರು. ಅವರಿಂದಾಗಿ ನನ್ನ ಜೀವನದ ದಿಕ್ಕೇ ಬದಲಾಯಿತು. ಇಲ್ಲವಾಗಿದ್ದರೆ ನಾನು ವಕೀಲ ಆಗುತ್ತಿರಲಿಲ್ಲ, ಶಾಸಕ ಆಗುತ್ತಿರಲಿಲ್ಲ, ಮುಖ್ಯಮಂತ್ರಿಯೂ ಆಗುತ್ತಿರಲಿಲ್ಲ’ ಎಂದರು.

ತಳ ಸಮುದಾಯದ ಮಕ್ಕಳಿಗಾಗಿ ಕ್ಷೀರ ಭಾಗ್ಯ, ಮೊಟ್ಟೆ ಯೋಜನೆ: ಗ್ರಾಮೀಣ ಭಾಗದಲ್ಲಿ ಸರ್ಕಾರಿ ಶಾಲೆಗಳಿಗೆ ಶೇ 80ರಷ್ಟು ಮಕ್ಕಳು ತಳಸಮುದಾಯದಿಂದ ಬರುತ್ತಾರೆ. ಅವರ ಓದಿಗೆ ಅನುಕೂಲ ಆಗಲಿ ಎಂಬ ಕಾರಣಕ್ಕೇ ಕ್ಷೀರಭಾಗ್ಯ, ವಾರಕ್ಕೆರಡು ಬಾರಿ ಮೊಟ್ಟೆ ನೀಡುವುದನ್ನು ಆರಂಭಿಸಿದೆವು. ಶೂ ಭಾಗ್ಯವನ್ನೂ ಕಲ್ಪಿಸಿದೆವು ಎಂದು ಸಿದ್ದರಾಮಯ್ಯ ಹೇಳಿದರು.

ರಾಷ್ಟ್ರಮಟ್ಟದ ಪ್ರಶಸ್ತಿ ಪುರಸ್ಕೃತರು



ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ದೆಹಲಿಯ ವಿಜ್ಞಾನ ಭವನದಲ್ಲಿ ಮಂಗಳವಾರ ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಬಾಗಲಕೋಟೆ ಜಿಲ್ಲೆ ಮಹಾಲಿಂಗಪುರದ ಕೆಎಲ್‌ಇ ಸಂಸ್ಥೆಯ ಎಸ್‌ಸಿಪಿ ಪ್ರೌಢಶಾಲೆಯ ವಿಜ್ಞಾನ ಶಿಕ್ಷಕಿ ಸಪ್ನಾ ಶ್ರೀಶೈಲ ಅನಿಗೋಳ ಮತ್ತು ಶಿರಸಿಯ ಮಾರಿಕಾಂಬಾ ಸರ್ಕಾರಿ ಪ್ರೌಢಶಾಲೆ ಶಿಕ್ಷಕ ನಾರಾಯಣ ಭಾಗವತ್ ಅವರಿಗೆ ‘ರಾಷ್ಟ್ರಮಟ್ಟದ ಉತ್ತಮ ಶಿಕ್ಷಕ’ ಪ್ರಶಸ್ತಿ ಪ್ರದಾನ ಮಾಡಿದರು

‘ರಾಜ್ಯ ಸರ್ಕಾರ ಹಣ ಬಳಕೆ ಪ್ರಮಾಣಪತ್ರ ನೀಡಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸರ್ಕಾರ ನೀಡಿದ್ದ ಅನುದಾನದ ಬಳಕೆಯ ಪ್ರಮಾಣ-ಪತ್ರವನ್ನು ಕೇಂದ್ರಕ್ಕೆ ರಾಜ್ಯ ಸರ್ಕಾರ ನೀಡಿಲ್ಲ’ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ.

ಸೆ. 4ರ ‘ಪ್ರಜಾವಾಣಿ’ಯಲ್ಲಿ ಪ್ರಕಟವಾದ ‘ಕೇಂದ್ರದ ಅನುದಾನ ಶೂನ್ಯ’ ವರದಿಯನ್ನು ಉಲ್ಲೇಖಿಸಿ ‘X’ ಖಾತೆಯಲ್ಲಿ (ಟ್ವಿಟರ್) ಪ್ರತಿಕ್ರಿ-ಯಿಸಿರುವ ಅವರು, ‘ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಅನುದಾನ ಇನ್ನೂ ರಾಜ್ಯ ಸರ್ಕಾರದ ಬಳಿಯಿದೆ. ಅದು ಪೂರ್ತಿಯಾಗಿ ವೆಚ್ಚವಾದ ನಂತರವಷ್ಟೆ ಮುಂದಿನ ಕಂತಿನ ಹಣಕ್ಕೆ ನೀಡಿದ ಪ್ರಸ್ತಾವನೆಯನ್ನು ಪರಿಗಣಿಸಲು ಸಾಧ್ಯವಾಗುತ್ತದೆ’ ಎಂದಿದ್ದಾರೆ.

‘ಪ್ರತಿಯೊಂದು ಅಭಿವೃದ್ಧಿ ಕಾರ್ಯಕ್ರಮ ಕೇಂದ್ರ ಹಾಗೂ ರಾಜ್ಯದ ಸಹಭಾಗಿತ್ವದಲ್ಲಿ ನಡೆಯುತ್ತದೆ. ಹಣ ಬಳಕೆ ಪ್ರಮಾಣಪತ್ರ ನೀಡದಿದ್ದರೆ ಮುಂದಿನ ಅನುದಾನ ಬರುವುದಿಲ್ಲ’ ಎಂದೂ ಅವರು ತಿಳಿಸಿದ್ದಾರೆ.

ಪಿಡಿಒ ಪ್ರತಿಭಟನೆ ರದ್ದು

ಬೆಂಗಳೂರು: ‘ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ (ಪಿಡಿಒ) ಜ್ಯೇಷ್ಠತಾ ಪಟ್ಟಿಯನ್ನು ಕಾನೂನು ಚೌಕಟ್ಟನಡಿ ಪರಿಶೀಲಿಸಿ ಶೀಘ್ರ ಅಂತಿಮ ಪಟ್ಟಿ ಪ್ರಕಟಿಸಬೇಕು’ ಎಂದು ಇಲಾಖೆಯ ಅಧಿಕಾರಿಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಸೂಚನೆ ನೀಡಿದ್ದಾರೆ.

ಪಿಡಿಒ ಜ್ಯೇಷ್ಠತಾ ಪಟ್ಟಿ ಗೋಜಲಾಗಿದ್ದು ಅದನ್ನು ಸರಿಪಡಿಸಬೇಕು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಇದೇ 14ರಿಂದ ಪ್ರತಿಭಟನೆ ನಡೆಸಲು ಮುಂದಾಗಿದ್ದ ಕರ್ನಾಟಕ ರಾಜ್ಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ, ಸಚಿವರ ಭರವಸೆ ಹಿನ್ನೆಲೆಯಲ್ಲಿ ಪ್ರತಿಭಟನೆ ಕೈ ಬಿಡಲು ನಿರ್ಧರಿಸಿದೆ.

ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಜೊತೆ ಪ್ರಿಯಾಂಕ್ ಖರ್ಗೆ ಅವರು ಮಂಗಳವಾರ ಚರ್ಚೆ ನಡೆಸಿದರು. ಈ ವೇಳೆ ಸಚಿವರು, ಜ್ಯೇಷ್ಠತಾ ಪ್ರಶ್ನಿಸಿ ಹಲವು ಜಿಲ್ಲೆಗಳ ಅಧಿಕಾರಿಗಳು ಕೋರ್ಟ್ ಮೊರೆ ಹೋಗಿರುವುದರಿಂದ ಕಗ್ಗಂಟಾಗಿರುವ ಸಮಸ್ಯೆಯನ್ನು ಬಗೆಹರಿಸಲಾಗುವುದು. ಮುಂದಿನ ಸಾರ್ವತ್ರಿಕ ವರ್ಗಾವಣೆ ಹೊತ್ತಿಗೆ ಪಿಡಿಒಗಳ ವರ್ಗಾವಣೆಗೆ ಕೌನ್ಸಲಿಂಗ್ ನೀತಿ ಜಾರಿಗೆ ತರಲಾಗುವುದು’ ಎಂದು ಆಶ್ವಾಸನೆ ನೀಡಿದರು.

‘ಪೂರ್ಣ ಹಣ ಪಾವತಿಸದ ನಿವೇಶನ ಮುಟ್ಟುಗೋಲು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಲವೆಡೆಗಳಲ್ಲಿ ಹಂಚಿಕೆಯಾಗಿರುವ ಕೈಗಾರಿಕಾ ನಿವೇಶನಗಳಿಗೆ ಎಷ್ಟೋ ಜನ ನಿಗದಿತ ಅವಧಿಯಲ್ಲಿ ಹಣ ಪಾವತಿಸಿಲ್ಲ. ಕೆಲವರು ಶೇ 30ರಷ್ಟು ಮಾತ್ರ ಪಾವತಿಸಿದ್ದಾರೆ. ಅಂತಹ ನಿವೇಶನಗಳನ್ನು ಪತ್ತೆ ಹಚ್ಚಿ ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅಧಿಕಾರಿಗಳಿಗೆ ಸೂಚನೆ ನೀಡಿದರು.

ವಿವಿಧ ಉದ್ದಿಮೆಗಳು, ನಿಗಮಗಳ ಮುಖ್ಯಸ್ಥರ ಜೊತೆ ಮಂಗಳವಾರ ಇಡೀ ದಿನ ಸಭೆ ನಡೆಸಿದ ಅವರು, ಸಂಬಂಧಿಸಿದ ಅಧಿಕಾರಿಗಳು, ಆಯುಕ್ತರು ಮತ್ತು ವ್ಯವಸ್ಥಾಪಕ ನಿರ್ದೇಶಕರಿಗೆ ನಿರ್ದಿಷ್ಟ ಹೊಣೆಗಾರಿಕೆ ವಹಿಸಿ, ಕ್ಷಿಪ್ರಗತಿಯಲ್ಲಿ ಕೆಲಸ ಮಾಡುವಂತೆ ಮಾಡುವಂತೆ ಕಾಲಮಿತಿ ವಿಧಿಸಿದರು.

₹ 800 ಕೋಟಿ ಬಾಕಿ: ‘ಎಸ್‌ಸಿ ಮತ್ತು ಎಸ್‌ಟಿ ಉದ್ಯಮಗಳಿಗೆ ಸರ್ಕಾರ ಶೇ 75ರಷ್ಟು ರಿಯಾಯಿತಿ ದರದಲ್ಲಿ ಜಮೀನು ನೀಡುತ್ತಿದೆ. ಈ ಮೊತ್ತದಲ್ಲಿ ಕೆಐಎಡಿಬಿಗೆ ₹ 800 ಕೋಟಿ ಸರ್ಕಾರದಿಂದ ಬರಬೇಕಾಗಿದೆ. ಈ ಬಗ್ಗೆ ಆರ್ಥಿಕ ಇಲಾಖೆ ಅಧಿಕಾರಿಗಳ ಜತೆ ಮಾತನಾಡಬೇಕು’ ಎಂದರು.

ಪೋಕ್ಸೊ ಆರೋಪಿಗೆ ಹೈಕೋರ್ಟ್‌ನಲ್ಲಿ ಕೈಕೋಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ (ಪೋಕ್ಸೊ) ಪ್ರಕರಣದ ಆರೋಪಿಯೊಬ್ಬರನ್ನು ಕೈಗೆ ಕೋಳ ತೊಡಿಸಿಕೊಂಡು ಆವರಣದ ತುಂಬೆಲ್ಲಾ ಸುತ್ತಾಡಿಸಿದ ಪ್ರಸಂಗವೊಂದಕ್ಕೆ ಹೈಕೋರ್ಟ್ ಮಂಗಳವಾರ ಸಾಕ್ಷಿಯಾಯಿತು.

ಮೈಸೂರು ಜಿಲ್ಲೆ ಪಿರಿಯಾಪಟ್ಟಣ ವ್ಯಾಪ್ತಿಯ ಪೊಲೀಸರು ಪೋಕ್ಸೊ ಪ್ರಕರಣದ, ಸುಮಾರು 40ರ ಆಸುಪಾಸಿನ ಆರೋಪಿಯನ್ನು ಕೆ.ಎ–18 ಜಿ 882ರ ನೋಂದಣಿ ಸಂಖ್ಯೆ ಹೊಂದಿದ್ದ ಇಂಟರ್‌ಸೆಪ್ಟರ್ ವಾಹನ-ವೊಂದರಲ್ಲಿ ಕರೆತಂದಿದ್ದರು. ಆರೋಪಿಗೆ ಉದ್ದದ ಕೈಕೋಳ ತೊಡಿಸಿ ಕೋರ್ಟ್ ಆವರಣದಲ್ಲೆಲ್ಲಾ ಸುತ್ತಾಡಿಸಿದರು.

ಈ ವಿಷಯಕ್ಕೆ ಸಂಬಂಧಿಸಿದಂತೆ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಪಬ್ಲಿಕ್ ಪ್ರಾಸಿಕ್ಯೂಟರ್–2 (ಎಸ್‌ಪಿಪಿ) ಬ್ಯಾತ ಎನ್. ಜಗದೀಶ್, ‘ಇದು ನನ್ನ ಗಮನಕ್ಕೆ ಬಂದಿಲ್ಲ. ಒಂದು ವೇಳೆ ಪೊಲೀಸರು ಕಾನೂನು ಮೀರಿ ನಡೆದುಕೊಂಡಿದ್ದರೆ ಖಂಡಿತಾ ಕಠಿಣ ಕ್ರಮಕ್ಕೆ ಸೂಚಿಸಲಾಗುವುದು‘ ಎಂದು ತಿಳಿಸಿದರು.

ಆರೋಪಿಯಾದವರಿಗೆ ಕೈಕೋಳ ತೊಡಿಸುವ ಬಗ್ಗೆ ಪ್ರತಿಕ್ರಿಯಿಸಿದ ಹಿರಿಯ ಕ್ರಿಮಿನಲ್ ವಕೀಲ ಸಿ.ಎಚ್.ಹನುಮಂತರಾಯ ಅವರು, ‘ಕೈಕೋಳ ಯಾರಿಗೆ ತೊಡಿಸಬಾರದು ಮತ್ತು ಯಾರಿಗೆ ಯಾವ ಸಂದರ್ಭದಲ್ಲಿ ಹೇಗೆ ಕಾನೂನು ಪರಿಮಿತಿಯಲ್ಲಿ ತೊಡಿಸಲು ಅವಕಾಶವಿದೆ‘ ಎಂಬುದನ್ನು ವಿವರಿಸಿದರು. ಈ ಕುರಿತಂತೆ ಸುಪ್ರೀಂ ಕೋರ್ಟ್ ಮಾರ್ಗದರ್ಶಿ ಸೂತ್ರಗಳು ಇಂತಿವೆ.

- ಯಾವುದೇ ಜೈಲಿನಲ್ಲಿರುವ ಕೈದಿಯನ್ನು ಒಂದು ಜೈಲಿನಿಂದ ಇನ್ನೊಂದಕ್ಕೆ, ಜೈಲಿನಿಂದ ನ್ಯಾಯಾಲಯಕ್ಕೆ, ಹಿಂತಿರುಗುವಾಗ ಕೈಕೋಳ ತೊಡಿಸಲು ಪೊಲೀಸರು ಮತ್ತು ಜೈಲು ಅಧಿಕಾರಿಗಳಿಗೆ ಯಾವುದೇ ಅಧಿಕಾರವಿಲ್ಲ.
- ಒಬ್ಬ ನಿರ್ದಿಷ್ಟ ಕೈದಿ ಜೈಲಿನಿಂದ ಜಿಗಿಯುವ ಅಥವಾ ಕಸ್ಟಡಿಯಿಂದ ಹೊರಬರುವ ಸಾಧ್ಯತೆಯಿದೆ ಎಂಬ ಬಲವಾದ ತೀರ್ಮಾನಕ್ಕೆ ಬರಲು ಪೊಲೀಸರು ಅಥವಾ ಜೈಲು ಅಧಿಕಾರಿಗಳು ಉತ್ತಮ ಆಧಾರವನ್ನು ಹೊಂದಿದ್ದರೆ, ಅಂತಹ ಕೈದಿಯನ್ನು ಸಂಬಂಧಪಟ್ಟ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಬೇಕು ಮತ್ತು ಕೈದಿಗೆ ಕೈಕೋಳ ತೊಡಿಸಲು ಅನುಮತಿಗಾಗಿ ಸ್ಥಳೀಯ ಮ್ಯಾಜಿಸ್ಟ್ರೇಟ್ ಮುಂದೆ ಮನವಿ ಸಲ್ಲಿಸಬೇಕು.
- ಕೈದಿಯು ಹಿಂಸೆಗೆ ಒಳಗಾಗುವ ಸಾಧ್ಯತೆ, ತಪ್ಪಿಸಿಕೊಳ್ಳುವ ಪ್ರವೃತ್ತಿ, ಅವನು ತುಂಬಾ ಅಪಾಯಕಾರಿ, ಹತಾಶನಾಗಿದ್ದಾನೆ ಎಂದಾಗ ಕೈಕೋಳ ತೊಡಿಸಲು ಮ್ಯಾಜಿಸ್ಟ್ರೇಟ್ ಅನುಮತಿ ನೀಡಬಹುದು.
- ಪೊಲೀಸರಿಂದ ಬಂಧಿಸಲ್ಪಟ್ಟ ವ್ಯಕ್ತಿಯನ್ನು ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಿ, ನ್ಯಾಯಾಂಗ ಅಥವಾ ನ್ಯಾಯಾಂಗೇತರ - ರಿಮಾಂಡ್ ನೀಡುವ ಎಲ್ಲಾ ಪ್ರಕರಣಗಳಲ್ಲಿ, ರಿಮಾಂಡ್ ನೀಡುವ ಸಮಯದಲ್ಲಿ ಮ್ಯಾಜಿ-ಸ್ಟ್ರೇಟರಿಂದ ವಿಶೇಷ ಆದೇಶಗಳನ್ನು ಪಡೆಯದ ಹೊರತು ಸಂಬಂಧಪಟ್ಟ ವ್ಯಕ್ತಿಗೆ ಕೈಕೋಳ ತೊಡಿಸಲಾಗುವುದಿಲ್ಲ.
- ಬಂಧನದ ವಾರಂಟ್ ಅನ್ನು ಕಾರ್ಯ-ಗತಗೊಳಿಸುವಲ್ಲಿ ಪೊಲೀಸರು ಒಬ್ಬ ವ್ಯಕ್ತಿಯನ್ನು ಬಂಧಿಸಿದಾಗ, ಹಾಗೆ ಬಂಧಿಸಬೇಕಾದ ವ್ಯಕ್ತಿಗೆ ಕೈಕೋಳ ತೊಡಿಸಲು ಪೊಲೀಸರು ಮ್ಯಾಜಿಸ್ಟ್ರೇಟ್ ಅವರಿಂದ ಆದೇಶಗಳನ್ನು ಪಡೆಯದ ಹೊರತು ಹಾಗೆ ಬಂಧಿಸಲಾದ ವ್ಯಕ್ತಿಗೆ ಕೈಕೋಳ ತೊಡಿಸಲಾಗುವುದಿಲ್ಲ.
- ವಾರಂಟ್ ಇಲ್ಲದೆ ಪೊಲೀಸರು ಬಂಧಿಸಿದರೆ, ಸಂಬಂಧಪಟ್ಟ ಪೊಲೀಸ್ ಅಧಿಕಾರಿಯು ಮಾರ್ಗದರ್ಶಿ ಸಾಲುಗಳ ಆಧಾರದಡಿ, ಅಂತಹ ವ್ಯಕ್ತಿಗೆ ಕೈಕೋಳ ತೊಡಿಸುವುದು ಅವಶ್ಯಕ ಎಂದು ತೃಪ್ತಿಪಟ್ಟರೆ, ಅವನು ಪೊಲೀಸ್ ಠಾಣೆಗೆ ಕರೆದೊಯ್ಯುವವರೆಗೆ ಮತ್ತು ನಂತರ ಮ್ಯಾಜಿಸ್ಟ್ರೇಟ್ ಮುಂದೆ ಹಾಜ-ರುಪಡಿಸುವವರೆಗೆ ಹಾಗೆ ಮಾಡಬಹುದು.

ಮೈಸೂರಿನ ಅರಣ್ಯ ಭವನದಿಂದ ಅರಮನೆಗೆ ಕ್ಯಾಪ್ಟನ್ ‘ಅಭಿಮನ್ಯು’ ನೇತೃತ್ವದಲ್ಲಿ ದಸರಾ ಆನೆಗಳು ಗಾಂಭೀರ್ಯದಿಂದ ಮಂಗಳವಾರ ಹೆಜ್ಜೆ ಹಾಕಿದವು ಪ್ರಜಾವಾಣಿ ಚಿತ್ರ /ಅನೂಪ್ ರಾಘ.ಟಿ.

ಅಭಿಮನ್ಯು ನೇತೃತ್ವದ 8 ಆನೆಗಳಿಗೆ ಸಚಿವ ಡಾ.ಎಚ್‌.ಸಿ.ಮಹದೇವಪ್ಪ ಪೂಜೆ

ಅರಮನೆಗೆ ಗಜಪಡೆ ಪ್ರವೇಶ

ಪ್ರಜಾವಾಣಿ ವಾರ್ತೆ

ಮೈಸೂರು: ದಸರಾ ಜಂಬೂಸವಾರಿ-ಯಲ್ಲಿ ಪಾಲ್ಗೊಳ್ಳುವ ಅಂಬಾರಿ ಆನೆ ‘ಅಭಿಮನ್ಯು’ ನೇತೃತ್ವದ 8 ಆನೆಗಳು ಮಂಗಳವಾರ ಅರಮನೆ ಪ್ರವೇಶಿಸಿದವು.

ನಗರದ ಅರಣ್ಯ ಭವನದಲ್ಲಿ ನಾಲ್ಕು ದಿನಗಳಿಂದ ತಂಗಿದ್ದ ಅವುಗಳನ್ನು ಮುಂಜಾನೆಯೇ ಅಲಂಕರಿಸಲಾಗಿತ್ತು. ಬೆಳಿಗ್ಗೆ 10.45ಕ್ಕೆ ಸಾಂಪ್ರದಾಯಿಕವಾಗಿ ಪೂಜೆ ಸಲ್ಲಿಸಿ ಇಲಾಖೆಯ ಅಧಿಕಾರಿಗಳು ಬೀಳ್ಕೊಟ್ಟರು.

ಅರಣ್ಯ ಭವನದಿಂದ ಪ್ರಮುಖ ರಸ್ತೆಗಳ ಮೂಲಕ ಮಂಗಳವಾದ್ಯ ನಿನಾದದೊಂದಿಗೆ ಸಾಗಿದ ಆನೆಗಳು ಅರಮನೆ ಜಯಮಾರ್ತಾಂಡ ದ್ವಾರಕ್ಕೆ 12.05ಕ್ಕೆ ತಲುಪಿದವು. ಪೊಲೀಸ್ ಬಿಗಿಭದ್ರತೆ ನೀಡಲಾಗಿತ್ತು.

‘ಅಭಿಮನ್ಯು’ ಜೊತೆ ಭೀಮ, ಮಹೇಂದ್ರ, ಧನಂಜಯ, ಗೋಪಿ, ಕಂಜನ್, ವರಲಕ್ಷ್ಮಿ ಹಾಗೂ ವಿಜಯಾ ಆನೆಗಳಿಗೆ ಅರಮನೆ ಪುರೋಹಿತ ಪ್ರಹ್ಲಾದ್ ರಾವ್ ನೇತೃತ್ವದಲ್ಲಿ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮ-ಹದೇವಪ್ಪ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಿ ಸ್ವಾಗತಿಸಿದರು.

ಆನೆಗಳಿಗೆ ಪಂಚಫಲ, ಕಡುಬು, ಚಕ್ಕುಲಿ, ನಿಪ್ಪಟ್ಟು, ಹೋಳಿಗೆ, ಬೆಲ್ಲ, ಕಬ್ಬು, ಕಲ್ಲು ಸಕ್ಕರೆ, ಮೋದಕ ನೈವೇದ್ಯ ನೀಡಲಾಯಿತು. ಗಣಪತಿ ಅರ್ಚನೆ ಜೊತೆ ಚಾಮುಂಡೇಶ್ವರಿಗೆ ಪ್ರಾರ್ಥನೆ ಸಲ್ಲಿಸಲಾಯಿತು. ನಂತರ ಪೂರ್ಣಕುಂಭ ಸ್ವಾಗತದಲ್ಲಿ ಅಶ್ವಪಡೆಯು ಗಜಪಡೆಯೊಂದಿಗೆ ಜೊತೆಯಾಯಿತು.

ಅರಮನೆ ಪೊಲೀಸ್ ಬ್ಯಾಂಡ್, ಡೊಳ್ಳುಕುಣಿತ, ಕಂಸಾಳೆ, ಗಾರುಡಿಗೊಂಬೆಗಳು ಹಾಗೂ ಪೂಜಾ ಕುಣಿತ ಕಲಾವಿದರು, ಅರಮನೆ ಮುಂಭಾಗದವರೆಗೂ ಹೆಜ್ಜೆ ಹಾಕಿದರು. ಬಳಿಕ ಅರಮನೆ ಮಂಡಳಿಯಿಂದ ಪೂಜೆ ಸಲ್ಲಿಸಲಾಯಿತು.

ಉತ್ಸವದಲ್ಲಿ ತೊಡಗಿಸಿಕೊ-ಳ್ಳುವ ಅಧಿಕಾರಿಗಳಿಗೆ ಅರಮನೆ ಮಂಡಳಿ ಶಾಲು ಹೊದಿಸಿ ಸನ್ಮಾನಿಸಿತು. ಮಾವುತರು, ಕಾವಾಡಿಗಳಿಗೆ ಅಗತ್ಯ ವಸ್ತುಗಳನ್ನು ಒಳಗೊಂಡ ಕಿಟ್ ಅನ್ನು ಸಚಿವ ಮಹದೇವಪ್ಪ ವಿತರಿಸಿದರು. ಅರಮನೆ ಆವರಣದಲ್ಲಿ ನಿರ್ಮಿಸಿರುವ ಬಿಡಾರಗಳಿಗೆ ಆನೆಗಳು ತೆರಳಿದವು. ಬುಧವಾರ ಆನೆಗಳ ತೂಕ ಪರೀಕ್ಷೆ ನಡೆಯಲಿದ್ದು, ದಸರೆ ಜಂಬೂಸವಾರಿ ತಾಲೀಮು ಆರಂಭವಾಗಲಿದೆ.

‘ಮಾಲ್‌ಗಳಲ್ಲಿ ಮದ್ಯ ಮಾರಾಟ; ಚರ್ಚೆ ಅಗತ್ಯ’

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ‘ಮಾಲ್‌ಗಳಲ್ಲಿ ಮದ್ಯ ಮಾರಾಟ ವಿಷಯ ಚರ್ಚೆಯ ಹಂತದಲ್ಲಿದೆ’ ಎಂದು ಅಬಕಾರಿ ಸಚಿವ ಆರ್‌.ಬಿ. ತಿಮ್ಮಾಪುರ ಹೇಳಿದರು.

ಮಾಲ್‌ಗಳಲ್ಲಿ ಮದ್ಯ ಮಾರಾಟ ಕುರಿತು ಮಂಗಳವಾರ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ‘ಅಧಿಕಾರಿಗಳ ಸಭೆಯಲ್ಲಿ ಈ ಬಗ್ಗೆ ಸಲಹೆ ಕೇಳಿ ಬಂದಿತ್ತು. ಮಾರಾಟ ಮಾಡಬೇಕೇ ಅಥವಾ ಬೇಡವೇ ಎಂಬ ವಿಷಯ ಚರ್ಚೆ ಹಂತದಲ್ಲಿ ಇದೆ. ಅದರ ಸಾಧಕ–ಬಾಧಕಗಳ ಬಗ್ಗೆ ಚರ್ಚೆ ಆಗಬೇಕು. ಸದ್ಯಕ್ಕೆ ಜಾರಿಗೆ ತರುವ ಯೋಚನೆ ಇಲ್ಲ’ ಎಂದರು.

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಕಂಪ್ಯೂಟರ್
ಸಂಪರ್ಕದ
ಇಂಟರ್‌ನೆಟ್ ಅನ್ನು
ವೈಫೈ ಹಾಟ್‌ಸ್ಪಾಟ್
ಆಗಿಯೂ
ಬಳಸಬಹುದು.

ಅತ್ಯಾಚಾರ, ಕೊಲೆ: ಗಲ್ಲು ಶಿಕ್ಷೆ ರದ್ದುಪಡಿಸಿದ 'ಸುಪ್ರೀಂ' 6

ಕೃಷ್ಣ ಜನ್ಮಾಷ್ಟಮಿಯ ಶುಭಾಶಯಗಳು

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,780 ▲	19,574 ▲	₹61,250 (ಬೆಂಗಳೂರು) ▼	₹75,100 (ಬೆಂಗಳೂರು) ▼	83.04 ▼

ಜಿ–20 ಭೋಜನಕೂಟ ಆಮಂತ್ರಣ ಪತ್ರಿಕೆಯಲ್ಲಿ 'ಪ್ರೆಸಿಡೆಂಟ್ ಆಫ್ ಭಾರತ್' • ಬಿಜೆಪಿ–ವಿಪಕ್ಷಗಳ ಜಟಾಪಟಿ

'ಇಂಡಿಯಾ' ವಿರುದ್ಧ ಭಾರತ 'ಅಸ್ತ್ರ'

ಪ್ರಜಾವಾಣಿ ವಾರ್ತೆ

ನವದೆಹಲಿ: ಜಿ-20 ಶೃಂಗಸಭೆಯ ಅಂಗವಾಗಿ ಆಯೋಜಿಸಿರುವ ಭೋಜನಕೂಟದ ಆಮಂತ್ರಣ ಪತ್ರಿಕೆಯಲ್ಲಿ ದ್ರೌಪದಿ ಮುರ್ಮು ಅವರನ್ನು 'ಪ್ರೆಸಿಡೆಂಡ್ ಆಫ್ ಭಾರತ್' ಎಂಬುದಾಗಿ ಸಂಬೋಧಿಸಿರುವುದು ಮಂಗಳವಾರ ಭಾರಿ ಚರ್ಚೆಗೆ ಕಾರಣವಾಗಿದೆ.

ಈವರೆಗೆ, ರಾಷ್ಟ್ರಪತಿ ಭವನದ ಆಮಂತ್ರಣ ಪತ್ರಿಕೆಗಳಲ್ಲಿ 'ಪ್ರೆಸಿಡೆಂಟ್ ಆಫ್ ಇಂಡಿಯಾ' ಎಂದು ಇಂಗ್ಲಿಷ್‌ನಲ್ಲಿ ಉಲ್ಲೇಖಿಸಲಾಗುತ್ತಿತ್ತು. ಈಗ, 'ಪ್ರೆಸಿಡೆಂಟ್ ಆಫ್ ಭಾರತ್' ಎಂದಿರುವುದು ದೇಶದ ಹೆಸರನ್ನು ಬದಲಾಯಿಸಲಾಗುತ್ತದೆ ಎಂಬ ಊಹಾಪೋಹಗಳಿಗೂ ಬಲ ಬಂದಿದೆ.

ಈ ಬೆಳವಣಿಗೆಯು ಬಿಜೆಪಿ ಹಾಗೂ ವಿರೋಧ ಪಕ್ಷಗಳ ಮೈತ್ರಿಕೂಟ 'ಇಂಡಿಯಾ' ನಡುವೆ ಜಟಾಪಟಿಗೂ ಕಾರಣವಾಗಿದೆ.

'ವಿಪಕ್ಷಗಳ ಮೈತ್ರಿಕೂಟ 'ಇಂಡಿಯಾ' ಬಗ್ಗೆ ಬಿಜೆಪಿ ದಿಗಿಲುಗೊಂಡಿದೆ. ತನ್ನ ಹೃದಯದಿಂದ ಇಂಡಿಯಾ ಅಥವಾ ಭಾರತವನ್ನು ಯಾರಾದರೂ ದೂರ ಮಾಡಲಿದ್ದಾರೆಯೇ ಎಂಬ ಚಿಂತೆ ಬಿಜೆಪಿಯನ್ನು ಕಾಡುತ್ತಿದೆ' ಎಂದು 'ಇಂಡಿಯಾ' ಟೀಕಿಸಿದೆ.

ಸೆ.9ರಂದು ರಾತ್ರಿ 8ಕ್ಕೆ 'ಭಾರತ ಮಂಟಪ'ದಲ್ಲಿ ಭೋಜನಕೂಟವನ್ನು ಆಯೋಜಿಸಲಾಗಿದೆ. ಇಂಗ್ಲಿಷ್‌ನಲ್ಲಿ ಮುದ್ರಿಸಿರುವ ಆಮಂತ್ರಣ ಪತ್ರಿಕೆಯಲ್ಲಿ, 'ಪ್ರೆಸಿಡೆಂಟ್ ಆಫ್ ಭಾರತ್ ರಿಕ್ವೆಸ್ಟ್ಸ್ ದಿ ಪ್ಲೆಸರ್ ಆಫ್ ದಿ ಕಂಪನಿ ಆಫ್....' ಎಂಬ ಒಕ್ಕಣೆ ಇದೆ. ಸಾಂಪ್ರದಾಯಿಕ ಅಥವಾ ರಾಷ್ಟ್ರೀಯ ವಸ್ತ್ರ ಸಂಹಿತೆ ಪಾಲಿಸಬೇಕು. ಈ ಕಾರ್ಯಕ್ರಮಕ್ಕೆ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಶಿಷ್ಟಾಚಾರ ವಿಭಾಗದ ಸಮನ್ವಯ ಇರಲಿದೆ ಎಂದೂ ಆಮಂತ್ರಣ ಪತ್ರಿಕೆಯಲ್ಲಿ ಹೇಳಲಾಗಿದೆ.

ಅಮೆರಿಕ ಅಧ್ಯಕ್ಷ ಜೋ ಬೈಡನ್, ಬ್ರಿಟನ್ ಪ್ರಧಾನಿ ರಿಷಿ ಸುನಕ್ ಸೇರಿದಂತೆ ವಿದೇಶಿ ನಾಯಕರಿಗೆ ಅಧಿಕೃತ ಆಮಂತ್ರಣ ನೀಡುವ ಸಂದರ್ಭದಲ್ಲಿ ಇದೇ ಮೊದಲ ಬಾರಿಗೆ 'ಪ್ರೆಸಿಡೆಂಟ್ ಆಫ್ ಭಾರತ್' ಎಂಬ ಪದಪ್ರಯೋಗ ಮಾಡಲಾಗಿದೆ.

ಆಮಂತ್ರಣ ಪತ್ರಿಕೆಯಲ್ಲಿ ಹೊಸ ಪದ ಪ್ರಯೋಗ ಊಹಾಪೋಹಗಳಿಗೆ ಕಾರಣವಾಗಿದೆ. ದೇಶದ ಹೆಸರನ್ನು 'ಇಂಡಿಯಾ' ದಿಂದ 'ಭಾರತ' ಎಂಬುದಾಗಿ ಬದಲಾಯಿಸಲು ಕೇಂದ್ರ ಸರ್ಕಾರ ಯೋಜಿಸಿದೆ. ಇದೇ 18ರಿಂದ 22ರ ವರೆಗೆ ನಡೆಯುವ ಸಂಸತ್‌ನ ವಿಶೇಷ ಅಧಿವೇಶನದಲ್ಲಿ ಈ ಕುರಿತು ನಿರ್ಣಯ ಅಂಗೀಕರಿಸಲಾಗುತ್ತದೆ ಎಂಬ ಚರ್ಚೆಯನ್ನೂ ಹುಟ್ಟುಹಾಕಿದೆ.

ಪರ–ವಿರೋಧ ಚರ್ಚೆ: ಈ ಆಮಂತ್ರಣ ಪತ್ರಿಕೆಯು ಸಾರ್ವಜನಿಕವಾಗಿ ಕಂಡುಬರುತ್ತಿದ್ದಂತೆಯೇ ಬಿಜೆಪಿ ನಾಯಕರಲ್ಲಿ ಭಾರಿ ಉತ್ಸಾಹ ಕಂಡುಬಂದಿದ್ದರೆ, ಕಾಂಗ್ರೆಸ್ ಸೇರಿದಂತೆ ಇತರ ವಿರೋಧ ಪಕ್ಷಗಳ ನಾಯಕರಿಂದ ಅಪಸ್ವರ ಕೇಳಿಬಂದಿದೆ.

ಈ ಆಮಂತ್ರಣ ಪತ್ರಿಕೆಯನ್ನು ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಹಂಚಿಕೊಂಡಿದ್ದು, 'ಜನ ಗಣ ಮನ ಅಧಿನಾಯಕ ಜಯ ಹೇ, ಭಾರತ ಭಾಗ್ಯ ವಿಧಾತ..' ಎಂಬ ಸಾಲುಗಳನ್ನು ಬರೆದುಕೊಂಡಿದ್ದಾರೆ.

ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ, 'ರಿಪಬ್ಲಿಕ್ ಆಫ್ ಭಾರತ್- ನಮ್ಮ ದೇಶವು ಅಮೃತ ಕಾಲದತ್ತ ಬಹಳ ಧೈರ್ಯದಿಂದ ಹೆಜ್ಜೆ ಹಾಕುತ್ತಿದೆ. ಸಂತೋಷದ ವಿಷಯ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಈ ವಿಚಾರವಾಗಿ ಹಿಮಂತ ಬಿಸ್ವ ಶರ್ಮಾ ವಿರುದ್ಧ ಟಿಎಂಸಿ ಸಂಸದ ಸಾಕೇತ್ ಗೋಖಲೆ ಟೀಕಾ ಪ್ರಹಾರ ನಡೆಸಿದ್ದಾರೆ.

6ನೇ ಪುಟ ನೋಡಿ

ಇತಿಹಾಸ ತಿರುಚುವ ಕಾರ್ಯ: ಕಾಂಗ್ರೆಸ್

'ಮೋದಿ ಇತಿಹಾಸವನ್ನು ತಿರುಚುವ ಹಾಗೂ ಇಂಡಿಯಾ ಬದಲು ಭಾರತ ಎಂದು ಕರೆಯುವ ಮೂಲಕ ರಾಜ್ಯಗಳ ಒಕ್ಕೂಟ ವಿಭಜನೆಯನ್ನು ಮುಂದುವರಿಸಿದ್ದಾರೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಆರೋಪಿಸಿದ್ದಾರೆ.

'ಈ ವಿಷಯದಲ್ಲಿ ನಾವು ವಿಚಲಿತರಾಗುವ ಪ್ರಶ್ನೆಯೇ ಇಲ್ಲ. 'ಇಂಡಿಯಾ'ದ ಉದ್ದೇಶವೇನು? ಇದು ಭಾರತ (BHARAT)- ಸೌಹಾರ್ದ, ಸ್ನೇಹ, ಸಾಮರಸ್ಯ ಮತ್ತು ನಂಬಿಕೆಯನ್ನು ಪುನರ್‌ಸ್ಥಾಪಿಸುವುದೇ ಆಗಿದೆ (Bring Harmony, Amity, Reconciliation And Trust). ಭಾರತ ಒಂದಾಗಲಿದೆ, 'ಇಂಡಿಯಾ' ಗೆಲ್ಲಲಿದೆ' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಆರ್‌ಎಸ್‌ಎಸ್‌ನ ಬಹು ಹಿಂದಿನ ಬೇಡಿಕೆ

ಜಿ–20 ಶೃಂಗಸಭೆ ಅಂಗವಾಗಿ ಆಯೋಜಿಸಿರುವ ಭೋಜನಕೂಟದ ಆಮಂತ್ರಣ ಪತ್ರಿಕೆಯಲ್ಲಿನ 'ಪ್ರೆಸಿಡೆಂಟ್ ಆಫ್ ಭಾರತ್' ಎಂಬ ಪದಪ್ರಯೋಗವನ್ನು ಬೆಂಬಲಿಸಿ ಕೇಂದ್ರ ಸಚಿವೆ ಮೀನಾಕ್ಷಿ ಲೇಖಿ, ಪಕ್ಷದ ಹಿರಿಯ ನಾಯಕ ತರುಣ್ ಛುಗ್ ಹೇಳಿಕೆ ನೀಡಿದ್ದಾರೆ.

ಭಾರತ ಎಂಬ ಹೆಸರನ್ನೇ ಬಳಸಬೇಕು ಎಂಬುದು ಆರ್‌ಎಸ್‌ಎಸ್‌ನ ಬಹಳ ದಿನಗಳ ಬೇಡಿಕೆ. ಅಸ್ಸಾಂನಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ್ದ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್, ಸಂಘಟನೆಯ ಈ ಬೇಡಿಕೆಯನ್ನು ಪ್ರಸ್ತಾಪಿಸಿದ್ದರು.

'ಇಂಡಿಯಾ ಪದ ಬಳಕೆಯನ್ನು ನಾವು ನಿಲ್ಲಿಸಿ, ಭಾರತ ಎಂದು ಬಳಸಬೇಕು. ಇಂಗ್ಲಿಷ್ ಭಾಷಿಕರೊಂದಿಗೆ ಮಾತನಾಡುವಾಗ ಕೆಲವೊಮ್ಮೆ ಇಂಡಿಯಾ ಎಂದು ಬಳಸುತ್ತೇವೆ. ಈಗ ಅದರ ಅಗತ್ಯ ಇಲ್ಲ. ಸ್ಥಳನಾಮಗಳನ್ನು ಭಾಷಾಂತರ ಮಾಡುವುದಿಲ್ಲ. ಇದು ಜಗತ್ತಿನ ಎಲ್ಲೆಡೆ ಇರುವ ರೂಢಿ' ಎಂದು ಗುವಾಹಟಿಯಲ್ಲಿ ನಡೆದಿದ್ದ ಕಾರ್ಯಕ್ರಮದಲ್ಲಿ ಹೇಳಿದ್ದರು.

ಗುಜರಾತ್‌ನ ಆನಂದ್ ಕ್ಷೇತ್ರದ ಬಿಜೆಪಿ ಸಂಸದ ಮಿತೇಶ್ ಪಟೇಲ್ ಅವರು ಕಳೆದ ಡಿಸೆಂಬರ್‌ನಲ್ಲಿ ಈ ವಿಷಯವನ್ನು ಲೋಕಸಭೆಯಲ್ಲಿ ಪ್ರಸ್ತಾಪಿಸಿದ್ದರು. ದೇಶದ ಹೆಸರನ್ನು 'ಭಾರತ' ಇಲ್ಲವೇ 'ಭರತ ವರ್ಷ' ಎಂದು ಬದಲಾಯಿಸುವಂತೆ ಒತ್ತಾಯಿಸಿದ್ದರು.



On the occasion of G20 Summit

The President of Bharat
requests the pleasure of the company of
Shri Dharmendra Pradhan
at Dinner
on Saturday, September 09, 2023 at 2000 hrs

RSVP
Protocol Section
Ministry of External Affairs
cmn.protocol1@mea.gov.in
Tel.: 011-23088142/43

Venue
Multifunction Hall,Level-3,
Bharat Mandapam,
New Delhi.

Dress: Formal/National Dress

ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಅವರು ತಮ್ಮ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿರುವ ಆಮಂತ್ರಣ ಪತ್ರಿಕೆ

ಇಂಡಿಯಾ ಅಥವಾ ಭಾರತ ಎಂದು ಕರೆಯಲು ಮುಕ್ತ ಅವಕಾಶ: 'ಸುಪ್ರೀಂ'

ನವದೆಹಲಿ (ಪಿಟಿಐ): 'ಭಾರತೀಯರು ಸ್ವಇಚ್ಛೆಗೆ ಅನುಸಾರವಾಗಿ ದೇಶವನ್ನು ಇಂಡಿಯಾ ಅಥವಾ ಭಾರತ ಎಂದು ಕರೆಯಲು ಮುಕ್ತ ಅವಕಾಶ ಹೊಂದಿದ್ದಾರೆ' ಎಂದು 2016ರಲ್ಲಿಯೇ ಸುಪ್ರೀಂ ಕೋರ್ಟ್ ಪ್ರತಿಪಾದಿಸಿದೆ. ಇಂಡಿಯಾವನ್ನು 'ಭಾರತ' ಎಂದು ಕರೆಯುವಂತೆ ನಿರ್ದೇಶನ ನೀಡಬೇಕು ಎಂದು ಕೋರಿ ಮಹಾರಾಷ್ಟ್ರದ ನಿರಂಜನ್ ಭಟ್ವಾಲ್ ಎಂಬುವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (ಪಿಐಎಲ್) ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಈ ಆದೇಶ ನೀಡಿತ್ತು.

'ಭಾರತ ಅಥವಾ ಇಂಡಿಯಾ? ನೀವು ಭಾರತ ಎಂದು ಪರಿಗಣಿಸಿದರೆ ಹಾಗೆಂದು ಕರೆಯಲು ಅಡ್ಡಿಯಿಲ್ಲ. ಬೇರೆಯವರು ಇಂಡಿಯಾ ಎಂದು ಸಂಬೋಧಿಸಲು ಇಚ್ಛಿಸಿದರೆ ಅವರಿಗೆ ಅಡ್ಡಿಪಡಿಸಬಾರದು' ಎಂದು ಹೇಳಿದ್ದ ಮುಖ್ಯ ನ್ಯಾಯಮೂರ್ತಿಯಾಗಿದ್ದ ಟಿ.ಎಸ್. ಠಾಕೂರ್ ಹಾಗೂ ನ್ಯಾಯಮೂರ್ತಿ ಯು.ಯು. ಲಲಿತ್ (ಈಗ ಇಬ್ಬರು ನಿವೃತ್ತರಾಗಿದ್ದಾರೆ) ಅವರಿದ್ದ ವಿಭಾಗೀಯ ನ್ಯಾಯಪೀಠವು, ಅರ್ಜಿಯನ್ನು ವಜಾಗೊಳಿಸಿತ್ತು.

2015ರ ನವೆಂಬರ್‌ನಲ್ಲಿ ಸಲ್ಲಿಸಿದ್ದ ಪಿಐಎಲ್ ವಿಚಾರಣೆ ವೇಳೆಯೂ ಸುಪ್ರೀಂ ಕೋರ್ಟ್, 'ದೇಶವನ್ನು ಇಂಡಿಯಾ ಬದಲಾಗಿ 'ಭಾರತ' ಎಂದು ಕರೆಯಬೇಕಾಗಿಲ್ಲ' ಎಂದು ಸ್ಪಷ್ಟಪಡಿಸಿತ್ತು. 'ಇಂಡಿಯಾ, ಅದು ಭಾರತ, ರಾಜ್ಯಗಳ ಒಕ್ಕೂಟವಾಗಿದೆ' ಎಂದು ಸಂವಿಧಾನದ 1ನೇ ವಿಧಿಯಲ್ಲಿ ಹೇಳಲಾಗಿದೆ.

6ನೇ ಪುಟ ನೋಡಿ

ಭಾರತವನ್ನು ಸಂವಿಧಾನದಲ್ಲಿ ಇಂಡಿಯಾ ಎಂದೇ ಉಲ್ಲೇಖಿಸಲಾಗಿದ್ದು, ಇಂಡಿಯಾ ಎಂಬುದು ಎಲ್ಲರೂ ಒಪ್ಪಿರುವ ಹೆಸರಾಗಿದೆ. ಭಾರತ ಎಂದು ಮರುನಾಮಕರಣ ಮಾಡುವ ಅಗತ್ಯ ಇಲ್ಲ

ಸಿದ್ದರಾಮಯ್ಯ, ಮುಖ್ಯಮಂತ್ರಿ

ವಿರೋಧ ಪಕ್ಷಗಳ ಮೈತ್ರಿಕೂಟ 'ಇಂಡಿಯಾ' ಬಗ್ಗೆ ಹೆದರಿರುವ ಪ್ರಧಾನಿ ನರೇಂದ್ರ ಮೋದಿ ಅವರು 'ರಿಪಬ್ಲಿಕ್ ಆಫ್ ಇಂಡಿಯಾ'ವನ್ನು 'ರಿಪಬ್ಲಿಕ್ ಆಫ್ ಭಾರತ' ಮಾಡಲು ಹೊರಟಿದ್ದಾರೆ

ಡಿ.ಕೆ. ಶಿವಕುಮಾರ್
ಉಪ ಮುಖ್ಯಮಂತ್ರಿ

ಒಂದು ವೇಳೆ, ಮೈತ್ರಿಕೂಟದ ಹೆಸರು 'ಇಂಡಿಯಾ' ಎಂಬುದನ್ನು 'ಭಾರತ' ಎಂದು ಬದಲಾಯಿಸಿದರೆ, ಆಗಲೂ ದೇಶದ ಹೆಸರನ್ನು ಬಿಜೆಪಿ ಬದಲಾಯಿಸುತ್ತದೆಯೇ? ಇಂಥದ್ದೆಲ್ಲ ಯಾಕೆ ನಡೆಯುತ್ತಿದೆ? ಇದು ನಂಬಿಕೆದ್ರೋಹ

ಅರವಿಂದ ಕೇಜ್ರಿವಾಲ್, ದೆಹಲಿ ಸಿ.ಎಂ

ಇಂಡಿಯಾ ಅಂದರೆ ಭಾರತ ಎಂಬುದು ಜಗತ್ತಿಗೇ ಗೊತ್ತು. ಇಂಗ್ಲಿಷ್‌ನಲ್ಲಿ ಇಂಡಿಯಾ ಎನ್ನುತ್ತೇವೆ. 'ಇಂಡಿಯನ್ ಕಾನ್ಸ್‌ಟಿಟ್ಯೂಷನ್' ಅನ್ನು ಹಿಂದಿಯಲ್ಲಿ 'ಭಾರತ್ ಕಾ ಸಂವಿಧಾನ್' ಎನ್ನುತ್ತೇವೆ.

ಮಮತಾ ಬ್ಯಾನರ್ಜಿ
ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಹಿಂದೂಸ್ತಾನ, ಇಂಡಿಯಾ ಎಂಬ ಹೆಸರನ್ನು ಭಾರತ ಎಂದು ಬದಲಾಯಿಸಲು ಮುಂದಾಗಿರುವುದು ಬಿಜೆಪಿಯ ಅಸಹಿಷ್ಣುತೆ ತೋರಿಸುತ್ತದೆ. ಭಾರತದ ಮೂಲ ತತ್ವಗಳಾದ ಏಕತೆ ಮತ್ತು ವೈವಿಧ್ಯ ಕುರಿತು ಬಿಜೆಪಿಗಿರುವ ಅಸಹನೆ ಮತ್ತಷ್ಟು ಅಧೋಗತಿಗೆ ಇಳಿದಿದೆ.

ಮೆಹಬೂಬಾ ಮುಫ್ತಿ, ಪಿಡಿಪಿ ಮುಖ್ಯಸ್ಥೆ

'ಇಂಡಿಯಾ' ಮೈತ್ರಿಕೂಟದಿಂದ ಕೇಂದ್ರ ಸರ್ಕಾರ ಮತ್ತು ಬಿಜೆಪಿ ಸಮಸ್ಯೆ ಎದುರಿಸುತ್ತಿದೆ ಎಂದು ಊಹಿಸಿರಲಿಲ್ಲ. ಕನಿಷ್ಠ ಪಕ್ಷ ನೀವು ಅಂಬೇಡ್ಕರ್ ಅವರನ್ನು ನೆನಪಿಸಿಕೊಳ್ಳಿ. ಅವರ ಪ್ರತಿಮೆಗೆ ಹಾರ ಹಾಕುತ್ತೀರಿ. ನಿಮ್ಮ ಹೃದಯದಲ್ಲಿ ಅವರಿಗೆ ಜಾಗವಿಲ್ಲ.

ಮನೋಜ್ ಝಾ, ಆರ್‌ಜೆಡಿ ಸಂಸದ

ವಿಶ್ವಕಪ್: ಭಾರತ ತಂಡದಲ್ಲಿ ರಾಹುಲ್

ಕರ್ನಾಟಕದ ಕೆ.ಎಲ್. ರಾಹುಲ್ ಅವರು ಇದೇ ಅಕ್ಟೋಬರ್–ನವೆಂಬರ್‌ನಲ್ಲಿ ನಡೆಯಲಿರುವ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಆಡಲಿರುವ ಆತಿಥೇಯ ಭಾರತ ತಂಡಕ್ಕೆ ಆಯ್ಕೆಯಾಗಿದ್ದಾರೆ.

- ಶ್ರೀಲಂಕೆಯ ಪಲೇಕೆಲೆಯಲ್ಲಿ ತಂಡ ಪ್ರಕಟಿಸಿದ ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರ್ಕರ್
- ರೋಹಿತ್ ಬಳಗದಲ್ಲಿ ನಾಲ್ವರು ಆಲ್‌ರೌಂಡರ್‌ಗಳು
- ಗಾಯದಿಂದಾಗಿ ನಾಲ್ಕು ತಿಂಗಳು ವಿಶ್ರಾಂತಿಯಲ್ಲಿದ್ದ ರಾಹುಲ್
- ಟೂರ್ನಿ ನಡೆಯುವ ಅವಧಿ: ಅಕ್ಟೋಬರ್ 5ರಿಂದ ನವೆಂಬರ್ 19
- ಲೀಗ್ ಹಂತದಲ್ಲಿ ಒಂಬತ್ತು ಪಂದ್ಯ ಆಡಲಿರುವ ಭಾರತ

ತಂಡ ಇಂತಿದೆ

ರೋಹಿತ್ ಶರ್ಮಾ (ನಾಯಕ), ಶುಭಮನ್ ಗಿಲ್, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಕೆ.ಎಲ್. ರಾಹುಲ್, ಇಶಾನ್ ಕಿಶನ್ (ಇಬ್ಬರೂ ವಿಕೆಟ್‌ಕೀಪರ್), ಸೂರ್ಯಕುಮಾರ್ ಯಾದವ್, ಹಾರ್ದಿಕ್ ಪಾಂಡ್ಯ (ಉಪನಾಯಕ), ರವೀಂದ್ರ ಜಡೇಜ, ಅಕ್ಷರ್ ಪಟೇಲ್, ಕುಲದೀಪ್ ಯಾದವ್, ಶಾರ್ದೂಲ್ ಠಾಕೂರ್, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಜಸ್‌ಪ್ರೀತ್ ಬೂಮ್ರಾ.

'₹5 ಲಕ್ಷ ಪರಿಹಾರ ಘೋಷಣೆ ಬಳಿಕ ರೈತರ ಆತ್ಮಹತ್ಯೆ ಹೆಚ್ಚಳ'

ಪ್ರಜಾವಾಣಿ ವಾರ್ತೆ

ಹಾವೇರಿ: 'ರೈತರ ಆತ್ಮಹತ್ಯೆ ಪ್ರಕರಣಗಳು 2015ಕ್ಕೂ ಮೊದಲು ಕಡಿಮೆ ಇದ್ದವು. ₹5 ಲಕ್ಷ ಪರಿಹಾರ ಕೊಡಲು ಆರಂಭವಾದ ಬಳಿಕ ಪ್ರಕರಣಗಳು ವರದಿಯಾಗುವುದು ಜಾಸ್ತಿಯಾಯಿತು' ಎಂದು ಸಕ್ಕರೆ, ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಮಂಗಳವಾರ ಹೇಳಿದರು.

ಮಾಧ್ಯಮದವರಿಗೆ ಈ ಹೇಳಿಕೆ ನೀಡಿದ ಅವರನ್ನು ಕೆಲ ಹೊತ್ತಿನಲ್ಲೇ ಮುತ್ತಿಗೆ ಹಾಕಿದ ರೈತ ಸಂಘಟನೆಯ ಮುಖಂಡರು, 'ಹೇಳಿಕೆ ಹಿಂಪಡೆಯಬೇಕು ಮತ್ತು ರೈತರಲ್ಲಿ ಕ್ಷಮೆ ಕೇಳಬೇಕು' ಎಂದು ಪಟ್ಟು ಹಿಡಿದರು.

ಅದಕ್ಕೆ ಉತ್ತರಿಸಿದ ಸಚಿವರು 'ನನ್ನ ಹೇಳಿಕೆ ಸರಿಯಾಗಿ ಅರ್ಥ ಮಾಡಿಕೊಳ್ಳದೆ ತಪ್ಪು ಗ್ರಹಿಕೆಯಿಂದ ವಿರೋಧ ವ್ಯಕ್ತವಾಗುತ್ತಿದೆ. ನಾನು ರೈತರ ಬಗ್ಗೆ ಹಗುರವಾಗಿ ಮಾತನಾಡಿಲ್ಲ' ಎಂದು ಸಮಜಾಯಿಸಿ ನೀಡಿದರು.

ಆದರೆ, ಎಲ್ಲೆಡೆ ವ್ಯಾಪಕ ವಿರೋಧ ವ್ಯಕ್ತವಾಗುತ್ತಿದ್ದಂತೆಯೇ ತುರ್ತು ಪತ್ರಿಕಾ ಗೋಷ್ಠಿ ಕರೆದ ಸಚಿವರು, 'ನನ್ನ ಹೇಳಿಕೆ ತಪ್ಪಾಗಿ ಅರ್ಥೈಸಿಕೊಂಡು ರೈತ ಮುಖಂಡರು ಆಕ್ರೋಶಗೊಂಡಿದ್ದಾರೆ. ಪರಿಹಾರ ಮೊತ್ತ ಜಾಸ್ತಿಯಾದ ನಂತರ ರೈತ ಆತ್ಮಹತ್ಯೆ ಪ್ರಕರಣಗಳು ಹೆಚ್ಚು ವರದಿಯಾಗುತ್ತಿವೆ ಎಂದಿದ್ದೇನೆ. ಪರಿಹಾರಕ್ಕಾಗಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆಂದು ಹೇಳಿಲ್ಲ' ಎಂದು ಸಮರ್ಥಿಸಿಕೊಂಡರು.

ಸಚಿವರು ಹೇಳಿದ್ದೇನು?: 'ವೀರೇಶ್ ಸಮಿತಿ ಬರುವ ಮುನ್ನ ರೈತರ ಆತ್ಮಹತ್ಯೆ ಪ್ರಕರಣಗಳು ಕಡಿಮೆ ಇದ್ದವು. ಮೊದಲು ₹2 ಲಕ್ಷ ಪರಿಹಾರ ಕೊಡಲಾಗುತಿತ್ತು. ಪರಿಹಾರ ಹೆಚ್ಚಳವಾದ ನಂತರ ಹೃದಯಾಘಾತ, ಪ್ರೇಮ ವೈಫಲ್ಯ, ಕುಡಿದು ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳನ್ನೂ 'ರೈತ ಆತ್ಮಹತ್ಯೆ' ಪ್ರಕರಣ ಎಂದು ದಾಖಲಿಸಲಾಗುತ್ತಿದೆ'.

> **ಪರಿಹಾರಕ್ಕಾಗಿ ಯಾವುದೇ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಿಲ್ಲ. ರೈತ ಸಂಘದಿಂದ ₹50 ಲಕ್ಷ ಪರಿಹಾರ ಕೊಡುತ್ತೇವೆ. ಸಚಿವ ಶಿವಾನಂದ ಪಾಟೀಲ ಆತ್ಮಹತ್ಯೆ ಮಾಡಿಕೊಳ್ಳಲಿ**
>
> **ಮಲ್ಲಿಕಾರ್ಜುನ ಬಳ್ಳಾರಿ,** ಜಿಲ್ಲಾ ಪ್ರಧಾನ ಕಾರ್ಯದರ್ಶಿ, ರೈತ ಸಂಘ

5ನೇ ಪುಟ ನೋಡಿ

370ನೇ ವಿಧಿ: ತೀರ್ಪು ಕಾಯ್ದಿರಿಸಿದ ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ಸಂವಿಧಾನದ 370ನೇ ವಿಧಿ ಅನ್ವಯ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನ ಹಿಂಪಡೆದಿರುವುದನ್ನು ಪ್ರಶ್ನಿಸಿ ಸಲ್ಲಿಸಿರುವ ಹಲವು ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಪೂರ್ಣಗೊಳಿಸಿದ್ದು, ತೀರ್ಪು ಕಾಯ್ದಿರಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಐವರು ಸದಸ್ಯರ ಪೀಠ 16 ದಿನ ಈ ಅರ್ಜಿಗಳ ವಿಚಾರಣೆ ನಡೆಸಿತು. ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್, ಸಂಜೀವ್ ಖನ್ನಾ, ಬಿ.ಆರ್.ಗವಾಯಿ, ಸೂರ್ಯಕಾಂತ್ ಈ ಪೀಠದ ಇತರ ಸದಸ್ಯರಾಗಿದ್ದಾರೆ. 'ಅರ್ಜಿದಾರರು, ಪ್ರತಿವಾದಿಗಳ ಪರವಾಗಿ ಅಭಿಪ್ರಾಯಗಳನ್ನು ದಾಖಲಿಸಲು ಬಯಸುವ ವಕೀಲರು ಅದನ್ನು ಲಿಖಿತ ರೂಪದಲ್ಲಿ ಮೂರು ದಿನಗಳ ಒಳಗೆ ಸಲ್ಲಿಸಬಹುದು. ಹೀಗೆ ಸಲ್ಲಿಸುವ ಅಭಿಪ್ರಾಯಗಳು ಎರಡು ಪುಟ ಮೀರಬಾರದು' ಎಂದು ಪೀಠ ಸೂಚಿಸಿತು.

5ನೇ ಪುಟ ನೋಡಿ

ಎಸ್ಸೆಸ್ಸೆಲ್ಸಿ, ಪಿಯುಸಿ: 3 ವಾರ್ಷಿಕ ಪರೀಕ್ಷೆ

ಪರೀಕ್ಷೆ ವಿಧಾನದಲ್ಲಿ ಬದಲಾವಣೆ: ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷಾ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ ನಿರ್ಧರಿಸಿದೆ.

2023–24ನೇ ಶೈಕ್ಷಣಿಕ ಸಾಲಿನಿಂದಲೇ ಈ ವ್ಯವಸ್ಥೆ ಜಾರಿಯಾಗಲಿದ್ದು, ಇನ್ನು ಮುಂದೆ ಒಂದು ವರ್ಷದಲ್ಲಿ ಇಲಾಖೆಯು ಮೂರು ಬಾರಿ ವಾರ್ಷಿಕ ಪರೀಕ್ಷೆ ನಡೆಸಲಿದೆ.

ಪೂರಕ ಪರೀಕ್ಷೆ ಬದಲು ವಾರ್ಷಿಕ ಪರೀಕ್ಷೆ 1, 2 ಮತ್ತು 3 ಎಂದು ಹೆಸರಿಸಿ ಅವಕಾಶ ನೀಡಲಾಗುವುದು. ಈ ಮೂರು ಪ್ರಯತ್ನಗಳಲ್ಲಿ ಗಳಿಸಿದ ಅಂಕಗಳಲ್ಲಿ ವಿಷಯವಾರು ಅತ್ಯುತ್ತಮವಾದುದನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು ಎಂದು ತಿಳಿಸಿದೆ.

ಉದಾಹರಣೆಗೆ ವಿದ್ಯಾರ್ಥಿಗಳು ಒಂದು ಪರೀಕ್ಷೆಯಲ್ಲಿ ಕಡಿಮೆ ಅಂಕ ಪಡೆದರೆ ಇನ್ನೊಂದು ಪರೀಕ್ಷೆ ಬರೆಯಬಹುದು. ಅದರಲ್ಲಿ ಕಡಿಮೆ ಬಂದರೆ 3ನೇ ಪರೀಕ್ಷೆ ಬರೆಯಬಹುದು ಎಂದು ತಿಳಿಸಿದೆ.

ವಿದ್ಯಾರ್ಥಿಗಳ ಕಲಿಕೆಯ ವೇಗ ಮತ್ತು ಶೈಲಿಯು ವಿಭಿನ್ನವಾಗಿದೆ. 1, 2 ಮತ್ತು 3 ಪರೀಕ್ಷೆಗಳನ್ನು ನಡೆಸುವುದರಿಂದ ಅವರ ಕಲಿಕೆಯ ವೇಗಕ್ಕೆ ಹೊಂದಿಕೊಳ್ಳಲು ಮತ್ತು ಸಮಯದ ನಿರ್ಬಂಧಗಳಿಂದ ಉಂಟಾಗುವ ಒತ್ತಡವನ್ನು ಕಡಿಮೆ ಮಾಡಲು ಸಹಾಯ ಮಾಡಬಹುದು. ಈ ಮೂರು ಪರೀಕ್ಷೆಗಳಲ್ಲಿ ಏಕರೂಪತೆಯನ್ನು ಕಾಯ್ದುಕೊಳ್ಳಲಾಗುವುದು ಎಂದು ತಿಳಿಸಿದೆ. ಮುಂದಿನ ಶೈಕ್ಷಣಿಕ ವರ್ಷದಲ್ಲಿ ತಡವಾಗಿ ದಾಖಲಾಗುವ ಪ್ರಥಮ ಪಿಯುಸಿ ಅಥವಾ ಪದವಿ ವಿದ್ಯಾರ್ಥಿಗಳಿಗೆ ಸೇತುಬಂಧ ಕಾರ್ಯಕ್ರಮವನ್ನು ಸಹ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದೆ.

ಈ ಸುಧಾರಣಾ ವ್ಯವಸ್ಥೆಯನ್ನು ಅಳವಡಿಸಿಕೊಂಡರೆ ಮುಂದಿನ ವ್ಯಾಸಂಗಕ್ಕೆ ಅಥವಾ ಉದ್ಯೋಗಕ್ಕೆ ಉತ್ತಮ ಅವಕಾಶಗಳನ್ನು ಒದಗಿಸಿದಂತಾಗುತ್ತದೆ. ಈ ಬಗ್ಗೆ ವಿದ್ಯಾರ್ಥಿಗಳಿಗೆ ಸ್ಪಷ್ಟ ಮಾರ್ಗಸೂಚಿಗಳನ್ನು ಸುತ್ತೋಲೆ ಮಂಡಲಿಯಿಂದ ಹೊರಡಿಸಲಾಗುವುದು ಎಂದು ತಿಳಿಸಿದೆ.

ಸಂಭವನೀಯ ವೇಳಾಪಟ್ಟಿ

	ದ್ವಿತೀಯ ಪಿಯುಸಿ	ಎಸ್ಸೆಸ್ಸೆಲ್ಸಿ ಪರೀಕ್ಷೆ
ಪರೀಕ್ಷೆ 1	ಮಾರ್ಚ್ 1 ರಿಂದ 25; ಫಲಿತಾಂಶ: ಏಪ್ರಿಲ್ 22	ಮಾರ್ಚ್ 30 ರಿಂದ ಏಪ್ರಿಲ್ 15; ಫಲಿತಾಂಶ: ಮೇ 8
ಪರೀಕ್ಷೆ 2	ಮೇ 15 ರಿಂದ ಜೂನ್ 5; ಫಲಿತಾಂಶ: ಜೂನ್ 21	ಜೂನ್ 12 ರಿಂದ ಜೂನ್ 19; ಫಲಿತಾಂಶ: ಜೂನ್ 29
ಪರೀಕ್ಷೆ 3	ಜುಲೈ 12 ರಿಂದ ಜುಲೈ 30; ಫಲಿತಾಂಶ: ಆಗಸ್ಟ್ 16	ಜುಲೈ 29 ರಿಂದ ಆಗಸ್ಟ್ 5; ಫಲಿತಾಂಶ: ಆಗಸ್ಟ್ 19

ಚಿನಕುರಳಿ

ಪ್ರಕಾಶ್ ಶೆಟ್ಟಿ

ದೇಶದಲ್ಲೇ ಪ್ರಥಮ: ಬೆಸ್ಕಾಂನಿಂದ 500 ಕೆವಿಎ ಸಾಮರ್ಥ್ಯದ ಕೇಂದ್ರ ನಿರ್ಮಾಣ

ನೆಲದಡಿ ವಿದ್ಯುತ್ ಪರಿವರ್ತಕ ಕಾರ್ಯಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲೇ ಪ್ರಥಮ ಬಾರಿಗೆ ನೆಲದಡಿಯಲ್ಲಿ ನಿರ್ಮಿಸಿರುವ 500 ಕೆವಿಎ ಸಾಮರ್ಥ್ಯದ ವಿದ್ಯುತ್ ಪರಿವರ್ತಕ ಕೇಂದ್ರವು ಮಲ್ಲೇಶ್ವರದಲ್ಲಿ ಮಂಗಳವಾರ ಕಾರ್ಯಾರಂಭ ಮಾಡಿತು.

ಬಿಬಿಎಂಪಿ ಸಹಭಾಗಿತ್ವದಲ್ಲಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ಈ ಕೇಂದ್ರವನ್ನು ನಿರ್ಮಿಸಿದೆ. ಪಾದಚಾರಿ ಮಾರ್ಗದ ಕೆಳಗೆ ಈ ಕೇಂದ್ರವನ್ನು ಸ್ಥಾಪಿಸಲಾಗಿದೆ.

ನೆಲದಡಿಯಲ್ಲಿ ಕೇಬಲ್ ಹಾಗೂ ವಿದ್ಯುತ್ ಪರಿವರ್ತಕ ವ್ಯವಸ್ಥೆಯು ಸುರಕ್ಷತೆ ಹಾಗೂ ಗುಣಮಟ್ಟದ ವಿದ್ಯುತ್ ಪೂರೈಕೆಗೆ ಸಹಕಾರಿಯಾಗಲಿದೆ ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರಿನ ಮಲ್ಲೇಶ್ವರದಲ್ಲಿ ನಿರ್ಮಿಸಿರುವ ನೆಲದಡಿಯಲ್ಲಿನ ವಿದ್ಯುತ್ ಪರಿವರ್ತಕ ಕೇಂದ್ರವನ್ನು ಇಂಧನ ಸಚಿವ ಕೆ.ಜೆ. ಜಾರ್ಜ್ ಮತ್ತು ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ವೀಕ್ಷಿಸಿದರು –ಪ್ರಜಾವಾಣಿ ಚಿತ್ರ

ಒಟ್ಟು ₹1.97 ಕೋಟಿ ವೆಚ್ಚದಲ್ಲಿ ಈ ಪರಿವರ್ತಕ ಕೇಂದ್ರ (ಟಿ.ಸಿ) ನಿರ್ಮಿಸಲಾಗಿದೆ. ಈ ಪೈಕಿ ಸಿವಿಲ್ ಕಾಮಗಾರಿಗೆ ₹64 ಲಕ್ಷ ಮತ್ತು ಎಲೆಕ್ಟ್ರಿಕಲ್ ಕಾಮಗಾರಿಗೆ ₹1.33 ಕೋಟಿ ವೆಚ್ಚವಾಗಿದೆ.

5ನೇ ಪುಟ ನೋಡಿ

ಕಾರ್ಯನಿರ್ವಹಣೆ ಹೇಗೆ?

ಇದು ತೈಲರಹಿತ ಪರಿವರ್ತಕವಾಗಿದ್ದು, 'ಡ್ರೈ' ಬ್ಯಾಟರಿಗಳನ್ನು ಅಳವಡಿಸಲಾಗಿದೆ. ಹೀಗಾಗಿ ಹೆಚ್ಚು ಸುರಕ್ಷಿತವಾಗಿದೆ. ನೆಲದ ಮೇಲೆ ಸಾಮಾನ್ಯವಾಗಿ ಅಳವಡಿಸುವ ವಿದ್ಯುತ್ ಪರಿವರ್ತಕ್ಕೆ ತೈಲ ಬಳಸಲಾಗುತ್ತದೆ. ತೈಲ ಸೋರಿಕೆಯಾಗಿ ಬೆಂಕಿ ಅವಘಡಗಳು ಸಂಭವಿಸುವ ಸಾಧ್ಯತೆಗಳಿರುತ್ತವೆ. ಆದರೆ, ಇಲ್ಲಿ ಅಂತಹ ಅವಘಡಗಳು ಸಂಭವಿಸುವುದು ಬಹಳ ವಿರಳ.

5ನೇ ಪುಟ ನೋಡಿ

ಕ್ಷಣಕ್ಷಣದ ತಾಜಾ ಸುದ್ದಿಗಳಿಗಾಗಿ prajavani.net ನೋಡಿ

8ರಂದು ವಿವಿಧೆಡೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ

ಬೆಂಗಳೂರು: ವಿದ್ಯುತ್ ನಿರ್ವಹಣಾ ಕೇಂದ್ರದಲ್ಲಿ ನಿರ್ವಹಣೆ ಕಾಮಗಾರಿ ಕೈಗೊಂಡಿರುವುದರಿಂದ ಇದೇ 8ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 3ಗಂಟೆವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

ಸ್ಥಳಗಳು: ಶೋಭಾ ಫಾರೆಸ್ಟ್ ಅಪಾರ್ಟ್‌ಮೆಂಟ್, ತಲಘಟ್ಟಪುರ ಮತ್ತು ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ವಕ್ಫ್ ಅಧ್ಯಕ್ಷ ಚುನಾವಣೆ ಪ್ರಶ್ನಿಸಿದ್ದ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯ ಅಧ್ಯಕ್ಷ ಸ್ಥಾನದ ಚುನಾವಣೆಗೆ ಸರ್ಕಾರ ಹೊರಡಿಸಿದ್ದ ಅಧಿಸೂಚನೆ ರದ್ದುಪಡಿಸುವಂತೆ ಕೋರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಬಾಗಲಕೋಟೆ ಜಿಲ್ಲೆಯ ಹುನಗುಂದ ನಿವಾಸಿ ಅಬ್ದುಲ್ ಜಬ್ಬಾರ್ ಕಲಬುರಗಿ ಎಂಬುವರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಆರ್. ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ್ ಶೆಟ್ಟಿ, ಹೆಚ್ಚುವರಿ ಅಡ್ವೊಕೇಟ್ ಜನರಲ್ ಶೇಖ್ ಇಸ್ಮಾಯಿಲ್ ಜಬೀವುಲ್ಲಾ ಹಾಗೂ ವಕ್ಫ್ ಮಂಡಳಿ ಪರ ವಕೀಲೆ ಎಸ್.ಆರ್. ಅನುರಾಧಾ ಮತ್ತು ಅರ್ಜಿದಾರರ ಪರ ವಕೀಲರ ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ 'ಅರ್ಜಿದಾರರು ವಕ್ಫ್ ಮಂಡಳಿಯ ಸದಸ್ಯರಲ್ಲ. ಹಾಗಾಗಿ ಅವರು ಅರ್ಜಿ ಸಲ್ಲಿಸುವ ಹಕ್ಕು ಹೊಂದಿಲ್ಲ' ಎಂದು ಹೇಳಿ ಮನವಿಯನ್ನು ತಿರಸ್ಕರಿಸಿತು.

ಅಂತೆಯೇ, 2020ರಿಂದ ಖಾಲಿ ಇರುವ ವಕ್ಫ್ ಮಂಡಳಿಯ ಮುತವಲ್ಲಿ ಕೋಟಾದ ಒಂದು ಸದಸ್ಯ ಸ್ಥಾನವನ್ನು ಭರ್ತಿ ಮಾಡುವಂತೆ ಅರ್ಜಿದಾರರು ಆ. 8ರಂದು ಸಲ್ಲಿಸಿರುವ ಮನವಿಯನ್ನು ಪರಿಗಣಿಸಿ ಎಂದು ಸರ್ಕಾರಕ್ಕೆ ನಿರ್ದೇಶಿ ಸಿತು.

ದ್ವಾದಶ ವರ್ಷೋತ್ಸವ ಇದೇ 16ರಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಷಡ್ಜ ಕಲಾ ಕೇಂದ್ರದಿಂದ ಇದೇ 16ರಂದು 'ದ್ವಾದಶ ವರ್ಷೋತ್ಸವ' ಕಾರ್ಯಕ್ರಮವು ನಗರದ ಸೇವಾ ಸದನದಲ್ಲಿ ಆಯೋಜನೆಯಾಗಲಿದೆ.

ಈ ಕಾರ್ಯಕ್ರಮದಲ್ಲಿ ಬಸವನ ಗುಡಿಯ ರಾಮಕೃಷ್ಣ ಮಠದ ಅಧ್ಯಕ್ಷ ರಾದ ಸ್ವಾಮಿ ನಿತ್ಯಸ್ಥಾನಂದಜೀ ಅವರು ಸಾನ್ನಿಧ್ಯ ವಹಿಸಲಿದ್ದಾರೆ.

75 ವರ್ಷ ಪೂರೈಸುತ್ತಿರುವ ಗಾಯಕ ವಿನಾಯಕ ತೊರವಿ ಅವರನ್ನು ಸನ್ಮಾನಿಸಲಾಗುವುದು. ಇದೇ ಸಂದರ್ಭ ದಲ್ಲಿ ವಿನಾಯಕ ತೊರವಿ ಅವರ ಸಂಗೀತ ಪಯಣದ ಕುರಿತ ಪುಸ್ತಕ 'ನಾದ ಸಂವಾದ' ಬಿಡುಗಡೆಯಾಗಲಿದೆ.

ಗಾಯಕ ಸಮೀಹನ ಕುಶಾಲ್ ಹಿಂದೂಸ್ತಾನಿ ಸಂಗೀತ ಪ್ರಸ್ತುತಪಡಿಸ ಲಿದ್ದು, ಅವರಿಗೆ ತಬಲಾ ವಾದಕ ರವೀಂದ್ರ ಯಾವಗಲ್, ಹಾರ್ಮೋನಿಯಂ ವಾದಕ ರವೀಂದ್ರ ಕಾಟೋಟಿ ಸಾಥ್ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ತಿದ್ದುಪಡಿ

ಮಂಗಳವಾರದ (ಸೆ.5) ಸಂಚಿಕೆಯಲ್ಲಿ 'ಬರಲಿದೆ ಡಬಲ್ ಡೆಕ್ಕರ್ ಬಸ್!' ಸುದ್ದಿಯಲ್ಲಿ ಬಿಬಿಎಂಪಿ ಬಸ್ ಖರೀದಿ ಸಲಿದೆ ಎಂದು ತಪ್ಪಾಗಿ ಬರೆಯಲಾಗಿದೆ. ಇದು ಬಿಎಂಟಿಸಿ ಎಂದಾಗಬೇಕಿತ್ತು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ. ದೂರವಾಣಿ ಸಂಖ್ಯೆ:08156–270058
EMail ID: eerdwsd.ckb2@gmail.com
ಸಂಖ್ಯೆ:ಕಾಅ/ಗ್ರಾ.ಕು.ನೀ.&ನೈ.ವಿ/ಚಿ.ಪುರ/ಟೆಂಡರ್/ಸ.ಇ–1/2023–24
ದಿನಾಂಕ:01.09.2023

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ)
ಟೆಂಡರ್ ಪ್ರಕಟಣೆ ಸಂಖ್ಯೆ: 08/2023–24 ದಿನಾಂಕ: 01.09.2023

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ ರವರು **2022–23ನೇ JJM** ಯೋಜನೆಯಡಿ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ **63** ಗ್ರಾಮಗಳಲ್ಲಿ ಕುಡಿಯುವ ನೀರು ಸರಬರಾಜು ಯೋಜನೆಗೆ ಸಂಬಂಧಿಸಿದಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಸಂಸ್ಥೆಯಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಸ್ಟ್ಯಾಂಡರ್ ಟೆಂಡರ್ ಡಾಕ್ಯೂಮೆಂಟ್ **KW-I & KW-II-KW-III** ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ಮತ್ತು ಇ.ಎಂ.ಡಿಯನ್ನು ಈ ಪೇಮೆಂಟ್‌ನಲ್ಲಿ **(Credit Card/Direct Debit/ NEFT & OTC** ಮುಖೇನ) ಅಥವ ಚಲನ್ ಮೂಲಕ ಭರ್ತಿಮಾಡುವ ಗುತ್ತಿಗೆದಾರರು ಕೊನೆಯ ದಿನಾಂಕ ಕ್ಕಿಂತ 2 ದಿನ ಮುಂಚಿತವಾಗಿ ಸಲ್ಲಿಸುವುದು. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ **https://kppp.karnataka.gov.in/** ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ.(1) ಟೆಂಡರ್ ಪ್ರಶ್ನೆಗಳು/ ಸ್ಪಷ್ಟೀಕರಣಗಳಿಗೆ ಕೊನೆಯ ದಿನಾಂಕ ಮತ್ತು ಸಮಯ **ದಿನಾಂಕ: 08.09.2023 ರಂದು ಸಂಜೆ 5.30 ಗಂಟೆವರೆಗೆ,** (2) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ **ದಿನಾಂಕ: 12.09.2023 ರಂದು ಸಂಜೆ 5.30 ಗಂಟೆವರೆಗೆ,** (3) ಭರ್ತಿ ಮಾಡಿದ ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 14.09.2023 ಬೆಳಗ್ಗೆ 11.00 ಗಂಟೆಗೆ,** (4) ಆರ್ಥಿಕ ಬಿಡ್ಡನ್ನು ತೆರೆಯುವ **ದಿನಾಂಕ: 16.09.2023 ಬೆಳಗ್ಗೆ 11.00 ಗಂಟೆಗೆ,** ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನ ಟೆಂಡರ್ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ,
ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:74/ಕೆಎಸ್‌ಎಂಸಿಎ/2023–24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರವರ ಕಛೇರಿ ಬೆಂಗಳೂರು ದಕ್ಷಿಣ ವಿಭಾಗ,
ಅಮೃತನಗರ, ಕೋಣನಕುಂಟೆ ಮುಖ್ಯ ರಸ್ತೆ, ಸೌಧಾಮಿನಿ ಲೇಔಟ್, ಬೆಂಗಳೂರು–560 062

ಸಂಖ್ಯೆ: ಬೃಬೆಂಮಪಾ/ಕಾಪಾಅ/ಬೆಂದವಿ/ಟೆಂಡರ್/03/2023–24 ದಿನಾಂಕ: 05.09.2023

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಏಕಲಕೋಟೆ ಟೆಂಡರ್)

(ಸ್ಟ್ಯಾಂಡರ್ಡ್ ಟೆಂಡರ್ ದಾಖಲೆ ಕೆಡಬ್ಲ್ಯೂ 1 & 2) (ಕರ್ನಾಟಕ ಸಾರ್ವಜನಿಕ ಪ್ರೊಕ್ಯೂರ್‌ಮೆಮಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ಬೆಂಗಳೂರು ದಕ್ಷಿಣ ವಿಭಾಗ) ಬೃ.ಬೆಂ.ಮ.ಪಾ ಬೆಂಗಳೂರು–62, ಇವರು, ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ಬೆಂಜಮಂ/ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಗಳ ಹೆಸರು	ಕಾಮಗಾರಿಗಿಟ್ಟ ಅಂದಾಜು ಮೊತ್ತ (₹. ಲಕ್ಷಗಳಲ್ಲಿ)	ಇಎಂಡಿ (₹.ಗಳಲ್ಲಿ)	ಮೀಸಲಾತಿ ವರ್ಗೀಕರಣ
1.	ವಾರ್ಡ್ ಸಂಖ್ಯೆ–184 ಉತ್ತರಹಳ್ಳಿಯ ತುರಹಳ್ಳಿ, ಗುಬ್ಬಲಾಳ ಮತ್ತು ಸುಬ್ರಮಣ್ಯಪುರ ಗ್ರಾಮಗಳಲ್ಲಿ ಕೊಳವೆಬಾವಿ ಕೊರೆಸುವುದು, ಪಂಪ್, ಮೋಟಾರ್ ಎರೆಕ್ಷನ್ ಹಾಗೂ ವಿದ್ಯುದ್ಧೀಕರಣ ಮಾಡುವುದು.	24.00	25000.00	ಪ.ಪಂಗಡ
2.	ವಾರ್ಡ್ ಸಂಖ್ಯೆ–197 ವಸಂತಪುರದ ದೊಡ್ಡಕಲ್ಲಸಂದ್ರ ಗ್ರಾಮಗಳಲ್ಲಿ ಕೊಳವೆಬಾವಿ ಕೊರೆಸುವುದು, ಪಂಪ್, ಮೋಟಾರ್ ಎರೆಕ್ಷನ್ ಹಾಗೂ ವಿದ್ಯುದ್ಧೀಕರಣ ಮಾಡುವುದು.	8.00	20000.00	ಸಾಮಾನ್ಯರಿಗೆ
3.	ವಾರ್ಡ್ ಸಂಖ್ಯೆ–196 ಅಂಜನಾಪುರದ ತಿಪ್ಪಸಂದ್ರ ಮತ್ತು ಅಂಜನಾಪುರ ಗ್ರಾಮಗಳಲ್ಲಿ ಕೊಳವೆಬಾವಿ ಕೊರೆಸುವುದು, ಪಂಪ್, ಮೋಟಾರ್ ಎರೆಕ್ಷನ್ ಹಾಗೂ ವಿದ್ಯುದ್ಧೀಕರಣ ಮಾಡುವುದು.	16.00	40000.00	ಸಾಮಾನ್ಯರಿಗೆ
4.	ವಾರ್ಡ್ ಸಂಖ್ಯೆ–194 ಗೊಟ್ಟಿಗೆರೆಯ ಗೊಟ್ಟಿಗೆರೆ ಮತ್ತು ಪಿಳ್ಳಗಾನಹಳ್ಳಿ ಗ್ರಾಮಗಳಲ್ಲಿ ಕೊಳವೆಬಾವಿ ಕೊರೆಸುವುದು, ಪಂಪ್, ಮೋಟಾರ್ ಎರೆಕ್ಷನ್ ಹಾಗೂ ವಿದ್ಯುದ್ಧೀಕರಣ ಮಾಡುವುದು.	16.00	40000.00	ಸಾಮಾನ್ಯರಿಗೆ
5.	ವಾರ್ಡ್ ಸಂಖ್ಯೆ–192 ಬೇಗೂರಿನ ಕಮ್ಮನಹಳ್ಳಿ, ಬಸವನಪುರ, ಯೆಲೇನಹಳ್ಳಿ, ಬೇಗೂರು ಮತ್ತು ಚಿಕ್ಕ ತೋಗೂರು ಗ್ರಾಮಗಳಲ್ಲಿ ಕೊಳವೆಬಾವಿ ಕೊರೆಸುವುದು, ಪಂಪ್, ಮೋಟಾರ್ ಎರೆಕ್ಷನ್ ಹಾಗೂ ವಿದ್ಯುದ್ಧೀಕರಣ ಮಾಡುವುದು.	40.00	40000.00	ಪ.ಜಾತಿ
6.	ವಾರ್ಡ್ ಸಂಖ್ಯೆ–191 ಸಿಂಗಸಂದ್ರದ ನಾಗನಾಥಪುರ, ಪರಪ್ಪನ ಅಗ್ರಹಾರ ಮತ್ತು ಕೂಡ್ಲು ಗ್ರಾಮಗಳಲ್ಲಿ ಕೊಳವೆಬಾವಿ ಕೊರೆಸುವುದು, ಪಂಪ್, ಮೋಟಾರ್ ಎರೆಕ್ಷನ್ ಹಾಗೂ ವಿದ್ಯುದ್ಧೀಕರಣ ಮಾಡುವುದು.	40.00	80000.00	ಸಾಮಾನ್ಯರಿಗೆ
7.	ಬೆಂಗಳೂರು ದಕ್ಷಿಣ ವಿಭಾಗದಲ್ಲಿ ನೀರು ಟ್ಯಾಂಕರ್‌ಗಳಿಗೆ ತುರ್ತು ನೀರು ಸರಬರಾಜು ಮಾಡುವುದು.	9.75	12187.50	ಪ.ಜಾತಿ

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ **19.09.2023**ರ ಸಂಜೆ **4:00** ಗಂಟೆಯವರೆಗೆ. (2) ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ **19.09.2023**ರ ಸಂಜೆ **4:00** ಗಂಟೆಯವರೆಗೆ. (3) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **21.09.2023**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. (4) ಈ ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ **www.bbmp.gov.in.** ನಲ್ಲಿಯು ಕೂಡ ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಬೆಂಗಳೂರು ದಕ್ಷಿಣ ವಿಭಾಗ

ಬಿಜಿಎಸ್‌ಇ ಪ್ರಾಪರ್ಟೀಸ್ ಆ್ಯಂಡ್ ಸೆಕ್ಯುರಿಟೀಸ್ ಲಿಮಿಟೆಡ್
(CIN: U70102KA1937PLC001292)
ಸ್ಟಾಕ್ ಎಕ್ಸ್‌ಚೇಂಜ್ ಟವರ್ಸ್, ನಂ. 51, 1ನೇ ಕ್ರಾಸ್, ಜೆ. ಸಿ. ರಸ್ತೆ,
ಬೆಂಗಳೂರು 560027 ಫೋನ್: 080–41575566
ಇಮೇಲ್: ed_secretary@bgse.co.in; Website:www.bgse.co.in

60ನೇ ವಾರ್ಷಿಕ ಸರ್ವಸದಸ್ಯರ ಸಭೆಯ (AGM) ಸೂಚನೆ

ಎಜಿಎಮ್ ಸೂಚನೆ: ಬಿಜಿಎಸ್‌ಇ ಪ್ರಾಪರ್ಟೀಸ್ ಆ್ಯಂಡ್ ಸೆಕ್ಯುರಿಟೀಸ್ ಲಿಮಿಟೆಡ್ (ಕಂಪನಿ), **ತನ್ನ ಅರವತ್ತನೆಯ ವಾರ್ಷಿಕ ಸರ್ವಸದಸ್ಯರ ಸಭೆಯನ್ನು (ಎಜಿಎಮ್) ಶುಕ್ರವಾರ, 29ನೇ ಸೆಪ್ಟೆಂಬರ್, 2023 ರಂದು ಬೆಳಿಗ್ಗೆ 09.30 ಗಂಟೆಗೆ** ಒಂದು ಸಾಮಾನ್ಯ ಸ್ಥಳದಲ್ಲಿ ಸದಸ್ಯರ ಭೌತಿಕ ಉಪಸ್ಥಿತಿ ಇಲ್ಲದೆಯೇ, ಕಂಪನಿಗಳ ಅಧಿನಿಯಮ, 2013ರ ಅನ್ವಯವಾಗುವ ನಿಬಂಧನೆಗಳನ್ನು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು (MCA) ಹೊರಡಿಸಿರುವ ಸಂ. 14/2020 ದಿ.08 ಏಪ್ರಿಲ್ 2020, 17/2020 ದಿ.13 ಏಪ್ರಿಲ್ 2020, 20/2020 ದಿ.05 ಮೇ 2020, ಮತ್ತು ನಂತರದ ಸುತ್ತೋಲೆಗಳು ಅದರಲ್ಲಿ ಇತ್ತೀಚಿನದೆಂದರೆ 10/2022 ದಿ.28 ಡಿಸೆಂಬರ್ 2022 (ಇವುಗಳನ್ನು ಒಟ್ಟಾಗಿ 'ಎಂಸಿಎ ಸುತ್ತೋಲೆಗಳು' ಎಂದು ಉಲ್ಲೇಖಿಸಿದ್ದೇವೆ) ಈ ಎಲ್ಲ ಸುತ್ತೋಲೆಗಳ ಜೊತೆ ಓದಿಕೊಂಡ ಪ್ರಕಾರ ವಿಡಿಯೊ ಕಾನ್ಫರೆನ್ಸ್ (VC) ಅಥವಾ ಇತರೆ ಶ್ರವಣ–ದೃಶ್ಯ ಮಾಧ್ಯಮಗಳ (OAVM) ಮೂಲಕ ನಡೆಸಲು ಉದ್ದೇಶಿಸಿದೆ ಎಂದು ಈ ಮೂಲಕ ಕಂಪನಿಯ ಸದಸ್ಯರೆಲ್ಲರಿಗೂ ಸೂಚನೆಯನ್ನು ನೀಡಲಾಗುತ್ತಿದೆ.

ದಾಖಲೆಗಳ ಲಭ್ಯತೆ: ಯಾರೆಲ್ಲ ಸದಸ್ಯರು ತಮ್ಮ ಇಮೇಲ್ ವಿಳಾಸಗಳನ್ನು ಡಿಪಾಸಿಟರಿ ಪಾರ್ಟಿಸಿಪೆಂಟರು (DPs) ಮತ್ತು ಕಂಪನಿಯೊಂದಿಗೆ/ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟರೊಂದಿಗೆ (RTA) ನೋಂದಾಯಿಸಿಕೊಂಡಿದ್ದಾರೋ ಅಂತಹ ಸದಸ್ಯರೆಲ್ಲರಿಗೂ 05ನೇ ಸೆಪ್ಟೆಂಬರ್, 2023 ರಂದು ಕಂಪನಿಯ 60ನೇ ಎಜಿಎಮ್ ಸೂಚನೆಯ ಮತ್ತು 2022–23 ಸಾಲಿನ ವಾರ್ಷಿಕ ವರದಿಯ ಪ್ರತಿಗಳನ್ನು ಕಳುಹಿಸಲಾಗಿದೆ. ಜೊತೆಗೆ, ಈ ದಾಖಲೆಗಳು ಕಂಪನಿಯ ವೆಬ್‌ಸೈಟ್ www.bgse.co.inನಲ್ಲೂ ಲಭ್ಯವಿರುವಂತೆ ವ್ಯವಸ್ಥೆ ಮಾಡಲಾಗಿದೆ.

ಇ–ಮತದಾನ: ಸಿಡಿಎಸ್‌ಎಲ್ ಸಂಸ್ಥೆಯು ರಿಮೋಟ್ ಇ–ಮತದಾನದ ಸೌಲಭ್ಯವನ್ನು ಒದಗಿಸುತ್ತಿದೆ ಮತ್ತು ರಿಮೋಟ್ ಇ–ಮತದಾನವು ಮಂಗಳವಾರ, 26ನೇ ಸೆಪ್ಟೆಂಬರ್, 2023 ರಂದು ಬೆಳಗ್ಗೆ 09.00ಕ್ಕೆ (ಭಾ.ಕಾ) ಆರಂಭವಾಗಿ ಗುರುವಾರ, 28ನೇ ಸೆಪ್ಟೆಂಬರ್, 2023 ರಂದು ಸಂಜೆ 05.00ಕ್ಕೆ (ಭಾ.ಕಾ) ಕೊನೆಯಾಗುತ್ತದೆ. ಈ ಅವಧಿಯಲ್ಲಿ, ಅಂತಿಮ ದಿನಾಂಕವಾದ ಶುಕ್ರವಾರ, 21ನೇ ಸೆಪ್ಟೆಂಬರ್, 2023 ರಂದು ಕಂಪನಿಯ ಷೇರುಗಳನ್ನು ಭೌತಿಕ ರೂಪದಲ್ಲೋ ಅಥವಾ ಡೀಮ್ಯಾಟ್ ರೂಪದಲ್ಲೋ ಹೊಂದಿರುವ ಷೇರುದಾರರು ತಮ್ಮ ಮತಗಳನ್ನು ವಿದ್ಯುನ್ಮಾನ ವಿಧಾನದಲ್ಲಿ ಚಲಾಯಿಸಬಹುದಾಗಿರುತ್ತದೆ.

ಯಾವ ಸದಸ್ಯರು ಡೀಮ್ಯಾಟ್ ಅಥವಾ ಭೌತಿಕ ರೂಪದಲ್ಲಿ ತಮ್ಮ ಷೇರುಗಳನ್ನು ಹೊದಿರುವರೋ, ಅಥವಾ ಯಾರು ತಮ್ಮ ಇಮೇಲ್ ವಿಳಾಸಗಳನ್ನು ಕಂಪನಿಯೊಂದಿಗೆ ನೋಂದಾಯಿಸಿಕೊಂಡಿಲ್ಲವೋ, ಅಂತಹ ಸದಸ್ಯರು ಸಭೆಯು ನಡೆಯುವ ಅವಧಿಯಲ್ಲಿ ರಿಮೋಟ್ ಇ–ಮತದಾನ ಅಥವಾ ಇ–ಮತದಾನದ ಮೂಲಕ ತಮ್ಮ ಮತಗಳನ್ನು ಚಲಾಯಿಸಬಹುದು. ಭೌತಿಕ ರೂಪದಲ್ಲಿ ಷೇರು(ಗಳನ್ನು) ಹೊಂದಿರುವ ಸದಸ್ಯರು ಕಂಪನಿಯ ed_secretary@bgse.co.in ಇಮೇಲ್ ವಿಳಾಸಕ್ಕೆ ಬರೆದು ತಾವು ಹೊಂದಿರುವ ಷೇರುಗಳ ಕುರಿತಾದ ಅಗತ್ಯ ವಿವರಗಳನ್ನು ಮತ್ತು ದಾಖಲೆಗಳನ್ನು ನೀಡಿ ತಮ್ಮ ಇಮೇಲ್ ಐಡಿಗಳನ್ನು ಕಂಪನಿಯೊಂದಿಗೆ ನೋಂದಾಯಿಸಿಕೊಳ್ಳಬಹುದು; ವಿದ್ಯುನ್ಮಾನ ರೂಪದಲ್ಲಿ ಷೇರು(ಗಳನ್ನು) ಹೊಂದಿರುವ ಸದಸ್ಯರು ಕಂಪನಿಯಿಂದ ಬರುವ ಎಲ್ಲ ಸಂವಹನವನ್ನೂ ವಿದ್ಯುನ್ಮಾನ ರೂಪದಲ್ಲಿ ಸ್ವೀಕರಿಸಲು ಸಾಧ್ಯವಾಗುವಂತೆ ತಮಗೆ ಸಂಬಂಧಪಟ್ಟ ಡಿಪಾಸಿಟರಿ ಪಾರ್ಟಿಸಿಪೆಂಟರೊಂದಿಗೆ (DPs) ತಮ್ಮ ಇಮೇಲ್ ವಿಳಾಸಗಳನ್ನು ದಾಖಲಿಸಿಕೊಳ್ಳಬೇಕಾಗಿ / ನವೀಕರಿಸಬೇಕಾಗಿ ಕೋರುತ್ತೇವೆ.

ಯಾವ ಸದಸ್ಯರಿಗೆ VC ಮೂಲಕ ಸಭೆಯನ್ನು ಪ್ರವೇಶಿಸಲು ಮತ್ತು ಅದರಲ್ಲಿ ಭಾಗವಹಿಸಲು ತಾಂತ್ರಿಕ ನೆರವು ಅಗತ್ಯವೋ ಅಂತಹ ಸದಸ್ಯರು ಇ–ಮತದಾನ ಸೇವೆಯನ್ನು ಒದಗಿಸುತ್ತಿರುವ ಸೆಂಟ್ರಲ್ ಡಿಪಾಸಿಟರಿ ಸರ್ವಿಸಸ್ (ಇಂಡಿಯಾ) ಲಿಮಿಟೆಡ್ (ಸಿಡಿಎಸ್‌ಎಲ್) ಅನ್ನು ಸಂಪರ್ಕಿಸಬಹುದು; ಸಂಪರ್ಕ ವ್ಯಕ್ತಿಗಳು: ಶ್ರೀಯುತರಾದ ನಿತಿನ್ ಕುಂದರ್ (022–23058738); ಭವೇಶ್ ಪಿಂಪುತ್ಕರ್ (022–23058543); ರಾಕೇಶ್ ದಲ್ವಿ (022–23058542) ಇಮೇಲ್ ಐಡಿ: helpdesk.evoting@cdslindia.com

ಡಿವಿಡೆಂಡಿಗೆ ರೆಕಾರ್ಡ್ ದಿನಾಂಕ: ಒಂದೊಮ್ಮೆ ಎಜಿಎಮ್ ನಲ್ಲಿ ಷೇರುದಾರರು ಅನುಮೋದಿಸಿದರೆ, ಗುರುವಾರ, 21ನೇ ಸೆಪ್ಟೆಂಬರ್, 2023 (ರೆಕಾರ್ಡ್ ದಿನಾಂಕ) ರಂದು ಯಾರೆಲ್ಲ ಷೇರುದಾರರ ಹೆಸರುಗಳು ಕಂಪನಿಯ ಸದಸ್ಯರ ರಿಜಿಸ್ಟರಿನಲ್ಲಿ ಕಂಡುಬರುತ್ತದೆಯೋ ಅಂತಹವರೆಲ್ಲ ಅಂತಿಮ ಡಿವಿಡೆಂಡ್ ಪಾವತಿಗೆ ಅರ್ಹರಾಗಿರುತ್ತಾರೆ.

ಡಿವಿಡೆಂಡ್ ಮೇಲೆ ಟಿಡಿಎಸ್: ಎಜಿಎಮ್ ಸೂಚನೆಯ ಟಿಪ್ಪಣಿ ಕ್ರ. ಸಂ. 11ರಲ್ಲಿ ವಿವರವಾಗಿ ಹೇಳಿರುವಂತೆ ಡಿವಿಡೆಂಡ್ ಮೇಲೆ ಟಿಡಿಎಸ್ ಅನ್ನು ಮುರಿದುಕೊಳ್ಳಲಾಗುವುದು.

ನಿರ್ದೇಶಕರ ಮಂಡಲಿಯ ಆದೇಶದ ಮೇರೆಗೆ
ಬಿಜಿಎಸ್‌ಇ ಪ್ರಾಪರ್ಟೀಸ್ ಆ್ಯಂಡ್ ಸೆಕ್ಯುರಿಟೀಸ್ ಲಿಮಿಟೆಡ್ ಪರವಾಗಿ
ಸಹಿ/–
(ವಿನೋದ್ ಜಿ ಜೈನ್)
ಕಾರ್ಯನಿರ್ವಾಹಕ ನಿರ್ದೇಶಕರು
DIN: 00248275

ಸ್ಥಳ: ಬೆಂಗಳೂರು
ದಿನಾಂಕ: 22/08/2023

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

OXFORD SECONDARY SCHOOL, Nandini Layout, (Near Bus Stop), Bangalore-96. Graduate, Post-Graduate HINDI TEACHERS to teach Primary, Higher Primary & HighSchool. Contact: 08023591067, 9980405605

EAST WEST INSTITUTIONS
BENGALURU - MYSURU
THE GREAT EASTERN INTERNATIONAL PUBLIC SCHOOL
Affiliated to CBSE New Delhi (Affiliation No. 830539)
:# 18, Lingadhiranahalli, D Group Employees Layout, Herohalli, Vishwaneedam Post, Off Magadi Main Road, Bengaluru-560091
ADMINISTRATION
ADMISSION COUNSELLOR / ADMISSION EXECUTIVE, IT MANAGER, MARKETING / PUBLICITY HEAD, STUDENT COUNSELLOR.
Send your resume to: ewbsni2020@gmail.com
SVM-23406
EAST WEST SPORTS ACADEMY
OFF MAGADI ROAD, BENGALURU @ ABOVE CAMPUS
WANTED SPORTS DIRECTOR
Who is experienced in implementation, planning, development and evaluation of sports programme / activities, supervision of coaches and organising sports tournaments.
WANTED COACHES
Who is suitable, qualified, experienced and enthusiastic for Cricket, Football, Badminton, Swimming, Basketball & Table Tennis.
Send your resume to: E-mail: ewsports2022@gmail.com
Attractive Package with all other benefits

BHS HIGHER EDUCATION SOCIETY
No.35/1, 11th Main, Jayanagar 4th Block, Bangalore-11.
bhshes_mc@rediffmail.com
REQUIRES
ASSISTANT PROFESSORS OF COMPUTER SCIENCE
(Full Time/Part Time) for PU and UG Colleges.
QUALIFICATION
Master degree with minimum 55% in relevant subject. Candidates with teaching experience and NET/SLET/Ph.D/B.Ed have an added advantage.
Interested candidates may send their detailed CVs along with photocopies of Marks cards/ Certificates of work experience etc., to the Secretary at the above address by post or email to bhshes_mc@rediffmail.com within 7 days from the date of notification.
Sd/- Secretary

FEMALE TEACHER Wanted for English and Social. Primary English School, Vyalikaval, Bangalore. 8884128882 (WhatsApp only)

WANTED ENGLISH MEDIUM Lady Graduates to teach all the Subjects for Classes 1 to 4 / Computer Faculty for 1 to 10. Contact at the earliest in person (10.00 am- 3.00 pm on all working days) - Secretary, Deccan Educational Society®, No. 95, 3rd Cross, Srirampuram, Bengaluru- 560021 (Near Sampige Theater, Malleswaram).

URGENTLY REQUIRED qualified & experienced Teachers, BA/ BSc/ BCom with or without B.Ed (able to teach high school level Science, Math, English) for Lighthouse International Academy, a school for underprivileged children located at Bagalur, Budhigere. School Bus service provided from Hennur Depot. Interested candidates mail resume to director@lia.school or call 9513000153 Fresh Graduates and PU pass (teacher assistant) are welcome to apply. Good command over English mandatory.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Dr. Sri. Sri. Sri. Shivakumara Mahaswamy College of Engineering & Polytechnic
(Affiliated to VTU, Belgaum & Approved by AICTE, New Delhi)
Byranayakanahalli, Nelamangala Taluk, Bangalore Rural District - 562 132
Email: recruitdrsmce2221@gmail.com Website: www.drsmce.org
Faculty Positions for Engineering & Polytechnic
Applications are invited for the posts of Professors, Associate Professors and Asst. Professors in the following Disciplines...
- Civil Engineering
- Mechanical Engineering
- Electrical & Electronics Engineering
- Electronics & Communication Engineering
- Computer Science & Engineering
- Information Science & Engineering
- Basic Science Department : Physics, Chemistry and Mathematics
- MBA (Marketing, Finance, HR)
- Physical Education Director
- Librarian and Asst. Librarian

Non Teaching Posts
- Placement officer
- Office Superintendent
- FDA, SDA, Accountants
- Typists (Kannada & English)
- Wardens : Boys Hostel & Girls Hostel
- Receptionist, Drivers
- Foremen, Instructors and attenders in the above departments

Qualification and Pay Scale: As per AICTE norms
Note: For the posts of Professor & Associate Professor, Candidates having Ph.D are only eligible. Apply Via email and hard copy so as to reach before 7 days from the date of advertisement along with your detailed CV & supporting documents.
Dr. H.D. Ramesh, Principal 98806 58861 / 77602 68213
Sri D.C. Venugopal Chairman

KNS INSTITUTE OF TECHNOLOGY
Approved by AICTE & Govt. of Karnataka Affiliated to VTU
FACULTY/STAFF REQUIREMENT
PROFESSORS, ASSOCIATE PROFESSORS & ASST.PROF IN THE FOLLOWING DEPARTMENTS
CSE, ISE, ECE, AI&ML, Data Science, EEE & Mathematics
ADMINSTRATIVE STAFF: Adminstrative Officer, Admission officer, Placement Officer, First division clerk, Librarian,
INSTRUCTOR/ASSISTANT INSTRUCTOR: Diploma in CSE, ISE, AI&ML, ECE.
Qualification & Salary as per AICTE Norms & State Govt. Higher Salary may be considered for deserving candidates
Apply within 7 days with detailed CV and copies of Testimonials to:
Principal, KNS INSTITUTE OF TECHNOLOGY
Hegde Nagar, Kogilu Road, Thirumenahalli, Bangalore-560064.
career@knsit.com, knsit.hr@gmail.com, www.knsit.com. 080-28567958
Sd/- Chairman

V.E.T.SCHOOL
14th Main, 2nd Phase, J.P.Nagar, Bangalore - 560 078.
Ph : 080-26586808, 26584760 Mob : 9513704800
Requires Principal
Qualification : M.A/M.Sc, B.Ed/M.Ed (with 1st or high 2nd division)
Experience : 10 Years experience with adequate administrative experience
Age : 40-50 Years, relaxable in case of deserving candidates
Salary : As per school norms
Preference will be given to dynamic female professionals with public school background and excellent communication skills. Application may be forwarded to vetinst@rediffmail.com within in 10 days.

Hospital & Medical Jobs

BENGALURU ALLERGY Centre Needs Pharmacist: Fresher or 1- 2 Y Exp, B.Pharm/ M.Pharm. Analytical Chemist: B.Sc Chemistry/ M.Sc Organic Chemistry /Analytical Chemistry or Biochemistry. Nurse: B.Sc Nursing, GNM or Post Basic Nursing. Lab Technicians: DMLT. Front Desk/ Receiptionist: Any Degree with fluency in English, Kannada, Hindi Languages. Submit your CV or Resume :ballergyc1980@gmail.com/ Whatsapp on 6360402341.

Part-Time Jobs

TOP MNC Com. Licensed By Central Govt. Restart Your 2nd Career Opporty with Flexible Timings Age Limit 45yrs & Above: 7019215243/ 9886641282

Engg/ Production Technical

CALIBRATION LABORATORY seeks science graduate / ITI / Diploma Mechanical, to join our ISO 17025 accredited laboratory team. Located in south Bangalore. Min 2 Years' experience, fresher apply as trainee. Send biodata to 9686393535.

HELPERS, SSLC, PUC, Diploma, ITI in Electronics required for Power Electronic Unit. Contact: 9845457646.

General

JOBS
- Accounts Executive
- Sales Engineers/ Executives
- Lady Manager (PS) required to handle multiple roles at PR, Ads firm.
- Marketing Executive for Hospitality, HR, Property Sector

Sal: 16k-27k. Exp:2+Yrs Kannada English communication must.
ravikp93@rediffmail.com Only WhatsApp 90190 43325

WANTED EXPERIENCED GOVERNMENT TENDER BIDDING CANDIDATE For Construction And Manufacturing Company. Apply WhatsApp CV 9606298800

REQUIRED
- Customer Support Executive Female with Good Communication Skills B.com with 1year Exp preferred
- Delivery Boys SSLC/ PUC With or Without Vehicle

Send your CV through Email: admin@sameekshaent.in
81478 28433
Sameeksha (I) Pvt Ltd

Marketing & Sales

REQUIRED SALES Executives 5 yrs. exp (Paints). VVCPaints Bengaluru- 8951115111/ vvcpaints@ymail.com

HRD & Admin

SENIOR ADMIN.COORDINATOR with min. 15 yrs. Experience. Excellent communication skills with knowledge of Kannada & M S Office required. Preferred candidates staying close to campus. Should have handled overall administration & Facility Management. ISME, Sarjapur Road. 8880612345. jobs@isme.in

SURANA COLLEGE (AUTONOMOUS)
Accredited by NAAC with "A+" Grade. Affiliated to BangaloreUniversity & Recognised by Govt. of Karnataka
Requires
- **Purchase Officer**
Eligibility: Post Graduate having minimum 10 years of experience in purchase and procurement.
- **HR Officer**
Eligibility: Candidates having MBA - HR with minimum 10 years of experience in recruitment, appraisal, training etc. in Educational institution.

Eligible candidates shall send hard copy of biodata along with recent passport size photograph to: HR Department, Surana College, No 16, South End Road, Bangalore - 560 004. or mail to hr@suranacollege.edu.in within 7 days from the date of this notification. SC/ST Candidates are preferred.

Accounts & Finance

WANTED
LADY ACCOUNTANT CUM ADMIN
Candidate with B.Com & Tally Knowledge having 2 - 3 years experience & Good Communication skills.
LADY ACCOUNTS ASSISTANT
B.Com & Tally Knowledge having Experience of 1 year.
For H M V GROUP OFFICE at Bhoopasandra Central Excise Layout, Hebbal, Bengaluru-560094.
(in and around Hebbal preferred)
Call: 95135 52223 080-2351 2223
10.30 am to 5.30 pm
Send resume to Mail ID: hvs_67@ymail.com

Wanted

WANTED SALES REPRESENTATIVE for ITC FMCG products. Dwaraka & Bros. No. 2, Koldappa Garden, Bangalore- 560095. Contact: 9844215899

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

REAL ESTATE SELLING

Farm House/ Land/ Resorts

Out-Station

LAND FOR Sale: 1) Dry Land 1 Acre 17 Guntas 2) Wet Land 3 Acres Location: Averahalli Village, Virupakshipura Hobli, Channapatna Taluk. To contact : 9742801409 / 9880509555

House

Kengeri

FOR-SALE HOUSE with Flooring Marble, All TeakWood with Lift, Ground+3 Floor BDA approved plan 30x43.5 Land Gated community Layout Aprameya Vrinda Layout, KENGERI to Uttarahalli Main Road, Near Metro Railway Station Kengeri, BANGALORE-60 Call: 9379593795.

Vijayanagar

DUPLEX HOUSE for Sale Vijayanagar 2nd Stage, South-West Corner 2250sft G-floor, 3BHK, 1st floor, 4BHK Pent house, Full Teak. Owner: 9845526049/ 9632500691. (No Broker)

Residential/ Commercial

Devanahalli

NANDI HILLS rd STRR Converted 1/2 acre 15 AC Rooms Furnished Garden Suitable For Farmhouse Resort Hotel Yoga Ayurveda Retreat Day Care Hospital Rs.9Cr non-nego Ph7019346409

Sites

Nagarabhavi

SALE 40X60,30X40 MPM-Layout near Ambedkar Engineering college Good location, Genuine Buyers Contact: 7760388034/ 9242135834

AUTOMOTIVE

Four Wheelers Selling

Mahindra

ACCIDENT VEHICLE KA-51-MN-7587 Mahindra XUV-500 2019, With & Without RC Ph: 9901126198/ 9844073989.

BUSINESS

Business to Business

Finance

MORTGAGE OF Site, Building, Commercial Property Loans, Construction Loans, Takeover and Topup Loans, Project Loans. Contact: 9353705002.

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats,Converted& Agriculture Lands Call:7204995189

PERSONAL

Change of Name

CHANGE OF NAME
I, NARAYANA SWAMY, R/at.# 5, 4th Cross, Seenappa Road, Near Bagalamma Temple, Papareddy Palya, Nagarabhavi 2nd Stage, Bangalore-72 have changed our minor daughter's name from VARNIKA. N to **KARUNA. N. GOWDA** vide affidavit dt.11/08/2023 before Notary Sharat Kumar Shetty, Bangalore. Henceforth her name shall be called **KARUNA. N. GOWDA** only

SIRAJUDDIN S/O wajiruddin R/o H No 14.8.378 Eden colony mangalpet Bidar Karnataka 585401 have changed my religion Muslim to Hindu religion also changed my name to shivkumar for all future purposes

CHANGE OF NAME
I, ARCHANA NANDAKUMAR W/o. Nanda Kumar Kirubakaran and D/o Saratchandra Mendon R/a # Villa 518, Concorde Napa Valley, Road No. 47, Taralu Village, Kaggalipura, Kanakapura Main Road, Bangalore South, Bangalore-560082 after Marriage have changed my Name from ARCHANA to ARCHANA NANDAKUMAR vide affidavit dated 04.09.2023 sworn before Notary Chethana S.V. Bangalore.

CHANGE OF NAME
I, GOVIND SINGH, R/at. Flat No. 9405, Prestige Apartments, Doddaballapura Road, Ramanashree California Resorts, Puttennahalli, Yelahanka, Bangalore -64, have changed my name to **GOVIND SINGH SHEKHAWAT** vide affidavit dt. 05/09/2023 before Notary S.R. Ravikumar, Bangalore. Henceforth I shall be called GOVIND SINGH SHEKHAWAT only

CHANGE OF NAME
I, VASAVI SANDU, Residing at No. A114, Assetz Marq, Whitefield Hoskote Road, Kannamangala, Bengaluru-67 have changed my name to **SRIKALA SANDU** vide affidavit dt. 05/09/2023 before Notary S.I. Balaguru, Bangalore. Henceforth I shall be called SRIKALA SANDU only

CHANGE OF NAME
I, No. 14620666 N RANK EX HAV SRIDHARAN G, R/at.# 418, D-Line, Old Police Station Road, H.G.Halli, Arabic College Post, Bangalore, have changed our minor son's name from S.NITIN to **NITHIN.S** vide affidavit dt.04/09/2023 before Notary K.Venkateshan, Bangalore. Henceforth I shall be called NITHIN.S only

I, PAROMITA_GHOSH W/o.Dhiman Sengupta R/a Flat#B1002, DNR_Casablanca, Maheshwari Nagar, Mahadevapura, Bangalore- 560048 have_changed my Name to PAROMITA SENGUPTA GHOSH vide`affidavit dated:5.9.2023 before`notary J.Anand_Kumar, Bangalore

CHANGE OF NAME
I, SHREYA M., Formerly known as MANU SHREE M. aged 26 years, D/o. Mayanna Gowda, residing at #617, 6th Cross, 'Shree Bairava Swamy Nilaya', 6th Main, Gruhalakshmi Layout, Nelagadharahalli, Bengalore-560073, have changed my name as SHREYA M. and sworn before Devaraja E, Notary, Bangalore. Reg. No. 20356, vide affidavit dated. 4-9-2023.

CHANGE OF NAME
I, MARY, W/o Errols Joseph R/at.# 102, 4th Cross, Gurumahal Extn. K G Halli, Jalahalli West, Bangalore-560015, have changed my name from MARY to **MARY JOSEPH** vide affidavit dt. 30/08/2023 before VIIth Addl. Chief Metropolian Magistrate, Bangalore. Henceforth I shall be called MARYJOSEPH only

CHANGE OF NAME
I, KAMLESH P JAIN, R/at.# 931, 7th Cross, BSK 1st Stage, 2nd Block, Near Kabaddi Ground, Bangalore-50 have changed my son name from NAMAN K to **NAMAN K JAIN** vide affidavit dt. 04/09/2023 before VIIth Addl. Chief Metropolitian Magistrate, Bangalore.

CHANGE OF NAME
I, No. 14620666 N RANK EX HAV SRIDHARAN G, R/at.# 418, D-Line, Old Police Station Road, H.G.Halli, Arabic College Post, Bangalore, have changed our minor son's name from SOORYA PRAKASH to **SOORYA PRAKASH. S** vide affidavit dt.04/09/2023 before Notary K.Venkateshan, Bangalore. Henceforth I shall be called SOORYA PRAKASH. S only

CHANGE OF NAME
I, M Y RAMESH REDDY, S/o M R Yogiswar Reddy, R/at. Q-4,15th Street, Near K4 Police Station, Annanagar, Chennai, Tamilnadu-600040 have changed my name to **MARDUR YOGISWAR RAMESH REDDY** vide affidavit dt. 05/09/2023 before Notary K.V.Mani, Bengaluru

I, VEENA Solomon D/o. Late Sri Rajendra Krishnappa, aged about 54 years R/at No.204 Alpine Apartment, C Block, Bellary Road, Ganganagar, Bangalore North, R.T.Nagar, Bangalore-560032, have changed my name as Veena Rajendra for all practical purpose vide affidavit dated 28.08.2023 sworn before Advocate & Notary B. Chitra, Bangalore.

DH DECCAN HERALD Classifieds More value, more impact
JOB HUNT ಪ್ರಜಾವಾಣಿ
Get your HIRING NEEDS answered
JOB
Get the right people for your company... Book your Ad with us now !
www.dhclassifieds.com BOOK NOW
For more details contact:
+91 9845114560 | +91 9886213331 | +91 9900428036 |
+91 9731810277 | +91 9901641752 | 080-45557163/164

‘ಗಾಂಧಿ ಕೊಂದ ಮನಸ್ಥಿತಿ ಗೌರಿ ಕೊಂದಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾತ್ಮ ಗಾಂಧಿಯವರನ್ನು ಕೊಂದ ಮನಸ್ಥಿತಿಯೇ ಗೌರಿ ಲಂಕೇಶ್, ದಾಭೋಲ್ಕರ್, ಪನ್ಸಾರೆ, ಎಂ.ಎಂ.ಕಲ್ಬುರ್ಗಿ ಅವರನ್ನು ಕೊಂದಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಗೌರಿ ಸ್ಮಾರಕ ಟ್ರಸ್ಟ್ ಮಂಗಳವಾರ ಆಯೋಜಿಸಿದ್ದ ‘ಗೌರಿ ನೆನಪು’- ‘ಸರ್ವಾಧಿಕಾರಿ ಕಾಲದ ಹೊತ್ತಲ್ಲಿ ದೇಶವನ್ನು ಮರು ಕಟ್ಟುವ ಕಲ್ಪನೆ’ ಎಂಬ ವಿಷಯ ಕುರಿತ ಸಂವಾದದಲ್ಲಿ ಅವರು ಮಾತನಾಡಿದರು.

‘ಮಹಾತ್ಮಗಾಂಧಿ ಧರ್ಮ ನಿರಪೇಕ್ಷತೆಯಿಂದ ಬದುಕಿದ್ದರು. ಇದನ್ನು ಸಹಿಸಲಾಗದ ಮನಸ್ಥಿತಿಯೊಂದಿಗೆ ಅವರನ್ನು ಕೊಂದು ಹಾಕಿದರು. ಗೌರಿ ಲಂಕೇಶ್ ಅವರು ಇಂದು ನಮ್ಮ ಜತೆಗಿಲ್ಲ ಆದರೆ ಅವರ ಅದಮ್ಯ ಚೇತನ ನಮ್ಮ ಜತೆಗಿದೆ. ಬಸವಾದಿ ಶರಣರು, ಅಂಬೇಡ್ಕರ್, ಬುದ್ಧರ ವಿಚಾರ ಧಾರೆಗಳನ್ನು ಆಚರಣೆಯಲ್ಲಿ ತರುತ್ತಾ, ಜಾತಿ ಅಸಮಾನತೆ, ಧರ್ಮ ಸಂಘರ್ಷವನ್ನು ವಿರೋಧಿಸುತ್ತಾರೋ ಅವರೆಲ್ಲರಿಗೂ ಬೆದರಿಕೆ ಪತ್ರಗಳನ್ನು ಬರೆಯುತ್ತಿದ್ದಾರೆ’ ಎಂದರು.

ಗೌರಿ ಸ್ಮಾರಕ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ‘ಗೌರಿ ನೆನಪು’ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಗಳವಾರ ಉದ್ಘಾಟಿಸಿದರು. ಮಾಜಿ ಸಚಿವ ಆಂಜನೇಯ, ಇಂದಿರಾ ಲಂಕೇಶ್, ಅಖಿಲ ಭಾರತ ರೈತ ಆಂದೋಲನದ ನಾಯಕ ರಾಕೇಶ್ ಟಿಕಾಯತ್, ಕೇರಳ ಸರ್ಕಾರದ ಮಾಜಿ ಸಚಿವೆ ಶೈಲಜಾ ಟೀಚರ್ ಇದ್ದರು

‘ನಾನು ಮೊದಲ ಬಾರಿ ಮುಖ್ಯಮಂತ್ರಿ ಆಗಿದ್ದಾಗ ಗೌರಿ ನನ್ನನ್ನು ಹತ್ತಾರು ಬಾರಿ ಭೇಟಿಯಾಗಿದ್ದರು. ಆದರೆ ಒಂದು ಬಾರಿಯೂ ಪತ್ರಿಕೆ, ಕುಟುಂಬ, ವೈಯಕ್ತಿಕ ಕೆಲಸಕ್ಕೆ ಸಹಾಯ ಕೇಳಿರಲಿಲ್ಲ. ಆದಿವಾಸಿಗಳು, ರೈತರು, ಕಾರ್ಮಿಕರ ಸಮಸ್ಯೆಗಳಿಗಾಗಿ ಪರಿಹಾರ ಕೇಳಲು ಬರುತ್ತಿದ್ದರು. ಗೌರಿಯನ್ನು ಕೊಂದವರು ಹೇಡಿಗಳು’ ಎಂದು ಹೇಳಿದರು.

‘ಗೌರಿಯನ್ನು ಕೊಂದ ಆರೋಪಿಗಳಿಗೆ ಶಿಕ್ಷೆ ಆದಾಗ ಮಾತ್ರ ಗೌರಿ ಆತ್ಮಕ್ಕೆ ಶಾಂತಿ ಸಿಗುತ್ತದೆ. ಪೊಲೀಸ್ ಅಧಿಕಾರಿಗಳ ಜತೆ ಈ ಬಗ್ಗೆ ಚರ್ಚೆ ನಡೆಸಿ ಮಾಹಿತಿ ಪಡೆದಿದ್ದೇನೆ. ಸಾವಿರಕ್ಕೂ ಅಧಿಕ ಪುಟಗಳ ಆರೋಪ ಪಟ್ಟಿ ಸಲ್ಲಿಕೆಯಾಗಿ, 500 ಕ್ಕೂ ಹೆಚ್ಚು ಸಾಕ್ಷಿಗಳನ್ನು ಪಟ್ಟಿ ಮಾಡಲಾಗಿದೆ. ಆರೋಪಿಗಳಿಗೆ ಖಂಡಿತಾ ಶಿಕ್ಷೆ ಆಗುತ್ತದೆ’ ಎಂದರು.

‘ಬೆದರಿಕೆ ಪತ್ರ ಬರೆಯುತ್ತಿರುವ ಕಿಡಿಗೇಡಿಗಳು ಎಷ್ಟೇ ಪ್ರಬಲರಾಗಿದ್ದರೂ, ದೊಡ್ಡ ರಾಜಕೀಯ ಬೆಂಬಲ ಇದ್ದರೂ ಅವರನ್ನು ಬಂಧಿಸಿ ಕಾನೂನು ಕ್ರಮಕ್ಕೆ ಗುರಿಪಡಿಸಲಾಗುವುದು’ ಎಂದು ಭರವಸೆ ನೀಡಿದರು.

ಅಖಿಲ ಭಾರತ ರೈತ ಆಂದೋಲನದ ನಾಯಕ ರಾಕೇಶ್ ಟಿಕಾಯತ್ ಅಧ್ಯಕ್ಷತೆ ವಹಿಸಿದ್ದರು. ಮಾನವ ಹಕ್ಕು ಹೋರಾಟಗಾರ್ತಿ ತೀಸ್ತಾ ಸೆಟಲ್ವಾಡ್, ರಾಜಕೀಯ ಕಾರ್ಯಕರ್ತೆ ಏಂಜೆಲಾ ರಂಗದ್, ಕೇರಳ ರಾಜ್ಯದ ಮಾಜಿ ಸಚಿವೆ ಶಾಸಕಿ ಶೈಲಜ ಟೀಚರ್, ಪತ್ರಕರ್ತೆ ಸುಪ್ರಿಯಾ ಶ್ರೀನಾಟೆ, ಮುಸ್ಲಿಂ ಒಕ್ಕೂಟದ ಮುಖಂಡರಾದ ಯಾಸಿನ್ ಮಲ್ಪೆ, ಮಾಜಿ ಸಚಿವ ಆಂಜನೇಯ ಇದ್ದರು.

‘ನಾನು ಸನಾತನ ಧರ್ಮಕ್ಕೆ ಹುಟ್ಟಿಲ್ಲ’

‘ನಾನು ಸನಾತನ ಧರ್ಮಕ್ಕೆ ಹುಟ್ಟಿಲ್ಲ. ನನ್ನ ಅಪ್ಪ–ಅಮ್ಮನಿಗೆ ಹುಟ್ಟಿದ್ದೇನೆ. ನಾನು ಧರ್ಮದ ವಿರುದ್ಧ ಅಲ್ಲ. ಆದರೆ ಸಂಸತ್‌ನಲ್ಲಿ ಹೋಮ–ಹವನ ಮಾಡಬಾರದು. ಇಂದು ಗೌರಿಯ ದಿನ. ನಮ್ಮ ಧ್ವನಿ ಹತ್ತಿಕ್ಕಿಸಲು ಯಾರಿಂದಲೂ ಸಾಧ್ಯವಿಲ್ಲ’ ಎಂದು ನಟ ಪ್ರಕಾಶ್ ರಾಜ್ ಹೇಳಿದರು.

‘ಗೌರಿಯ ಕುಟುಂಬ ಬೆಳೆಯುತ್ತಿದೆ. ನಾವು ನಿರಂತರವಾಗಿ ಹೋರಾಟ ಮುಂದುವರಿಸೋಣ. ಗೌರಿಯ ಆಶಯಗಳನ್ನು ಮುಂದಿನ ಪೀಳಿಗೆಯತ್ತ ಕೊಂಡೊಯ್ಯಬೇಕು’ ಎಂದು ಗೌರಿ ಸೋದರಿ ಕವಿತಾ ಲಂಕೇಶ್ ಹೇಳಿದರು.

ನಗರದಲ್ಲಿ ಇಂದು

ಕೃಷ್ಣ ಜನ್ಮಾಷ್ಟಮಿ ಮಹೋತ್ಸವ: ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಸಾಯಿ ರಮೇಶ್ ಹಾಲ್, ಬೃಂದಾವನ, ಕಾಡುಗೋಡಿ, ಬೆಳಿಗ್ಗೆ 5ರಿಂದ

ಶ್ರೀಕೃಷ್ಣ ಜಯಂತಿ ಆಚರಣೆ: ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ಡಿ.ಕೆ. ಶಿವಕುಮಾರ್, ಕೆ.ಜೆ. ಜಾರ್ಜ್, ರಾಮಲಿಂಗಾರೆಡ್ಡಿ, ಕೃಷ್ಣಬೈರೇಗೌಡ, ದಿನೇಶ್ ಗುಂಡೂರಾವ್, ಜಮೀರ್ ಅಹಮದ್ ಖಾನ್, ಬೈರತಿ ಸುರೇಶ್, ಶಿವರಾಜ ತಂಗಡಗಿ, ಆಯೋಜನೆ: ಕರ್ನಾಟಕ ರಾಜ್ಯ ಗೊಲ್ಲ (ಯಾದವ) ಸಂಘ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4ರಿಂದ

‘ಪೌರಾಣಿಕ ಯಕ್ಷಹಬ್ಬ’: ‘ಶ್ರೀಕೃಷ್ಣ ಲೀಲಾಮೃತಮ್’: ಆಯೋಜನೆ: ಮಹಾಗಣಪತಿ ಯಕ್ಷಗಾನ ಮಂಡಳಿ ನಿಡ್ಲೆ, ಸ್ಥಳ: ಶಂಕರ ಮಠ, ಶಂಕರಪುರ, ಸಂಜೆ 6ರಿಂದ

‘ಶ್ರೀಕೃಷ್ಣ ಜನ್ಮಾಷ್ಟಮಿ’ ಹರಿಭಜನೆ: ಅನಂಜರಾಜು ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಗೀತಾ ಮಂದಿರ ಟ್ರಸ್ಟ್, ಶ್ರೀರಾಮಪುರ, ಸಂಜೆ 6ರಿಂದ

ಆಸ್ಟ್ರೇಲಿಯಾದ ಉದ್ಯಮಿಗಳ ನಿಯೋಗದೊಂದಿಗೆ ಸಮಾಲೋಚನೆ: ಅತಿಥಿಗಳು: ಲೀ ಟಾರ್ಲಾಮಿಸ್, ಅನಿಲ್ ಕೋಲನುಕೊಂಡ, ಕಪಿಲ್ ಮೋಹನ್, ಗೋಪಾಲ್ ರೆಡ್ಡಿ, ನಳಿನಿ ನಂಜುಂಡಯ್ಯ, ರಮೇಶ್ ಚಂದ್ರ ಲೊಹಾಟಿ, ರಘುನಾಥ್ ಟಿ.ವಿ., ಎಂ.ಜಿ. ಬಾಲಕೃಷ್ಣ, ಐ.ಎಸ್. ಪ್ರಸಾದ್, ವಿ.ಜಿ. ಕಿರಣ್ ಕುಮಾರ್, ಆಯೋಜನೆ: ರೋಟರಿ ಕ್ಲಬ್ ಆಫ್ ಬೆಂಗಳೂರು, ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ), ಸ್ಥಳ: ಸರ್.ಎಂ. ವಿಶ್ವೇಶ್ವರಯ್ಯ ಸಭಾಂಗಣ, ಎಫ್‌ಕೆಸಿಸಿಐ, ಕೆ.ಜಿ. ರಸ್ತೆ, ಸಂಜೆ 7

ಐಪಿಎಸ್ ಅಧಿಕಾರಿಗಳ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 35ಕ್ಕೂ ಹೆಚ್ಚು ಐಪಿಎಸ್ ಅಧಿಕಾರಿಗಳನ್ನು ಸೋಮವಾರ ವರ್ಗಾವಣೆಗೊಳಿಸಿದ್ದ ಸರ್ಕಾರ, ಈ ಪೈಕಿ ಕೆಲವು ಅಧಿಕಾರಿಗಳ ವರ್ಗಾವಣೆಗೆ ಮಂಗಳವಾರ ತಡೆ ನೀಡಿದರೆ, ಕೆಲವರ ಸ್ಥಳ ಬದಲಿಸಿ ಹೊಸತಾಗಿ ಆದೇಶ ಹೊರಡಿಸಿದೆ.

ವರ್ಗಾವಣೆಗೊಂಡವರು: ಅನುಪಮ್ ಅಗರ್‌ವಾಲ್ - ಮಂಗಳೂರು ನಗರ ಪೊಲೀಸ್ ಕಮಿಷನರ್. ಡಾ.ಎಸ್.ಡಿ. ಶರಣಪ್ಪ- ಡಿಜಿಪಿ ಮತ್ತು ನಿರ್ದೇಶಕ, ಕರ್ನಾಟಕ ಪೊಲೀಸ್ ಅಕಾಡೆಮಿ, ಮೈಸೂರು. ವರ್ತಿಕಾ ಕಟಿಯಾರ್ - ಎಸ್.ಪಿ, ರಾಜ್ಯ ಅಪರಾಧ ದಾಖಲೆಗಳ ಘಟಕ. ಕೆ. ಸಂತೋಷ್ ಬಾಬು - ಡಿಸಿಪಿ, ಆಡಳಿತ ವಿಭಾಗ, ಬೆಂಗಳೂರು ನಗರ. ಜಿ. ಎಚ್. ಯತೀಶ್ ಚಂದ್ರ - ಎಸ್‌ಪಿ, ಆಂತರಿಕ ಭದ್ರತಾ ವಿಭಾಗ. ನಿಕಂ ಪ್ರಕಾಶ್ ಅಮ್ರಿತ್- ಎಸ್‌ಪಿ, ವೈರ್‌ಲೆಸ್. ರಾಹುಲ್ ಕುಮಾರ್ ಶಹಾಪುರವಾಡ್- ಡಿಸಿಪಿ, ಬೆಂಗಳೂರು ದಕ್ಷಿಣ ವಿಭಾಗ. ಡಿ. ದೇವರಾಜ್- ಡಿಸಿಪಿ, ಬೆಂಗಳೂರು ಪೂರ್ವ ವಿಭಾಗ. ಎಸ್. ಗಿರೀಶ್- ಡಿಸಿಪಿ, ಬೆಂಗಳೂರು ಪಶ್ಚಿಮ ವಿಭಾಗ. ಸಂಜೀವ್ ಎಂ. ಪಾಟೀಲ- ಡಿಸಿಪಿ, ವೈಟ್ ಫೀಲ್ಡ್ ವಿಭಾಗ. ಕೆ.ಪರಶುರಾಮ್- ಎಸ್.ಪಿ. ಇಂಟಲಿಜೆನ್ಸ್. ಎಚ್.ಡಿ. ಆನಂದ್ ಕುಮಾರ್- ಎಸ್‌ಪಿ, ನಾಗರಿಕ ಹಕ್ಕುಗಳು ಮತ್ತು ಜಾರಿ ನಿರ್ದೇಶನಾಲಯ. ಡಾ. ಸುಮನ್ ಡಿ. ಪೆನ್ನೇಕರ್- ಎಐಜಿಪಿ, ಹೆಡ್ ಕ್ವಾರ್ಟರ್ಸ್-1. ಡೆಕಾ ಕಿಶೋರ್ ಬಾಬು- ಎಸ್‌ಪಿ ಮತ್ತು ಪ್ರಾಂಶುಪಾಲ, ಪೊಲೀಸ್ ತರಬೇತಿ ಕೇಂದ್ರ, ಕಲಬುರಗಿ. ಡಾ. ಕೋನಾ ವಂಶಿಕೃಷ್ಣ - ಡಿಸಿಪಿ, ಕಮಾಂಡ್ ಸೆಂಟರ್, ಬೆಂಗಳೂರು. ಲಕ್ಷ್ಮಣ್ ನಿಂಬರಗಿ- ಎಸ್‌ಪಿ, ರಾಜ್ಯ ಅಪರಾಧ ದಾಖಲೆಗಳ ಘಟಕ. ಡಾ.ಕೆ. ಅರುಣ್- ಎಸ್‌ಪಿ, ಉಡುಪಿ. .ಎಂ. ಎಸ್ ಮಹಮ್ಮದ್ ಸುಜೀತಾ - ಎಸ್ ಪಿ ಹಾಸನ. ಜಯಪ್ರಕಾಶ್- ಎಸ್ ಪಿ ಇಂಟಲಿಜೆನ್ಸ್. ಸಾರಾ ಫಾತಿಮಾ- ಡಿಸಿಪಿ, ಬೆಂಗಳೂರು ಸಂಚಾರ ಪಶ್ಚಿಮ ವಿಭಾಗ. ಸೋನಾವಾನೆ ರಿಷಿಕೇಶ್ ಭಗವಾನ್- ಎಸ್.ಪಿ ವಿಜಯಪುರ. ಲೋಕೇಶ್ ಭರಮಪ್ಪ ಜಗಲ್ಸರ್- ಎಸ್ ಪಿ, ಕರ್ನಾಟಕ ಪೊಲೀಸ್ ಅಕಾಡೆಮಿ, ಮೈಸೂರು. ಆರ್. ಶ್ರೀನಿವಾಸ್ ಗೌಡ- ಡಿಸಿಪಿ-2, ಸಿಸಿಬಿ, ಬೆಂಗಳೂರು. ಪಿ. ಕೃಷ್ಣಕಾಂತ್- ಎಐಜಿಪಿ (ಆಡಳಿತ). ವೈ. ಅಮರನಾಥ್ ರೆಡ್ಡಿ- ಎಸ್‌ಪಿ, ಬಾಗಲಕೋಟೆ. ಹರಿರಾಮ್ ಶಂಕರ್- ಎಸ್‌ಪಿ, ಇಂಟೆಲಿಜೆನ್ಸ್. ಅದ್ದೂರು ಶ್ರೀನಿವಾಸುಲು- ಎಸ್‌ಪಿ ಕಲಬುರಗಿ. ಅನ್ಶು ಕುಮಾರ್ - ಎಸ್ ಪಿ, ಕೋಸ್ಟಲ್ ಸೆಕ್ಯುರಿಟಿ ಪೊಲೀಸ್, ಉಡುಪಿ. ಕನ್ನಿಕಾ ಸಿಕ್ರಿವಾಲ್ - ಡಿಸಿಪಿ, ಕಾನೂನು ಸುವ್ಯವಸ್ಥೆ, ಕಲಬುರಗಿ. ಕುಶಾಲ್ ಚೌಕ್ಸಿ - ಜಂಟಿ ನಿರ್ದೇಶಕರು, ವಿಧಿವಿಜ್ಞಾನ ಪ್ರಯೋಗಾಲಯ, ಬೆಂಗಳೂರು. ರವೀಂದ್ರ ಕಾಶಿನಾಥ್ ಗಡಾದಿ - ಎಸ್.ಪಿ ಇಂಟಲಿಜೆನ್ಸ್. ಡಿ.ಆರ್. ಸಿರಿಗೌರಿ– ಉಪನಿರ್ದೇಶಕಿ, ಅಗ್ನಿಶಾಮಕ ಮತ್ತು ತುರ್ತುಸೇವೆಗಳು. ಅಬ್ದುಲ್ ಅಹದ್ – ಡಿಸಿಪಿ. ಬೆಂಗಳೂರು ನಗರ ಅಪರಾಧ ಘಟಕ. ಶೇಖರ್ ಎಚ್. ತೆಕ್ಕಣ್ಣವರ್ – ಡಿಸಿಪಿ, ಕೇಂದ್ರ ವಿಭಾಗ, ಬೆಂಗಳೂರು ನಗರ. ಅನಿತಾ ಭೀಮಪ್ಪ ಹದ್ದಣ್ಣವರ್– ಡಿಸಿಪಿ, ಪಶ್ಚಿಮ ಸಂಚಾರ ವಿಭಾಗ, ಬೆಂಗಳೂರು ನಗರ. ಅಶೋಕ್ ಕೆ.ವಿ– ಎಸ್‌ಪಿ, ತುಮಕೂರು.

ಪಂಢರಪುರಕ್ಕೆ ರೈಲು ಸಂಚಾರ ಆರಂಭ

ಪ್ರಜಾವಾಣಿ ವಾರ್ತೆ

ವಿಜಯಪುರ: ಮೈಸೂರು–ಸೋಲಾಪುರ–ಮೈಸೂರು ನಡುವೆ ನಿತ್ಯ ಸಂಚರಿಸುವ ‘ಗೋಳಗುಮ್ಮಟ ಎಕ್ಸ್‌ಪ್ರೆಸ್’ ರೈಲು (16535/16536) ಮಹಾರಾಷ್ಟ್ರದ ಪಂಢರಪುರದವರೆಗೆ ಸಾಗಲಿದ್ದು, ಸಂಸದ ರಮೇಶ ಜಿಗಜಿಣಗಿ ಮಂಗಳವಾರ ಹಸಿರು ನಿಶಾನೆ ತೋರಿದರು.

ಮೈಸೂರಿನಿಂದ ಇಲ್ಲಿನ ರೈಲು ನಿಲ್ದಾಣಕ್ಕೆ ಬಂದ ರೈಲು ಪ್ರಯಾಣಿಕರನ್ನು ಹತ್ತಿಸಿಕೊಂಡು ಪಂಢರಪುರದತ್ತ ಹೊರಡುವ ಮುನ್ನ ಶ್ವೇತ ವಸ್ತ್ರಧಾರಿ ವಿಠಲನ ಭಕ್ತರು ತಾಳ, ತಂಬೂರಿ, ಹಾರ್ಮೋನಿಯಂ ನುಡಿಸುವ ಮೂಲಕ ಅಭಂಗಗಳನ್ನು ಹಾಡುತ್ತಾ ನರ್ತಿಸಿದರು.

ಸಂಸದ ರಮೇಶ ಜಿಗಜಿಣಗಿ ವಿಠಲನ ಚಿತ್ರಕ್ಕೆ ಪೂಜೆ ಸಲ್ಲಿಸಿದರು. ಶಾಸಕ ವಿಠಲ ಕಟಕಧೋಂಡ, ನೈರುತ್ಯ ರೈಲ್ವೆ ಹುಬ್ಬಳ್ಳಿ ಹೆಚ್ಚುವರಿ ವಿಭಾಗೀಯ ವ್ಯವಸ್ಥಾಪಕ ಸಂತೋಷ್ ಕುಮಾರ್ ವರ್ಮಾ, ಸಹಾಯಕ ವಾಣಿಜ್ಯ ವ್ಯವಸ್ಥಾಪಕಿ ನಿವೇದಿತಾ ಬಾಲರಡ್ಡಿ, ವಲಯ ರೈಲ್ವೆ ಬಳಕೆದಾರರ ಸಲಹಾ ಸಮಿತಿ ಸದಸ್ಯ ದಾಮೋದರ ದಾಸ ರಾಠಿ ಇದ್ದರು.

ಗುಡುಗು ಮಿಂಚಿನ ಆರ್ಭಟ, ಕೆಳ ಸೇತುವೆಗಳಲ್ಲಿ ನೀರು ನಿಂತಿದ್ದರಿಂದ ವಾಹನ ಸವಾರರ ಪರದಾಟ

ಧಾರಾಕಾರ ಮಳೆ: ಹೊಳೆಯಂತಾದ ರಸ್ತೆಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಂಗಳವಾರ ಗುಡುಗು ಮಿಂಚು ಸಹಿತ ಧಾರಾಕಾರ ಮಳೆ ಸುರಿಯಿತು.

ಪ್ರಮುಖ ರಸ್ತೆಗಳಲ್ಲಿ ಹೊಳೆಯಂತೆ ನೀರು ಹರಿಯಿತು. ಕೆಳಸೇತುವೆಗಳಲ್ಲಿ ಅಪಾರ ಪ್ರಮಾಣದ ನೀರು ಸಂಗ್ರಹವಾಗಿ ವಾಹನ ಸವಾರರು ಪರದಾಡಿದರು.

ಮಂಗಳವಾರ ಬೆಳಿಗ್ಗೆಯಿಂದಲೂ ಮೋಡ ಕವಿದ ವಾತಾವರಣ ಇತ್ತು. ಮಧ್ಯಾಹ್ನದ ವೇಳೆಯಲ್ಲಿ ಸಾಧಾರಣ ಮಳೆ ಸುರಿಯಿತು. ರಾತ್ರಿ ಮಳೆಯ ಅಬ್ಬರ ಜೋರಾಗಿತ್ತು. ಕಳೆದ ನಾಲ್ಕೈದು ದಿನಗಳಿಂದ ನಗರದ ಅಲ್ಲಲ್ಲಿ ಮಳೆ ಸುರಿಯುತ್ತಿದ್ದು ವಾತಾವರಣ ತಂಪಾಗಿದೆ.

ತಲಘಟ್ಟಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಕನಕಪುರ ಮುಖ್ಯರಸ್ತೆಯ ಯಶಸ್ವಿ ಶಾಲೆಯ ಬಳಿ ಮಳೆಯಿಂದ ಅಪಾರ ಪ್ರಮಾಣದ ನೀರು ಸಂಗ್ರಹಗೊಂಡು ವಾಹನಗಳು ಪರ್ಯಾಯ ಮಾರ್ಗದಲ್ಲಿ ಸಂಚರಿಸಿದವು.

ಹೆಣ್ಣೂರು ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಪೂರ್ವಾಂಕರ ಅಪಾರ್ಟ್‌ಮೆಂಟ್ (ರಾಷ್ಟ್ರೋತ್ಥಾನ) ಬಳಿಯ ರಸ್ತೆ ಜಲಾವೃತಗೊಂಡು ವಾಹನ ಸಂಚಾರ ಬಂದ್ ಆಗಿತ್ತು.

ಹೆಣ್ಣೂರಿನ ಪೂರ್ವಾಂಕರ ಅಪಾರ್ಟ್‌ಮೆಂಟ್ ಬಳಿಯ ರಸ್ತೆ ಜಲಾವೃತಗೊಂಡಿತ್ತು (ಎಡ ಚಿತ್ರ). ನಗರದಲ್ಲಿ ಸುರಿದ ಮಳೆಯಲ್ಲಿ ಜನರು ಕೊಡೆ ಹಿಡಿದು ಸಾಗಿದರು

ಗೊಲ್ಲಹಳ್ಳಿ, ವಿದ್ಯಾಪೀಠ, ರಾಜರಾಜೇಶ್ವರಿನಗರ, ಕೆಂಗೇರಿ, ಹೆಮ್ಮಿಗೆಪುರ, ಹಂಪಿನಗರ, ಗಾಳಿ ಆಂಜನೇಯ ದೇವಸ್ಥಾನದ ಸುತ್ತಮುತ್ತ, ನಂದಿನಿ ಲೇಔಟ್, ಕೋಣನಕುಂಟೆ ಭಾಗದಲ್ಲಿ ಮಳೆ ಅಬ್ಬರ ಜೋರಾಗಿತ್ತು.

ನಾಯಂಡನಹಳ್ಳಿ, ದೀಪಾಂಜಲಿ ನಗರ, ಗಿರಿನಗರ, ಹನುಮಂತನಗರ, ಬಸವನಗುಡಿ, ಬನಶಂಕರಿ, ಜಯನಗರ, ಮಡಿವಾಳ, ಚಿಕ್ಕಪೇಟೆ, ಗಾಂಧಿನಗರ, ಮೆಜೆಸ್ಟಿಕ್, ಶೇಷಾದ್ರಿಪುರ, ಮಲ್ಲೇಶ್ವರದ ಭಾಗದಲ್ಲೂ ಮಳೆ ಸುರಿಯಿತು.

ವಿದ್ಯಾರಣ್ಯಪುರ, ಕೊಡಿಗೇಹಳ್ಳಿ, ವಿ. ನಾಗೇನಹಳ್ಳಿ, ಯಲಹಂಕ ಭಾಗದಲ್ಲೂ ಜೋರು ಮಳೆ ಆಯಿತು. ಸಿಡಿಲು ಅಬ್ಬರವೂ ಹೆಚ್ಚಿತ್ತು.

ಬಿಟಿಎಂ ಲೇಔಟ್, ಚಾಮರಾಜಪೇಟೆ, ಪುಲಕೇಶಿ ನಗರ, ಹೊರಮಾವು, ಕೋರಮಂಗಲ, ಶೆಟ್ಟಿಹಳ್ಳಿ, ದೊಡ್ಡಬಿದಿರು ಕಲ್ಲು ಭಾಗದಲ್ಲಿ ಮಳೆಯಾಗಿದೆ. ರಸ್ತೆಯಲ್ಲಿ ನೀರು ಹರಿದಿದ್ದರಿಂದ, ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಯಿತು. ಹೆಬ್ಬಾಳ ಮೇಲ್ಸೇತುವೆ, ಜಯಮಹಲ್ ರಸ್ತೆ ಮಳೆಯಿಂದ ವಾಹನಗಳ ದಟ್ಟಣೆ ಉಂಟಾಯಿತು.

ಚಿಕ್ಕಪೇಟೆ, ಗಾಂಧಿನಗರ, ಮೆಜೆಸ್ಟಿಕ್, ಉಪ್ಪಾರಪೇಟೆ, ಮಲ್ಲೇಶ್ವರ, ಯಶವಂತಪುರ ಮಾರುಕಟ್ಟೆ ವ್ಯಾಪ್ತಿಯಲ್ಲೂ ಮಳೆ ಅಬ್ಬರ ಜೋರಾಗಿತ್ತು. ಇದರಿಂದ ವರ್ತಕರು ಹಾಗೂ ಗ್ರಾಹಕರು ತೊಂದರೆಗೆ ಒಳಗಾದರು.

ಮಳೆ ಮುಂದುವರಿಕೆ ಸಾಧ್ಯತೆ: ನಗರದಲ್ಲಿ ಇನ್ನೂ ಎರಡು ದಿನ ಮೋಡ ಕವಿದ ವಾತಾವರಣ ಇರಲಿದ್ದು ಸಂಜೆ ಅಥವಾ ರಾತ್ರಿ ವೇಳೆಯಲ್ಲಿ ಧಾರಾಕಾರ ಮಳೆ ಸುರಿಯುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮಳೆಯ ಪ್ರಮಾಣ (ಮಿ.ಮೀಗಳಲ್ಲಿ)	
ಎಚ್.ಗೊಲ್ಲಹಳ್ಳಿ	52
ವಿದ್ಯಾಪೀಠ	45
ಕೆಂಗೇರಿ	40
ಹೆಮ್ಮಿಗೆಪುರ	38
ಹಂಪಿನಗರ	33
ಮಾರುತಿ ಮಂದಿರ ವಾರ್ಡ್	31
ಗಾಳಿ ಆಂಜನೇಯ ದೇವಸ್ಥಾನದ ಸುತ್ತಮುತ್ತ	30

ಸುದ್ದಿ 2 ನಿಮಿಷ

ವಾಹನ ಡಿಕ್ಕಿ: ಪಾದಚಾರಿ ಸಾವು

ಬೆಂಗಳೂರು: ಕೆಂಗೇರಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವಾಹನ ಡಿಕ್ಕಿಯಿಂದ ಪಾದಚಾರಿಯೊಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮೃತ ಪುರುಷನ ಗುರುತು ಪತ್ತೆಯಾಗಿಲ್ಲ. 35ರಿಂದ 40 ವರ್ಷ ಇರಬಹುದು ಎಂದು ಅಂದಾಜಿಸಲಾಗಿದೆ.

ತುಮಕೂರು ರಸ್ತೆಯಿಂದ ಹೊಸೂರು ರಸ್ತೆ ಕಡೆಗೆ ನಡೆದು ತೆರಳುತ್ತಿರುವಾಗ ವೇಗವಾಗಿ ಬಂದ ವಾಹನ ಡಿಕ್ಕಿಯಾಗಿದೆ. ವಾಹನ ಚಾಲಕನ ನಿರ್ಲಕ್ಷ್ಯದಿಂದ ಈ ಅಪಘಾತ ಸಂಭವಿಸಿದ್ದು, ಚಾಲಕ ಪರಾರಿಯಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಡಿಕ್ಕಿಯ ರಭಸಕ್ಕೆ ತಲೆಗೆ ಗಂಭೀರ ಸ್ವರೂಪದ ಗಾಯವಾಗಿದ್ದರಿಂದ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ಮಾದಕ ವಸ್ತು ಮಾರಾಟ: ಆರೋಪಿ ಬಂಧನ

ಬೆಂಗಳೂರು: ಎಂಆರ್‌ಸಿಆರ್ ಲೇಔಟ್‌ನ ಬಳಿ ಮಾದಕ ವಸ್ತು ಎಂಡಿಎಂಎ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಗೋವಿಂದರಾಜನಗರ ಠಾಣೆ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಮಂಗಳೂರಿನ ಅಬ್ದುಲ್ ಸಲಾಂ ಬಂಧಿತ ಆರೋಪಿ. ಬಂಧಿತನಿಂದ 55 ಗ್ರಾಂ ಎಂಡಿಎಂಎ ಮಾದಕ ವಸ್ತು ಹಾಗೂ ಎರಡು ಮೊಬೈಲ್ ಜಪ್ತಿ ಮಾಡಿಕೊಳ್ಳಲಾಗಿದೆ. ಈತ ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳನ್ನು ಪೂರೈಸುತ್ತಿದ್ದ ಎಂದು ಪೊಲೀಸರು ಹೇಳಿದರು.

ಎರಡು ದ್ವಿಚಕ್ರ ವಾಹನ ಜಪ್ತಿ: ಬಿಇಎಂಎಲ್ ಲೇಔಟ್‌ನ ಮನೆಯೊಂದರಲ್ಲಿ ಚಿನ್ನಾಭರಣ ಕಳವು ಮಾಡಿದ್ದ ಆರೋಪಿಯನ್ನು ರಾಜರಾಜೇಶ್ವರಿ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಭುವನೇಶ್ವರ ನಗರದ ಆರ್.ಸಂಜಯ್ ಬಂಧಿತ ಆರೋಪಿ.

ಆರೋಪಿ ಕಳವು ಮಾಡಿದ್ದ ₹ 4.50 ಲಕ್ಷದ 80 ಗ್ರಾಂ ಚಿನ್ನಾಭರಣ ಹಾಗೂ ಎರಡು ಬೈಕ್‌ಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ. ಆರೋಪಿಯು ಈ ಹಿಂದೆ ರಾಜರಾಜೇಶ್ವರಿ ನಗರ, ಬನಶಂಕರಿ, ಚೆನ್ನಮ್ಮನಕೆರೆ ಅಚ್ಚುಕಟ್ಟು ಪ್ರದೇಶ, ಜಯನಗರ, ಜೆ.ಪಿ.ನಗರ, ಕೆಂಗೇರಿ, ಬೆಳ್ಳಂದೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಚಿನ್ನಾಭರಣ ಕಳವು, ಸುಲಿಗೆ ಹಾಗೂ ವಾಹನ ಕಳವು ಪ್ರಕರಣಗಳಲ್ಲಿ ಭಾಗಿಯಾಗಿದ್ದ ಎಂದು ತನಿಖೆಯಿಂದ ಗೊತ್ತಾಗಿದೆ. ಹಲವು ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ಹಾಜರಾಗದೇ ತಲೆಮರೆಸಿಕೊಂಡಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

'ನೀರು ಹರಿಸದಿದ್ದರೆ ಅನಾಹುತವೇನೂ ಆಗುತ್ತಿರಲಿಲ್ಲ'

ಹಾಸನ: 'ಸಿದ್ದರಾಮಯ್ಯ ಸರ್ಕಾರ ತಮಿಳುನಾಡಿಗೆ ನೀರು ಹರಿಸದೇ ಇದ್ದಿದ್ದರೆ, ಯಾವ ಅನಾಹುತವೂ ಆಗುತ್ತಿರಲಿಲ್ಲ' ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಪ್ರತಿಪಾದಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಬಂಗಾರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ನೀರು ಹರಿಸಿರಲಿಲ್ಲ. ಹಾಗೆಂದು ಅವರನ್ನು ಜೈಲಿಗೇನೂ ಹಾಕಲಿಲ್ಲ. ಈಗ ಸಿದ್ದರಾಮಯ್ಯ ಸರ್ಕಾರ ತಪ್ಪು ಮಾಡಿದ್ದು, ಕೂಡಲೇ ನೀರು ಹರಿಸುವುದನ್ನು ನಿಲ್ಲಿಸಬೇಕು' ಎಂದು ಆಗ್ರಹಿಸಿದರು.

'ದ್ವೇಷ ಹರಡುವ ಮಾಧ್ಯಮ ಸಂಸ್ಥೆಗಳಿಗೆ ದೇಣಿಗೆಗೆ ಕತ್ತರಿ ಸರಿ'

ಐಐಎಂಬಿ ಪ್ರಾಧ್ಯಾಪಕರ ಪತ್ರಕ್ಕೆ ಸಮರ್ಥನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾಜದ ಸಾಮರಸ್ಯಕ್ಕೆ ಧಕ್ಕೆ ತರುವ ಮಾಧ್ಯಮ ಸಂಸ್ಥೆಗಳಿಗೆ ಹಣ ನೀಡಬಾರದು ಎಂದು ಐಐಎಂಬಿಯ ಕೆಲ ಹಾಲಿ ಮತ್ತು ನಿವೃತ್ತ ಪ್ರಾಧ್ಯಾಪಕರು ಕಾರ್ಪೊರೇಟ್ ಕಂಪನಿಗಳಿಗೆ ಇತ್ತೀಚೆಗೆ ಬರೆದಿರುವ ಪತ್ರವನ್ನು ಕೆಲ ಲೇಖಕರು, ಪತ್ರಕರ್ತರು ಮತ್ತು ನಿವೃತ್ತ ಅಧಿಕಾರಿಗಳು ಬಲವಾಗಿ ಸಮರ್ಥಿಸಿಕೊಂಡಿದ್ದಾರೆ.

ಕ್ಯಾಪ್ಟನ್ ಗೋಪಿನಾಥ್, ಪತ್ರಕರ್ತ ಕೃಷ್ಣಪ್ರಸಾದ್, ಉದ್ಯಮಿಗಳಾದ ಬಿ.ಎಸ್.ಅಜಯ್‌ಕುಮಾರ್, ಬಿ.ಜಿ. ಕೋಶಿ, ನಿವೃತ್ತ ಐಪಿಎಸ್ ಅಧಿಕಾರಿ ಎಸ್.ಟಿ.ರಮೇಶ್, ನಿವೃತ್ತ ಐಎಎಸ್ ಅಧಿಕಾರಿ ಶ್ರೀನಿವಾಸಮೂರ್ತಿ ಮತ್ತು ಇತರರು ಈ ಕುರಿತು ಹೇಳಿಕೆ ಬಿಡುಗಡೆ ಮಾಡಿದ್ದಾರೆ.

'ಮುಕ್ತ ರಾಷ್ಟ್ರವೊಂದರಲ್ಲಿ ಸಾಮಾನ್ಯ ವ್ಯಕ್ತಿಯಿಂದ ಹಿಡಿದು ಕಾರ್ಪೊರೇಟ್ ವ್ಯಕ್ತಿಯವರೆಗೆ ಪ್ರತಿಯೊಬ್ಬನಿಗೂ ಯಾವುದೇ ಮಾಹಿತಿಯನ್ನು ಅದರ ವಿಶ್ವಾಸಾರ್ಹತೆಗೆ ಅನುಗುಣವಾಗಿ ಸ್ವತಂತ್ರವಾಗಿ ವಿಶ್ಲೇಷಿಸುವ ಮತ್ತು ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯವಿದೆ. ಯಾವುದೇ ಒಂದು ವಿಷಯದ ಬಗ್ಗೆ ಅಭಿಪ್ರಾಯ ವ್ಯಕ್ತವಾದಾಗ ಅದನ್ನು ವಿರೋಧಿಸಿಯೂ ಅಭಿಪ್ರಾಯ ವ್ಯಕ್ತಪಡಿಸಬಹುದು' ಎಂದು ಹೇಳಿದ್ದಾರೆ.

'ಆದರೆ ಈ ಪತ್ರದ ಬಗ್ಗೆ ಇತ್ತೀಚೆಗೆ ಕೆಲವು ನಿವೃತ್ತ ಐಎಎಸ್, ಐಪಿಎಸ್ ಅಧಿಕಾರಿಗಳು ಮತ್ತು ಐಐಎಂನ ಮಾಜಿ ಪ್ರಾಧ್ಯಾಪಕರು ಆಕ್ಷೇಪ ವ್ಯಕ್ತಪಡಿಸಿ ಪತ್ರ ಬರೆದವರ ವಿರುದ್ಧವೇ ಕ್ರಮ ತೆಗೆದುಕೊಳ್ಳಬೇಕು ಎಂದು ಐಐಎಂ ಅಧ್ಯಕ್ಷರನ್ನು ಒತ್ತಾಯಿಸಿದ್ದಾರೆ. ಈ ರೀತಿ ಒತ್ತಾಯಿಸುವುದರ ಬದಲಿಗೆ ಚರ್ಚೆ ನಡೆಸಬಹುದಿತ್ತು. ಇವರ ಪ್ರಜಾಪ್ರಭುತ್ವ ವಿರೋಧಿ ಮತ್ತು ಅನುಚಿತ ನಡೆ' ಎಂದು ಟೀಕಿಸಿದ್ದಾರೆ.

ಐಐಎಂನ ಹಾಲಿ ಮತ್ತು ನಿವೃತ್ತ ಪ್ರಾಧ್ಯಾಪಕರ ಪತ್ರದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ ಕೆ.ಶ್ರೀಧರ್ ರಾವ್, ಎಸ್.ಎಲ್.ಗಂಗಾಧರಪ್ಪ, ಎಂ.ಮದನ್ ಗೋಪಾಲ್, ಪಿ.ಬಿ.ರಾಮಮೂರ್ತಿ, ಎಂ.ಲಕ್ಷ್ಮೀನಾರಾಯಣ, ರಮೇಶ್ ಝುಳಕಿ, ಎನ್.ಪ್ರಭಾಕರ್, ಎಂ.ಎನ್.ಕೃಷ್ಣಮೂರ್ತಿ, ಗೋಪಾಲ್ ಹೊಸೂರ್, ಭಾಸ್ಕರ ರಾವ್, ಬ್ರಿಜ್ ಕಿಶೋರ್ ಸಿಂಗ್ ಸೇರಿದಂತೆ 23 ನಿವೃತ್ತ ಅಧಿಕಾರಿಗಳು ಐಐಎಂಬಿ ಆಡಳಿತ ಮಂಡಳಿ ಅಧ್ಯಕ್ಷ ದೇವಿ ಪ್ರಸಾದ್ ಶೆಟ್ಟಿ ಅವರಿಗೆ ಪತ್ರ ಬರೆದಿದ್ದರು.

'ಐಐಎಂಬಿ ಹಾಲಿ ಮತ್ತು ನಿವೃತ್ತ ಪ್ರಾಧ್ಯಾಪಕರು ತಮ್ಮ ಪತ್ರದಲ್ಲಿ ಬಳಸಿರುವ ದ್ವೇಷದ ಭಾಷಣ, ಹಿಂಸಾತ್ಮಕ ಸಂಘರ್ಷ, ಅಲ್ಪಸಂಖ್ಯಾತರ ಮೇಲಿನ ದ್ವೇಷ ಮೊದಲಾದ ಪದಗಳು ಅವರು ಏನನ್ನು ಹೇಳಲು ಹೊರಟಿದ್ದಾರೆ ಎನ್ನುವುದನ್ನು ಸೂಚಿಸುತ್ತದೆ. ಅವರ ದೃಷ್ಟಿಕೋನವನ್ನು ವಿರೋಧಿಸುವ ಮತ್ತೊಂದು ಗುಂಪಿನ ಅಧ್ಯಾಪಕರು, ವಿದ್ಯಾರ್ಥಿಗಳು ಮರುಹೇಳಿಕೆ ನೀಡಿದರೆ ಸಂಸ್ಥೆಯ ಆವರಣದಲ್ಲಿನ ಅತ್ಯುತ್ತಮ ಶೈಕ್ಷಣಿಕ ವಾತಾವರಣದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ' ಎಂದು ಟೀಕಿಸಿದ್ದರು.

ಬಸ್ ಸಂಚಾರಕ್ಕೆ ಪರ್ಯಾಯ ಮಾರ್ಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವೆಸ್ಟ್‌ಆಫ್ ಕಾರ್ಡ್ ರಸ್ತೆಯ ಇಸ್ಕಾನ್ ದೇವಸ್ಥಾನದಲ್ಲಿ ಬುಧವಾರ ಹಾಗೂ ಗುರುವಾರ ಶ್ರೀಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ವಿವಿಧ ಕಾರ್ಯಕ್ರಮಗಳು ನಡೆಯಲಿವೆ.

ಎರಡೂ ದಿನವೂ ದೇವಸ್ಥಾನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಬರುವ ಕಾರಣಕ್ಕೆ ರಾಜ್‌ಕುಮಾರ್ ರಸ್ತೆ ಹಾಗೂ ವೆಸ್ಟ್ ಆಫ್ ಕಾರ್ಡ್ ರಸ್ತೆಯಲ್ಲಿ ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಬಸ್‌ಗಳ ಸಂಚಾರ ನಿರ್ಬಂಧಿಸಲಾಗಿದೆ. ವಾಹನಗಳು ಪರ್ಯಾಯ ಮಾರ್ಗದಲ್ಲಿ ತೆರಳುವಂತೆ ನಗರ ಸಂಚಾರ ವಿಭಾಗದ ಪೊಲೀಸರು ಕೋರಿದ್ದಾರೆ.

ಅಧಿವೇಶನದ ಕಾರ್ಯಸೂಚಿ: ಸರ್ಕಾರಕ್ಕೆ ಪತ್ರ ಬರೆಯಲು 'ಇಂಡಿಯಾ' ನಿರ್ಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ನಿರುದ್ಯೋಗ, ಬೆಲೆ ಏರಿಕೆ, ಮಣಿಪುರ ಹಿಂಸಾಚಾರ ಸೇರಿದಂತೆ ಕೆಲವು ವಿಷಯಗಳ ಕುರಿತು ಸಂಸತ್ತಿನ ವಿಶೇಷ ಅಧಿವೇಶನದಲ್ಲಿ ಚರ್ಚಿಸಲು ಬಯಸುವುದಾಗಿ 'ಇಂಡಿಯಾ' ಮೈತ್ರಿಕೂಟವು ಸರ್ಕಾರಕ್ಕೆ ಪತ್ರ ಬರೆಯಲು ಮಂಗಳವಾರ ರಾತ್ರಿ ನಿರ್ಧರಿಸಿದೆ.

ಸೆ.18ರಿಂದ ಪ್ರಾರಂಭವಾಗುವ ಐದು ದಿನಗಳ ವಿಶೇಷ ಅಧಿವೇಶನದ ಕಾರ್ಯಸೂಚಿಯಾಗಿ ವಿರೋಧ ಪಕ್ಷಗಳ ಬಣ ಏನನ್ನು ಚರ್ಚಿಸಲು ಬಯಸುತ್ತದೆ ಎಂಬುದನ್ನು ಸೂಚಿಸಿ ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆಯಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ಸಂಬಂಧ ಮೈತ್ರಿಕೂಟದ ಪಕ್ಷಗಳಿಂದಲೂ ಮಾಹಿತಿ ಕೇಳಲಾಗಿದ್ದು, ಎಲ್ಲವನ್ನೂ ಕ್ರೋಢೀಕರಿಸಿ ಬುಧವಾರವೇ ಪ್ರಧಾನಿಗೆ ಪತ್ರ ಬರೆಯುವ ಸಾಧ್ಯತೆ ಇದೆ.

ಕಾಂಗ್ರೆಸ್ ಸಂಸದೀಯ ಕಾರ್ಯತಂತ್ರದ ಗುಂಪಿನ ಚರ್ಚೆ ನಡೆದ ಕೆಲ ಗಂಟೆ ಬಳಿಕ 'ಇಂಡಿಯಾ' ಮೈತ್ರಿಕೂಟದ ಸಂಸದೀಯ ನಾಯಕರ ಸಭೆಯಲ್ಲಿ ಈ ಕುರಿತು ನಿರ್ಧರಿಸಲಾಯಿತು.

ವಿಪಕ್ಷಗಳು ಅಧಿವೇಶವನ್ನು ಬಹಿಷ್ಕರಿಸುವ ಸಾಧ್ಯತೆ ಇದೆ ಎಂಬ ಊಹಾಪೋಹಗಳನ್ನು ಅಲ್ಲಗಳೆದಿರುವ ಮೂಲಗಳು, ಇಂಥ ಸಲಹೆಗಳನ್ನೂ ತಿರಸ್ಕರಿಸಲಾಗಿದೆ ಎಂದು ಸ್ಪಷ್ಟಪಡಿಸಿದೆ. ಈ ಅಧಿವೇಶನದಲ್ಲಿ ಅಪೇಕ್ಷಿತ ವಿಷಯಗಳ ಚರ್ಚೆಯನ್ನು ಮುನ್ನೆಲೆಗೆ ತರುವಂತೆ ಪಾಲ್ಗೊಳ್ಳುವ ಕುರಿತು ತೀರ್ಮಾನಿಸಲಾಯಿತು. ಕಲಾಪವನ್ನು ಅಡ್ಡಿಪಡಿಸುವ ಪೂರ್ವ ನಿರ್ಧಾರಿತ ತಂತ್ರಗಳೊಂದಿಗೆ ಅಧಿವೇಶನಕ್ಕೆ ಹೋಗದಿರಲು ನಿರ್ಧರಿಸಲಾಯಿತು.

'ವಿಶೇಷ ಅಧಿವೇಶನದ ಕಾರ್ಯಸೂಚಿ ಎಲ್ಲಿದೆ? ಅದನ್ನು ಏಕೆ ಗೋಪ್ಯವಾಗಿ ಇರಿಸಲಾಗಿದೆ. ಅಧಿವೇಶನಕ್ಕೆ ಅಡ್ಡಿಪಡಿಸಲು ಬಿಜೆಪಿಯು ಎಲ್ಲ ಪ್ರಯತ್ನಗಳನ್ನು ಮಾಡುತ್ತದೆ. ನಾವು ಸಕಾರಾತ್ಮಕ ವಾಗಿ ಇರುತ್ತೇವೆ' ಎಂದು ಸಭೆಯ ಬಳಿಕ ರಾಜ್ಯಸಭೆಯ ತೃಣಮೂಲ ಕಾಂಗ್ರೆಸ್‌ನ ಸದಸ್ಯ ಡೆರೆಕ್ ಒಬ್ರಿಯಾನ್ ಹೇಳಿದರು.

ಸಭೆಯ ಬಳಿಕ 'ಎಕ್ಸ್'ನಲ್ಲಿ ಬರೆದಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, 'ಮೋದಿ ಸರ್ಕಾರವು ಮೊದಲ ಬಾರಿಗೆ ಅಜೆಂಡಾ ವಿವರಿಸದೆ ಸಂಸತ್ತಿನ ವಿಶೇಷ ಅಧಿವೇಶನ ಕರೆದಿದೆ. ಈ ಕುರಿತು ಅವರು ವಿರೋಧ ಪಕ್ಷದ ಯಾವುದೇ ನಾಯಕರೊಂದಿಗೆ ಸಮಾಲೋಚಿಸಿಲ್ಲ ಅಥವಾ ಮಾಹಿತಿಯನ್ನೂ ನೀಡಿಲ್ಲ. ಇದು ಪ್ರಜಾಪ್ರಭುತ್ವ ನಡೆಸುವ ಕ್ರಮವಲ್ಲ' ಎಂದು ಹೇಳಿದ್ದಾರೆ.

'ಮೋದಿ ಸರ್ಕಾರವು ನಿತ್ಯ ತಮ್ಮ ನಿರೀಕ್ಷಿತ ಕಾರ್ಯಸೂಚಿಯ ಕಥೆಯನ್ನ ಮಾಧ್ಯಮಗಳಲ್ಲಿ ಹರಿಬಿಡುತ್ತಿದೆ. ದೇಶದ ಜನರ ದಿಕ್ಕು ತಪ್ಪಿಸುತ್ತಿದೆ. ಬೆಲೆ ಏರಿಕೆ, ನಿರುದ್ಯೋಗ, ಮಣಿಪುರ, ಚೀನಾ ಅತಿಕ್ರಮಣ, ಸಿಎಜಿ ವರದಿಗಳು, ಹಗರಣಗಳು ಮತ್ತು ಸಂಸ್ಥೆಗಳನ್ನು ದುರ್ಬಲಗೊಳಿಸುವ ವಿಚಾರಗಳನ್ನು ಬದಿಗಿರಿಸಿ ಜನರನ್ನು ವಂಚಿಸಲು ಬಿಜೆಪಿ ಬಯಸುತ್ತಿದೆ' ಎಂದು ಅವರು ತಿಳಿಸಿದ್ದಾರೆ.

ವಿಪಕ್ಷಗಳು ಮಾತ್ರ ಒಂದೇ ಅಂಶದತ್ತ ಹೆಚ್ಚು ಗಮನವಹಿಸಲಿವೆ. ಭಾರತ್ ಜುಡೇಗಾ, ಇಂಡಿಯಾ ಜೀತೆಗಾ ಎಂದು ಖರ್ಗೆ ಬರೆದಿದ್ದಾರೆ.

ಸಭೆಯ ಬಳಿಕ ಮಾಧ್ಯಮಗಳ ಜತೆ ಮಾತನಾಡಿದ ಲೋಕಸಭೆಯ ಕಾಂಗ್ರೆಸ್ ಉಪ ನಾಯಕ ಗೌರವ್ ಗೊಗೊಯ್, ಸೆ. 18ರಿಂದ 22ರವರೆಗಿನ ಅಧಿವೇಶನದ ವಿಶೇಷ ಏನು ಎಂಬುದು ದೇಶಕ್ಕೆ ಗೊತ್ತಿಲ್ಲ' ಎಂದರು.

'ಇಂಡಿಯಾ' ಮೈತ್ರಿಕೂಟದ ಒಗ್ಗಟ್ಟಿನಿಂದ ಬಿಜೆಪಿಗೆ ಭಯ ಬಂದಿದೆ. ಆದರೆ ಈ ನಮ್ಮ ಒಗ್ಗಟ್ಟು ದೇಶದ ಜನರಲ್ಲಿ ಹೊಸ ಭರವಸೆ ಮೂಡಿಸಿದೆ. ಏನೇ ಆಗಲಿ ಈ ಒಗ್ಗಟ್ಟು ಉಳಿಯುತ್ತದೆ' ಎಂದು ಅವರು ಹೇಳಿದರು.

ತಮಿಳುನಾಡಿಗೆ 3 ವಿಶೇಷ ತಂಡ

ಹೋಟೆಲ್‌ನಲ್ಲಿ ಗುರುಸ್ವಾಮಿ ಮೇಲೆ ಹಲ್ಲೆ ಪ್ರಕರಣ: ಚುರುಕುಗೊಂಡ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಿಳುನಾಡಿನ ರಾಜಕೀಯ ಪಕ್ಷವೊಂದರ ಮಧುರೈ ಮಂಡಲ ಅಧ್ಯಕ್ಷ ವಿ.ಕೆ.ಗುರುಸ್ವಾಮಿ ಅವರ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ, ಕೊಲೆಗೆ ಯತ್ನಿಸಿದ್ದ ಆರೋಪಿಗಳ ಪತ್ತೆಗೆ ಪೂರ್ವ ವಿಭಾಗದ ಎಸಿಪಿ ನೇತೃತ್ವದಲ್ಲಿ ಮೂರು ವಿಶೇಷ ತಂಡ ರಚಿಸಲಾಗಿದೆ.

'ತನಿಖಾ ತಂಡಗಳು ಮಂಗಳವಾರ ಬೆಳಿಗ್ಗೆ ತಮಿಳುನಾಡಿಗೆ ತೆರಳಿದ್ದು ಆರೋಪಿಗಳ ಬಂಧನಕ್ಕೆ ಕಾರ್ಯಾಚರಣೆ ನಡೆಸುತ್ತಿವೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನಗರದ ಬಾಣಸವಾಡಿ ಪೊಲೀಸ್ ಠಾಣಾ ವ್ಯಾಪ್ತಿಯ ಕಮ್ಮನ ಹಳ್ಳಿಯ ಸುಖಸಾಗರ್ ಹೋಟೆಲ್‌ನಲ್ಲಿ ಸೋಮವಾರ ಸಂಜೆ 5.30ರ ಸುಮಾರಿಗೆ ಬ್ರೋಕರ್ ಜತೆಗೆ ಟೀ ಕುಡಿಯುತ್ತಿದ್ದ ವೇಳೆ ಕಾರಿನಲ್ಲಿ ಬಂದಿದ್ದ ಐವರು ದುಷ್ಕರ್ಮಿಗಳು, ಗುರುಸ್ವಾಮಿ ಮೇಲೆ ದಾಳಿ ನಡೆಸಿ ಕೊಲೆಗೆ ಯತ್ನಿಸಿದ್ದರು. ರಕ್ತದ ಮಡುವಿನಲ್ಲಿ ಬಿದ್ದಿದ್ದ ಅವರನ್ನು ಹೋಟೆಲ್ ಸಿಬ್ಬಂದಿ, ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದರು.

'ಗುರುಸ್ವಾಮಿಗೆ ಕ್ಯೂರಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿಸಲಾಗಿದೆ.

ಸುಖಸಾಗರ್ ಹೋಟೆಲ್‌ನಲ್ಲಿ ಮಂಗಳವಾರ ಶಾಂತಿ ಹೋಮ ನಡೆಯಿತು.

ಕುಟುಂಬಸ್ಥರು ತಮಿಳುನಾಡಿನಿಂದ ಬಂದಿದ್ದಾರೆ' ಎಂದು ಮೂಲಗಳು ಹೇಳಿವೆ.

ತಮಿಳುನಾಡಿನತ್ತ ದುಷ್ಕರ್ಮಿಗಳು: 'ತಮಿಳುನಾಡಿನಿಂದ ಹಿಂಬಾಲಿಸಿ ಕೊಂಡು ಬಂದಿದ್ದ ದುಷ್ಕರ್ಮಿಗಳ ಪೈಕಿ, ನಾಲ್ವರು ಏಕಾಏಕಿ ಕಾರಿನಿಂದ ಕೆಳಗೆ ಇಳಿದು ಹೋಟೆಲ್‌ಗೆ ನುಗ್ಗಿ ಮಚ್ಚುಗಳಿಂದ ಹಲ್ಲೆ ನಡೆಸಿದ್ದರು. ಚಾಲಕ ಕಾರಿನಲ್ಲೇ ಕುಳಿತಿದ್ದ. ಉಳಿದವರು ಹಲ್ಲೆ ನಡೆಸಿ, ಕಾರು ಹತ್ತಿ ಪರಾರಿಯಾಗಿರುವುದು ಸಿಸಿ ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾಗಿದೆ. ಪೊಲೀಸರು ಈ ದೃಶ್ಯಾವಳಿ ಪರಿಶೀಲನೆ ನಡೆಸಿದ್ದಾರೆ. ದುಷ್ಕರ್ಮಿಗಳು ಬಂದಿದ್ದ ಕಾರು ತಮಿಳುನಾಡಿನತ್ತಲೇ ತೆರಳಿರುವುದು ಗೊತ್ತಾಗಿದೆ. ಚೆಕ್‌ಪೋಸ್ಟ್‌ವೊಂದರಲ್ಲಿ ಕಾರು ತಡೆಯಲು ಪ್ರಯತ್ನಿಸಿದರೂ ಸಾಧ್ಯವಾಗಿಲ್ಲ' ಎಂದು ಮೂಲಗಳು ಹೇಳಿವೆ.

ಹಳೇ ವೈಷಮ್ಯ?: ಪ್ರಾಥಮಿಕ ಮಾಹಿತಿಯಂತೆ ಹಳೇ ವೈಷಮ್ಯದಿಂದ ಮತ್ತೊಂದು ತಂಡವು ದಾಳಿ ನಡೆಸಿದೆ. ಗುರುಸ್ವಾಮಿ ಅವರು ಮಧುರೈ ಭಾಗದಲ್ಲಿ ರಾಜಕೀಯದ ಜತೆಗೆ ರಿಯಲ್ ಎಸ್ಟೇಟ್‌ನಲ್ಲಿ ಸಕ್ರಿಯವಾಗಿದ್ದರು. ಉದ್ಯಮದ ವಿಚಾರಕ್ಕೆ ಮತ್ತೊಂದು ತಂಡದೊಂದಿಗೆ ವೈಷಮ್ಯ ಬೆಳೆದಿತ್ತು. ಗುರುಸ್ವಾಮಿ ಹೆಸರು ರೌಡಿಪಟ್ಟಿಯಲ್ಲಿದೆ. ತಮಿಳುನಾಡಿನ ವಿವಿಧ ಪೊಲೀಸ್ ಠಾಣೆಗಳಲ್ಲಿ ಕೊಲೆ, ಕೊಲೆ ಯತ್ನ ಪ್ರಕರಣಗಳು ದಾಖಲಾಗಿವೆ. ಎಲ್ಲ ಆಯಾಮದಲ್ಲೂ ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಹೋಟೆಲ್‌ನಲ್ಲಿ ಪೂಜೆ: ಕೃತ್ಯ ನಡೆದ ಕಮ್ಮನಹಳ್ಳಿಯ ಸುಖಸಾಗರ್ ಹೋಟೆಲ್ ಅನ್ನು ಮಂಗಳವಾರ ಬೆಳಿಗ್ಗೆ ಸಿಬ್ಬಂದಿ ಸ್ವಚ್ಛಗೊಳಿಸಿದರು. ಜತೆಗೆ ಅರ್ಚಕರು ಶಾಂತಿ ಹೋಮ ನಡೆಸಿದರು ಎಂದು ಮೂಲಗಳು ಹೇಳಿವೆ.

ಮುಖ್ಯಾಂಶಗಳು

- ಹಲ್ಲೆ ನಡೆದ ಹೋಟೆಲ್‌ನಲ್ಲಿ ಶಾಂತಿ ಹೋಮ, ವಿಶೇಷ ಪೂಜೆ ಸಲ್ಲಿಕೆ
- ಗಾಯಗೊಂಡ ಮುಖಂಡ ಗುರುಸ್ವಾಮಿಗೆ ಕ್ಯೂರಾ ಆಸ್ಪತ್ರೆಯಲ್ಲಿ ಚಿಕಿತ್ಸೆ
- ಐವರು ದುಷ್ಕರ್ಮಿಗಳಿಂದ ಮಚ್ಚಿನಿಂದ ಹಲ್ಲೆ

ಸನಾತನ ಧರ್ಮ: ಉದಯನಿಧಿ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸನಾತನ ಧರ್ಮ ಕುರಿತು ಹೇಳಿಕೆ ನೀಡಿರುವ ತಮಿಳುನಾಡಿನ ಸಚಿವ ಉದಯನಿಧಿ ಸ್ಟಾಲಿನ್ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಕೋರಿ, ಬೆಂಗಳೂರು ದಕ್ಷಿಣ ವಿಭಾಗದ ಬಿಜೆಪಿ ಅಧ್ಯಕ್ಷ ಎನ್.ಆರ್.ರಮೇಶ್ ಅವರು ಬನಶಂಕರಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

'ದೂರು ಸ್ವೀಕರಿಸಲಾಗಿದೆ. ಸದ್ಯಕ್ಕೆ ಎಫ್‌ಐಆರ್ ದಾಖಲಿಸಿಕೊಂಡಿಲ್ಲ. ಕಾನೂನು ತಜ್ಞರ ಸಲಹೆ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಉದಯನಿಧಿ ಕಾರ್ಯಕ್ರಮವೊಂದರಲ್ಲಿ ಸನಾತನ ಧರ್ಮವನ್ನು ಡೆಂಗಿ, ಮಲೇರಿಯಾ ಮತ್ತು ಕೊರೊನಾಕ್ಕೆ ಹೋಲಿಸಿದ್ದಾರೆ. ಈ ವೈರಸ್‌ಗಳನ್ನು ಬೇರು ಸಹಿತ ನಾಶಗೊಳಿಸುವ ರೀತಿಯಲ್ಲೇ ಸನಾತನ ಧರ್ಮೀಯರನ್ನು ನಾಶಗೊಳಿಸಿದರೆ ಮಾತ್ರ ಈ ದೇಶಕ್ಕೆ ಒಳಿತಾಗುತ್ತದೆ ಎಂಬ ಆಘಾತಕಾರಿ ಹೇಳಿಕೆ ನೀಡಿದ್ದಾರೆ. ಸಂವಿಧಾನ ಮತ್ತು ದೇಶ ವಿರೋಧಿ ಹೇಳಿಕೆ ನೀಡಿರುವ ಉದಯನಿಧಿ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು' ಎಂದು ದೂರಿನಲ್ಲಿ ಆಗ್ರಹಿಸಿದ್ದಾರೆ.

'ಇಂಡಿಯಾ' ಹೆಸರು ಕೇಳಿದರೆ ಮೋದಿಗೆ ಭಯ: ಡಿಕೆಶಿ

ಕನಕಪುರ (ರಾಮನಗರ): ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟಕ್ಕೆ ಮುಂದಿನ ಚುನಾವಣೆಯಲ್ಲಿ ಸೋಲಿನ ಭಯ ಕಾಡುತ್ತಿದೆ. ರೂಪಾಯಿ ಮೇಲೆ ಇಂಡಿಯಾ ಅಂತಾ ಇದೆ. ಇದನ್ನು ಸಹ ಬದಲಿಸಲು ಹೊರಟಿದ್ದಾರೆ ಎಂದು ತಮ್ಮ ಜೇಬಿನಿಂದ ₹500 ನೋಟು ತೆಗೆದು ಮಾಧ್ಯಮಗಳಿಗೆ ಡಿ.ಕೆ. ಶಿವಕುಮಾರ್ ತೋರಿಸಿದರು.

ಪಟ್ಟಣದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷನಾಗಿ ಈ ಪ್ರಸ್ತಾವ ವಿರೋಧಿಸುವೆ. ಇಂತಹ ರಾಜಕಾರಣ ಹೆಚ್ಚು ದಿನ ನಡೆಯುವುದಿಲ್ಲ. ಇಂತಹ ಹುಚ್ಚು ಸಾಹಸ ಮಾಡಬೇಡಿ ಎಂದರು.

'ನಾವೆಲ್ಲರೂ ಭಾರತೀಯರೇ. ಸೋಲಿಗೆ ಹೆದರಿ ಈ ರೀತಿ ಮಾಡುತ್ತಿರುವುದು ಸರಿಯಲ್ಲ. ಅವರ ಆಲೋಚನೆಗಳು ಇನ್ನೂ ಬಹಳ ಇವೆ. ಅವುಗಳೆನ್ನಲ್ಲ ಈಗ ಹೇಳಿದರೆ ಎಲ್ಲರಿಗೂ ಶಾಕ್ ಆಗುತ್ತದೆ. ಬೇರೆ ಸಂದರ್ಭದಲ್ಲಿ ಮಾತನಾಡುತ್ತೇನೆ' ಎಂದು ಹೇಳಿದರು.

ಟ್ಯಾಂಕರ್ ನೀರಿಗೆ ಮೊರೆ: ನಾಗರಿಕರ ಪರದಾಟ

ಕೆ.ಆರ್.ಪುರದಲ್ಲಿ ಕುಡಿಯುವ ನೀರಿಗೆ ಬರ

• ಶಿವರಾಜ್ ಮೌರ್ಯ

ಕೆ.ಆರ್. ಪುರ: ಮಹದೇವಪುರ ಮತ್ತು ಕೆ.ಆರ್.ಪುರದ ವಿವಿಧ ಭಾಗಗಳಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿ ಸಾರ್ವಜನಿಕರು ನೀರು ಖರೀದಿಸುವ ಪರಿಸ್ಥಿತಿ ಉಂಟಾಗಿದೆ.

ಟ್ರ್ಯಾಕ್ಟರ್ ಮತ್ತು ಲಾರಿ ಟ್ಯಾಂಕರ್ ನೀರಿಗೆ ಮೊರೆ ಹೋಗುತ್ತಿದ್ದಾರೆ.

ಕೆ.ಆರ್.ಪುರದ ಸುತ್ತಮುತ್ತಲಿನ ಪ್ರದೇಶಗಳ ರಾಮಮೂರ್ತಿನಗರ, ಕಲ್ಕೆರೆ, ಹೊರಮಾವು, ಎನ್.ಆರ್.ಐ. ಬಡಾವಣೆ ಹಾಗೂ ಮಹದೇವಪುರದ ಬೆಳ್ಳಂದೂರು, ಬೈರತಿ, ಕಾಡುಬಿಸನಹಳ್ಳಿ, ತುಬರಹಳ್ಳಿ, ಮುನ್ನೆಕೊಳಲು, ದೊಡ್ಡಕನ್ನಹಳ್ಳಿ, ಹರಳೂರು, ಕಸವನಹಳ್ಳಿ, ಬೋಗನಹಳ್ಳಿ, ವರ್ತೂರು ಮುಂತಾದ ಭಾಗಗಳಲ್ಲಿ ನೀರಿನ ಬವಣೆ ಹೆಚ್ಚಿದೆ.

ಮಳೆಗಾಲದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಲು ಅಂತರ್ಜಲ ಕುಸಿತ ಕಂಡಿರುವ ಕಾರಣವಾಗಿದೆ. ಕೆ.ಆರ್. ಪುರ ಮತ್ತು ಮಹದೇವಪುರ ವ್ಯಾಪ್ತಿಯಲ್ಲಿ ಕೊರೆದಿರುವ ಕೊಳವೆ ಬಾವಿಗಳಲ್ಲಿ ಸಮರ್ಪಕವಾಗಿ ನೀರು ಪೂರೈಕೆಯಾಗುತ್ತಿಲ್ಲ. ಬಿಬಿಎಂಪಿ ವ್ಯಾಪ್ತಿಗೆ ಸೇರ್ಪಡೆಯಾದ 110 ಹಳ್ಳಿಗಳ ಪೈಕಿ ಮನೆಮನೆ ನೀರು ಒದಗಿಸುವ ಯೋಜನೆಯಾದ ಕಾವೇರಿ ನೀರಿನ ಯೋಜನೆ ಪೂರ್ಣಗೊಳ್ಳದೆ ಇರುವುದು ನೀರು ಸಮಸ್ಯೆ ಉಂಟಾಗಲು ಕಾರಣವಾಗಿದೆ.

ಟ್ಯಾಂಕರ್ ನೀರು

ಅಂತರ್ಜಲ ಕುಸಿದಿರುವುದರಿಂದ ಕೆಲವು ಕೊಳವೆಬಾವಿಗಳಲ್ಲೂ ನೀರು ದೊರೆಯುತ್ತಿಲ್ಲ. ಕಾವೇರಿ ನೀರಿಲ್ಲದೆ ಒಂದು ಟ್ಯಾಂಕರ್‌ಗೆ ₹ 500ರಿಂದ ₹ 600 ಹಣ ಕೊಟ್ಟು ಖರೀದಿಸುವ ಅನಿವಾರ್ಯತೆ ಎದುರಾಗಿದೆ. ಇದ್ದಕ್ಕಿದ್ದಂತೆ ಟ್ಯಾಂಕರ್ ನೀರಿನ ಬೆಲೆ ಹೆಚ್ಚಾಗಿರುವುದು ಜನರಿಗೆ ತಲೆನೋವಾಗಿ ಪರಿಣಮಿಸಿದೆ.

'ಹಲವು ಕಡೆ ಕೊಳವೆ ಬಾವಿಗಳಲ್ಲಿ ನೀರಿಲ್ಲದೆ ಕೆಟ್ಟು ನಿಂತಿರುವ ಪರಿಣಾಮ ನೀರಿನ ಸಮಸ್ಯೆ ತೀವ್ರವಾಗಿ ಕಾಡತೊಡಗಿದೆ' ಎಂದು ಪೂಜಾ ಗಾರ್ಡನ್ ನಿವಾಸಿ ಮಂಜುಳಾ ಹೇಳಿದರು.

ಮಂಜುಳಾ

'ಬಿಬಿಎಂಪಿ ಅಧಿಕಾರಿಗಳು ನೀರಿನ ಸಮಸ್ಯೆಗೆ ಪರ್ಯಾಯ ಮಾರ್ಗ ಕಂಡುಕೊಳ್ಳದೆ ಹಾರಿಕೆ ಉತ್ತರ ನೀಡಿ ತಪ್ಪಿಸಿಕೊಳ್ಳುತ್ತಿದ್ದಾರೆ. ಹದಿನೈದು ದಿನಗಳಿಂದ ನಮ್ಮ ಬಡಾವಣೆಗಳಿಗೆ ಕುಡಿಯುವ ನೀರಿನ ಪೂರೈಕೆ ಸ್ಥಗಿತಗೊಂಡಿದೆ. ನೀರಿನ ಸಮಸ್ಯೆ ಬಗ್ಗೆ ಜನಪ್ರತಿನಿಧಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದರು ಯಾವುದೇ ಪ್ರಯೋಜನವಾಗುತ್ತಿಲ್ಲ' ಎಂದರು.

'ಕೆಲ ತಿಂಗಳಿನಿಂದ ಕುಡಿಯುವ ನೀರು ಪೂರೈಕೆ ಆಗುತ್ತಿಲ್ಲ. ಕೆಲವೊಂದು ಬಡಾವಣೆಗಳಿಗೆ ಮಾತ್ರ ನೀರು ಪೂರೈಸಲಾಗುತ್ತಿದೆ. ಹೀಗಾಗಿ, ಟ್ಯಾಂಕರ್ ನೀರು ಖರೀದಿಸುವ ಅವಲಂಬಿಸಬೇಕಾದ ಪರಿಸ್ಥಿತಿಯಲ್ಲಿದ್ದೇವೆ. ಕೊಳವೆಬಾವಿಗಳಲ್ಲಿ ನೀರು ಬತ್ತಿದ ಪರಿಣಾಮ ನೀರಿನ ಸಮಸ್ಯೆ ಉಂಟಾಗಿದೆ ಅದಷ್ಟು ಬೇಗ ನೀರಿನ ಸಮಸ್ಯೆ ಬಗೆಹರಿಸಿ ನೀರು ಪೂರೈಕೆ ಮಾಡಬೇಕಿದೆ' ಎಂದು ಮುನ್ನೆಕೊಳಲು ನಿವಾಸಿ ದುರುಗೇಶ್ ಹೇಳಿದರು.

'ಸಾರ್ವಜನಿಕರಿಗೆ ಕುಡಿಯುವ ನೀರು ದೊರೆಯದಿರುವ ಕುರಿತು ಅಧಿಕಾರಿಗಳು ಗಮನ ಹರಿಸುತ್ತಿಲ್ಲ. ಕೊಳವೆ ಬಾವಿಗಳು ಬತ್ತುವ ಸ್ಥಿತಿಗೆ ಬಂದಿವೆ. ಟ್ಯಾಂಕರ್ ನೀರಿಗೆ ಮೊರೆ ಹೋಗಿರುವ ಜನರು ದುಂದು ವೆಚ್ಚ ಮಾಡಿ ನೀರು ಖರೀದಿಸುತ್ತಿದ್ದಾರೆ. ಇನ್ನೂ ಕೆಲದಿನಗಳಲ್ಲಿ ಕೊಳವೆ ಬಾವಿ ನೀರು ಬತ್ತಿದರೆ ಟ್ಯಾಂಕರ್ ನೀರು ಸರಬರಾಜು ಸಹ ನಿಲ್ಲುತ್ತದೆ. ಆಗ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಲಿದೆ' ಎಂದು ಆಮ್ ಆದ್ಮಿ ಪಕ್ಷದ ಮುಖಂಡ ಮುನೇಂದ್ರ ಹೇಳಿದರು.

ಮುನೇಂದ್ರ

ವಾಮಾಚಾರ ಆರೋಪ: ಪತ್ನಿ ವಿರುದ್ಧ ಉದ್ಯಮಿ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಮಾಚಾರ ನಡೆಸಿ ಕುಟುಂಬಕ್ಕೆ ಜೀವ ಬೆದರಿಕೆ ಒಡ್ಡಿದ್ದಾರೆ ಎಂದು ಆರೋಪಿಸಿ ಪತ್ನಿ ವಿರುದ್ಧ ಉದ್ಯಮಿಯೊಬ್ಬರು ಕಬ್ಬನ್‌ಪಾರ್ಕ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಉದ್ಯಮಿ ದೇವ್ ಕುಮಾರ್(39) ಅವರು ನೀಡಿದ ದೂರಿನ ಮೇರೆಗೆ ಪತ್ನಿ ಎಂ.ಪಿ. ಐಶ್ವರ್ಯ, ಅತ್ತೆ ಮಹಾಲಕ್ಷ್ಮೀ ಮತ್ತು ಮಾವ ಮಂಜುನಾಥ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಐಶ್ವರ್ಯ ಅವರು ವೈದ್ಯೆಯಾಗಿ ಕೆಲಸ ಮಾಡುತ್ತಿದ್ದಾರೆ.

'ದೇವ್‌ಕುಮಾರ್ 2022ರ ಜೂನ್ 1ರಂದು ಐಶ್ವರ್ಯ ಅವರನ್ನು ಮದುವೆಯಾಗಿದ್ದರು. 2023ರ ಫೆ.22ರಂದು ಪ್ರವಾಸ ಮುಗಿಸಿಕೊಂಡು ಮನೆಗೆ ಬಂದಿದ್ದರು. ಅಂದು ಮನೆಯ ಶೌಚಾಲಯದಲ್ಲಿ ಬೂದಿ, ಕರ್ಪೂರ ಹರಡಿರುವುದು ಕಂಡು ಬಂದಿತ್ತು. ಪತ್ನಿ ತಮ್ಮ ಎರಡು ಹೆಬ್ಬರಳನ್ನು ಕತ್ತರಿಸಿಕೊಂಡಿದ್ದರು. ಮನೆಯ ಹಲವು ಕಡೆ ನಿಂಬೆಹಣ್ಣು, ಪೂಜೆ ಮಾಡಿದ ತೆಂಗಿನ ಕಾಯಿಗಳು ಪತ್ತೆಯಾಗಿದ್ದವು' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಪತ್ನಿ ಮತ್ತು ಅತ್ತೆ, ಅತ್ತಿಗುಪ್ಪೆಯ ಜೋತಿಷಿ ನಾಗೇಂದ್ರ ಮತ್ತು ಸ್ಮಶಾನದಲ್ಲಿ ಪೂಜೆ ಮಾಡುವ ಬಾಬು ಭೇಟಿಯಾಗಿರುವುದು ಗೊತ್ತಾಗಿದೆ. ಕೆಲವರನ್ನು ವಿಚಾರಣೆ ನಡೆಸಿದಾಗ ವಾಮಾಚಾರ ನಡೆಸಿರುವುದು ತಿಳಿಯಿತು' ಎಂದು ಹೇಳಿದ್ದಾರೆ.

'ಈ ನಡುವೆ ನಮ್ಮ ತಂದೆ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದಾರೆ. ಮನೆಯ ಶ್ವಾನ ಸತ್ತಿದೆ. ವಾಮಾಚಾರ ಮಾಡಿ ನನಗೆ ಮತ್ತು ನನ್ನ ಕುಟುಂಬಕ್ಕೆ ಜೀವಭಯ ಹುಟ್ಟಿಸಿರುವ ಪತ್ನಿ ಹಾಗೂ ಅವರ ಕುಟುಂಬದ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ' ಎಂದು ಉದ್ಯಮಿ ಮನವಿ ಮಾಡಿದ್ದಾರೆ.

ತಹಶೀಲ್ದಾರ್, ಎಂಜಿನಿಯರ್‌ಗಳಿಗೆ ತೆರವು ಕಾರ್ಯಾಚರಣೆ, ಸಂರಕ್ಷಣೆ ಜವಾಬ್ದಾರಿ; ಪ್ರತಿ ಪ್ರಕ್ರಿಯೆಗೂ ಕಾಲಮಿತಿ ನಿಗದಿ

ಕೆರೆ, ಕಾಲುವೆ ಒತ್ತುವರಿ ಉಳಿದರೆ ಶಿಕ್ಷೆ!

197	159	851	859.79	655	768
ಒಟ್ಟು ಕೆರೆಗಳು	ಕೆರೆಗಳಲ್ಲಿ ಒತ್ತುವರಿ	ಎಕರೆ ಒತ್ತುವರಿ	ಕಿ.ಮೀ ಒಟ್ಟು ರಾಜಕಾಲುವೆ ಉದ್ದ	ಕವಲುಗಳಲ್ಲಿ ಹರಿವು	ಪ್ರಕರಣಗಳಲ್ಲಿ ಒತ್ತುವರಿ

• ಆರ್. ಮಂಜುನಾಥ್

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಕೆರೆಗಳು ಹಾಗೂ ರಾಜಕಾಲುವೆ ಒತ್ತುವರಿ ತೆರವಿನ ಜವಾಬ್ದಾರಿಯನ್ನು ತಹಶೀಲ್ದಾರ್ ಹಾಗೂ ವಲಯ ಕಾರ್ಯಪಾಲಕ ಎಂಜಿನಿಯರ್‌ಗಳಿಗೆ ವಹಿಸಲಾಗಿದೆ. ಅವರು ವಿಫಲರಾದರೆ ಶಿಸ್ತುಕ್ರಮ ಜರುಗಿಸಲು ಸರ್ಕಾರ ಸೂಚಿಸಿದೆ.

ಹೈಕೋರ್ಟ್‌ನಿಂದ ಸಾಕಷ್ಟು ಬಾರಿ ಆಕ್ಷೇಪಕ್ಕೆ ಒಳಗಾಗಿರುವ ರಾಜ್ಯ ಸರ್ಕಾರ ಇದೀಗ ಕೆರೆಗಳು ಹಾಗೂ ರಾಜಕಾಲುವೆ ಒತ್ತುವರಿ ತೆರವು ಹಾಗೂ ರಕ್ಷಣೆ ಜವಾಬ್ದಾರಿಯನ್ನು ಅಧಿಕಾರಿಗಳಿಗೆ ವಹಿಸಿದೆ.

ಕೆರೆಗಳು ಮತ್ತು ಪ್ರಾಥಮಿಕ–ದ್ವಿತೀಯ ರಾಜಕಾಲುವೆ ಸಂರಕ್ಷಣೆ, ಒತ್ತುವರಿ ತೆರವುಗೊಳಿಸಲು ಅಧಿಕಾರಿಗಳನ್ನು ನಿಯೋಜಿಸಲಾಗಿದ್ದು, ಅವರ ಜವಾಬ್ದಾರಿಗಳನ್ನು ನಿಗದಿಪಡಿಸಿ ಆಗಸ್ಟ್ 28ರಂದು ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಅಸ್ತಿತ್ವದಲ್ಲಿ ಇಲ್ಲದ 19 ಕೆರೆಗಳು ಸೇರಿದಂತೆ ಒಟ್ಟು 197 ಕೆರೆಗಳಿಗೆ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ (ಕೆಟಿಸಿಡಿಎ) ಕಾಯ್ದೆ ಪ್ರಕಾರ, ಬಿಬಿಎಂಪಿ ಕೆರೆ ವಿಭಾಗದ ಕಾರ್ಯಪಾಲಕ ಎಂಜಿನಿಯರ್, 'ಸಕ್ಷಮ ಪ್ರಾಧಿಕಾರದ' ಅಧಿಕಾರಿಗೆ ದೂರು ನೀಡುವ ಜವಾಬ್ದಾರಿ ಹೊಂದಿದ್ದಾರೆ. ಈ ಸಕ್ಷಮ ಅಧಿಕಾರಿ ಕೆರೆ ಒತ್ತುವರಿಯನ್ನು ತೆರವುಗೊಳಿಸಿದ ನಂತರ ಕೆರೆ ನಿರ್ವಹಣೆ, ಸಂರಕ್ಷಣೆಗೆ ಅದನ್ನು ಕೆರೆ ವಿಭಾಗದ ಕಾರ್ಯಪಾಲಕರಿಗೆ ಹಸ್ತಾಂತರಿಸಬೇಕು. ಈ ಮಧ್ಯೆ, ತಹಶೀಲ್ದಾರ್ ಅವರು ಸರ್ವೆ ಹಾಗೂ ಒತ್ತುವರಿ ತೆರವಿಗೆ ಆದೇಶ ನೀಡಬೇಕು.

ಒಂದು ಬಾರಿ ಒತ್ತುವರಿ ತೆರವಾದ ಮೇಲೆ ಅದನ್ನು ರಕ್ಷಿಸಿಕೊಳ್ಳದೆ ಹೋದರೆ ಕೆರೆ ವಿಭಾಗದ ಕಾರ್ಯಪಾಲಕರದ್ದು ತೀವ್ರತರವಾದ ಕರ್ತವ್ಯ ಲೋಪ ಎಂದು ಪರಿಗಣಿಸಲಾಗುತ್ತದೆ. ಒತ್ತುವರಿ ತೆರವು ಪ್ರಕ್ರಿಯೆಯಲ್ಲಿ ಬಿಎಂಟಿಎಫ್ ಅಗತ್ಯ ಭದ್ರತೆ ನೀಡಬೇಕು. ಜೊತೆಗೆ ಆಯಾ ವ್ಯಾಪ್ತಿಯ ಪೊಲೀಸ್ ಠಾಣಾಧಿಕಾರಿಯೂ ನೆರವು ನೀಡಬೇಕು. ನಿಗದಿಪಡಿಸಿರುವ ಜವಾಬ್ದಾರಿಗಳನ್ನು ಯಾವ ಅಧಿಕಾರಿ ನಿರ್ವಹಿಸುವುದಿಲ್ಲವೇ ಅದನ್ನು 'ತೀವ್ರತರವಾದ ಕರ್ತವ್ಯ ಲೋಪ' ಎಂದು ಪರಿಗಣಿಸಿ ಬಿಬಿಎಂಪಿ ಮುಖ್ಯ ಆಯುಕ್ತರು ಶಿಸ್ತು ಕ್ರಮ ಗೊಳ್ಳಬೇಕು ಎಂದು ಆದೇಶಿಸಲಾಗಿದೆ.

ಸರ್ಕಾರಿ ಒತ್ತುವರಿಗೆ ಪರ್ಯಾಯ ಭೂಮಿ!

'ಬಿಡಿಎ ಸೇರಿದಂತೆ ಸರ್ಕಾರದ ಯಾವುದೇ ಇಲಾಖೆ ಕೆರೆ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದರೆ ಅದನ್ನು ತೆರವು ಮಾಡಬೇಕು. ಸಾಧ್ಯವಾಗದಿದ್ದರೆ, ಅದಕ್ಕೆ ಪರ್ಯಾಯ ಜಾಗ ನೀಡಬೇಕು ಅಥವಾ ಪ್ರದೇಶದ ಮೌಲ್ಯವನ್ನು ನಗದಾಗಿ ನೀಡಬೇಕು' ಎಂದು ಬಿಬಿಎಂಪಿ ಹೈಕೋರ್ಟ್‌ನಲ್ಲಿ ಪ್ರಮಾಣ ಪತ್ರ ಸಲ್ಲಿಸಿದೆ' ಎಂದು ಅಧಿಕಾರಿಗಳು ಹೇಳಿದರು.

ಕೆರೆ: ಒತ್ತುವರಿ ತೆರವಿಗೆ 70 ದಿನ

ಬಿಬಿಎಂಪಿ ವ್ಯಾಪ್ತಿಯಲ್ಲಿರುವ 159 ಕೆರೆಗಳಲ್ಲಿರುವ ಒತ್ತುವರಿ ಪ್ರಕ್ರಿಯೆಯನ್ನು ವಾರಕ್ಕೆ 10 ಕೆರೆಗಳಲ್ಲಿ ತೆರವು ಕಾರ್ಯಾಚರಣೆಯ ಪ್ರಕ್ರಿಯೆ ನಡೆಯಲಿದೆ. ಒಟ್ಟು 16 ವಾರ ತಲಾ 10 ಕೆರೆಗಳ ಒತ್ತುವರಿ ಪ್ರಕ್ರಿಯೆ ಆರಂಭವಾಗಲಿದ್ದು, ಕೆರೆಗಳ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಮೊದಲ ಮೂರು ದಿನದಲ್ಲಿ ಒತ್ತುವರಿ ವರದಿ ತಯಾರಿಸಿ, ನಂತರ ವಲಯ ಕಾರ್ಯಪಾಲಕ ಎಂಜಿನಿಯರ್ ಸಲ್ಲಿಸಬೇಕು. ಅವರು ಒತ್ತುವರಿಯನ್ನು ಗುರುತಿಸಲು ತಹಶೀಲ್ದಾರ್ ಅವರಿಗೆ ಮೂರು ದಿನದೊಳಗೆ ಮನವಿ ಸಲ್ಲಿಬೇಕು. ತಹಶೀಲ್ದಾರ್ ಅವರು ಸರ್ವೆ ನಡೆಸಿ ಒತ್ತುವರಿಯನ್ನು ಏಳು ದಿನದಲ್ಲಿ ಗುರುತಿಸಬೇಕು. 10 ದಿನದಲ್ಲಿ ಒತ್ತುವರಿ ತೆರವಿಗೆ ಆದೇಶ ಹೊರಡಿಸಬೇಕು. ಕೆಟಿಸಿಡಿಎ ಕಾಯ್ದೆ ಪ್ರಕಾರ 30 ದಿನದ ಅವಧಿ ನೀಡಬೇಕು. ನಂತರದ 10 ದಿನದಲ್ಲಿ ಒತ್ತುವರಿ ತೆರವುಗೊಳಿಸಬೇಕು. ಒಟ್ಟಾರೆ 70 ದಿನದೊಳಗೆ ತೆರವು ಕಾರ್ಯಾಚರಣೆ ಪೂರ್ಣಗೊಳ್ಳಲಿದೆ ಎಂದು ಹೈಕೋರ್ಟ್‌ಗೆ ಬಿಬಿಎಂಪಿ ಕ್ರಿಯಾಯೋಜನೆ ಸಲ್ಲಿಸಿದೆ.

ಒತ್ತುವರಿ ಉಳಿಸಿಕೊಂಡೇ ಅಭಿವೃದ್ಧಿಯಾಗುತ್ತಿರುವ ಶ್ರೀಗಂಧದ ಕಾವಲ್ ಕೆರೆ

10 ಕೆರೆಗಳ ಒತ್ತುವರಿ ತೆರವು ಪ್ರಾರಂಭ

ಕೆರೆಗಳ ಒತ್ತುವರಿ ತೆರವು ಕಾರ್ಯಾಚರಣೆಯನ್ನು ಬಿಬಿಎಂಪಿ ಆರಂಭಿಸಿದೆ. 10 ಕೆರೆಗಳ ಒತ್ತುವರಿ ತೆರವಿಗೆ ಕೆರೆಗಳ ವಿಭಾಗದ ಮುಖ್ಯ ಎಂಜಿನಿಯರ್ ಅವರು ಸಂಬಂಧಿಸಿದ ಕಾರ್ಯಪಾಲಕ ಎಂಜಿನಿಯರ್‌ಗಳಿಗೆ ನೋಟಿಸ್ ಜಾರಿ ಮಾಡಿದ್ದಾರೆ.

ಬಾಗ್ಮನೆ ಟೆಕ್ ಪಾರ್ಕ್, ಪೈನ್ ವುಡ್ ವಿಲ್ಲಾ, ಗ್ರಾಂಟ್ ಥಾಂಟನ್, ಕಾಂಗ್ನಿಜಂಟ್ ಟೆಕ್ನಾಲಜಿ, ಎಲ್‌ಆರ್‌ಡಿಇಯಿಂದ ಬೈರಸಂದ್ರ ಕೆಳಗಿನ ಕೆರೆಯಲ್ಲಿ ಒತ್ತುವರಿಯಾಗಿದೆ. ಗಂಗಮ್ಮ ದೇವಸ್ಥಾನದಿಂದ ಕೆಂಪಾಬುಧಿ ಕೆರೆ ಒತ್ತುವರಿಯಾಗಿದೆ ಎಂದು ಬಿಬಿಎಂಪಿ ವರದಿ ತಿಳಿಸಿದ್ದು, ಎಲ್ಲ ರೀತಿಯ ಒತ್ತುವರಿಗಳ ಸರ್ವೆ ಕಾರ್ಯ ಇದೀಗ ಮತ್ತೆ ನಡೆಯಲಿದೆ.

ಕೆರೆ ಒತ್ತುವರಿ ವಿವರ	
ಯಲಹಂಕ ವಲಯ	
ವೀರಸಾಗರ ಕೆರೆ	ಒತ್ತುವರಿಯ ಸರ್ವೆ ಆಗಬೇಕು
ಮಹದೇವಪುರ ವಲಯ	
ಭಟ್ಟರಹಳ್ಳಿ ಕೆರೆ	6ಎ, 3ಗು
ವೆಂಗಯ್ಯನಕೆರೆ	3ಎ, 11ಗು
ರಾಜರಾಜೇಶ್ವರಿನಗರ ವಲಯ	
ಶ್ರೀಗಂಧದ ಕಾವಲ್ ಕೆರೆ	9.5ಗು
ದಾಸರಹಳ್ಳಿ ವಲಯ	
ದಾಸರಹಳ್ಳಿ (ಚೊಕ್ಕಸಂದ್ರ) ಕೆರೆ	3ಎ, 7ಗು
ಬೊಮ್ಮನಹಳ್ಳಿ ವಲಯ	
ಮಂಗಮ್ಮನಪಾಳ್ಯ ಕೆರೆ	21ಗು
ಪುಟ್ಟೇನಹಳ್ಳಿ ಕೆರೆ (ಬ್ರಿಗೇಡ್ ಮಿಲೇನಿಯಂ ಬಳಿ)	3ಎ, 19ಗು
ಪೂರ್ವ ವಲಯ	
ಬೈರಸಂದ್ರ ಕೆಳಗಿನ ಕೆರೆ	3ಎ,9.5ಗು
ದಕ್ಷಿಣ ವಲಯ	
ನಾಯಂಡಹಳ್ಳಿ ಕೆರೆ	ಒತ್ತುವರಿ ಸರ್ವೆ ಆಗಬೇಕು
ಕೆಂಪಾಂಬುಧಿ ಕೆರೆ	11ಎ,17ಗು

850 ಕಿ.ಮೀ. ರಾಜಕಾಲುವೆ ಸಂರಕ್ಷಣೆ

ರಾಜಕಾಲುವೆ ಒತ್ತುವರಿ ಪ್ರಕರಣಗಳಲ್ಲಿ, ಬೃಹತ್ ನೀರುಗಾಲುವೆ ವಿಭಾಗದ ಕಾರ್ಯಪಾಲಕ ಎಂಜಿನಿಯರ್‌ಗಳನ್ನು 'ದೂರು ನೀಡುವ ಪ್ರಾಧಿಕಾರಿ'ಯಾಗಿದ್ದು, ತಹಶೀಲ್ದಾರ್ 'ಸಕ್ಷಮ ಪ್ರಾಧಿಕಾರಿ'ಯಾಗಿದ್ದಾರೆ. ರಾಜಕಾಲುವೆಗಳನ್ನು ಭೌತಿಕವಾಗಿ ತೆರವುಗೊಳಿಸುವ ಜವಾಬ್ದಾರಿಯನ್ನು ಸಂಬಂಧಿಸಿದ ವಲಯ ಕಾರ್ಯಪಾಲಕ ಎಂಜಿನಿಯರ್‌ಗೆ ನೀಡಲಾಗಿದ್ದು, ಕಂದಾಯ ಇಲಾಖೆ ಸರ್ವೆಯರ್ ಹಾಗೂ ತಹಶೀಲ್ದಾರ್ ತೆರವು ಸಮಯದಲ್ಲಿ ಹಾಜರಿರಬೇಕು ಎಂದು ಸೂಚಿಸಲಾಗಿದೆ. ಒತ್ತುವರಿ ತೆರವಿಗೆ ಸಂಬಂಧಿಸಿದಂತೆ ತಹಶೀಲ್ದಾರ್ ಅವರೇ ದೂರು ದಾಖಲಿಸಬೇಕು. ಅದರಲ್ಲಿ ವಿಫಲರಾದರೆ ಅವರ ಮೇಲೆ ಶಿಸ್ತುಕ್ರಮ. ಒತ್ತುವರಿ ತೆರವಾದ ಮೇಲೆ ಬೃಹತ್ ನೀರುಗಾಲುವೆ ವಿಭಾಗದ ಕಾರ್ಯಪಾಲಕರು ಅದನ್ನು ರಕ್ಷಿಸಿಕೊಂಡು, ನೀರು ಸರಾಗವಾಗಿ ಹರಿಯುವಂತೆ ನೋಡಿಕೊಳ್ಳಬೇಕು. 850 ಕಿ.ಮೀ ಪ್ರಾಥಮಿಕ ಮತ್ತು ದ್ವಿತೀಯ ರಾಜಕಾಲುವೆಗಳ ಪ್ರತಿ ಹಂತದ ನಿರ್ವಹಣೆಯನ್ನು ಜವಾಬ್ದಾರಿ ವಹಿಸಿದ ಅಧಿಕಾರಿಗಳು ನಿರ್ವಹಿಸಬೇಕು. ಇಲ್ಲದಿದ್ದರೆ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಆದೇಶಿಸಲಾಗಿದೆ.

165 ದಿನದಲ್ಲಿ ಒತ್ತುವರಿ ತೆರವು: ಪ್ರಹ್ಲಾದ್

ಬಿಬಿಎಂಪಿ ವ್ಯಾಪ್ತಿಯಲ್ಲಿರುವ ರಾಜಕಾಲುವೆ ಒತ್ತುವರಿ ತೆರವು ಇನ್ನು 165 ದಿನದಲ್ಲಿ ಪೂರ್ಣಗೊಳ್ಳಲಿದೆ. ಇನ್ನು 10 ದಿನದಲ್ಲಿ ಪಾಲಿಕೆ ಎಂಜಿನಿಯರ್‌ಗಳು ಒತ್ತುವರಿಯನ್ನು ಗುರುತಿಸಿ ವರದಿ ನೀಡಬೇಕು. ನಂತರ, ತಹಶೀಲ್ದಾರ್ ಅವರಿಗೆ ವರದಿ ನೀಡಲಾಗುತ್ತದೆ. 5 ದಿನದಲ್ಲಿ ಅದನ್ನು ಎಡಿಎಲ್‌ಆರ್ ಅವರಿಗೆ ಸರ್ವೆಗೆ ವಹಿಸಲಾಗುತ್ತದೆ. 60 ದಿನದಲ್ಲಿ ಎಲ್ಲ ಒತ್ತುವರಿಯ ನಕ್ಷೆ ರಚಿಸಲಾಗುತ್ತದೆ. ಅದನ್ನು ತಹಶೀಲ್ದಾರ್ ಅವರಿಗೆ ನೀಡಿ, ಮುಂದಿನ 40 ದಿನಗಳಲ್ಲಿ ನೋಟಿಸ್, ಸ್ಕೆಚ್, ವಿವರಣೆ, ಅಂತಿಮ ಆದೇಶದ ಪ್ರಕ್ರಿಯೆ ನಡೆಯುತ್ತವೆ. ಆಮೇಲೆ 30 ದಿನ ಮೇಲ್ಮನವಿಗೆ ಅವಕಾಶ. ಮುಂದಿನ 10 ದಿನಗಳಲ್ಲಿ ತೆರವು ಕಾರ್ಯಾಚರಣೆ ನಡೆಯುತ್ತದೆ. 10 ದಿನದಲ್ಲಿ ಎಲ್ಲವನ್ನೂ ಸಂರಕ್ಷಿಸಿ ಹಸ್ತಾಂತರಿಸಲಾಗುತ್ತದೆ' ಎಂದು ಬಿಬಿಎಂಪಿ ಬೃಹತ್ ನೀರುಗಾಲುವೆಗಳ ಮುಖ್ಯ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ತಿಳಿಸಿದರು.

ಇದೇ 10ರಂದು ಗೋಲ್ಡನ್ ಫಿಫ್ಟಿ ಮಹಾಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಸುನ್ನಿ ಸ್ಟೂಡೆಂಟ್ ಫೆಡರೇಷನ್ (ಎಸ್‌ಎಸ್‌ಎಫ್) 50ನೇ ವರ್ಷಾಚರಣೆಯ ಅಂಗವಾಗಿ ಗೋಲ್ಡನ್ ಫಿಫ್ಟಿ ಮಹಾ ಸಮ್ಮೇಳನವನ್ನು ಇದೇ 10ರಂದು ಅರಮನೆ ಮೈದಾನದ ಕೃಷ್ಣ ವಿಹಾರದಲ್ಲಿ ಆಯೋಜಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಸ್‌ಎಸ್‌ಎಫ್ ರಾಜ್ಯ ಘಟಕದ ಅಧ್ಯಕ್ಷ ಸುಫ್ಯಾನ್ ಸಖಾಫಿ, 'ಎಸ್‌ಎಸ್‌ಎಫ್ ರಾಷ್ಟ್ರೀಯ ಸಮಿತಿ ಆಯೋಜಿಸಿರುವ ಸಂವಿಧಾನ ಯಾತ್ರೆ ಕಾಶ್ಮೀರದಿಂದ ಆರಂಭವಾಗಿದೆ. ಈ ಯಾತ್ರೆಯ ಸಮಾರೋಪ ಸಮಾರಂಭ ಅದೇ ದಿನ ನಡೆಯಲಿದೆ. ಅಂದು ಬೆಳಿಗ್ಗೆ 10ಕ್ಕೆ ಎಸ್‌ಎಸ್‌ಎಫ್ ಪ್ರತಿನಿಧಿ ಸಮಾವೇಶ ನಡೆಯಲಿದ್ದು, ರಾಜ್ಯದ 7 ಸಾವಿರ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ' ಎಂದು ತಿಳಿಸಿದರು.

ಸಮ್ಮೇಳನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದಾರೆ. ಕರ್ನಾಟಕದ ಉಲಮಾ ಒಕ್ಕೂಟದ ಅಧ್ಯಕ್ಷ ಝೈನುಲ್ ಉಲುಮಾ ಮಾಣಿ ಉಸ್ತಾದ್ ಅಧ್ಯಕ್ಷತೆ ವಹಿಸಲಿದ್ದಾರೆ. ಇಂಡಿಯನ್ ಗ್ರ್ಯಾಂಡ್ ಮುಫ್ತಿ ಸುಲ್ತಾನುಲ್ ಉಲಮಾ ಅಬೂಬಕ್ಕರ್ ಮುಸ್ಲಿಯಾರ್ ಮುಖ್ಯ ಭಾಷಣ ಮಾಡಲಿದ್ದಾರೆ.

ನಗರದಲ್ಲಿ ಮಂಗಳವಾರ ಎಪಿಎಸ್ ಶಿಕ್ಷಣ ಸಂಸ್ಥೆಯ ಸಂಸ್ಥಾಪಕರ ದಿನಾಚರಣೆ ಹಾಗೂ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ (ಎಡದಿಂದ) ಎಪಿಎಸ್ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಎ.ಪ್ರಕಾಶ್, ಸಂಸ್ಥೆಯ ಅಧ್ಯಕ್ಷ ವಿಷ್ಣು ಭರತ್ ಅಲಂಪಲ್ಲಿ, ಗೃಹ ಸಚಿವ ಜಿ. ಪರಮೇಶ್ವರ್, ತುಮಕೂರು ರಾಮಕೃಷ್ಣ ಮಠದ ಸ್ವಾಮಿ ವೀರೇಶಾನಂದ ಮತ್ತು ಸಂಸ್ಥೆಯ ಟ್ರಸ್ಟಿ ಎ.ಆರ್ ಆಚಾರ್ಯ ಇದ್ದಾರೆ —ಪ್ರಜಾವಾಣಿ ಚಿತ್ರ

'ರಾಜ್ಯ ಶಿಕ್ಷಣ ನೀತಿಗೆ ಬದ್ಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರದ್ದುಗೊಳಿಸಿ ರಾಜ್ಯಕ್ಕೆ ಅನುಕೂಲವಾಗುವ ಶಿಕ್ಷಣ ನೀತಿಯನ್ನು ಶೀಘ್ರವೇ ರೂಪಿಸಲಾಗುವುದು' ಎಂದು ಗೃಹ ಸಚಿವ ಜಿ. ಪರಮೇಶ್ವರ್ ಹೇಳಿದರು.

ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಆಚಾರ್ಯ ಪಾಠಶಾಲಾ ಎಜುಕೇಷನಲ್ ಟ್ರಸ್ಟ್‌ನ ಸಂಸ್ಥಾಪಕರ ದಿನ ಮತ್ತು ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಶಿಕ್ಷಣ ಕ್ಷೇತ್ರದಲ್ಲಿ ಯಾರೂ ಸ್ವಾರ್ಥಿಗಳಾಗಬಾರದು. ತಮ್ಮಲ್ಲಿರುವ ಜ್ಞಾನವನ್ನು ಸಮಾಜಕ್ಕೆ ನೀಡಬೇಕು. ಶಿಕ್ಷಕರು ಬೆಳಗುವ ದೀಪಗಳಾಗಿ, ನಮ್ಮ ಮುಂದಿನ ಜನಾಂಗ ಬೆಳಗುವ ರೀತಿ ಮಾಡಬೇಕು' ಎಂದರು.

ತುಮಕೂರು ರಾಮಕೃಷ್ಣ ಮಠದ ಸ್ವಾಮಿ ವೀರೇಶಾನಂದ ಸ್ವಾಮೀಜಿ, ಎಪಿಎಸ್ ಎಜ್ಯುಕೇಷನಲ್ ಟ್ರಸ್ಟ್ ಅಧ್ಯಕ್ಷ ವಿಷ್ಣು ಭರತ್ ಅಲಂಪಲ್ಲಿ, ಉಪಾಧ್ಯಕ್ಷರಾದ ಎಸ್.ಸಿ. ಶರ್ಮಾ, ಆರ್. ವಿ. ವಿಜಯ ಭಾಸ್ಕರ್, ಖಜಾಂಚಿ ಕೆ.ಎಸ್. ಅಖಿಲೇಶ್ ಬಾಬು, ಪ್ರಧಾನ ಕಾರ್ಯದರ್ಶಿಗಳಾದ ಎ. ಪ್ರಕಾಶ್, ಪಿ. ಕೃಷ್ಣ ಸ್ವಾಮಿ, ಜಂಟಿ ಕಾರ್ಯದರ್ಶಿಗಳಾದ ಎ. ಆರ್. ಮಂಜುನಾಥ್, ಎಪಿಎಸ್ ಶಿಕ್ಷಣ ಸಂಸ್ಥೆಯ ಟ್ರಸ್ಟಿ ಎ.ಆರ್. ಆಚಾರ್ಯ ಇದ್ದರು.

'ನೆಲದಡಿ ವಿದ್ಯುತ್ ಪರಿವರ್ತಕ ಕೇಂದ್ರಗಳ ನಿರ್ಮಾಣಕ್ಕೆ ಆದ್ಯತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ಇನ್ನು ಹೆಚ್ಚಿನ ಸ್ಥಳಗಳಲ್ಲಿ ನೆಲದಡಿಯಲ್ಲಿ ವಿದ್ಯುತ್ ಪರಿವರ್ತಕಗಳ ಕೇಂದ್ರಗಳ ನಿರ್ಮಾಣಕ್ಕೆ ಚಿಂತನೆ ನಡೆಸಲಾಗಿದೆ' ಎಂದು ಇಂಧನ ಸಚಿವ ಕೆ. ಜೆ. ಜಾರ್ಜ್ ತಿಳಿಸಿದರು.

ಮಲ್ಲೇಶ್ವರಂದಲ್ಲಿ 500 ಕೆವಿಎ ನೆಲದಡಿಯಲ್ಲಿ ವಿದ್ಯುತ್ ಪರಿವರ್ತಕ ಕೇಂದ್ರವನ್ನು ಮಂಗಳವಾರ ಉದ್ಘಾಟಿಸಿ ಮಾತನಾಡಿದ ಅವರು, ಪಾದಚಾರಿ ಮಾರ್ಗಗಳಲ್ಲಿ ಅಪಾಯಕಾರಿ ಸ್ಥಿತಿಯಲ್ಲಿರುವ ವಿದ್ಯುತ್ ಪರಿವರ್ತಕಗಳನ್ನು ಸ್ಥಳಾಂತರಿಸಲು ಆದ್ಯತೆ ನೀಡಲಾಗುವುದು. ಜತೆಗೆ ನೆಲದಡಿಯಲ್ಲೂ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ' ಎಂದರು.

'ಮುಂದಿನ ದಿನಗಳಲ್ಲಿ ಬೆಸ್ಕಾಂ ವ್ಯಾಪ್ತಿಯಲ್ಲಿ ನೆಲದಡಿಯಲ್ಲಿ ವಿದ್ಯುತ್ ಪರಿವರ್ತಕ ಕೇಂದ್ರಗಳನ್ನು ನಿರ್ಮಿಸುವ ಕುರಿತು ಈಗಾಗಲೇ ಯೋಜನೆಯನ್ನು ರೂಪಿಸಲಾಗಿದೆ. ಪ್ರತಿ ನೆಲದಡಿಯಲ್ಲಿನ ವಿದ್ಯುತ್ ಪರಿವರ್ತಕಗಳ ನಿರ್ಮಾಣಕ್ಕೆ ಸುಮಾರು ₹2 ಕೋಟಿ ವ್ಯಯವಾಗುತ್ತದೆ' ಎಂದು ಸಚಿವರು ತಿಳಿಸಿದರು.

ಶಾಸಕ ಡಾ.ಸಿ.ಎನ್.ಅಶ್ವಥ್ ನಾರಾಯಣ್ ಅವರು ಮಾತನಾಡಿ, 'ಸಾರ್ವಜನಿಕರ ಸುರಕ್ಷತೆ ದೃಷ್ಟಿಯಿಂದ ನೆಲದಡಿಯಲ್ಲಿ ವಿದ್ಯುತ್ ಪರಿವರ್ತಕ ಕೇಂದ್ರ ನಿರ್ಮಿಸುವ ಕಾಮಗಾರಿ ಕುರಿತು 2022 ರಲ್ಲೇ ಇಂಧನ ಇಲಾಖೆಯೊಂದಿಗೆ ಚರ್ಚಿಸಲಾಗಿತ್ತು. ಅನುದಾನದ ಕೊರತೆ ಹಾಗೂ ನಾನಾ ಕಾರಣಗಳಿಂದ ಅನುಷ್ಠಾನಗೊಳಿಸಲು ಸಾಧ್ಯವಾಗಿರಲಿಲ್ಲ. ಆದರೆ, ಇದೀಗ ಮಲ್ಲೇಶ್ವರನಲ್ಲಿ ಆರಂಭವಾಗಿರುವುದು ಸಂತಸ ತಂದಿದೆ' ಎಂದರು.

ಇಂಧನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಬೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಬೆಸ್ಕಾಂ ನಿರ್ದೇಶಕರು (ಹಣಕಾಸು) ದರ್ಶನ್.ಜೆ, ನಿರ್ದೇಶಕರು (ತಾಂತ್ರಿಕ) ರಮೇಶ್ ಎಚ್ .ಜೆ. ಇದ್ದರು.

ಶಿಕ್ಷಣ ಪರಿಷತ್‌ಗೆ ಜಯಕರ ನೇಮಕ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಜಯಕರ ಎಸ್.ಎಂ., ಅವರನ್ನು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಪ್ರಭಾರ ಕಾರ್ಯನಿರ್ವಾಹಕ ನಿರ್ದೇಶಕರನ್ನಾಗಿ ನೇಮಕ ಮಾಡಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ.

ನಗರದ ವಿವಿಧ ಶಾಲಾ–ಕಾಲೇಜುಗಳಲ್ಲಿ ಸಂಭ್ರಮದ ಶಿಕ್ಷಕರ ದಿನಾಚರಣೆ

ಅಕ್ಷರ ದೀವಿಗೆಯ ಗುರುಬ್ರಹ್ಮರಿಗೆ ನಮನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಪ್ಪು ಮಾಡಿದಾಗ ಶಿಕ್ಷಿಸಿ, ತಿದ್ದಿ ಬುದ್ಧಿ ಹೇಳಿದ ಗುರುಗಳನ್ನು ಗೌರವಿಸುವ ಶಿಕ್ಷಕರ ದಿನಾಚರಣೆ ನಗರದ ವಿವಿಧ ಶಾಲಾ ಕಾಲೇಜುಗಳಲ್ಲಿ ಸಂಭ್ರಮದಿಂದ ನಡೆಯಿತು.

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ, 'ಶಿಕ್ಷಣ ಮತ್ತು ಸಂಸ್ಕಾರ ಜೀವನಕ್ಕೆ ಬಹಳ ಅಮೂಲ್ಯವಾದವು. ವಿದ್ಯಾರ್ಥಿಗಳಿ ಸಂಸ್ಕಾರ ನೀಡುತ್ತಿರುವ ಶಿಕ್ಷಕ ವೃತ್ತಿ ಬಹಳ ಪವಿತ್ರವಾದದ್ದು' ಎಂದು ಹೇಳಿದರು.

'ನಾವು ಯಾವ ವಿದ್ಯಾರ್ಹತೆ ಪಡೆದಿದ್ದೇವೆ, ಎಷ್ಟು ಪದಕಗಳನ್ನು ಗಳಿಸಿದ್ದೇವೆ. ಯಾವ ಸ್ಥಾನದಲ್ಲಿದ್ದೇವೆ ಎಂಬುದು ಮುಖ್ಯವಲ್ಲ. ನಮ್ಮ ವೃತ್ತಿಯು ಎಷ್ಟು ಜನರ ಬದುಕಿನಲ್ಲಿ ಬೆಳಕು ತಂದಿದೆ, ಎಷ್ಟು ಜನರ ಮುಖದಲ್ಲಿ ನಗು ತಂದಿದೆ ಎನ್ನುವದೇ ಮುಖ್ಯ. ಶಿಕ್ಷಕ ವೃತ್ತಿಯನ್ನು ಎಲ್ಲ ವೃತ್ತಿಗಳ ತಾಯಿ ಎಂದು ಕರೆಯಲಾಗುತ್ತದೆ. ಆದ್ದರಿಂದ, ಶೈಕ್ಷಣಿಕ ವ್ಯವಸ್ಥೆ ಕುಸಿದರೇ ದೇಶವೇ ಕುಸಿದಂತೆ ಎನ್ನುತ್ತಾರೆ. ದೊಡ್ಡ–ದೊಡ್ಡ ಗ್ರಂಥಾಲಯ, ಕಾಲೇಜು ಕಟ್ಟಡ ನಿರ್ಮಿಸಿದರೆ ಉತ್ತಮ ಶಿಕ್ಷಣ ಕೊಟ್ಟಂತಲ್ಲ. ವಿದ್ಯಾರ್ಥಿ ಮತ್ತು ಶಿಕ್ಷಕರ ನಡುವೆ ಉತ್ತಮ ಸಂಬಂಧ ಇದ್ದರೆ ಮಾತ್ರ ಉತ್ತಮ ಶಿಕ್ಷಣ ನೀಡಲು ಸಾಧ್ಯ. ನಾವೆಲ್ಲರೂ ವೃತ್ತಿಯನ್ನು ಪ್ರೀತಿಸಬೇಕು, ಆನಂದಿಸಬೇಕು' ಎಂದು ಕರೆ ನೀಡಿದರು.

ಶಿಕ್ಷಕರ ದಿನಾಚರಣೆ ವಿಶೇಷ

ಕುಲಪತಿ ಜಯಕರ ಎಸ್.ಎಂ., ಕುಲಸಚಿವರಾದ ಶೇಕ್ ಲತೀಫ್, ಶ್ರೀನಿವಾಸ್ ಚೌಡಪ್ಪ, ಹಣಕಾಸು ಅಧಿಕಾರಿ ಅಜಿತ್ ಕುಮಾರ್ ಹೆಗ್ಡೆ, ಡೀನ್‌ಗಳಾದ ಅಶೋಕ್ ಹಂಜಗಿ, ಸಿ. ನಾಗಭೂಷಣ್, ನಾರಾಯಣಸ್ವಾಮಿ ಎಂ., ಸುರೇಶ್ ನಾಡಗೌಡರ್, ಆರ್. ಸರ್ವಮಂಗಳ ಇದ್ದರು.

ಬೆಂಗಳೂರು ನಗರ ವಿಶ್ವವಿದ್ಯಾಲಯದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆಯಲ್ಲಿ ಕುಲಪತಿ ಲಿಂಗರಾಜ ಗಾಂಧಿ ಅವರು ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, 'ಇಂದಿನ ತಾಂತ್ರಿಕ ಮತ್ತು ಕೃತಕ ಬುದ್ಧಿಮತ್ತೆಯ ಯುಗದಲ್ಲಿ ಶಿಕ್ಷಕರ ಮುಂದೆ ಬಹುದೊಡ್ಡ ಸವಾಲಿದೆ. ಉಪನ್ಯಾಸಕರು ತಂತ್ರಜ್ಞಾನದೊಂದಿಗೆ ಅನುಸಂಧಾನ ಮಾಡಿಕೊಳ್ಳಬೇಕಾದ ಅವಶ್ಯಕತೆ ಇದೆ' ಎಂದು ಹೇಳಿದರು.

ಮೌಲ್ಯಮಾಪನ ಕುಲಸಚಿವ ವಿ. ಲೋಕೇಶ್, ಕುಲಸಚಿವ ಜವರೇಗೌಡ ಟಿ., ಜ್ಯೋತಿ ವೆಂಕಟೇಶ್, ವಿ. ಆರ್, ದೇವರಾಜ್ ಇದ್ದರು.

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಮಂಗಳವಾರ ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್ ಮಂಜುನಾಥ್ ಅವರು ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು (ಎಡಚಿತ್ರ) ಬೆಂಗಳೂರು ನಗರ ವಿಶ್ವವಿದ್ಯಾಲಯದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಕುಲಪತಿ ಲಿಂಗರಾಜ ಗಾಂಧಿ ಅವರು ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು

'ಶಿಕ್ಷಕರ ಕೋಪದ ಹಿಂದೆ ಕಾಳಜಿ'

ಜ್ಞಾನ ಬೋಧಿನಿ ಶಾಲೆಯ ದೈಹಿಕ ಶಿಕ್ಷಕ ಚಂದ್ರಶೇಖರಯ್ಯ ಅವರಿಗೆ ಹಳೆಯ ವಿದ್ಯಾರ್ಥಿಗಳು ಬೀಳ್ಕೊಡುಗೆ ನೀಡಿದರು. ಶಿಕ್ಷಕ ಶಂಕರ್ ಭಟ್, ಮುಖ್ಯ ಶಿಕ್ಷಕಿ ಜೆಸಿಂತಾ ಪಿರೇರಾ ಇದ್ದರು

ಕೆಂಗೇರಿ: 'ಗುರುಗಳ ಕೋಪದ ಹಿಂದೆ ಕಾಳಜಿ, ವಿದ್ಯಾರ್ಥಿಗಳ ಭವಿಷ್ಯ ಉಜ್ವಲಗೊಳಿಸುವ ನಿಸ್ವಾರ್ಥ ಮನೋಭಾವ ಇರುತ್ತದೆ' ಎಂದು ಜ್ಞಾನ ಬೋಧಿನಿ ಪ್ರೌಢಶಾಲೆಯ ದೈಹಿಕ ಶಿಕ್ಷಕ ಚಂದ್ರಶೇಖರಯ್ಯ ಹೇಳಿದರು.

ಶಿಕ್ಷಕರ ದಿನಾಚರಣೆ ಅಂಗವಾಗಿ 1996-97 ಮತ್ತು 1997-98 ಸಾಲಿನ ಹಿರಿಯ ವಿದ್ಯಾರ್ಥಿಗಳು ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಮುಖ್ಯ ಶಿಕ್ಷಕಿ ಜೆಸಿಂತಾ ಪಿರೇರಾ, 'ವಿದ್ಯೆಗೆ ಸಮಾಜ ಪರಿವರ್ತಿಸುವ ಶಕ್ತಿ ಇದೆ' ಎಂದು ತಿಳಿಸಿದರು.

ಹಳೆಯ ವಿದ್ಯಾರ್ಥಿಗಳಾದ ರಾಜೇಶ್ ಚಾವತ್, ಸತ್ಯ, ಬಾನು, ತೇಜಾ, ಅಶ್ವಿನಿ ಅಕ್ಮಲ್, ರಾಜೇಶ್, ಸೈಯದ್, ದೀಪ್ತಿ ಭಾಗವಹಿಸಿದ್ದರು.

'ಕನಿಷ್ಠ ಪಿಂಚಣಿ ನೀಡಲು ಒತ್ತಾಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿವೃತ್ತರಿಗೆ ಕನಿಷ್ಠ ಪಿಂಚಣಿ ನೀಡುವ ಬೇಡಿಕೆ ಸರ್ಕಾರದ ಮುಂದಿಲ್ಲ ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಖಾತೆಯ ರಾಜ್ಯ ಸಚಿವ ರಾಮೇಶ್ವರ ತೇಲಿ ಹೇಳಿಕೆಯನ್ನು ಇಪಿಎಸ್–95 ಪಿಂಚಣಿದಾರರು ಸಂಘಟನೆ ಕಾರ್ಯಾಧ್ಯಕ್ಷ ನಂಜುಂಡೇಗೌಡ ಖಂಡಿಸಿದ್ದಾರೆ.

ಲಾಲ್‌ಬಾಗ್‌ನಲ್ಲಿ ಭಾನುವಾರ ನಡೆದ ಪಿಂಚಣಿದಾರರ ಮಾಸಿಕ ಸಭೆಯಲ್ಲಿ ಮಾತನಾಡಿದ ಅವರು, 'ನಿವೃತ್ತರ ಕನಿಷ್ಠ ಪಿಂಚಣಿ ಬೇಡಿಕೆಯನ್ನು ಈಡೇರಿಸುವುದು ಕೇಂದ್ರ ಸರ್ಕಾರದ ಜವಾಬ್ದಾರಿಯಾಗಿದೆ. ನಿವೃತ್ತರು ಅಹಿಂಸಾತ್ಮಕ ಹೋರಾಟ, ಪ್ರತಿಭಟನೆ, ಉಪವಾಸ ಸತ್ಯಾಗ್ರಹ ಮಾಡಿದರೂ ಕೇಂದ್ರ ಸರ್ಕಾರ ಮಾತ್ರ ಕಣ್ಮುಚ್ಚಿ ಕುಳಿತಿದೆ' ಎಂದು ಹೇಳಿದ್ದಾರೆ.

'ಇಪಿಎಫ್‌ಒ ಅಧಿಕಾರಿಗಳು ಹೊರಡಿಸುತ್ತಿರುವ ಸುತ್ತೋಲೆಗಳು, ಅವರು ನಡೆದುಕೊಳ್ಳುವ ರೀತಿ ಸರಿಯಾಗಿಲ್ಲ. ಅಧಿಕಾರಿಗಳು ನಿವೃತ್ತರ ಬಗ್ಗೆ ಪೂರ್ವಾಗ್ರಹ ಪೀಡಿತರಾಗಿದ್ದಾರೆ. ಇಪಿಎಫ್‌ಒ ಕಚೇರಿಯಿಂದ ಹೋರಾಟಗಾರ ಪ್ರವೀಣ್ ಕೊಹ್ಲಿ ಆರ್‌ಟಿಐಯ ಮೂಲಕ ಸಂಗ್ರಹಿಸಿರುವ ಮಾಹಿತಿ ನಮ್ಮ ಬದುಕನ್ನು ಭದ್ರಪಡಿಸಿದೆ. ನ್ಯಾಯಾಲಯದ ತೀರ್ಪು ಅನುಷ್ಠಾನಗೊಳಿಸಬೇಕು' ಎಂದು ಒತ್ತಾಯಿಸಿದ್ದಾರೆ.

ಉಪಾಧ್ಯಕ್ಷರಾದ ಸುಬ್ಬಣ್ಣ, 'ಆನ್‌ಲೈನ್ ಅರ್ಜಿ ಸಲ್ಲಿಸಿರುವ ನಿವೃತ್ತರೆಲ್ಲರೂ ಬಡ್ಡಿ ಸಹಿತ ಇಪಿಎಫ್‌ಒ ಕಚೇರಿಗೆ ಹಣ ತುಂಬಬೇಕು. ಇದರಿಂದ ಬರುವ ಪ್ರತಿಫಲ ಅಂದರೆ ಅಧಿಕಾರಿಗಳು ಎಷ್ಟು ಪಿಂಚಣಿಯನ್ನು ನಿಗದಿಪಡಿಸುತ್ತಾರೆ ಎಂಬುದನ್ನು ನೌಕರರು ಅರ್ಥೈಸಿಕೊಳ್ಳಬೇಕು. ಕಮಾಂಡರ್ ಅಶೋಕ್ ರಾವುತ್ ಅವರು ನಡೆಸುತ್ತಿರುವ ಪಿಂಚಣಿ ಹೋರಾಟದಲ್ಲಿ ನಮ್ಮ ಸಂಘಟನೆಯು ಸಹ ಪಾಲ್ಗೊಳ್ಳಲಿದೆ' ಎಂದು ತಿಳಿಸಿದ್ದಾರೆ.

'ನಗರದ ರಿಚ್ಮಂಡ್ ವೃತ್ತದಲ್ಲಿರುವ ಇಪಿಎಫ್‌ಒ ಕಚೇರಿ ಆವರಣದಲ್ಲಿ ಇದೇ 27ರಂದು ನಡೆಯುವ ನಿವೃತ್ತರ ಕುಂದು ಕೊರತೆಗಳನ್ನು ಬಗೆಹರಿಸುವ ಕಾರ್ಯಕ್ರಮದಲ್ಲಿ ನಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಮನವಿ ಪತ್ರ ಸಲ್ಲಿಸಲಾಗುವುದು' ಎಂದರು.

ಲಾಲ್‌ಬಾಗ್ ಆವರಣದಲ್ಲಿ ಭಾನುವಾರ ಪಿಂಚಣಿದಾರರ ಮಾಸಿಕ ಸಭೆ ನಡೆಯಿತು

ಸ್ವಾತಂತ್ರ್ಯ ಉದ್ಯಾನದಲ್ಲಿ ಅತಿಥಿ ಉಪನ್ಯಾಸಕರ ಪ್ರತಿಭಟನೆ

ಸೇವೆ ಕಾಯಂಗೊಳಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತಿಥಿ ಉಪನ್ಯಾಸಕರ ಸೇವೆ ಕಾಯಂ ಮಾಡುವುದೂ ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ, ರಾಜ್ಯ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಹಕ್ಕುಗಳ ಹೋರಾಟ ಸಮಿತಿ ನೇತೃತ್ವದಲ್ಲಿ ಅತಿಥಿ ಉಪನ್ಯಾಸಕರು ಮಂಗಳವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟಿಸಿದರು.

'ರಾಜ್ಯದ 436 ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ಅನೇಕ ವರ್ಷಗಳಿಂದ ಸಾವಿರಾರು ಮಂದಿ ಅತಿಥಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದೇವೆ. ಎಲ್ಲರೂ ಒಂದೇ ವೃತ್ತಿ ನಂಬಿ ಜೀವನ ನಡೆಸುತ್ತಿದ್ದೇವೆ. ಸೇವೆ ಕಾಯಂ ಮಾಡಿದರೆ ನ್ಯಾಯ ಸಿಕ್ಕಂತೆ ಆಗಲಿದೆ' ಎಂದು ಪ್ರತಿಭಟನಕಾರರು ಕೋರಿದರು.

ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಘೋಷಿಸಿದಂತೆ ಅತಿಥಿ ಉಪನ್ಯಾಸಕರ ಸೇವೆ ಕಾಯಂಗೊಳಿಸಲು ಸಚಿವ ಸಂಪುಟದಲ್ಲಿ ನಿರ್ಣಯ ಕೈಗೊಳ್ಳಬೇಕು ಎಂದು ಸಂಘದ ಅಧ್ಯಕ್ಷ ಎಂ.ಬಿ. ನೂರ್ ಅಹಮದ್ ಅವರು ಕೋರಿದರು.

'12 ತಿಂಗಳೂ ವೇತನ ನೀಡಬೇಕು. ಅಲ್ಲದೇ ತಿಂಗಳಿಗೆ ಒಂದು ರಜಾ ಸೌಲಭ್ಯವನ್ನು ಕಡ್ಡಾಯವಾಗಿ ನೀಡಬೇಕು' ಎಂದು ಆಗ್ರಹಿಸಿದರು.

'ನೇಮಕಾತಿ ಆದೇಶದಲ್ಲಿ ಅತಿಥಿ ಉಪನ್ಯಾಸಕರ ಶೋಷಣೆಗೆ ಕಾರಣವಾಗಿರುವ ಷರತ್ತುಗಳನ್ನು ತೆಗೆದು ಹಾಕಬೇಕು. ಪದೇ ಪದೇ ದಾಖಲೆಗಳನ್ನು ಪರಿಶೀಲಿಸದೆ ಶಾಶ್ವತವಾಗಿ ಒಮ್ಮೆ ದಾಖಲಾತಿಗಳ ನೈಜತೆ ಪರಿಶೀಲನೆ ನಡೆಸಬೇಕು' ಎಂದು ಆಗ್ರಹಿಸಿದರು.

ಮಹಿಳಾ ಉಪನ್ಯಾಸಕರಿಗೆ ವೇತನ ಸಹಿತ ಪ್ರಸೂತಿ ರಜೆ ಮಂಜೂರು ಮಾಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕಾರ್ಯಾಧ್ಯಕ್ಷ ಆರ್. ಶಂಕ್ರಾನಾಯ್ಕ ನೆಲ್ಲಿಹಂಕಲು, ಮಹಿಳಾ ಅಧ್ಯಕ್ಷೆ ಶರಣಮ್ಮ ಪಾಟೀಲ್, ಮಾಧ್ಯಮ ವಕ್ತಾರ ಮುನಿಯಪ್ಪ ಇದ್ದರು.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ನಡೆದ ಅತಿಥಿ ಉಪನ್ಯಾಸಕರ ಪ್ರತಿಭಟನೆಯಲ್ಲಿ ಕಾಂಗ್ರೆಸ್ ಮುಖಂಡ ಆಯನೂರು ಮಂಜುನಾಥ್ ಹಾಗೂ ಕಾಳಿಮಠದ ಋಷಿಕೇಶ ಸ್ವಾಮೀಜಿ ಪಾಲ್ಗೊಂಡಿದ್ದರು

ತಂತ್ರಜ್ಞಾನ





ಗಗನಯಾತ್ರೆಯೂ ಮೂಳೆಗಳೂ...

ಅಮೃತೇಶ್ವರಿ ಬಿ.

ಗಗನಯಾತ್ರೆ ಎಂದಾಕ್ಷಣ ಸಾಮಾನ್ಯರಾದ ನಮ್ಮ ಮನಸ್ಸಿನಲ್ಲಿ ಒಂದು ಕಲ್ಪನಾಲೋಕವೇ ತೆರೆದುಕೊಳ್ಳುತ್ತದೆ. ಹಕ್ಕಿಯಂತೆ ಸ್ವಚ್ಛಂದವಾಗಿ ಹಾರಾಡುವ ಆ ಕಲ್ಪನೆ ಅದ್ಭುತವೇ ಸರಿ. ಆದರೆ ಹಕ್ಕಿಗಳಂತೇ ಮೇಲೆ ಹಾರಾಡಿ ಕೆಳಗೆ ಇಳಿಯುವುದು ನಮ್ಮ ದೇಹಕ್ಕೆ ಅಷ್ಟು ಸುಲಭವಲ್ಲ. ಅದಕ್ಕೆಂದೇ ಸೂಕ್ತವಾದ ಮಾರ್ಪಾಟನ್ನು ದೇಹ ಮಾಡಿಕೊಳ್ಳಬೇಕಾಗುತ್ತದೆ. ಹಕ್ಕಿಗಳೋ ಬೇಕೆನಿಸಿದಾಗ ಪುರ್ರನೆ ಆಕಾಶಕ್ಕೆ ಹಾರಿ ತಕ್ಷಣವೇ ನಿರಾಯಾಸವಾಗಿ ಇಳಿದುಬಿಡುತ್ತವೆ. ಅದಕ್ಕೆ ಸೂಕ್ತವಾದ ದೇಹವ್ಯವಸ್ಥೆಯನ್ನು ಪಕ್ಷಿಗಳಿಗೆ ನಮ್ಮ ಪ್ರಕೃತಿ ನೀಡಿದೆಯೆನ್ನಿ. ಆದರೆ ನಾವು ಮನುಷ್ಯರೋ ಅದನ್ನೂ ಅನುಕರಿಸುವ ಪ್ರಯತ್ನದಲ್ಲಿ ಭಾರೀ ವಿಜಯವನ್ನು ಸಾಧಿಸಿ ಗಗನಯಾತ್ರೆ ಆರಂಭಿಸಿಬಿಟ್ಟಿದ್ದೇವೆ. ಜೊತೆಗೆ ತಿಂಗಳುಗಟ್ಟಲೆ ಆಕಾಶದಲ್ಲಿಯೇ ಇದ್ದು ಸಂಶೋಧನೆ ಮಾಡುತ್ತಿದ್ದೇವೆ. ಬಾಹ್ಯಾಕಾಶದ ಸಂಶೋಧನೆ ಒಂದೆಡೆಯಾದರೆ ಭೂಮಿಯ ಮೇಲಿನ ವಾಸ, ಬಾಹ್ಯಾಕಾಶದ ವಾಸ ಹಾಗೂ ಗಗನಯಾತ್ರೆಯ ನಂತರದ ಭೂಮಿಯ ಮೇಲಿನ ವಾಸದಲ್ಲಿ ಗಗನಯಾತ್ರಿಗಳ ದೇಹದಲ್ಲಾಗುವ ಬದಲಾವಣೆಗಳ ಬಗ್ಗೆ ನಡೆಯುತ್ತಿರುವ ಸಂಶೋಧನೆ ಮತ್ತೊಂದೆಡೆ. ಇದೋ ಗಗನಯಾತ್ರಿಗಳ ದೀರ್ಘಕಾಲದ ಯಾತ್ರೆಯ ನಂತರದಲ್ಲಿ ಅವರ ಅಸ್ಥಿಮಜ್ಜೆಯಲ್ಲಿನ ಬದಲಾವಣೆಗಳ ಕುರಿತು ಕೆನಡಾದ ಒಟಾವಾ ವಿಶ್ವವಿದ್ಯಾಲಯದ ವಿಜ್ಞಾನಿಗಳು ಮಾಡಿರುವ ಸಂಶೋಧನೆ ಮೊನ್ನೆ 'ನೇಚರ್ ಕಮ್ಯುನಿಕೇಷನ್ಸ್' ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಗಗನಯಾತ್ರೆಗೆ ನಮ್ಮ ದೇಹ ಸಾಕಷ್ಟು ವ್ಯತ್ಯಾಸಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಅದರಲ್ಲೂ ಮೂಳೆ, ಅಲ್ಲಿ ಉತ್ಪಾದನೆಯಾಗುವ ಅಸ್ಥಿಮಜ್ಜೆ, ರಕ್ತದ ಹುಟ್ಟು ಮತ್ತು ಬೆಳವಣಿಗೆ - ಇವು ನಮ್ಮ ಇರುವಿಕೆಯ ಬಹುಮುಖ್ಯ ಭಾಗ. ಆದರೆ ಆಕಾಶದಲ್ಲಿದ್ದಾಗ ನಮ್ಮ ದೇಹದ ಅತಿಮುಖ್ಯ ಜೀವರಸವಾದ ಅಸ್ಥಿಮಜ್ಜೆಯಲ್ಲಿರುವ ಕೊಬ್ಬಿನಾಂಶಗಳಲ್ಲಿ ಆಗುವ ವ್ಯತ್ಯಾಸದ ಬಗ್ಗೆ ನಮಗೆ ಏನೂ ತಿಳಿದಿಲ್ಲ. ಇದು ಮನುಷ್ಯನ ದೇಹದ ಚಯಾಚಯ ಕ್ರಿಯೆಯಲ್ಲಿ ಮಹತ್ತರ ಪಾತ್ರ ವಹಿಸುತ್ತದೆ. ಅಸ್ಥಿಮಜ್ಜೆಯ ಪ್ರಮಾಣದ ವ್ಯತ್ಯಾಸದಿಂದಾಗುವ ಪರಿಣಾಮಗಳು ನಿರ್ಲಕ್ಷಿಸುವಂತವೂ ಅಲ್ಲ. ಮೂಳೆಗಳ ಸವೆತ ಅಥವಾ ಆಸ್ಟಿಯೋಪೋರೋಸಿಸ್, ರಕ್ತಹೀನತೆ, ಸ್ಥೂಲಕಾಯ, ಗ್ಲೂಕೋಸ್ ಇನ್‌ಟಾಲೆರೆನ್ಸ್ ಹಾಗೂ ಕ್ಯಾನ್ಸರಿನಂತಹ ಮಾರಕ ಕಾಯಿಲೆಗಳನ್ನೂ ತಂದೊಡ್ಡಿಬಿಡುತ್ತದೆ. ಬಾಹ್ಯಾಕಾಶಕ್ಕೆ ತಲುಪುತ್ತಿದ್ದಂತೆ ಮೂಳೆಗಳ ಮೇಲೆ ಆಗುವ ಬಲಪ್ರಯೋಗವು ಶೂನ್ಯವಾಗುತ್ತದೆ; ದೇಹದೊಳಗಿನ ವಿವಿಧ ರಸಗಳು ಒಂದು ಕೋಣೆಯಿಂದ ಮತ್ತೊಂದು ಕೋಣೆಗೆ ಚಲಿಸಲಾರಂಭಿಸುತ್ತವೆ; ರಕ್ತದಲ್ಲಿನ ಕೆಂಪುರಕ್ತಕಣಗಳು ಒಡೆಯುತ್ತವೆ. ಇಷ್ಟಲ್ಲದೇ ಅಲ್ಲಿನ ವಾತಾವರಣವು ಬೇರೆಯಾಗಿರುವುದರಿಂದ ವಿಭಿನ್ನ ರೀತಿಯ ವಿಕಿರಣಗಳು ದೇಹವನ್ನು ತಾಕುತ್ತವೆ. ಇವೆಲ್ಲವೂ ಗಗನಯಾತ್ರಿಗಳ ದೇಹದಲ್ಲಿ ಪ್ರತಿಕೂಲ ಪರಿಸ್ಥಿತಿಯನ್ನು ಉಂಟುಮಾಡುತ್ತವೆ.

ಅದನ್ನು ಗೆದ್ದು ಸಂಶೋಧನೆಯನ್ನು ಪೂರ್ಣಗೊಳಿಸಿ ಭೂಮಿಗೆ ಮರಳಿ ತಲುಪುವುದು ನಿಜಕ್ಕೂ ಸವಾಲು ಹಾಗೂ ಸಾಧನೆಯೇ ಸರಿ. ದುರದೃಷ್ಟವಶಾತ್ ಅದರ ಪರಿಣಾಮಗಳು ಭೂಮಿಗೆ ಮರಳಿದ ಮೇಲೂ ಇರುತ್ತದೆ. ಇದನ್ನು ಸರಿದೂಗಿಸಿಕೊಳ್ಳಲು ಇವರಿಗೆ 60 ದಿನಗಳ ಸತತ ಹಾಗೂ ಸಂಪೂರ್ಣ ವಿಶ್ರಾಂತಿ ಬೇಕಾಗುತ್ತದೆಯಂತೆ.



ಇದನ್ನು ಸ್ಥೂಲವಾಗಿ ಅಧ್ಯಯನ ಮಾಡಲು ಒಟಾವಾ ವಿಶ್ವವಿದ್ಯಾಲಯದ ವಿಜ್ಞಾನಿಗಳು 14 ಗಗನಯಾತ್ರಿಗಳ ಅಸ್ಥಿಮಜ್ಜೆಯನ್ನು ಪರೀಕ್ಷಿಸಿದ್ದಾರೆ. ಅಂತರರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದ ಆರು ತಿಂಗಳ ಯೋಜನೆಗಾಗಿ ಗಗನಯಾತ್ರೆಯನ್ನು ಮುಗಿಸಿ ಬಂದ 41 ದಿನಗಳ ನಂತರ ಎದೆಗೂಡಿನ ಹಾಗೂ ಸೊಂಟದ ನಡುವೆ ಕಂಡುಬರುವ ಲುಂಬಾರ್ ಮೂಳೆಗಳಲ್ಲಿರುವ ಅಸ್ಥಿಮಜ್ಜೆಯನ್ನು ಹಾಗೂ ಅದರ ಕೊಬ್ಬಿನ ಕಣಗಳನ್ನು ಅಧ್ಯಯನ ಮಾಡಿದ್ದಾರೆ. ಹಲವಾರು ಪರೀಕ್ಷೆಗಳ ಪ್ರಕಾರ ಅವರ ಅಸ್ಥಿಮಜ್ಜೆಯಲ್ಲಿನ ಕೊಬ್ಬಿನ ಸಂಗ್ರಹಣೆಯಲ್ಲಿ ಇಳಿಕೆ ಕಂಡುಬಂದಿತ್ತಂತೆ. ನಂತರ, ಭೂಮಿಯ ಮೇಲೆ ಇದ್ದವರ ಸೊಂಟದ ಮೂಳೆಗಳ ಬೆಳವಣಿಗೆ ಹಾಗೂ ಅವರ ಅಸ್ಥಿಮಜ್ಜೆಯ ಕೊಬ್ಬಿನ ಅಂಶದಲ್ಲಾಗುವ ಇಳಿಕೆ ಹಾಗೂ ಕಾರಣಗಳನ್ನು ಪರೀಕ್ಷೆ ಮಾಡಿದ್ದಾರೆ. ಇವರ ಅಂದಾಜಿನ ಪ್ರಕಾರ ಗಗನಯಾತ್ರೆಯ ನಂತರ ಅದೇ ಕಾರಣಕ್ಕಾಗಿ ಅಸ್ಥಿಮಜ್ಜೆಯ ಕೊಬ್ಬಿನಾಂಶದಲ್ಲಿ ವ್ಯತ್ಯಾಸ ಆಗುವುದು ಖಚಿತವಾಯಿತಂತೆ. ಆದರೆ ಮಹಿಳಾ ಗಗನಯಾತ್ರಿಗಳಲ್ಲಿ ಇದು ಬೇಗನೆ ಸಮತೋಲನವಾಗುತ್ತದೆಯಂತೆ. ಯುವ ಗಗನಯಾತ್ರಿಗಳಲ್ಲಂತೂ ಇನ್ನೂ ಕ್ಷಿಪ್ರವಾಗಿ ಬೆಳವಣಿಗೆಯಾಗುತ್ತದೆಯಂತೆ. ಬಾಹ್ಯಾಕಾಶದ ಬಿರುಸಾದ ವಾತಾವಾರಣದಲ್ಲಿ ಇವೆಲ್ಲವನ್ನು ಪರೀಕ್ಷೆ ಮಾಡುವುದು ಕಷ್ಟಸಾಧ್ಯ. ಹಾಗಾಗಿ ಗಗನಯಾತ್ರಿಗಳಲ್ಲಿ ಅಸ್ಥಿಮಜ್ಜೆಯ ಕೊಬ್ಬಿನಾಂಶವನ್ನು ಅಧ್ಯಯನ ಮಾಡುವುದರಿಂದ ಆಕಾಶ ಹಾಗೂ ಭೂಮಿಯ ಮೇಲಿದ್ದಾಗ ಆಗುವ ಆಂತರಿಕ ದೈಹಿಕ ವ್ಯತ್ಯಾಸಗಳನ್ನು ಸುಲಭವಾಗಿ ತಿಳಿದುಕೊಳ್ಳಬಹುದು ಎನ್ನುವುದು ವಿಜ್ಞಾನಿಗಳ ಲೆಕ್ಕಾಚಾರ.

ಹೀಗೆ ದೀರ್ಘಕಾಲದ ಬಾಹ್ಯಾಕಾಶ ಅಧ್ಯಯನಗಳು ಯೋಜಿತ ಸಂಶೋಧನೆಗಳನ್ನು ಪೂರೈಸುವುದರ ಜೊತೆಗೆ ಭೂಮಿ ಹಾಗೂ ಇತರೆ ಗ್ರಹ ಅಥವಾ ಬಾಹ್ಯಾಕಾಶದಲ್ಲಿ ವಾಸವಿರುವುದರಿಂದ ನಮ್ಮ ದೇಹದಲ್ಲಿ ಯಾವ ರೀತಿಯ ಪರಿಣಾಮಗಳನ್ನು ಬೀರಬಹುದು ಮತ್ತು ಅದಕ್ಕೆ ಸಂಬಂಧಿಸಿದಂತೆ ಮುಂದಿನ ಯೋಜನೆಗಳಿಗೆ ಯಾವ ರೀತಿಯ ಸಿದ್ಧತೆಗಳನ್ನು ನಡೆಸಿಕೊಳ್ಳಬೇಕು ಎನ್ನುವುದರ ಹೊಸ ಸಂಶೋಧನೆಗೆ ಹಾದಿಮಾಡಿಕೊಡುತ್ತವೆ. ಇದು ಗಗನಯಾತ್ರಿಗಳು ತಮ್ಮ ವಯಸ್ಸು ಹಾಗೂ ಲಿಂಗದ ಅನುಸಾರ ಆರೋಗ್ಯದ ಬಗ್ಗೆ ಹೇಗೆ ಪೂರ್ವತಯಾರಿ ಮಾಡಿಕೊಳ್ಳಬೇಕು ಎನ್ನುವುದರ ಒಳನೋಟವನ್ನು ಕೊಡುತ್ತದೆ.

❖

ಕಂಪ್ಯೂಟರನ್ನು ವೈಫೈ ಹಾಟ್‌ಸ್ಪಾಟ್ ಆಗಿ ಬಳಸುವುದು ಹೇಗೆ?

ಕಂಪ್ಯೂಟರನ್ನೇ (ಡೆಸ್ಕ್‌ಟಾಪ್ ಅಥವಾ ಲ್ಯಾಪ್‌ಟಾಪ್) ವೈಫೈ ಹಾಟ್‌ಸ್ಪಾಟ್ ಆಗಿ ಬಳಸಬಹುದು ಎಂಬುದು ಬಹುತೇಕರಿಗೆ ತಿಳಿದಿಲ್ಲ. ಮೈಕ್ರೋಸಾಫ್ಟ್ ವಿಂಡೋಸ್ 10 ಹಾಗೂ ವಿಂಡೋಸ್ 11 ಕಾರ್ಯಾಚರಣಾ ವ್ಯವಸ್ಥೆಯ ಕಂಪ್ಯೂಟರುಗಳಲ್ಲಿ, ಆ್ಯಪಲ್‌ನ ಮ್ಯಾಕ್‌ಬುಕ್‌ಗಳಲ್ಲಿ ಈ ಆಯ್ಕೆ ಲಭ್ಯವಿದೆ. ಡೆಸ್ಕ್‌ಟಾಪ್ ಆಗಿದ್ದರೆ, ವೈಫೈ ಸಂಪರ್ಕ ಅದರಲ್ಲಿರಬೇಕಾಗುತ್ತದೆ.

ಅವಿನಾಶ್ ಬಿ.

ಇದು ಈಗಿನ ವೈರ್‌ಲೆಸ್ ತಂತ್ರಜ್ಞಾನದ ಯುಗ. ಮೊಬೈಲ್ ಫೋನ್ ಇಲ್ಲದೆ ದೈನಂದಿನ ಕೆಲಸ ಕಾರ್ಯ ಸಾಗುವುದೇ ಇಲ್ಲ ಎಂಬ ಮಾತು ಕೇಳಿರಬಹುದು. ಅದಕ್ಕೆ ಇಂಟರ್ನೆಟ್ ಸಂಪರ್ಕ ಮುಖ್ಯ. ಒಬ್ಬೊಬ್ಬರ ಕೈಯಲ್ಲಿ ಮೊಬೈಲ್ ಫೋನ್‌ಗಳ ಸಂಖ್ಯೆಯೂ ಹೆಚ್ಚು ಇರುತ್ತದೆ. ಒಂದೇ ಮನೆಯಲ್ಲಿರುವ ಎಲ್ಲ ಸದಸ್ಯರ ಫೋನ್‌ಗಳಿಗೂ ಪ್ರತ್ಯೇಕ ಇಂಟರ್‌ನೆಟ್ ಸಂಪರ್ಕ ದುಬಾರಿಯಾಗಬಹುದು ಅಥವಾ ಬ್ರಾಡ್‌ಬ್ಯಾಂಡ್ ಸಂಪರ್ಕದ ಚಂದಾದಾರಿಕೆ ಅಸಾಧ್ಯವಾಗಿರಬಹುದು. ಹೀಗಾಗಿ, ಬೇಕಾದಾಗ ಮಾತ್ರ ಇಂಟರ್‌ನೆಟ್ ಅನ್ನು ಬಳಸಲು ನಿಮ್ಮ ಕಂಪ್ಯೂಟರಿನ (ಡೆಸ್ಕ್‌ಟಾಪ್ ಅಥವಾ ಲ್ಯಾಪ್‌ಟಾಪ್) ಇಂಟರ್‌ನೆಟ್ ಸಂಪರ್ಕವನ್ನೇ ವೈಫೈ ಹಾಟ್‌ಸ್ಪಾಟ್ ಆಗಿ ಬಳಸಬಹುದು ಎಂಬುದು ಬಹುತೇಕರಿಗೆ ತಿಳಿದಿಲ್ಲ. ಮೈಕ್ರೋಸಾಫ್ಟ್ ವಿಂಡೋಸ್ 10 ಹಾಗೂ ವಿಂಡೋಸ್ 11 ಕಾರ್ಯಾಚರಣಾ ವ್ಯವಸ್ಥೆಯ ಕಂಪ್ಯೂಟರುಗಳಲ್ಲಿ, ಆ್ಯಪಲ್‌ನ ಮ್ಯಾಕ್‌ಬುಕ್‌ಗಳಲ್ಲಿ ಈ ಆಯ್ಕೆ ಲಭ್ಯವಿದೆ. ಡೆಸ್ಕ್‌ಟಾಪ್ ಆಗಿದ್ದರೆ, ವೈಫೈ ಸಂಪರ್ಕ ಅದರಲ್ಲಿರಬೇಕಾಗುತ್ತದೆ.

ವಿಂಡೋಸ್ ಪಿಸಿಯನ್ನು ಹಾಟ್‌ಸ್ಪಾಟ್ ಆಗಿ ಬಳಸುವುದು ಹೀಗೆ...

ನಮ್ಮದೇ ಕಂಪ್ಯೂಟರಿಗೆ ಸಾಮಾನ್ಯವಾಗಿ ಈಥರ್‌ನೆಟ್, ವೈಫೈ ಅಥವಾ ಸೆಲ್ಯುಲಾರ್ ಡೇಟಾ (ಸಿಮ್ ಕಾರ್ಡ್) ಮೂಲಕ ಇಂಟರ್‌ನೆಟ್ ಸಂಪರ್ಕ ನೀಡಲಾಗಿರುತ್ತದೆ. ಈ ಸಂಪರ್ಕವನ್ನು ನಾವು ಬೇರೊಂದು ಮೊಬೈಲ್ ಫೋನ್‌ನಲ್ಲಿ ಅಂತರ್ಜಾಲ ವೀಕ್ಷಣೆಗೆ ಬಳಸಬಹುದು. ಅದು ಹೇಗೆಂದರೆ, ಕಂಪ್ಯೂಟರಿನ ಸೆಟ್ಟಿಂಗ್ಸ್ ವಿಭಾಗದಲ್ಲಿ 'ನೆಟ್‌ವರ್ಕ್ & ಇಂಟರ್ನೆಟ್' ಎಂಬಲ್ಲಿಗೆ ಹೋದರೆ, ಅಲ್ಲಿ 'ಮೊಬೈಲ್ ಹಾಟ್‌ಸ್ಪಾಟ್' ಕಾಣಿಸುತ್ತದೆ. ಆನ್ ಮಾಡಿದಾಗ (ಸ್ಲೈಡರ್) 'ಶೇರ್ ಓವರ್' ಎಂಬಲ್ಲಿ 'ವೈಫೈ' ಆಯ್ಕೆ ಮಾಡಿ. ಪವರ್ ಸೇವಿಂಗ್ ಆಯ್ಕೆಯೂ ಇದ್ದು, ಯಾವುದೇ ಬೇರೆ ಸಾಧನಗಳು ಸಂಪರ್ಕಿತವಾಗದಿದ್ದಾಗ, ಹಾಟ್‌ಸ್ಪಾಟ್ ಸ್ವಯಂಚಾಲಿತವಾಗಿ ಆಫ್ ಆಗುತ್ತದೆ.

ಇದು ದುರ್ಬಳಕೆಯಾಗದಂತಿರಲು, Properties ಎಂಬ ವಿಭಾಗವನ್ನು ಹಿಗ್ಗಿಸಿದರೆ, ಈ ವೈಫೈ ಸಂಪರ್ಕಕ್ಕೆ (ಹಾಟ್‌ಸ್ಪಾಟ್) ನೀವು ಸೂಕ್ತವಾದ ಹೆಸರು ಹಾಗೂ ಪಾಸ್‌ವರ್ಡ್ ಹೊಂದಿಸಬಹುದು. ನಂತರ ಮೊಬೈಲ್ ಫೋನ್‌ನಲ್ಲಿ ವೈಫೈ ಆನ್ ಮಾಡಿದಾಗ, ಲಭ್ಯ ವೈಫೈ ಸಂಪರ್ಕಗಳನ್ನು ಅದು ಸ್ಕ್ಯಾನ್ ಮಾಡುತ್ತದೆ. ನೀವು ನಿಮ್ಮ ಕಂಪ್ಯೂಟರ್ ಅಥವಾ ಲ್ಯಾಪ್‌ಟಾಪ್‌ಗೆ ಕೊಟ್ಟಿರುವ ಹೆಸರು ಆಯ್ಕೆ ಮಾಡಿ, ನೀವೇ ಹೊಂದಿಸಿದ ಪಾಸ್‌ವರ್ಡ್ ನಮೂದಿಸಿಬಿಡಿ. ಏಕಕಾಲದಲ್ಲಿ 8 ಸಾಧನಗಳನ್ನು ಸಂಪರ್ಕಿಸಿ, ಕಂಪ್ಯೂಟರಿನ ಇಂಟರ್ನೆಟ್ ಸಂಪರ್ಕವನ್ನು ಬಳಸಬಹುದು. ವೈಫೈ ಮೂಲಕ ಅಥವಾ ಬ್ಲೂಟೂತ್ ಮೂಲಕವೂ ಇಂಟರ್‌ನೆಟ್ ಸಂಪರ್ಕವನ್ನು ಹಂಚಿಕೊಳ್ಳಬಹುದು. ವೈಫೈ ಸಂಪರ್ಕ ವೇಗವಾಗಿರುತ್ತದೆ, ಬ್ಲೂಟೂತ್ ಸಂಪರ್ಕ ಸ್ವಲ್ಪ ನಿಧಾನ ಇರುತ್ತದೆ ಮತ್ತು ಕಂಪ್ಯೂಟರ್ - ಮೊಬೈಲ್ ಫೋನ್‌ಗಳನ್ನು ಪರಸ್ಪರ ಬೆಸೆಯಬೇಕಾಗುತ್ತದೆ (ಪೇರಿಂಗ್).

ಗಮನಿಸಬೇಕಾದ ಒಂದು ಅಂಶವೆಂದರೆ, ನೀವು ಸಂಪರ್ಕಿಸಲು ಇಚ್ಛಿಸುವ ಸಾಧನವು 5GHz ನೆಟ್‌ವರ್ಕ್ ಬ್ಯಾಂಡ್ ಅನ್ನು ಬೆಂಬಲಿಸುತ್ತದೆಯೇ ಎಂದು ನೋಡಿಕೊಳ್ಳಬೇಕು. 2.4GHz ಮಾತ್ರ ಬೆಂಬಲಿಸುವ ಸಾಧನಗಳನ್ನು (ಮೊಬೈಲ್ ಫೋನ್) ಈ ಹಾಟ್‌ಸ್ಪಾಟ್‌ಗೆ ಸಂಪರ್ಕಿಸಲು ಸಾಧ್ಯವಾಗದಿರಬಹುದು. ಆಗ Properties ನಲ್ಲಿ ಪುನಃ ಎಡಿಟ್ ಮಾಡಿಕೊಂಡು, ಯಾವ ಬ್ಯಾಂಡ್ ಬೇಕು ಎಂಬುದನ್ನು ಆಯ್ಕೆ ಮಾಡಬಹುದು.

ಮ್ಯಾಕ್‌ಬುಕ್‌ಗಳಲ್ಲಿ (ಆ್ಯಪಲ್ ಕಂಪನಿಯ ಕಂಪ್ಯೂಟರುಗಳಲ್ಲಿ) ಕೂಡ, ಈ ಆಯ್ಕೆ ಇದೆ. ಆ್ಯಪಲ್ ಮೆನುವಿನಲ್ಲಿ ಸಿಸ್ಟಂ ಸೆಟ್ಟಿಂಗ್ಸ್ ಎಂಬಲ್ಲಿ, ಜನರಲ್ ಆಯ್ಕೆ ಮಾಡಿಕೊಂಡರೆ, ಸೈಡ್ ಬಾರ್‌ನಲ್ಲಿ 'ಶೇರಿಂಗ್' ಕ್ಲಿಕ್ ಮಾಡಿ, ಸ್ವಲ್ಪ ಕೆಳಗೆ ಸ್ಕ್ರಾಲ್ ಮಾಡಿ, 'ಇಂಟರ್‌ನೆಟ್ ಶೇರಿಂಗ್' ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ.

ಏಕಕಾಲದಲ್ಲಿ 8 ಸಾಧನಗಳನ್ನು ಸಂಪರ್ಕಿಸಬಹುದಾಗಿರುವುದರಿಂದ, ಪ್ರತ್ಯೇಕ ಬ್ರಾಡ್‌ಬ್ಯಾಂಡ್ ಸಂಪರ್ಕವಿಲ್ಲದಿದ್ದರೂ ಕೂಡ, ಕುಟುಂಬದ ಸದಸ್ಯರೆಲ್ಲರೂ ಒಂದೇ ಇಂಟರ್‌ನೆಟ್ ಸಂಪರ್ಕ ಬಳಸಿ, ಶುಲ್ಕದಲ್ಲಿ ಉಳಿತಾಯವನ್ನೂ ಮಾಡಬಹುದಾಗಿದೆ.

❖



(ಪ್ರಾತಿನಿಧಿಕ ಚಿತ್ರ).

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣ

ವಿಜ್ಞಾನ

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

1) ರಾಸಾಯನಿಕ ಕ್ರಿಯೆ ನಡೆದಿದೆ ಎನ್ನಲು ಈ ಕೆಳಗಿನ ಯಾವುದೆಲ್ಲವೂ ಸಹಾಯ ಮಾಡುತ್ತದೆ?

1) ಸ್ಥಿತಿ ಬದಲಾವಣೆ
2) ಬಣ್ಣದಲ್ಲಿ ಬದಲಾವಣೆ
3) ಅನಿಲದ ಬಿಡುಗಡೆ
4) ತಾಪದಲ್ಲಿ ಬದಲಾವಣೆ

ಮೇಲಿನ ಯಾವೆಲ್ಲವೂ ಸರಿಯಾಗಿದೆ?
ಉತ್ತರ ಸಂಕೇತಗಳು
ಎ) 1 ಮಾತ್ರ ಬಿ) 2 ಮತ್ತು 3 ಮಾತ್ರ
ಸಿ) 1 ಮತ್ತು 4 ಡಿ) 1 ರಿಂದ 4ರ ತನಕ ಎಲ್ಲವೂ

ಉತ್ತರ:- (ಡಿ) 1 ರಿಂದ 4ರ ತನಕ ಎಲ್ಲವೂ

2) ಉತ್ಪನ್ನಗಳೊಂದಿಗೆ ಉಷ್ಣ ಬಿಡುಗಡೆಯಾಗುವ ಕ್ರಿಯೆಗಳನ್ನು ಏನೆಂದು ಕರೆಯುವರು?

ಎ) ಬಹಿರುಷ್ಣ ಕ್ರಿಯೆ ಬಿ) ಅಂತರುಷ್ಣ ಕ್ರಿಯೆ
ಸಿ) ಸ್ಥಾನಪಲ್ಲಟ ಕ್ರಿಯೆ ಡಿ) ಪ್ರಕ್ಷೇಪನ ಕ್ರಿಯೆ.

ಉತ್ತರ:- (ಎ) ಬಹಿರುಷ್ಣ ಕ್ರಿಯೆ

3) ಕ್ರಿಯೆಗಳಿಂದ ವಸ್ತುಗಳು ಆಕ್ಸಿಜನ್ ಕಳೆದುಕೊಳ್ಳುವುದು ಅಥವಾ ಹೈಡ್ರೋಜನ್ ಪಡೆದುಕೊಳ್ಳುವುದಕ್ಕೆ ಏನೆಂದು ಕರೆಯುವರು?

ಎ) ಉತ್ಕರ್ಷಣ ಬಿ) ಅಪಕರ್ಷಣ
ಸಿ) ದ್ವಿಸ್ಥಾನಪಲ್ಲಟ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:- (ಬಿ) ಅಪಕರ್ಷಣ

4) ಕಬ್ಬಿಣದ ಚೂರುಗಳಿಗೆ ಸಾರಯುಕ್ತ ಹೈಡ್ರೋಕ್ಲೋರಿಕ್ ಆಮ್ಲವನ್ನು ಸೇರಿಸಿದಾಗ ಏನಾಗುತ್ತದೆ? ಸರಿಯಾದ ಉತ್ತರವನ್ನು ಗುರುತು ಹಾಕಿ

ಎ) ಹೈಡ್ರೋಜನ್ ಅನಿಲ ಮತ್ತು ಕಬ್ಬಿಣದ ಕ್ಲೋರೈಡ್ ಉಂಟಾಗುತ್ತದೆ
ಬಿ) ಕ್ಲೋರಿನ್ ಅನಿಲ ಮತ್ತು ಕಬ್ಬಿನದ ಹೈಡ್ರಾಕ್ಸೈಡ್ ಉಂಟಾಗುತ್ತದೆ.
ಸಿ) ಯಾವುದೇ ಕ್ರಿಯೆ ನಡೆಯುವುದಿಲ್ಲ
ಡಿ) ಕಬ್ಬಿಣದ ಲವಣ ಮತ್ತು ನೀರು ಉಂಟಾಗುತ್ತವೆ

ಉತ್ತರ:- (ಎ) ಹೈಡ್ರೋಜನ್ ಅನಿಲ ಮತ್ತು ಕಬ್ಬಿಣದ ಕ್ಲೋರೈಡ್ ಉಂಟಾಗುತ್ತದೆ

5) ಕ್ಯಾಲ್ಸಿಯಂ ಕಾರ್ಬೋನೇಟ್ ಅನ್ನು ಕಾಯಿಸಿದಾಗ .... ಮತ್ತು ....ಆಗಿ ವಿಭಜನೆಗೊಳ್ಳುವುದು

ಎ) ಕ್ಯಾಲ್ಸಿಯಂ ಆಕ್ಸೈಡ್ ಮತ್ತು ಕಾರ್ಬನ್ ಡೈ ಆಕ್ಸೈಡ್
ಬಿ) ಕ್ಯಾಲ್ಸಿಯಂ ಕ್ಲೋರೈಡ್ ಮತ್ತು ಆಕ್ಸಿಜನ್
ಸಿ) ಮ್ಯಾಂಗನಿಸ್ ಆಕ್ಸೈಡ್ ಮತ್ತು ಕಾರ್ಬನ್ ಡೈ ಆಕ್ಸೈಡ್

ಡಿ) ಕಾರ್ಬನ್ ಮೊನಾಕ್ಸೈಡ್ ಮತ್ತು ಹೈಡ್ರೋಜನ್

ಉತ್ತರ:-(ಎ) ಕ್ಯಾಲ್ಸಿಯಂ ಆಕ್ಸೈಡ್ ಮತ್ತು ಕಾರ್ಬನ್ ಡೈ ಆಕ್ಸೈಡ್

6) ಕಬ್ಬಿಣವು ತಾಮ್ರದ ಸಲ್ಫೇಟ್‌ನಲ್ಲಿರುವ ತಾಮ್ರವನ್ನು ಸ್ಥಾನಪಲ್ಲಟಗೊಳಿಸಿ ಕಬ್ಬಿಣದ ಸಲ್ಫೇಟ್ ಆಗುವುದರಿಂದ ದ್ರಾವಣದ.................. ಆಗುವುದು

ಎ) ಅಳತೆ ಬದಲಾವಣೆ ಬಿ) ಕಿಣ್ವ ನಾಶವಾಗುವುದು
ಸಿ) ಬಣ್ಣ ಬದಲಾವಣೆ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:-(ಸಿ) ಬಣ್ಣ ಬದಲಾವಣೆ

7) Fe2o2 + 2Al Al2 + 2 Fe
ಮೇಲಿನ ಕ್ರಿಯೆಯು ಇದಕ್ಕೆ ಉದಾಹರಣೆಯಾಗಿದೆ.
ಎ) ಸಂಯೋಗ ಕ್ರಿಯೆ ಬಿ) ದ್ವಿ ಸ್ಥಾನಪಲ್ಲಟ ಕ್ರಿಯೆ
ಸಿ) ವಿಭನೆ ಕ್ರಿಯೆ ಡಿ) ಸ್ಥಾನಪಲ್ಲಟ ಕ್ರಿಯೆ

ಉತ್ತರ (ಡಿ) ಸ್ಥಾನಪಲ್ಲಟ ಕ್ರಿಯೆ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ರಾಸಾಯನಿಕ ಕ್ರಿಯೆ ಎಂದರೇನು?
ಉತ್ತರ:- ಒಂದು ವಸ್ತುವಿನ ರಾಸಾಯನಿಕ ಗುಣಗಳಲ್ಲಿ ಬದಲಾವಣೆ ಉಂಟು ಮಾಡುವ ಕ್ರಿಯೆಯನ್ನು ರಾಸಾಯನಿಕ ಕ್ರಿಯೆ ಎನ್ನುವರು.

2) ಕಬ್ಬಿಣದ ವಸ್ತುಗಳಿಗೆ ಬಣ್ಣವನ್ನು ಏಕೆ ಹಚ್ಚುತ್ತಾರೆ?
ಉತ್ತರ:- ತುಕ್ಕು ಹಿಡಿಯುವುದನ್ನು ತಡೆಗಟ್ಟಲು ಕಬ್ಬಿಣದ ವಸ್ತುಗಳಿಗೆ ಬಣ್ಣ ಹಚ್ಚುತ್ತಾರೆ.

3) ಪ್ರಕ್ಷೇಪನ ಕ್ರಿಯೆ ಎಂದರೇನು?
ಉತ್ತರ:- ರಾಸಾಯನಿಕ ಕ್ರಿಯೆಯಲ್ಲಿ ಜಲ ವಿಲೀನಗೊಳ್ಳದ ವಸ್ತು ಉಂಟಾಗುವುದನ್ನು ಪ್ರಕ್ಷೇಪನ ಕ್ರಿಯೆ ಎನ್ನುವರು

4) ಯಾವುದನ್ನು ಉತ್ಕರ್ಷಣ ಮತ್ತು ಅಪಕರ್ಷಣ ಕ್ರಿಯೆ ಎನ್ನುವರು?
ಉತ್ತರ:- ರಾಸಾಯನಿಕ ಕ್ರಿಯೆಯಲ್ಲಿ ವಸ್ತುವೊಂದು ಆಕ್ಸಿಜನ್ ಪಡೆದುಕೊಂಡರೆ ಅದು ಉತ್ಕರ್ಷಣಗೊಂಡಿದೆ ಎನ್ನುತ್ತೇವೆ. ರಾಸಾಯನಿಕ ಕ್ರಿಯೆಯಲ್ಲಿ ವಸ್ತುವೊಂದು ಆಕ್ಸಿಜನ್ ಕಳೆದುಕೊಂಡರೆ ಅದು ಅಪಕರ್ಷಣಗೊಂಡಿದೆ ಎನ್ನುತ್ತೇವೆ.

5) ರೆಡಾಕ್ಸ್ ಕ್ರಿಯೆಗಳ ಬಗ್ಗೆ ಬರೆಯಿರಿ
ಉತ್ತರ:- ರಾಸಾಯನಿಕ ಕ್ರಿಯೆಯಲ್ಲಿ ಒಂದು ಪ್ರತಿವರ್ತಕವು ಉತ್ಕರ್ಷಣಗೊಂಡರೆ ಮತ್ತೊಂದು ಪ್ರತಿವರ್ತಕವು ಅಪಕರ್ಷಣ ಗೊಳ್ಳುತ್ತದೆ ಇಂತಹ ಕ್ರಿಯೆಗಳನ್ನು ಉತ್ಕರ್ಷಣ-ಅಪಕರ್ಷಣ ಅಥವಾ ರೆಡಾಕ್ಸ್ ಕ್ರಿಯೆಗಳು ಎನ್ನುವರು

6) ಒಂದೊಂದು ಉದಾಹರಣೆಯೊಂದಿಗೆ ಇವುಗಳನ್ನು ವಿವರಿಸಿ
ಅ) ನಶಿಸುವಿಕೆ ಬ) ಕಮಟುವಿಕೆ

ಉತ್ತರ:-ನಶಿಸುವಿಕೆ:- ಲೋಹಗಳು ತಮ್ಮ ಸುತ್ತಲಿನ ತೇವಾಂಶ, ಆಮ್ಲಗಳ ಪರಿಣಾಮ ತಮ್ಮ ಹೊಳಪನ್ನು ಕಳೆದುಕೊಂಡು ಕ್ರಮೇಣ ನಾಶವಾಗಲು ಆರಂಭಿಸುತ್ತವೆ ಈ ಪ್ರಕ್ರಿಯೆಗೆ ನಶಿಸುವಿಕೆ ಎನ್ನುವರು. ಉದಾ:- ಕಬ್ಬಿಣ ತುಕ್ಕು ಹಿಡಿಯುವುದು

ಕಮಟುವಿಕೆ:- ಕೊಬ್ಬು ಮತ್ತು ಎಣ್ಣೆ ಪದಾರ್ಥಗಳು ಉತ್ಕರ್ಷಣೆಗೆ ಒಳಗಾಗಿ ವಾಸನೆ ಮತ್ತು ರುಚಿಯಲ್ಲಿ ಬದಲಾವಣೆ ಹೊಂದುವುದನ್ನು ಕಮಟುವಿಕೆ ಎನ್ನುವರು. ಉದಾ:- ಹಲವು ದಿನಗಳಿಂದ ಸಂಗ್ರಹಿಸಿಟ್ಟ ಎಣ್ಣೆಯಿಂದ ತಯಾರಿಸಿದ ಪದಾರ್ಥಗಳು ಕಮಟುವಿಕೆಗೆ ಒಳಗಾಗಿ ತನ್ನ ಮೂಲ ರುಚಿ ಹಾಗೂ ವಾಸನೆಯನ್ನು ಕಳೆದುಕೊಂಡು ತಿನ್ನಲು ಯೋಗ್ಯವಲ್ಲದವುಗಳಾಗಿ ಬದಲಾಗುತ್ತವೆ

7) ಮೆಗ್ನೇಷಿಯಂ ಪಟ್ಟಿಯನ್ನು ಗಾಳಿಯಲ್ಲಿ ಉರಿಸುವ ಮೊದಲು ಸ್ವಚ್ಛಗೊಳಿಸಬೇಕು. ಏಕೆ?
ಉತ್ತರ:- ಮೆಗ್ನೇಷಿಯಂ ಪಟ್ಟಿಯನ್ನು ಗಾಳಿಗೆ ತೆರೆದಿಟ್ಟಾಗ ಆಕ್ಸಿಜನ್ನೊಡನೆ ವರ್ತಿಸಿ ಮೇಲ್ಪದರವು ಮೆಗ್ನೇಷಿಯಂ ಆಕ್ಸೈಡ್ ಆಗಿರುತ್ತದೆ. ಆದ್ದರಿಂದ ಅದನ್ನು ಸ್ವಚ್ಛಗೊಳಿಸಬೇಕು

(ಮುಂದುವರಿಯುವುದು.......)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

II PUC MATHEMATICS

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

MATRICES

1. Write a brief note on matrix.

Ans:- A matrix is an ordered rectangular array of numbers or functions called elements, enclosed within brackets. They are denoted by capital letters A, B, C etc.,

For ex: $A=\begin{bmatrix}1 & 2 & 3\\ 4 & 5 & 6\end{bmatrix}$ is a matrix of 2 rows i.e., the horizontally arranged numbers and 3 columns i.e., the vertically arranged numbers.

The rows are denoted by 'm' and the columns are denoted by 'n', then the order of the matrix is said to be 'm x n' read as m cross n (or) m by n.

Therefore the order of the above matrix is 2 x 3.

In general the matrix is briefly denoted as $[a_{ij}]$; i=1, 2, ...m and j= 1, 2, ...n

Where 'i' represents the number of rows and 'j' represents the number of columns.

2. What is a unit matrix?

Ans:- The matrix of the form $\begin{bmatrix}1 & 0\\ 0 & 1\end{bmatrix}$ is called a unit matrix and is denoted by I.

3. What is a Row matrix?

Ans:- A matrix having only one row is called row matrix.

Eg: $[1 \quad 2 \quad 3]$ is a row matrix of order 1 x 3.

In general, $B=[b_{ij}]_{1\times n}$ is a row matrix of the order 1 x n.

4. What is a Column matrix?

Ans:- A matrix having only one column is called column matrix.

Eg: $\begin{bmatrix}1\\ 2\\ 3\end{bmatrix}$ is a column matrix of order 3 x 1.

In general, $A=[a_{ij}]_{m\times 1}$ is a column matrix of the order m x 1.

5. What is a Zero or Null matrix?

Ans:- A matrix in which all the elements are zeros is zero or null matrix and denoted by O.

Eg: $0=\begin{bmatrix}0 & 0 & 0\\ 0 & 0 & 0\end{bmatrix}$ is zero matrix of order 2 x 3

Problems:-

1. In the matrix $\begin{bmatrix}2 & 5 & 19 & -7\\ 35 & -2 & \frac{5}{2} & 12\\ \sqrt{3} & 1 & -5 & 17\end{bmatrix}$

Write: (a) the order of the matrix
(b) the number of elements
(c) write the elements a_{13}, a_{21}, a_{33}, a_{24}, a_{23}

Soln:- Given matrix is

$$\begin{bmatrix}2 & 5 & 19 & -7\\ 35 & -2 & \frac{5}{2} & 12\\ \sqrt{3} & 1 & -5 & 17\end{bmatrix}$$

Number of rows is 3; number of columns is 4;
Hence, the order of the matrix is 3 x 4.
The number of elements is 12.
The elements a_{13} is 19; a_{21} is 35;
a_{33} is -5; a_{24} is 12;
a_{23} is $\frac{5}{2}$

Answer the following:-

1. What is a rectangular matrix?

Ans:- A matrix in which the number of rows is not equal to the number of columns is called the rectangular matrix.

Eg:- (1) $A=\begin{bmatrix}a & h & g\\ -h & g & f\end{bmatrix}_{2\times 3}$

(2) $\begin{bmatrix}2 & 4\\ 5 & 6\\ 1 & 8\end{bmatrix}_{3\times 2}$

2. What is a Square matrix?

Ans:- A matrix in which the number of rows and the number of columns are equal is called Square matrix.

Eg:- $\begin{bmatrix}1 & 2 & 3\\ 4 & 5 & 6\\ 7 & 8 & 9\end{bmatrix}$ is the matrix of order 3.

3. What is a Diagonal matrix?

Ans:- A square matrix in which all the non – diagonal elements are equal to zero is said to be a diagonal matrix.

Eg:- $\begin{bmatrix}a & 0 & 0\\ 0 & b & 0\\ 0 & 0 & c\end{bmatrix}$ is a diagonal matrix

4. What is a scalar matrix?

Ans:- A diagonal matrix in which all the diagonal elements are equal is called a scalar matrix.

Eg:- $\begin{bmatrix}a & 0 & 0\\ 0 & a & 0\\ 0 & 0 & a\end{bmatrix}$ is a scalar matrix

5. Write a note on the Equality of matrices.

Ans:- The two matrices $A=[a_{ij}]$ and $B=[b_{ij}]$ are said to be equal if

(i) They are of the same order.
(ii) Each element of A is equal to the corresponding element of B, that is $a_{ij}=b_{ij}$ for all i and j.

$$Eg:-\ A=\begin{bmatrix}a & b\\ c & d\end{bmatrix} \text{ and } B=\begin{bmatrix}5 & 6\\ 8 & 2\end{bmatrix}$$

A = B only if a=5, b=6, c=8 & d = 2

i.e., $a_{ij}=b_{ij}$ for each i and j

6. Write a brief note on the addition of two matrices.

Ans:- If A and B are matrices of the same order then A + B is defined to be a matrix obtained by adding the corresponding elements of A and B.

If A and B are matrices of the order m x n then A + B is also of the order m x n.

If $A=[a_{ij}]$; $B=[b_{ij}]$;

Wherein, i = 1, 2, 3.......m & j = 1, 2, 3........n then $A+B=[a_{ij}+b_{ij}]$;

Eg :–If $A=\begin{bmatrix}2 & 5\\ 7 & 9\end{bmatrix}$ & $B=\begin{bmatrix}5 & 6\\ 8 & 2\end{bmatrix}$

then A + B=?

$$Soln:-A+B=\begin{bmatrix}2+5 & 5+6\\ 7+8 & 9+2\end{bmatrix}=\begin{bmatrix}7 & 11\\ 15 & 11\end{bmatrix}$$

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಕೃಷ್ಣ: ಯೋಗಕ್ಷೇಮಗಳ ಬೆಳಕು

• ಎಸ್. ಸೂರ್ಯಪ್ರಕಾಶ ಪಂಡಿತ್

ನಮ್ಮಲ್ಲಿ ಅವತಾರದ ಕಲ್ಪನೆಯುಂಟು. ಧರ್ಮದ ಅವನತಿಯಾದಾಗ ಲೋಕದಲ್ಲಿ ಪುನಃ ಧರ್ಮಸ್ಥಾಪನೆಗಾಗಿ ದೇವರೇ ನಮ್ಮ ನಡುವೆ ಕಾಣಿಸಿಕೊಳ್ಳುತ್ತಾನೆ – ಎಂಬುದು ಈ ಕಲ್ಪನೆಯ ಸ್ವಾರಸ್ಯ. ಗಂಗೆ ಕೂಡ ಹೀಗೆ ಭೂಲೋಕದಲ್ಲಿ ಅವತರಿಸಿದವಳು; ಜೀವಿಗಳನ್ನು ಉದ್ಧಾರ ಮಾಡುತ್ತಿರುವವಳು (ಬೇಂದ್ರೆ ಅವರ 'ಗಂಗಾವತರಣ' ಕವನವನ್ನು ಇಲ್ಲಿ ಮೆಲುಕು ಹಾಕಿಕೊಳ್ಳಬಹುದು). ಇದೇ ರೀತಿ ಹಲವರು ದೇವತೆಗಳ ಅವತಾರ ನಡೆದಿದೆ, ನಡೆಯುತ್ತಲೂ ಇರುತ್ತದೆ ಎಂಬ ನಂಬಿಕೆ ನಮ್ಮ ಸಂಸ್ಕೃತಿಯದ್ದು. ಹೀಗೆ ನಡೆದ ಅವತಾರಗಳಲ್ಲಿ ವಿಷ್ಣುವಿನ ದಶಾವತಾರಗಳು ಬಹಳ ಪ್ರಸಿದ್ಧ. ಕೃಷ್ಣನ ಅವತಾರ ಈ ಹತ್ತು ಅವತಾರಗಳಲ್ಲಿಯೇ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಶ್ರೀಕೃಷ್ಣನು ಪೂರ್ಣಾವತಾರಿ.

ಶ್ರೀರಾಮನ ಅವತಾರವೂ ತುಂಬ ಪ್ರಸಿದ್ಧವೇ; ಆದರೆ ಶ್ರೀಕೃಷ್ಣನನ್ನೇ ಪೂರ್ಣಾವತಾರಿ ಎಂದು ಕರೆದಿರುವುದು ಸ್ವಾರಸ್ಯಕರವಾಗಿದೆ. ನಮ್ಮ ಜೀವನದ ಎಲ್ಲ ಆಯಾಮಗಳಲ್ಲೂ ತಾದಾತ್ಮ್ಯವನ್ನು ಸಾಧಿಸಬಲ್ಲವನ ವ್ಯಕ್ತಿತ್ವವೇ ಪೂರ್ಣವ್ಯಕ್ತಿತ್ವ. ಕೃಷ್ಣನಷ್ಟು ನಮ್ಮಲ್ಲಿ ಒಂದಾಗಿ ಬೆರೆಯಬಲ್ಲ ದೈವ ಇನ್ನೊಬ್ಬನಿಲ್ಲ. ಪ್ರತಿ ಕ್ಷಣವೂ ಮನುಷ್ಯನಾಗಲು ತವಕಿಸುವ ದೈವವೆಂದರೆ ಅದು ಶ್ರೀಕೃಷ್ಣನೇ ಹೌದು. ಅವನು ಎಷ್ಟೆಲ್ಲ ವಿಧಗಳಲ್ಲಿ ನಮ್ಮೊಂದಿಗೆ ಹೆಜ್ಜೆ ಹಾಕುತ್ತಾನೆ! ಸ್ನೇಹಿತನಾಗಿ, ಅಣ್ಣನಾಗಿ, ತಮ್ಮನಾಗಿ, ಮಗನಾಗಿ, ಸಾಕುಮಗನಾಗಿ, ತಂದೆಯಾಗಿ, ಗುರುವಾಗಿ, ಶಿಷ್ಯನಾಗಿ, ತುಂಟನಾಗಿ, ದೂತನಾಗಿ, ದನಕಾಯುವವನಾಗಿ, ಕಲಾವಿದನಾಗಿ, ವೀರನಾಗಿ – ಹೀಗೆ ಹಲವು ನೆಲೆಗಳಲ್ಲಿ ನಮ್ಮವನಾಗಬಲ್ಲ ದೈವ ಶ್ರೀಕೃಷ್ಣ; ಮಾತ್ರವಲ್ಲ, ಅವನು ಪ್ರೇಮಿಯೂ ಆಗಬಲ್ಲ. ದೇವರು ನಮ್ಮ ಪ್ರಿಯಕರನೂ ಆಗಬಹುದು ಎಂಬ ಕಲ್ಪನೆಯೇ ಸ್ವಾರಸ್ಯಕರವಾಗಿದೆ (ಪುತಿನ ಅವರ 'ಗೋಕುಲ ನಿರ್ಗಮನ'ವನ್ನು ಗಮನಿಸಬಹುದು); ಕೃಷ್ಣ ನಮ್ಮ ಹೃದಯವನ್ನು ಕದಿಯಬಲ್ಲ ದೇವರು; ಬೆಣ್ಣೆಯನ್ನೂ ಕದಿಯುವ ದೇವರು!

ಕೃಷ್ಣನ ಪೂರ್ಣಾವತಾರವನ್ನು ಎತ್ತಿಹಿಡಿಯುವ ಇನ್ನೊಂದು ಆಯಾಮವೂ ಉಂಟು. ಜೀವನವನ್ನು ಪರಿಪೂರ್ಣವಾಗಿ ಕಾಣಿಸಿದವನು ಅವನು. ಇದನ್ನು ನಾವು ಅವನು ಹಾಡಿನಲ್ಲಿ, ಎಂದರೆ 'ಭಗವದ್ಗೀತೆ'ಯಲ್ಲಿ ಕಾಣಬಹುದು. ಜೀವನದ ಸಾಕ್ಷಾತ್ಕಾರದ ಹಾದಿಯಲ್ಲಿ ಎರಡು ಧರ್ಮಗಳು ಒದಗುತ್ತವೆ; ಒಂದು: ಪ್ರವೃತ್ತಿಧರ್ಮ; ಇನ್ನೊಂದು: ನಿವೃತ್ತಿಧರ್ಮ. ಪ್ರವೃತ್ತಿಧರ್ಮದ ಗತಿಯೇ ಕ್ರಿಯಾಶೀಲತೆ; ಕರ್ಮಮಾರ್ಗ. ನಿವೃತ್ತಿಧರ್ಮದ ಗತಿ ಎಂದರೆ ಕರ್ಮಸನ್ಯಾಸ; ಅದುವೇ ತ್ಯಾಗಮಾರ್ಗ. ಈ ಎರಡರ ಸಮನ್ವಯವನ್ನು ನಾವು ಭಗವದ್ಗೀತೆಯಲ್ಲಿ ಕಾಣುತ್ತೇವೆ. ಇದನ್ನು ಶಂಕರಾಚಾರ್ಯರು ಗೀತಾಭಾಷ್ಯದ ಆರಂಭದಲ್ಲಿಯೇ ಧ್ವನಿಸಿದ್ದಾರೆ ಕೂಡ. ಸಂಸಾರಿಯಾದವನು ಹೇಗಿರಬೇಕು ಎಂಬುದಕ್ಕೂ ಗೀತೆಯಲ್ಲಿ ಮಾರ್ಗದರ್ಶನ ಸಿಗುತ್ತದೆ; ಸನ್ಯಾಸಿಗಳಿಗೂ ಉಪದೇಶ ದೊರೆಯುತ್ತದೆ. ಹೀಗಾಗಿ ಕೃಷ್ಣತತ್ತ್ವ ಎಂಬುದು ಕೇವಲ ಜೀವನದ ಯಾವುದೋ ಒಂದು ಮುಖಕ್ಕೆ ಒದಗುವ ಬೆಳಕು ಅಲ್ಲ; ಅದು ಸಮಗ್ರಜೀವನಕ್ಕೂ ಒದಗುವ ದರ್ಶನ. ಧರ್ಮದ ಸೊಗಸಿಗೂ ಸಂತಸಕ್ಕೂ ಸಂಭ್ರಮಕ್ಕೂ ಕರ್ತವ್ಯಕ್ಕೂ ಒಳಿತಿಗೂ ಒದಗಿದ ಮೂರ್ತರೂಪವೇ ಶ್ರೀಕೃಷ್ಣ. ಅವನು ದಿಟವಾದ ಅರ್ಥದಲ್ಲಿ 'ಲೋಕಗುರು'. ಗೀತೆಯಲ್ಲಿಯೇ ಬರುವ ಶ್ಲೋಕವೊಂದು ಹೀಗಿದೆ:

ಸುಖದುಃಖೇ ಸಮೇ ಕೃತ್ವಾ ಲಾಭಾಲಾಭೌ
ಜಯಾಜಯೌ ತತೋ ಯುದ್ಧಾಯ ಯುಜ್ಯಸ್ವ
ನೈವಂ ಪಾಪಮವಾಪ್ಸ್ಯಸಿ

'ಸುಖ-ದುಃಖಗಳನ್ನೂ ಲಾಭ–ನಷ್ಟಗಳನ್ನೂ ಸೋಲು-ಗೆಲುವುಗಳನ್ನೂ ಒಂದೇ ನಿಟ್ಟಿನಿಂದ ಕಂಡು ಮತ್ತೆ ಹೋರಾಡಲು ತೊಡಗು. ಆಗ ನಿನಗೆ ಯಾವ ಪಾಪವೂ ತಟ್ಟದು' – ಇದು ಅದರ ಸರಳ ತಾತ್ಪರ್ಯ. ಇದು ನಮಗೆ ಎಂದಿಗೂ ಬೇಕಾದ ಉಪದೇಶವೇ ಆಗಿದೆ. ಕೃಷ್ಣ ಕೇವಲ ಉಪದೇಶವನ್ನಷ್ಟೆ ಮಾಡಿದವನಲ್ಲ; ತನ್ನ ಉಪದೇಶಕ್ಕೆ ತಾನೇ ಉದಾಹರಣೆಯೂ ಆದವನು. ಜೀವನದಲ್ಲಿ ಎಷ್ಟೆಲ್ಲ ಕಷ್ಟಗಳನ್ನು, ಅಪಮಾನಗಳನ್ನು ಎದುರಿಸಿದರೂ ಅವನು ತನ್ನ ಕರ್ತವ್ಯಪ್ರಜ್ಞೆಯಿಂದ ದೂರ ಸರಿದವನಲ್ಲ. ಅವನಷ್ಟು ಕಷ್ಟಗಳನ್ನು ಅನುಭವಿಸಿದವರು ಬಹುಶಃ ಇತಿಹಾಸದಲ್ಲಿ ಇನ್ನೊಬ್ಬರು ಇರಲಾರರು. ಅವನು ಹುಟ್ಟುವುದಕ್ಕೂ ಮೊದಲೇ ಸಾವಿನ ಮಡಿಲಿನಲ್ಲಿ ಬಿದ್ದಿದ್ದವನು. ಎಷ್ಟೆಲ್ಲ ಬಂಧುಗಳ, ಸ್ನೇಹಿತರ, ರಾಜಮಹಾರಾಜರ ನಡುವೆ ಬದುಕಿದ್ದವನು ಕೊನೆಗೆ ಪ್ರಾಣವನ್ನು ತ್ಯಾಗ ಮಾಡುವಾಗ ಆತ್ಮೀಯರು ಯಾರೂ ಅವನ ಸಮೀಪದಲ್ಲಿ ಇರಲಿಲ್ಲ. ಈ ಹುಟ್ಟು–ಸಾವುಗಳ ನಡುವೆ ಅವನು ನೆಮ್ಮದಿಯಾಗಿ ಇದ್ದ ದಿನಗಳೂ ಕಡಿಮೆಯೇ; ನಿರಂತರವಾಗಿ ಒಂದಲ್ಲ ಒಂದು ಚಟುವಟಿಕೆಯಲ್ಲಿಯೇ ತೊಡಗಿಕೊಂಡಿದ್ದ. ಹೀಗಿದ್ದರೂ ತನ್ನ ವೈಯಕ್ತಿಕ ಸುಖ–ದುಃಖಗಳನ್ನು ಗಣನೆಗೆ ತೆಗೆದುಕೊಳ್ಳದೆ, ಕರ್ತವ್ಯಬುದ್ಧಿಯನ್ನು ಮೆರೆದವನು ಶ್ರೀಕೃಷ್ಣ. ದೈವತ್ವದ ಸ್ಥಿತಿಯನ್ನೂ, ಮಾನುಷತ್ವದ ಗತಿಯನ್ನೂ ಏಕಕಾಲದಲ್ಲಿ ಕಾಣಿಸಿದವನು ಅವನು.

ಕೃಷ್ಣನೊಬ್ಬನು ಇಲ್ಲದೆ ಹೋಗಿದಿದ್ದರೆ ನಮ್ಮ ಸಂಸ್ಕೃತಿ ತುಂಬ ಸಪ್ಪೆಯಾಗಿರುತ್ತಿತ್ತು. ನಮ್ಮ ಸಂಸ್ಕೃತಿಗೆ ರಸಶಕ್ತಿಯನ್ನು ತುಂಬಿದ್ದು ಕೃಷ್ಣತತ್ತ್ವವೇ ಹೌದು. ಈ ತತ್ತ್ವದಲ್ಲಿಯೇ ನಮ್ಮೆಲ್ಲರ ಯೋಗಕ್ಷೇಮಗಳೂ ಅಡಕವಾಗಿವೆ ಎಂಬ ಭರವಸೆಯನ್ನು ಕೊಟ್ಟಿದ್ದು ಅವನ ಜೀವನ. ಹೀಗಾಗಿ ಕೃಷ್ಣನ ಜೀವನ ಮತ್ತು ದರ್ಶನ – ಎರಡೂ ನಮ್ಮ ಪಾಲಿಗೆ ಪ್ರತಿದಿನದ ಹಬ್ಬವೇ ಸರಿ.

ಇಂದು ಕೃಷ್ಣ ಜನ್ಮಾಷ್ಟಮಿ

ವಿದ್ಯುತ್ ಪರಿವರ್ತಕ ಕಾರ್ಯಾರಂಭ

ಒಂದನೇ ಪುಟದಿಂದ...

ಸಿವಿಲ್ ಕಾಮಗಾರಿಗೆ ಬಿಬಿಎಂಪಿ ಅನುದಾನ ಒದಗಿಸಿತ್ತು. ಕೇಂದ್ರದ ನಿರ್ಮಾಣ ಕಾಮಗಾರಿ 2022ರ ಮೇ 20ರಿಂದ ಆರಂಭಗೊಂಡಿತ್ತು. ಇದು 14 ಮೀಟರ್ ಉದ್ದ, 5 ಮೀಟರ್ ಅಗಲ ಮತ್ತು 4 ಮೀಟರ್ ಆಳ ಇದೆ.

'ಈ ಯೋಜನೆಯಡಿ ವಿತರಣಾ ಪರಿವರ್ತಕಗಳು, ರಿಂಗ್ ಮೇನ್ ಯೂನಿಟ್‌ಗಳು ಸೇರಿದಂತೆ ಸಂಪೂರ್ಣ ವ್ಯವಸ್ಥೆಯನ್ನು ನೆಲದಡಿಯಲ್ಲಿ ಅಳವಡಿಸಲಾಗಿದೆ. ಇದರಿಂದ ವಿದ್ಯುತ್ ಅವಘಡಗಳನ್ನು ತಪ್ಪಿಸುವ ಜತೆಗೆ ವಿದ್ಯುತ್ ಪೂರೈಕೆ ನಷ್ಟವನ್ನು ತಗ್ಗಿಸಬಹುದಾಗಿದೆ. ಗುಣಮಟ್ಟದ ವಿದ್ಯುತ್ ಪೂರೈಸಲು ಕೂಡ ಈ ಯೋಜನೆ ಸಹಕಾರಿಯಾಗಲಿದೆ' ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.

'ಪಾದಚಾರಿ ಮಾರ್ಗದ ನಾಲ್ಕು ಮೀಟರ್ ಅಡಿ ಆಳದಲ್ಲಿ ವಿದ್ಯುತ್ ಪರಿವರ್ತಕ ಅಳವಡಿಸಲಾಗಿದೆ. ಈ ವ್ಯವಸ್ಥೆಗೆ ಹೆಚ್ಚಿನ ಜಾಗದ ಅಗತ್ಯವಿಲ್ಲ. ಕಡಿಮೆ ಜಾಗದಲ್ಲಿ ಸುರಕ್ಷಿತವಾಗಿರುವ ವ್ಯವಸ್ಥೆ ಇದಾಗಿದೆ. ಅಗ್ನಿ ದುರಂತಗಳು ಸಂಭವಿಸದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಜತೆಗೆ, ಗಾಳಿಯ ವ್ಯವಸ್ಥೆಯೂ ಇದೆ. ನೀರಿನ ಸಂಪು ಮಾದರಿಯಲ್ಲಿ ದಪ್ಪನೆಯ ಕಾಂಕ್ರೀಟ್‌ನ ನಾಲ್ಕು ಗೋಡೆಗಳನ್ನು ನಿರ್ಮಿಸಿ ವಿದ್ಯುತ್ ಪರಿವರ್ತಕ ಸ್ಥಾಪಿಸಲಾಗಿದೆ. ಇಲ್ಲಿ ಸ್ಲ್ಯಾಬ್ ಹಾಕಿರುವುದರಿಂದ ಈ ಸ್ಥಳದ ಮೇಲೆಯೇ ನಡೆ-ನಾಗರಿಕರು ಯಾವುದೇ ರೀತಿಯ ತೊಂದರೆ ಇಲ್ಲದೆಯೇ ದಾಡಬಹುದಾಗಿದೆ' ಎಂದು ವಿವರಿಸಿದ್ದಾರೆ.

ಕಾರ್ಯ ನಿರ್ವಹಣೆ ಹೇಗೆ?

ಒಂದನೇ ಪುಟದಿಂದ...

ವಿದ್ಯುತ್ ಪರಿವರ್ತಕವು ಸಂಪೂರ್ಣವಾಗಿ ತಾಪಮಾನ ನಿಯಂತ್ರಣ ವ್ಯವಸ್ಥೆಯನ್ನು ಹೊಂದಿದೆ. ಪರಿವರ್ತಕ ಇರುವ ಸ್ಥಳದಲ್ಲಿ ತಾಪಮಾನ ಹೆಚ್ಚಾಗದ ರೀತಿಯ ತಂತ್ರಜ್ಞಾನ ಅಳವಡಿಸಲಾಗಿದೆ. 40 ಡಿಗ್ರಿ ತಾಪಮಾನ ಮೀರಿದರೆ ಸಿಬ್ಬಂದಿಗೆ ಎಚ್ಚರಿಕೆ ಸಂದೇಶವನ್ನು ರವಾನಿಸುವ ವ್ಯವಸ್ಥೆ ಮಾಡಲಾಗಿದೆ.

ಒಂದು ವೇಳೆ, ನೀರು ಸಂಗ್ರಹವಾದರೆ ಸ್ವಯಂಚಾಲಿತವಾಗಿ ಹೊರಗೆ ಹಾಕಲು 1 ಎಚ್.ಪಿ. ವಾಟರ್ ಪಂಪ್ ಅಳವಡಿಸಲಾಗಿದೆ.

ಪ್ರಯೋಜನಗಳು
- ಹೆಚ್ಚು ಸುರಕ್ಷಿತ ಅತಿಕಡಿಮೆ ಜಾಗದಲ್ಲಿ ನಿರ್ಮಾಣ
- ಯಾವುದೇ ರೀತಿಯ ಹವಾಮಾನ ವೈಪರೀತ್ಯ ಸ್ಥಿತಿಯನ್ನು ಎದುರಿಸಲು ಸಾಧ್ಯ
- ನೆಲದಡಿಯಲ್ಲಿರುವುದರಿಂದ ನಗರ ಸೌಂದರ್ಯ ಕಾಪಾಡಲು ಅನುಕೂಲ

ಸವಾಲುಗಳು
- ಸಿಬ್ಬಂದಿ ಮತ್ತು ಉಪಕರಣಗಳ ಸುರಕ್ಷತೆ
- ಸಮರ್ಪಕ ತಾಪಮಾನ ಮತ್ತು ಗಾಳಿ ವ್ಯವಸ್ಥೆ ಒದಗಿಸುವಿಕೆ
- ಅಗ್ನಿ ಮತ್ತು ಒಳಚರಂಡಿ ವ್ಯವಸ್ಥೆಯ ನಿಯಂತ್ರಣ

ಉಪಕರಣಗಳು
- 500 ಕೆವಿಎ ಡ್ರೈ ಮಾದರಿ ಪರಿವರ್ತಕ
- 11 ಕೆವಿ ನೆಲದಡಿಯಲ್ಲಿನ ಕೇಬಲ್‌ಗಳು
- ಎಫ್‌ಆರ್‌ಪಿ ಬ್ಯಾಟರಿಗಳೊಂದಿಗೆ 2 ಕೆವಿಎ ಯುಪಿಎಸ್

ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ದಂಡೋತಿ ಹತ್ತಿರದ ಕಾಗಿಣಾ ನದಿಯಲ್ಲಿ ಮಂಗಳವಾರ ಪ್ರವಾಹ ಕಡಿಮೆಯಾಗಿ ಸಾರಿಗೆ ಸಂಚಾರಕ್ಕೆ ಸೇತುವೆ ಮುಕ್ತವಾಗಿದೆ (ಎಡಚಿತ್ರ). ಮಂಗಳೂರಿನಲ್ಲಿ ಸುರಿದ ಮಳೆಯಲ್ಲಿಯೇ ವಾಹನಗಳು ಸಾಗಿದವು –ಪ್ರಜಾವಾಣಿ ಚಿತ್ರಗಳು

₹5 ಲಕ್ಷ ಪರಿಹಾರ ಘೋಷಣೆ ಬಳಿಕ ರೈತರ ಆತ್ಮಹತ್ಯೆ ಹೆಚ್ಚಳ: ಸಚಿವ

ಒಂದನೇ ಪುಟದಿಂದ...

'ಹೀಗೆ ದಾಖಲಾದ ಪ್ರಕರಣಗಳಲ್ಲಿ ಸತ್ಯಾಂಶ ಕಡಿಮೆ ಇರುವುದು ಗಮನಕ್ಕೆ ಬಂದಿದೆ' ಎಂದು ಅವರು ಬೆಳಿಗ್ಗೆ ಸುದ್ದಿಗಾರರಿಗೆ ತಿಳಿಸಿದ್ದರು.

'ರಾಜ್ಯದಲ್ಲಿ 2020ರಲ್ಲಿ 500, 2021ರಲ್ಲಿ 595, 2022ರಲ್ಲಿ 651 ಮತ್ತು 2023ರಲ್ಲಿ 412 ರೈತ ಆತ್ಮಹತ್ಯೆ ಪ್ರಕರಣಗಳು ದಾಖಲಾಗಿವೆ. ನಿಜವಾದ ರೈತ ಆತ್ಮಹತ್ಯೆ ಪ್ರಕರಣಗಳಿಗೆ, ಪರಿಹಾರ ಕೊಡಲು ಸರ್ಕಾರ ಸಿದ್ಧವಿದೆ. ಹಾವೇರಿ ಜಿಲ್ಲೆಯಲ್ಲಿ 2022–23ನೇ ಸಾಲಿನಲ್ಲಿ 122 ಪ್ರಕರಣ ಮತ್ತು 2023–24ನೇ ಸಾಲಿನಲ್ಲಿ 33 ಪ್ರಕರಣಗಳು ವರದಿಯಾಗಿವೆ. ಹಾವೇರಿ ಜಿಲ್ಲೆಯಲ್ಲಿ ರೈತರ ಆತ್ಮಹತ್ಯೆ ಇವತ್ತು ನಿನ್ನೆಯದಲ್ಲ, ಹಿಂದೆಯೂ ಆಗಿದೆ' ಎಂದಿದ್ದರು.

ಸೈಲೊ ಘಟಕ–ತನಿಖೆಗೆ ಆದೇಶ: 'ಸೈಲೊ ಘಟಕಗಳು ನಿರುಪಯುಕ್ತ ಆಗಿರುವ ವರದಿಯನ್ನು 'ಪ್ರಜಾವಾಣಿ' ಪತ್ರಿಕೆಯಲ್ಲಿ ಓದಿದ್ದೇನೆ. ತನಿಖೆಗೆ ಈಗಾಗಲೇ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಹಿಂದಿನ ಸರ್ಕಾರದಲ್ಲಿ ಈ ಯೋಜನೆ ಜಾರಿಗೆ ಬಂದಿದೆ. ನಬಾರ್ಡ್ ಹಣ ಬಂದಾಗ ಇಂಥ ಲೋಪಗಳು ಆಗಿವೆ. ಸೈಲೊ ಘಟಕಗಳು ಉಪಯುಕ್ತವಾಗುವಂತೆ ಮಾರ್ಪಾಡು ಮಾಡಲು ತಿಳಿಸಿದ್ದೇನೆ' ಎಂದರು.

ಹಾವೇರಿಯಲ್ಲಿ ಮಂಗಳವಾರ ಸಚಿವ ಶಿವಾನಂದ ಪಾಟೀಲ ಅವರಿಗೆ ರೈತ ಮುಖಂಡರು ಮುತ್ತಿಗೆ ಹಾಕಿದರು

ಬೆಂಗಳೂರಿನ ಕೆಲವು ರಸ್ತೆಗಳು ಜಲಾವೃತ • ಕಲ್ಯಾಣ ಕರ್ನಾಟಕದಲ್ಲಿ ತಗ್ಗಿದ ವರುಣ

ರಾಜ್ಯದ ವಿವಿಧೆಡೆ ಮಳೆ: ಇಳೆಗೆ ತಂಪು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಉತ್ತರ, ದಕ್ಷಿಣ ಒಳನಾಡು, ಕರಾವಳಿ ಮತ್ತು ಮಲೆನಾಡು ಭಾಗಗಳಲ್ಲಿ ಮಂಗಳವಾರ ಮಳೆಯಾಗಿದ್ದು, ಭೂಮಿಗೆ ತಂಪೆರೆದಿದೆ. ದಕ್ಷಿಣ ಕನ್ನಡ, ದಾವಣಗೆರೆ, ಬೆಂಗಳೂರು, ಚಿತ್ರದುರ್ಗ ಸೇರಿದಂತೆ ಕೆಲ ಜಿಲ್ಲೆಗಳಲ್ಲಿ ಉತ್ತಮ ಮಳೆಯಾಗಿದ್ದು, ಉಳಿದೆಡೆ ಸಾಧಾರಣ ಮಳೆ ಸುರಿದಿದೆ.

ಬೆಂಗಳೂರು ನಗರದಲ್ಲಿ ಗುಡುಗು ಮಿಂಚು ಸಹಿತ ಧಾರಾಕಾರ ಮಳೆಯಾಗಿದೆ. ಭಾರೀ ಮಳೆಯಿಂದ ಪ್ರಮುಖ ರಸ್ತೆಗಳಲ್ಲಿ ಹೊಳೆಯಂತೆ ನೀರು ಹರಿಯಿತು. ಕೆಳಸೇತುವೆಗಳಲ್ಲಿ ಅಪಾರ ಪ್ರಮಾಣದ ನೀರು ಸಂಗ್ರಹಗೊಂಡು, ವಾಹನ ಸವಾರರು ತೊಂದರೆ ಅನುಭವಿಸಿದರು. ರಾತ್ರಿ ಮಳೆಯ ಅಬ್ಬರ ಜೋರಾಗಿತ್ತು. ಬಸವನಗುಡಿ, ಬನಶಂಕರಿ, ಜಯನಗರ, ಮಡಿವಾಳ, ಚಿಕ್ಕಪೇಟೆ, ಗಾಂಧಿನಗರ, ಮೆಜೆಸ್ಟಿಕ್, ಶೇಷಾದ್ರಿಪುರ, ಮಲ್ಲೇಶ್ವರ ಭಾಗಗಳಲ್ಲಿ ಭಾರಿ ಮಳೆಯಾಗಿದೆ.

ಕನಕಪುರ ಮುಖ್ಯರಸ್ತೆಯ ಯಶಸ್ವಿ ಶಾಲೆಯ ಬಳಿ ಅಪಾರ ಪ್ರಮಾಣದ ನೀರು ಸಂಗ್ರಹಗೊಂಡು ವಾಹನಗಳು ಪರ್ಯಾಯ ಮಾರ್ಗದಲ್ಲಿ ಸಂಚರಿಸಿದವು. ಹೆಣ್ಣೂರಿನ ಪೂರ್ವಾಂಕರ ಅಪಾರ್ಟ್‌ಮೆಂಟ್ ಬಳಿಯ ರಸ್ತೆಯು ಜಲಾವೃತಗೊಂಡು ವಾಹನ ಸಂಚಾರ ಬಂದ್ ಆಗಿತ್ತು.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ನಗರ, ಮೂಲ್ಕಿ, ಬಂಟ್ವಾಳ, ಬಜಪೆಯಲ್ಲಿ ಸಾಧಾರಣ ಮಳೆಯಾಗಿದೆ. ಚಿಕ್ಕಮಗಳೂರು, ಶೃಂಗೇರಿ, ಕೊಪ್ಪ, ಅಜ್ಜಂಪುರ, ನರಸಿಂಹರಾಜಪುರ, ತರೀಕೆರೆ ಸುತ್ತಮುತ್ತಲೂ ಮಳೆಯಾಗಿದೆ.

ದಾವಣಗೆರೆ ನಗರ ಸೇರಿದಂತೆ ಜಿಲ್ಲೆಯ ಹರಿಹರ, ಚನ್ನಗಿರಿ, ಜಗಳೂರು, ಸಂತೇಬೆನ್ನೂರು, ಮಾಯಕೊಂಡ, ತ್ಯಾವಣಿಗೆ ಭಾಗಗಳಲ್ಲಿ ಉತ್ತಮ ಮಳೆಯಾಗಿದ್ದರೆ ಮಲೇಬೆನ್ನೂರು ಭಾಗದಲ್ಲಿ ಸಾಧಾರಣ ಮಳೆಯಾಗಿದೆ. ಮಳೆ ಕೊರತೆಯಿಂದಾಗಿ ಬಾಡಲು ಶುರುವಾಗಿದ್ದ ಮೆಕ್ಕೆ ಜೋಳ ಬೆಳೆಗೆ ಇದರಿಂದ ಅನುಕೂಲವಾಗಲಿದ್ದು, ರೈತರು ನಿಟ್ಟುಸಿರು ಬಿಡುವಂತಾಗಿದೆ.

ಈಗಾಗಲೇ ಬೆಳೆ ನಾಶದಿಂದ ಕಂಗೆಟ್ಟು, ಹಿಂಗಾರು ಬೆಳೆಗಳಾದ ಜೋಳ, ಸೂರ್ಯಕಾಂತಿ, ಕಡಲೆ, ಅಲಸಂದೆಯತ್ತ ಮುಖ ಮಾಡಿರುವ ರೈತರಿಗೆ ಈಗ ಸುರಿಯುತ್ತಿರುವ ಮಳೆಯಿಂದ ಅನುಕೂಲವಾಗಲಿದೆ.

ಚಿತ್ರದುರ್ಗ ಜಿಲ್ಲೆಯ ಚಿಕ್ಕಜಾಜೂರು ಮತ್ತು ಬಿ.ದುರ್ಗ ಭಾಗದಲ್ಲಿ ಉತ್ತಮ ಮಳೆ ಸುರಿದಿದ್ದು, ನಾಯಕನಹಟ್ಟಿ ಭಾಗದಲ್ಲಿ ತುಂತುರು ಮಳೆಯಾಗಿದೆ. ಶಿವಮೊಗ್ಗ ಜಿಲ್ಲೆಯ ಹಲವೆಡೆ ಸಾಧಾರಣ ಮಳೆಯಾಗಿದೆ.

ತಗ್ಗಿದ ಮಳೆ: ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಾದ ಕಲಬುರಗಿ, ಯಾದಗಿರಿ, ಕೊಪ್ಪಳ, ರಾಯಚೂರು ಜಿಲ್ಲೆಗಳಲ್ಲಿ ಮಂಗಳವಾರ ಮಳೆ ಪ್ರಮಾಣ ತಗ್ಗಿದೆ. ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನಲ್ಲಿ ಕಾಗಿಣಾ ನದಿಯ ಪ್ರವಾಹ ಕಡಿಮೆಯಾಗಿದ್ದು, ಸೇತುವೆಯು ಸಂಚಾರಕ್ಕೆ ಮುಕ್ತವಾಗಿದೆ.

ಬೀದರ್ ಜಿಲ್ಲೆಯಾದ್ಯಂತ ಬುಧವಾರ ಸತತ ಮೂರನೇ ದಿನವೂ ಉತ್ತಮ ವರ್ಷಧಾರೆಯಾಗಿದೆ. ಭಾಲ್ಕಿ ತಾಲ್ಲೂಕಿನ ಚಳಕಾಪುರದಲ್ಲಿ ಮನೆಯ ಚಾವಣಿ ಕುಸಿದು ಬಿದ್ದಿದೆ.

ವಿಮಾನ ನಿಲ್ದಾಣದ ಹೊಸ 'ವಾಕ್ ವೇ'ನಲ್ಲಿ ಮಳೆ ನೀರು!

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ 1ರಿಂದ ಪಾರ್ಕಿಂಗ್ ಪ್ರದೇಶಕ್ಕೆ ಪ್ರಯಾಣಿಕರು ತೆರಳಲು ಹೊಸದಾಗಿ ನಿರ್ಮಿಸಿರುವ 'ಎಲಿವೇಟೆಡ್ ವಾಕ್ ವೇ'ನಲ್ಲಿ ಮಳೆ ನೀರು ನಿಂತಿದೆ. ಆಗಸ್ಟ್ 25ರಂದು ಲೋಕಾರ್ಪಣೆಗೊಂಡ ಈ ವಾಕ್ ವೇ ಒಂದು ಕಡೆ ಮಂಗಳವಾರ ಸುರಿದ ಮಳೆಯ ನೀರು ನಿಂತಿದೆ. 'ಕೇವಲ ಹತ್ತು ದಿನದ ಹಿಂದೆ ಉದ್ಘಾಟಿಸಲಾದ ವಾಕ್ ವೇ ಚಾವಣಿಯಿಂದ ನೀರು ಸೋರುತ್ತಿದೆ. ಸಂಗ್ರಹವಾದ ಮಳೆ ನೀರು ತೆಗೆಯಲು ಸಿಬ್ಬಂದಿ ಇಲ್ಲ. ಪ್ರಯಾಣಿಕರು ಜಾರಿ ಬೀಳುತ್ತಾರೆ' ಎಂದು ಪ್ರಯಾಣಿಕರೊಬ್ಬರು ಆಕ್ರೋಶ ಹೊರಹಾಕಿದ್ದಾರೆ.

'ವಾಕ್ ವೇ ಚಾವಣಿ ಸೋರುತ್ತಿಲ್ಲ. ಪಕ್ಕದಿಂದ ಬಿದ್ದ ಮಳೆ ನೀರು ಅದು' ಎಂದು ಅಧಿಕಾರಿಗಳು ಹೇಳಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಚಿತ್ರಗಳನ್ನು ಪ್ರಯಾಣಿಕ ಹಂಚಿಕೊಂಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಈ ಚಿತ್ರಗಳನ್ನು ಟ್ಯಾಗ್ ಮಾಡಿದ್ದಾರೆ.

ಮೋಡ ಬಿತ್ತನೆ: ಹಾವೇರಿಯಲ್ಲಿ ಮಳೆ

ರಾಣೆಬೆನ್ನೂರು (ಹಾವೇರಿ ಜಿಲ್ಲೆ): 'ಹಾವೇರಿ, ರಾಣೆಬೆನ್ನೂರು, ಬ್ಯಾಡಗಿ, ಸವಣೂರಿನಲ್ಲಿ ಮಂಗಳವಾರ ಮಧ್ಯಾಹ್ನ ಮೋಡ ಬಿತ್ತನೆ ಮಾಡಲಾಗಿದ್ದು, ಜಿಲ್ಲೆಯಲ್ಲಿ 10ರಿಂದ 15 ಮಿ.ಮೀ ಮಳೆಯಾಗಿದೆ' ಎಂದು ಶಾಸಕ ಪ್ರಕಾಶ ಕೋಳಿವಾಡ ತಿಳಿಸಿದರು.

'ಬ್ಯಾಡಗಿಯಲ್ಲಿ 10.8 ಮಿ.ಮೀ, ಹಾವೇರಿ ಗ್ರಾಮೀಣ ಪ್ರದೇಶದಲ್ಲಿ 15 ಮಿಮೀ, ರಾಣೆಬೆನ್ನೂರಿನಲ್ಲಿ 13 ಮಿ.ಮೀ, ಸವಣೂರಿನಲ್ಲಿ 10.2 ಮಿಮೀ ನಷ್ಟು ಮಳೆಯಾಗಿದೆ. ಬುಧವಾರ ಕೂಡ ಪಿಕೆಕೆ ಸಂಸ್ಥೆಯಿಂದ ಮೋಡ ಬಿತ್ತನೆ ಕಾರ್ಯಾಚರಣೆ ನಡೆಯಲಿದ್ದು, ಇನ್ನೂ ಹೆಚ್ಚಿನ ಮಳೆ ಬೀಳುವ ನಿರೀಕ್ಷೆ ಇದೆ' ಎಂದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	98.86	6,295	6,345
ಹಾರಂಗಿ	2,859	2,854.89	586	550
ಕಬಿನಿ	2284.00	2,273.62	274	604
ಹೇಮಾವತಿ	2,922	2,904.32	756	5,750
ಲಿಂಗನಮಕ್ಕಿ	1,819	1,787.40	1,696	3,819.48
ಸೂಪಾ (ಮೀ)	564	545.42	1,461	2,492
ಮಾಣಿ	595	579.17	215	620
ತುಂಗಭದ್ರಾ	1,633	1,623.99	660	6,627
ಮಲಪ್ರಭಾ	2079.50	2,065.90	00	1,560
ಘಟಪ್ರಭಾ	2175	2,162.66	462	176
ಭದ್ರಾ	186	163	399	3,224
ಆಲಮಟ್ಟಿ (ಮೀ)	519.60	519.41	5,376	24,937
ನಾರಾಯಣಪುರ (ಮೀ)	492.25	490.06	38,760	5,590

* ನೆಲಮಟ್ಟದಿಂದ

ತೀರ್ಪು ಕಾಯ್ದಿರಿಸಿದ ಸುಪ್ರೀಂ ಕೋರ್ಟ್

ಒಂದನೇ ಪುಟದಿಂದ...

ಹಿರಿಯ ವಕೀಲರಾದ ಕಪಿಲ್ ಸಿಬಲ್, ಗೋಪಾಲ್ ಸುಬ್ರಹ್ಮಣಿಯಂ, ರಾಜೀವ್ ಧವನ್, ಜಾಫರ್ ಶಾ, ದುಷ್ಯಂತ್ ದವೆ ಮತ್ತು ಇತರರು ಅಂತಿಮ ದಿನವಾದ ಮಂಗಳವಾರ ತಮ್ಮ ವಾದ ಮಂಡಿಸಿದರು.

ಅಟಾರ್ನಿ ಜನರಲ್ ಆರ್. ವೆಂಕಟರಮಣಿ, ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಹಿರಿಯ ವಕೀಲರಾದ ಹರೀಶ್ ಸಾಳ್ವೆ, ರಾಕೇಶ್ ದ್ವಿವೇದಿ, ವಿ.ಗಿರಿ ಮತ್ತು ಇತರರು ಕೇಂದ್ರ ಸರ್ಕಾರ ಹಾಗೂ ಅರ್ಜಿದಾರರ ಪರವಾಗಿ ವಿಚಾರಣೆಯ ವೇಳೆ ವಾದ ಮಂಡಿಸಿದರು. ವಿಶೇಷ ಸ್ಥಾನಮಾನ ಹಿಂಪಡೆದ ಕೇಂದ್ರ ಸರ್ಕಾರದ ನಿರ್ಧಾರ, ಜಮ್ಮು ಮತ್ತು ಕಾಶ್ಮೀರವನ್ನು ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ವಿಂಗಡಿಸಲು ಅನುವು ಮಾಡಿದ 'ಜಮ್ಮು ಮತ್ತು ಕಾಶ್ಮೀರದ ಪುನರ್‌ರಚನೆ ಕಾಯ್ದೆ'ಯ ಕ್ರಮಬದ್ಧತೆ, 2018ರ ಜೂನ್ 20ರಂದು ಜಮ್ಮು ಮತ್ತು ಕಾಶ್ಮೀರದಲ್ಲಿ ರಾಜ್ಯಪಾಲರ ಆಡಳಿತ ಹೇರಿದ್ದ ತೀರ್ಮಾನ ಹಾಗೂ 2018ರ ಡಿಸೆಂಬರ್ 19ರಂದು ರಾಷ್ಟ್ರಪತಿ ಆಡಳಿತ ಹೇರಿದ್ದ ತೀರ್ಮಾನ ಪ್ರಶ್ನಿಸಿದ್ದು ಸೇರಿ ವಿವಿಧ ಅಂಶಗಳ ಕುರಿತು ವಿಚಾರಣೆ ನಡೆಯಿತು.

370ನೇ ವಿಧಿ ಅನ್ವಯ ನೀಡಿದ್ದ ವಿಶೇಷ ಸ್ಥಾನಮಾನ ಹಿಂಪಡೆದಿದ್ದು, ಕೇಂದ್ರಾಡಳಿತ ಪ್ರದೇಶಗಳಾಗಿ ರಾಜ್ಯದ ವಿಂಗಡಣೆ ಪ್ರಶ್ನಿಸಿ ಹಲವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ಬೀದರ್, ಕಲಬುರಗಿಗೆ 'ಯೆಲ್ಲೊ ಅಲರ್ಟ್'

ಬೆಂಗಳೂರು: ರಾಜ್ಯದ ಉತ್ತರ ಒಳನಾಡಿನಲ್ಲಿ ಮಳೆ ಮತ್ತಷ್ಟು ಚುರುಕು ಪಡೆಯುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬೀದರ್ ಹಾಗೂ ಕಲಬುರಗಿ ಜಿಲ್ಲೆಗೆ ಬುಧವಾರ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. ಸೆ.8ರ ನಂತರ ಮಲೆನಾಡು ಭಾಗದಲ್ಲೂ ಭಾರಿ ಮಳೆ ಯಾಗುವ ಸಾಧ್ಯತೆಯಿದ್ದು, ಶುಕ್ರವಾರ ಹಾಗೂ ಶನಿವಾರ ಕೊಡಗು ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ.

ಸುಜ್ಞಾನನಿಧಿ ಶಿಷ್ಯವೇತನಕ್ಕೆ ಅರ್ಜಿ

ಧರ್ಮಸ್ಥಳ (ದಕ್ಷಿಣ ಕನ್ನಡ): ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಪ್ರಗತಿಬಂಧು ಸ್ವ-ಸಹಾಯ ಸಂಘಗಳ ಸದಸ್ಯರ ಮಕ್ಕಳ ವೃತ್ತಿಪರ ಹಾಗೂ ತಾಂತ್ರಿಕ ಶಿಕ್ಷಣಕ್ಕೆ ನೀಡುವ 'ಸುಜ್ಞಾನನಿಧಿ ಶಿಷ್ಯವೇತನ'ಕ್ಕೆ 2023-24ನೇ ಸಾಲಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಆರಂಭಗೊಂಡಿದೆ.

ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ಡಿ. ವೀರೇಂದ್ರ ಹೆಗ್ಗಡೆ ಹಾಗೂ ಹೇಮಾವತಿ ವೀ. ಹೆಗ್ಗಡೆ ಅವರು ಪ್ರಸಕ್ತ ವರ್ಷದ ಅರ್ಜಿ ಸಲ್ಲಿಸುವ ಪ್ರಕ್ರಿಯೆಗೆ ಚಾಲನೆ ನೀಡಿದರು. ತಾಂತ್ರಿಕ ಹಾಗೂ ವೃತ್ತಿಪರ ಕೋರ್ಸ್‌ಗಳಲ್ಲಿ ಅಧ್ಯಯನ ಮಾಡುವ ಪ್ರಗತಿಬಂಧು ಸ್ವ-ಸಹಾಯ ಸಂಘದ ಕುಟುಂಬಗಳ ಪ್ರತಿಭಾನ್ವಿತ ಮಕ್ಕಳಿಗೆ ಶಿಷ್ಯವೇತನ ನೀಡಲಾಗುತ್ತಿದೆ. 3 ವರ್ಷದವರೆಗಿನ ಕೋರ್ಸ್‌ಗಳಿಗಾಗಿ ಪ್ರತಿ ತಿಂಗಳು ತಲಾ ₹400 ಹಾಗೂ 5 ವರ್ಷದ ವರೆಗಿನ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ತಲಾ ₹1ಸಾವಿರದಂತೆ ಕೋರ್ಸ್ ಮುಗಿಯುವವರೆಗೆ ವಿದ್ಯಾರ್ಥಿಗಳ ಖಾತೆಗೆ ಪಾವತಿಸಲಾಗುತ್ತದೆ.

ತಿದ್ದುಪಡಿ

ಮಂಗಳವಾರದ (ಸೆಪ್ಟೆಂಬರ್ 5) ಸಂಚಿಕೆಯಲ್ಲಿ 'ವಲಮರ್ಥಿ ನಿಧನ' ಸುದ್ದಿಯೊಂದಿಗೆ ಪ್ರಕಟವಾಗಿದ್ದ ಫೋಟೊ ತಪ್ಪಾಗಿದೆ.

ಉದ್ಯೋಗ ವಾಣಿ

ಬೆಂಗಳೂರಿನಲ್ಲಿರುವ ಎಂಬಿಎ ಕಾಲೇಜ್‌ಗೆ ಬೋಧಕ ವರ್ಗದವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಹುದ್ದೆಗಳು
ನಿರ್ದೇಶಕರು/ಪ್ರಾಂಶುಪಾಲರು
ಪ್ರಾಧ್ಯಾಪಕರು
ಸಹಪ್ರಾಧ್ಯಾಪಕರು
ಸಹಾಯಕ ಪ್ರಾಧ್ಯಾಪಕರು
ಕಚೇರಿ ಸಿಬ್ಬಂದಿ

ವಿದ್ಯಾರ್ಹತೆ ಮತ್ತು ಸಂಬಳ ಎಐಸಿಟಿಇ ನಿಯಮಗಳ ಅನ್ವಯವಿರುವುದು. ಆಸಕ್ತಿಯುಳ್ಳ ಅಭ್ಯರ್ಥಿಗಳು ವಿವರ ಪತ್ರದ ಜೊತೆಗೆ ತಮ್ಮ ವ್ಯಕ್ತಿಗತ ವಿವರಗಳನ್ನು info@primusbschool.com ಇಲ್ಲಿಗೆ ಕಳುಹಿಸಬಹುದು.
ಪ್ರಿಮಸ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಸಿಂಗನಾಯಕನಹಳ್ಳಿ, ರಮದ ಹೋಟೆಲ್ ಹತ್ತಿರ, ಯಲಹಂಕ, ಬೆಂಗಳೂರು–560064.
ಸಂಪರ್ಕಿಸಿ: ಮೊಬೈಲ್ ಸಂ. 8105564034 ವೆಬ್‌ಸೈಟ್: www.primusbschool.com

ತಿದ್ದುಪಡಿ ಅಗತ್ಯ –ಪಿಡಿಟಿ ಆಚಾರಿ, ಇಂಡಿಯಾಗೆ ಬ್ರ್ಯಾಂಡ್ ಮೌಲ್ಯವಿದೆ, ಎರಡೂ ಇರಲಿ: ತರೂರ್

ಇಂಡಿಯಾ, ಭಾರತ: ಚರ್ಚೆ ಅನಂತ

ಪ್ರಜಾವಾಣಿ ವಾರ್ತೆ



ನವದೆಹಲಿ: ಇಂಡಿಯಾ ಹೆಸರನ್ನು ಭಾರತ ಎಂದು ಬದಲಿಸಲು ಸಂಸತ್ತಿನ ವಿಶೇಷ ಅಧಿವೇಶನದಲ್ಲಿಯೇ ನಿರ್ಣಯ ಮಂಡಿಸಬಹುದು ಎಂಬ ವದಂತಿ ಕೇಳಿಬರುತ್ತಿದ್ದು, ಹೀಗೆ ಹೆಸರು ಬದಲಿಸಲು ಸಂವಿಧಾನದ ತಿದ್ದುಪಡಿ ಅಗತ್ಯವಿದೆಯೇ? ಇದು, ಸಂವಿಧಾನದ ಮೂಲ ಆಶಯಕ್ಕೆ ಪೂರಕವಾಗಿರಲಿದೆಯೇ ಎಂಬ ಪ್ರಶ್ನೆಗಳು ಮೂಡಿವೆ.

ಈ ವಿಷಯದಲ್ಲಿ ಪರಿಣತರು ಮತ್ತು ರಾಜಕೀಯ ವಿಶ್ಲೇಷಕರ ಅಭಿಪ್ರಾಯಗಳು ಭಿನ್ನವಾಗಿವೆ. ಸಂವಿಧಾನದ 1ನೇ ವಿಧಿಯಲ್ಲಿ, 'ಇಂಡಿಯಾ, ಅಂದರೆ ಭಾರತ, ರಾಜ್ಯಗಳ ಒಕ್ಕೂಟ' ಎಂದು ಸ್ಪಷ್ಟವಾಗಿ ಹೇಳಲಾಗಿದೆ.

ಸುಪ್ರೀಂ ಕೋರ್ಟ್ ವಕೀಲ, ಕಾಂಗ್ರೆಸ್‌ನ ರಾಜ್ಯಸಭೆ ಸದಸ್ಯ ವಿವೇಕ್ ತಂಖಾ, ಸಂವಿಧಾನದಲ್ಲಿ ಎರಡೂ ಹೆಸರಿನ ಉಲ್ಲೇಖವಿದೆ. ರಾಷ್ಟ್ರಮಟ್ಟದಲ್ಲಿ 'ಇಂಡಿಯಾ' ಹೆಸರಾಗಿದೆ. ರಾಷ್ಟ್ರವನ್ನು ನಾವು ಹೇಗೆ ಗುರುತಿಸುತ್ತೇವೆ ಎಂಬುದನ್ನು ಬಿಂಬಿಸಲಿದೆ. ರಾಜತಾಂತ್ರಿಕ ಕ್ರಮದಲ್ಲೂ ಭಾರತ ಎಂದೇ ಉಲ್ಲೇಖಿಸಲಾಗುತ್ತದೆ. ಈ ಎಲ್ಲ ಹೋಗಲಿವೆ' ಎನ್ನುತ್ತಾರೆ.

'ಈಗಿನ ಬಿಜೆಪಿ ನೇತೃತ್ವದ ಸರ್ಕಾರ ವಸಾಹತುಶಾಹಿ ಕಾಲಘಟ್ಟದ ಎಲ್ಲವನ್ನು ಬದಲಿಸಲು ಒತ್ತುನೀಡಿದೆ. ಇಂಡಿಯಾ ಉಲ್ಲೇಖವುಳ್ಳ ಎಲ್ಲವೂ ಈ ಸರ್ಕಾರಕ್ಕೆ ಅಹಿತವಾಗಿವೆ. ಇದು ನಂಬಿಕೆ. ಹೆಸರಿನ ಬದಲಾವಣೆ ದೇಶವನ್ನು ರೂಪಿಸುವುದಿಲ್ಲ. ಆದರೆ, ಉದ್ಯೋಗ, ಶಿಕ್ಷಣ, ಗುಣಮಟ್ಟದ ಆರೋಗ್ಯ ಸೇವೆ ರೂಪಿಸುತ್ತದೆ' ಎಂದು ಹೇಳುತ್ತಾರೆ.

ಇಂಡಿಯಾ ಬದಲಾಗಿ ಭಾರತ ಎಂದೇ ಹೆಸರಿಸಬೇಕು ಎಂಬ ಬೇಡಿಕೆಯು ಪ್ರಮುಖವಾದುದೇನಲ್ಲ. ದೆಹಲಿಯ ಉದ್ಯಮಿಯೊಬ್ಬರು 2020ರಲ್ಲಿ ಇಂಡಿಯಾ ಅನ್ನು ಭಾರತ ಎಂದೇ ಕರೆಯಬೇಕು ಎಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಸುಪ್ರೀಂ ಕೋರ್ಟ್ ಅದನ್ನು ವಜಾ ಮಾಡಿತ್ತು. ಇಂತಹದೇ ಬೇಡಿಕೆಯಿದ್ದ ಅರ್ಜಿಯನ್ನು 2016ರಲ್ಲಿಯೂ ತಿರಸ್ಕರಿಸಿತ್ತು.

ಕಾಂಗ್ರೆಸ್ ಸಂಸದ ಶಶಿ ತರೂರ್ ಅವರು 'ಎಕ್ಸ್' ವೇದಿಕೆಯಲ್ಲಿ ಸಂದೇಶ ಪೋಸ್ಟ್ ಮಾಡಿದ್ದು, 'ಇಂಡಿಯಾವನ್ನು 'ಭಾರತ್' ಎಂದು ಕರೆಯಲು ಸಾಂವಿಧಾನಿಕ ಆಕ್ಷೇಪವೇನೂ ಇಲ್ಲ' ಎಂದು ಹೇಳಿದ್ದಾರೆ. 'ಇಂಡಿಯಾ ಮತ್ತು ಭಾರತ್ ಎರಡೂ ಅಧಿಕೃತ ಹೆಸರುಗಳೇ. ಇಂಡಿಯಾ ಅನ್ನು ಸಂಪೂರ್ಣ ಕೈಬಿಡುವಷ್ಟು ಕೇಂದ್ರ ಸರ್ಕಾರ ಮೂರ್ಖತನದ್ದಲ್ಲ ಎಂದು ಭಾವಿಸುತ್ತೇನೆ' ಎಂದಿದ್ದಾರೆ.

'ಇಂಡಿಯಾ ಎಂಬುದಕ್ಕೆ ಲೆಕ್ಕ ಹಾಕಲಾಗದಷ್ಟು ಬ್ರ್ಯಾಂಡ್ ಮೌಲ್ಯವಿದೆ. ಇದು, ಶತಮಾನಗಳಿಂದ ನಿರ್ಮಾಣವಾಗಿದ್ದಾಗಿದೆ. ನಾವು ಎರಡೂ ಹೆಸರು ಬಳಸುವುದನ್ನು ಮುಂದುವರಿಸಬೇಕು' ಎಂದು ತರೂರ್ ಪ್ರತಿಪಾದಿಸುತ್ತಾರೆ.

'ಇಂಡಿಯಾ ಅಧಿಕೃತ ಹೆಸರು'

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: 'ವಿಶ್ವಸಂಸ್ಥೆ ದಾಖಲೆಯಲ್ಲಿ 'ರಿಪಬ್ಲಿಕ್ ಆಫ್ ಇಂಡಿಯಾ' ಎಂದಿದೆ. ಇದನ್ನು 'ರಿಪಬ್ಲಿಕ್ ಆಫ್ ಭಾರತ್' ಎಂದು ಬದಲಿಸಲು ಸಂವಿಧಾನಕ್ಕೆ ತಿದ್ದುಪಡಿ ಅಗತ್ಯ. ಅಲ್ಲದೆ, ಸಂಬಂಧಿತ ರಾಷ್ಟ್ರಗಳಿಗೆ ಈ ಬಗ್ಗೆ ಮಾಹಿತಿ ಕಳುಹಿಸಬೇಕು' ಎಂದು ಲೋಕಸಭೆಯ ಮಾಜಿ ಪ್ರಧಾನ ಕಾರ್ಯದರ್ಶಿ ಪಿಡಿಟಿ ಆಚಾರಿ ಹೇಳುತ್ತಾರೆ.

'ಹೆಸರಿನ ಬದಲಾವಣೆಯನ್ನು ಸಂವಿಧಾನಕ್ಕೆ ತಿದ್ದುಪಡಿ ಮೂಲಕವೇ ಮಾಡಬೇಕು. ಅದಾಗದಿದ್ದರೆ, ಹೆಸರು ಇಂಡಿಯಾ ಎಂದಷ್ಟೇ ಇರಲಿದೆ. ಸಂವಿಧಾನದ ವಿಧಿ 1ರಲ್ಲಿ ಭಾರತ ಮತ್ತು ಇಂಡಿಯಾ ಎರಡರ ಉಲ್ಲೇಖವಿರುವುದು ವಿಶ್ಲೇಷಣಾತ್ಮಕವಷ್ಟೇ. ಅದರರ್ಥ ಅದಲು–ಬದಲಾಗಿ ಎರಡನ್ನೂ ಬಳಸಬಹುದು ಎಂಬುದಲ್ಲ. ಹಾಗೇ ಮಾಡಿದರೆ ಅದು ಆತ್ಮಹತ್ಯಾ ಕ್ರಮವಾಗಲಿದೆ. ಒಂದು ದೇಶಕ್ಕೆ ಒಂದು ಹೆಸರಷ್ಟೇ ಇರಬೇಕು' ಎಂದು ಅವರು ಪ್ರತಿಪಾದಿಸುತ್ತಾರೆ.

ಸಂವಿಧಾನದ ಹಿಂದಿ ಅವತರಣಿಕೆಯಲ್ಲಿಯೂ 'ಭಾರತ್.. ಅರ್ಥಾತ್ ಇಂಡಿಯಾ...' ಎಂದೇ ಉಲ್ಲೇಖವಾಗಿದೆ. ಇಂಡಿಯಾ ಎಂಬುದು ದೇಶದ ಅಧಿಕೃತ ಹೆಸರು. ಇದನ್ನು ಬದಲಿಸಲು ಸಂವಿಧಾನದ ತಿದ್ದುಪಡಿ ಅಗತ್ಯ. ಇದಕ್ಕಾಗಿ ಉಭಯ ಸದನಗಳಲ್ಲಿಯೂ ಮೂರನೇ ಎರಡರಷ್ಟು ಸದಸ್ಯರ ಬೆಂಬಲ ಬೇಕು' ಎಂದು ಹೇಳುತ್ತಾರೆ.

ಹೀಗೆ ಹೆಸರು ಬದಲಿಸುವುದರಿಂದ ಸಂವಿಧಾನದ ಮೂಲ ಸ್ವರೂಪ ಬದಲಾಗುವುದಿಲ್ಲ ಎಂದು ಆಚಾರಿ ಅವರು ಪ್ರತಿಪಾದಿಸುತ್ತಾರೆ.

'ಇಂಡಿಯಾ ಅಥವಾ ಭಾರತ ಎಂದು ಕರೆಯಲು ಮುಕ್ತ ಅವಕಾಶ'

ಒಂದನೇ ಪುಟದಿಂದ...

ಈ ವಿಧಿಯನ್ನು ಬದಲಾವಣೆಯ ಸಂದರ್ಭ ಎದುರಾಗಿಲ್ಲ' ಎಂದು ಹೇಳಿತ್ತು. ಅಲ್ಲದೇ, ಈ ಪಿಐಎಲ್‌ಗೆ ಆಕ್ಷೇಪ ವ್ಯಕ್ತಪಡಿಸಿದ್ದ ಕೇಂದ್ರ ಗೃಹ ಸಚಿವಾಲಯವು, 'ಸಂವಿಧಾನದ ಕರಡು ಸಿದ್ಧಪಡಿಸುವ ವೇಳೆ ಸಂವಿಧಾನ ರಚನಾ ಸಮಿತಿ ಸಭೆಯಲ್ಲಿ ದೇಶದ ಹೆಸರಿಗೆ ಸಂಬಂಧಿಸಿದಂತೆ ವ್ಯಾಪಕವಾಗಿ ಚರ್ಚಿಸಲಾಗಿದೆ. ಸಂವಿಧಾನದ 1ನೇ ವಿಧಿಯಡಿ ಸರ್ವಾನುಮತದಿಂದ ಈ ಅಂಶವನ್ನು ಸೇರಿಸಲಾಗಿದೆ' ಎಂದು ನ್ಯಾಯಾಲಯದಲ್ಲಿ ಹೇಳಿಕೆ ದಾಖಲಿಸಿತ್ತು.

ವಿಚಾರಣೆ ವೇಳೆ ಸುಪ್ರೀಂ ಕೋರ್ಟ್, 'ಪಿಐಎಲ್ ಬಡವರ ಪರವಾಗಿರಬೇಕು. ನೀವು ನಮಗೆ ಬೇರೆ ಯಾವುದೇ ಕೆಲಸ ಇಲ್ಲವೆಂದು ಭಾವಿಸಿದಂತಿದೆ' ಎಂದು ಅರ್ಜಿದಾರರಿಗೆ ಚಾಟಿ ಬೀಸಿತ್ತು.

ಎನ್‌ಜಿಒಗಳು ಮತ್ತು ಕಾರ್ಪೊರೇಟ್ ಕಂಪನಿಗಳ ಎಲ್ಲಾ ಅಧಿಕೃತ ಹಾಗೂ ಅಧಿಕಾರಯುತವಲ್ಲದ ಉದ್ದೇಶಗಳಿಗೆ ಭಾರತ ಎಂದು ಬಳಸಲು ನಿರ್ದೇಶನ ನೀಡುವಂತೆ ಅರ್ಜಿಯಲ್ಲಿ ಕೋರಲಾಗಿತ್ತು.

ದೇಶಕ್ಕೆ ಹೆಸರು ಸೂಚಿಸುವುದಕ್ಕೆ ಸಂಬಂಧಿಸಿದಂತೆ ಸಂವಿಧಾನ ರಚನಾ ಸಭೆಯ ಮುಂದೆ ಹಲವು ಸಲಹೆಗಳು ಸಲ್ಲಿಕೆಯಾಗಿದ್ದವು. 'ಭಾರತ, ಹಿಂದೂಸ್ತಾನ, ಹಿಂದ್ ಮತ್ತು ಭರತಭೂಮಿ ಅಥವಾ ಭರತವರ್ಷ ಸೇರಿದಂತೆ ಹಲವು ಹೆಸರುಗಳನ್ನು ಪರಿಗಣಿಸುವಂತೆ ಸಲಹೆ ನೀಡಲಾಗಿತ್ತು ಎಂದು ಅರ್ಜಿಯಲ್ಲಿ ಹೇಳಲಾಗಿತ್ತು.

> ಭಾರತದಲ್ಲಿ ಪರಿವರ್ತನೆ ತರಲಾಗುವುದು ಎಂದಿದ್ದ ಬಿಜೆಪಿ ಈಗ ಅದು, 'ಇಂಡಿಯಾ' ಎಂಬುದನ್ನು 'ಭಾರತ' ಎಂದು ಬದಲಾಯಿಸಲು ಬಯಸಿದೆ. ಕಳೆದ 9 ವರ್ಷಗಳಲ್ಲಿ ಕೇಂದ್ರದಲ್ಲಿರುವ ಬಿಜೆಪಿ ನೇತೃತ್ವದ ಸರ್ಕಾರದಿಂದ ನಮಗೆ ಸಿಗುತ್ತಿರುವುದು ಹೆಸರಿನಲ್ಲಿ ಬದಲಾವಣೆ ಮಾತ್ರ
>
> **ಎಂ.ಕೆ.ಸ್ಟಾಲಿನ್,** ತಮಿಳುನಾಡು ಮುಖ್ಯಮಂತ್ರಿ

ದೇಶದ ಹೆಸರು ಬದಲಿಸುವ ಹಕ್ಕು ಯಾರಿಗೂ ಇಲ್ಲ: ಶರದ್ ಪವಾರ್

ಜಲಗಾಂವ (ಮಹಾರಾಷ್ಟ್ರ) (ಪಿಟಿಐ): 'ದೇಶದ ಹೆಸರನ್ನು ಬದಲಿಸುವ ಹಕ್ಕು ಯಾರಿಗೂ ಇಲ್ಲ' ಎಂದು ಎನ್‌ಸಿಪಿ ಅಧ್ಯಕ್ಷ ಶರದ್ ಪವಾರ್ ಮಂಗಳವಾರ ಹೇಳಿದ್ದಾರೆ.

ಜಿ–20 ಶೃಂಗಸಭೆಯ ಔತಣಕೂಟದ ಆಮಂತ್ರಣ ಪತ್ರಿಕೆಯಲ್ಲಿ ರಾಷ್ಟ್ರಪತಿ ಅವರನ್ನು 'ಪ್ರೆಸಿಡೆಂಟ್ ಆಫ್ ಭಾರತ್' ಎಂದು ಇಂಗ್ಲಿಷ್‌ನಲ್ಲಿ ಉಲ್ಲೇಖಿಸಿರುವುದಕ್ಕೆ ಅವರು ಹೀಗೆ ಪ್ರತಿಕ್ರಿಯಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬುಧವಾರ ಕರೆದಿರುವ 'ಇಂಡಿಯಾ' ಮೈತ್ರಿಕೂಟದ ಅಂಗಪಕ್ಷಗಳ ಮುಖ್ಯಸ್ಥರ ಸಭೆಯಲ್ಲಿ ಈ ವಿಷಯ ಕುರಿತು ಚರ್ಚಿಸಲಾಗುವುದು' ಎಂದು ಹೇಳಿದ್ದಾರೆ.

ದೇಶದ ಹೆಸರು ಕುರಿತು ಆಡಳಿತಾರೂಢ ಪಕ್ಷ ಬಿಜೆಪಿಗೆ ಇಷ್ಟೊಂದು ಅಸಮಾಧಾನ ಯಾಕೆ ಎಂಬುದು ನನಗೆ ಅರ್ಥವಾಗುತ್ತಿಲ್ಲ' ಎಂದು ಹೇಳಿದ್ದಾರೆ.

'ಇಂಡಿಯಾ' ವಿರುದ್ಧ ಭಾರತ 'ಅಸ್ತ್ರ'

ಒಂದನೇ ಪುಟದಿಂದ...

'ಹಿಂದಿಯಲ್ಲಿ 'ಭಾರತ ಗಣರಾಜ್ಯ' ಅಥವಾ ಇಂಗ್ಲಿಷ್‌ನಲ್ಲಿ 'ರಿಪಬ್ಲಿಕ್ ಆಫ್ ಇಂಡಿಯಾ' ಎಂದು ಬಳಸುವುದು ಸರಿ. 'ರಿಪಬ್ಲಿಕ್ ಆಫ್ ಭಾರತ್' ಎಂಬ ಬೆಸುಗೆ ಏಕೆ? ವಿದೂಷಕರ ಪಕ್ಷವು ಕಸರತ್ತನ್ನು ಕೂಡ ಸಮರ್ಪಕವಾಗಿ ಮಾಡುವುದಿಲ್ಲ' ಎಂದು ಛೇಡಿಸಿದ್ದಾರೆ.

ಪೋಸ್ಟ್: ಆಸಿಯಾನ್–ಭಾರತ ಶೃಂಗಸಭೆಯಲ್ಲಿ ಪಾಲ್ಗೊಳ್ಳುವುದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಸೆ.7ರಂದು ಇಂಡೊನೇಷ್ಯಾಕ್ಕೆ ಭೇಟಿ ನೀಡಲಿದ್ದಾರೆ.

ಈ ಕುರಿತು, ಬಿಜೆಪಿ ವಕ್ತಾರ ಸಂಬಿತ್ ಪಾತ್ರ ಅವರು 'ಎಕ್ಸ್'ನಲ್ಲಿ ಮಾಡಿರುವ ಪೋಸ್ಟ್‌ನಲ್ಲಿ ಮೋದಿ ಅವರನ್ನು 'ಪ್ರೈಮಿನಿಸ್ಟರ್ ಆಫ್ ಭಾರತ್' ಎಂದು ಉಲ್ಲೇಖಿಸಿದ್ದಾರೆ.

ಶಿಕ್ಷೆ ವಿಧಿಸಲು ಪ್ರಕರಣದ ತೀವ್ರತೆ ಪರಿಗಣನೆ: 'ಸುಪ್ರೀಂ'

ನವದೆಹಲಿ (ಪಿಟಿಐ): 'ಭಾರತದಲ್ಲಿ ಅಪರಾಧಿಗಳಿಗೆ ಶಿಕ್ಷೆ ವಿಧಿಸುವುದಕ್ಕೆ ಸಂಬಂಧಿಸಿದಂತೆ ಯಾವುದೇ ಶಾಸನಬದ್ಧ ನೀತಿಯು ಅಸ್ತಿತ್ವದಲ್ಲಿ ಇಲ್ಲ. ಆದರೆ, ಪ್ರಕರಣದ ತೀವ್ರತೆಯನ್ನು ಪರಿಗಣಿಸಿ ಶಿಕ್ಷೆ ವಿಧಿಸಲು ಸ್ಥಾಪಿತ ತತ್ವವನ್ನು ಅನುಸರಿಸಲಾಗುತ್ತಿದೆ' ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.

1984ರಲ್ಲಿ ನಡೆದ ಕೊಲೆ ಪ್ರಕರಣದ ಅಪರಾಧಿಗೆ ವಿಚಾರಣಾ ನ್ಯಾಯಾಲಯವು ಐದು ವರ್ಷ ಶಿಕ್ಷೆ ವಿಧಿಸಿತ್ತು. 2019ರ ಏಪ್ರಿಲ್‌ನಲ್ಲಿ ಅಲಹಾಬಾದ್ ಹೈಕೋರ್ಟ್ ಈ ಆದೇಶವನ್ನು ಎತ್ತಿಹಿಡಿದಿತ್ತು. ಇದನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಎ.ಎಸ್. ಓಕಾ, ಸಂಜಯ್ ಕರೋಲ್ ಅವರಿದ್ದ ನ್ಯಾಯಪೀಠವು ಸೋಮವಾರ ನಡೆಸಿತು. ಅಪರಾಧಿಗೆ ವಿಧಿಸಿದ್ದ ಶಿಕ್ಷೆಯನ್ನು 3 ವರ್ಷಗಳಿಗೆ ಕಡಿತ ಗೊಳಿಸಿದ ಪೀಠವು, 'ಶಿಕ್ಷೆ ವಿಧಿಸುವುದಕ್ಕೆ ಸಂಬಂಧಿಸಿದಂತೆ ಸ್ಪಷ್ಟ ನೀತಿ ಇಲ್ಲ. ಆದರೆ, ಶಿಕ್ಷೆಯ ಹಿಂದಿರುವ ಉದ್ದೇಶ ಹಾಗೂ ಇಂಥ ಪ್ರಕರಣಗಳಲ್ಲಿ ಅನುಸರಿಸುವ ಮಾನದಂಡ ಪರಿಗಣಿಸುವುದಾಗಿ ಹೇಳಿದೆ.

ಸ್ಮಾರಕ ರಕ್ಷಣೆಗೆ ಆ್ಯಪ್ ಬಿಡುಗಡೆ

ನವದೆಹಲಿ (ಪಿಟಿಐ): ಸ್ಮಾರಕಗಳ ರಕ್ಷಣೆಗಾಗಿ ಕಾರ್ಪೊರೇಟ್ ಭಾಗಿದಾರರ ಸಹಭಾಗಿತ್ವ ಪಡೆಯುವ ಉದ್ದೇಶದಿಂದ ಭಾರತೀಯ ಪುರಾತತ್ವ ಇಲಾಖೆಯು (ಎಎಸ್‌ಐ) ಸೋಮವಾರ 'ಅಡಾಪ್ಟ್ ಎ ಹೆರಿಟೇಜ್ 2.0' ಆ್ಯಪ್ ಬಿಡುಗಡೆ ಮಾಡಿದೆ.

'ಇಂಡಿಯನ್ ಹೆರಿಟೇಜ್' ಹೆಸರಿನ ಬಳಕೆದಾರರ ಸ್ನೇಹಿಯಾಗಿರುವ ಈ ಮೊಬೈಲ್ ಆ್ಯಪ್ ದೇಶದ ವಿವಿಧ ಐತಿಹಾಸಿಕ ಸ್ಮಾರಕಗಳ ವಿವರಗಳನ್ನು ಒಳಗೊಂಡಿದೆ. ಎಎಸ್‌ಐ ಪರಿಮಿತಿಯಲ್ಲಿ ದೇಶದಾದ್ಯಂತ 3,697 ಸ್ಮಾರಕಗಳಿವೆ.

ಈ ಸ್ಮಾರಕಗಳು ದೇಶದ ಶ್ರೀಮಂತ, ಸಾಂಸ್ಕೃತಿಕ ಪರಂಪರೆಯ ಅಭಿವ್ಯಕ್ತಿಯಾಗಿವೆ. ಜೊತೆಗೆ ದೇಶದ ಆರ್ಥಿಕತೆ ಪ್ರಗತಿಯನ್ನು ಬಿಂಬಿಸುವಲ್ಲಿಯೂ ಗಣನೀಯ ಪಾತ್ರವಹಿಸಲಿವೆ ಎಂದು ಸಂಸ್ಕೃತಿ ಸಚಿವಾಲಯವು ತಿಳಿಸಿದೆ.

ಮೊಬೈಲ್ ಆ್ಯಪ್ ಬಿಡುಗಡೆ ಕಾರ್ಯಕ್ರಮದಲ್ಲಿ ವರ್ಚುಯಲ್ ಸ್ವರೂಪದಲ್ಲಿ ಭಾಗವಹಿಸಿದ್ದ ಕೇಂದ್ರ ಪ್ರವಾಸೋದ್ಯಮ ಸಚಿವ ಜಿ.ಕಿಷನ್ ರೆಡ್ಡಿ ಅವರು, ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ರಕ್ಷಿಸಲು ಭಾಗಿದಾರರು ಮುಂದೆ ಬರಬೇಕು ಎಂದು ಕೋರಿದರು.

'ಅಡಾಪ್ಟ್ ಹೆರಿಟೇಜ್ 2.0' ಕಾರ್ಪೊರೇಟ್ ಭಾಗಿದಾರರ ಜೊತೆಗೆ ಸಹಭಾಗಿತ್ವ ಹೊಂದಲು ಒತ್ತು ನೀಡಲಿದೆ. ಸ್ಮಾರಕಗಳನ್ನು ಮುಂದಿನ ಪೀಳಿಗೆಗೆ ಉಳಿಸಲು ದತ್ತು ಪಡೆಯುವ ಮೂಲಕ ನೆರವಾಗಬಹುದಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಇದು, 2017ರಲ್ಲಿ ಪ್ರಕಟಿಸಿದ್ದ ಯೋಜನೆಯ ಪರಿಷ್ಕೃತ ರೂಪವಾಗಿದೆ. ಕಾರ್ಪೊರೇಟ್ ಸಂಸ್ಥೆಗಳ ಸಿಎಸ್‌ಆರ್ ನಿಧಿ ಬಳಸಿ ಸೌಲಭ್ಯ ಉತ್ತಮಪಡಿಸುವುದು ಇದರ ಉದ್ದೇಶವಾಗಿದೆ. ಕಾಯ್ದೆಯ ಅನುಸಾರ ಭಿನ್ನ ಸ್ಮಾರಕಗಳ ರಕ್ಷಣೆಗೆ ಬೇಕಾದ ಅಂಶಗಳನ್ನೂ ಉಲ್ಲೇಖಿಸಲಿದೆ. ಸ್ಮಾರಕಗಳ ದತ್ತು ಪ್ರಕ್ರಿಯೆಯ ವಿವಿಧ ಮಾಹಿತಿಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ.

ಜನ್ಮಾಷ್ಟಮಿ ಮುಂಬೈನ ಶಿವಾಜಿ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ಶ್ರೀಕೃಷ್ಣ ಜನ್ಮಾಷ್ಟಮಿ ನಿಮಿತ್ತ ಮಂಗಳವಾರ ಮೊಸರು ಕುಡಿಕೆ ಒಡೆಯುವ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ನಿರ್ದೇಶನ ಕೋರಿ 'ಸುಪ್ರೀಂ' ಮೊರೆ ಹೋದ ಕೇಂದ್ರ

'ಕಾಲಮಿತಿಯೊಳಗೆ ಗಿರಿಧಾಮಗಳ ಧಾರಣಾ ಸಾಮರ್ಥ್ಯ ಅಧ್ಯಯನ'

ಪ್ರಜಾವಾಣಿ ವಾರ್ತೆ

ನವದೆಹಲಿ: ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡದಲ್ಲಿ ಮಳೆ ಮತ್ತು ಭೂಕುಸಿತದಿಂದ ಉಂಟಾದ ಭಾರಿ ನಷ್ಟ ಹಾಗೂ ಜೀವಹಾನಿಯ ಪರಿಣಾಮದ ಬಳಿಕ, ಗಿರಿಧಾಮಗಳ ಧಾರಣಾ ಸಾಮರ್ಥ್ಯದ ಮೌಲ್ಯಮಾಪನವನ್ನು ನಿಗದಿತ ಕಾಲಮಿತಿಯೊಳಗೆ ನಡೆಸುವಂತೆ ಹಿಮಾಲಯ ಭಾಗದ 13 ರಾಜ್ಯಗಳಿಗೆ ನಿರ್ದೇಶನ ನೀಡಬೇಕೆಂದು ಕೇಂದ್ರವು ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದೆ.

ಅಶೋಕ್ ಕುಮಾರ್ ರಾಘವ್ ಎಂಬುವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ (ಪಿಐಎಲ್) ನೀಡಿರುವ ಲಿಖಿತ ಪ್ರತಿಕ್ರಿಯೆಯಲ್ಲಿ, ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆಯ ಸಚಿವಾಲಯವು ಎಲ್ಲಾ 13 ರಾಜ್ಯಗಳಿಗೆ ಕ್ರಮ ತೆಗೆದುಕೊಂಡಿರುವ ವರದಿಯನ್ನು ಸಲ್ಲಿಸಬೇಕೆಂದು ನಿರ್ದೇಶನ ನೀಡುವಂತೆ ಸುಪ್ರೀಂ ಕೋರ್ಟ್‌ಗೆ ಕೋರಿದೆ.

ಈ ಕುರಿತು ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿರುವ ಸಚಿವಾಲಯವು, ಕೇಂದ್ರ ಸರ್ಕಾರವು ಈ ಹಿಂದೆ ಅಂದರೆ 2020ರ ಜ. 30ರಂದು 13 ರಾಜ್ಯಗಳಿಗೆ ಪತ್ರ ಬರೆದು, ನಗರಗಳು ಮತ್ತು ಪರಿಸರ-ಸೂಕ್ಷ್ಮ ವಲಯಗಳನ್ನು ಒಳಗೊಂಡಂತೆ ಗಿರಿಧಾಮಗಳ ಧಾರಣಾ ಸಾಮರ್ಥ್ಯವನ್ನು ನಿರ್ಣಯಿಸಲು ಮಾರ್ಗಸೂಚಿಗಳನ್ನು ಒದಗಿಸಿತ್ತು ಎಂಬುದನ್ನೂ ನ್ಯಾಯಾಲಯದ ಗಮನಕ್ಕೆ ತಂದಿದೆ.

ಈ ಬಗ್ಗೆ 2023ರ ಮೇ 19ರಂದು ಆ ರಾಜ್ಯಗಳಿಗೆ ಜ್ಞಾಪನಾ ಪತ್ರವನ್ನು ಕಳುಹಿಸಿದ್ದು, ಒಂದು ವೇಳೆ ಅಧ್ಯಯನ ಕೈಗೊಳ್ಳದಿದ್ದಲ್ಲಿ ಅಂಥವರು ಕ್ರಿಯಾಯೋಜನೆ ಸಲ್ಲಿಸಿ, ಆದಷ್ಟು ಬೇಗ ಧಾರಣಾ ಸಾಮರ್ಥ್ಯದ ಅಧ್ಯಯನ ಕೈಗೊಳ್ಳಬಹುದು ಎಂದೂ ವಿನಂತಿಸಲಾಗಿದೆ ಎಂದೂ ಸರ್ಕಾರವು ತಿಳಿಸಿದೆ.

ಪಟ್ನಾ ಹೈಕೋರ್ಟ್, ವಿಚಾರಣಾ ನ್ಯಾಯಾಲಯ, ಪೊಲೀಸರಿಂದ ಗಂಭೀರ ಲೋಪ: ನ್ಯಾಯಪೀಠ

ಅತ್ಯಾಚಾರ, ಕೊಲೆ ಪ್ರಕರಣ: ಗಲ್ಲು ಶಿಕ್ಷೆ ರದ್ದು

ಪ್ರಜಾವಾಣಿ ವಾರ್ತೆ

ನವದೆಹಲಿ: 10 ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿ, ಕೊಲೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿ ಅಪರಾಧಿಗೆ ನೀಡಿದ್ದ ಮರಣ ದಂಡನೆಯನ್ನು ಸುಪ್ರೀಂಕೋರ್ಟ್ ರದ್ದುಪಡಿಸಿದೆ.

ಈ ಪ್ರಕರಣದ ವಿಚಾರಣೆಗೆ ಸಂಬಂಧಿಸಿ ಪೊಲೀಸ್, ಪ್ರಾಸಿಕ್ಯೂಷನ್, ವಿಚಾರಣಾ ನ್ಯಾಯಾಲಯ ಹಾಗೂ ಹೈಕೋರ್ಟ್‌ನಿಂದ ಗಂಭೀರ ಲೋಪವಾಗಿದೆ ಎಂದು ಅಭಿಪ್ರಾಯಪಟ್ಟಿರುವ ಸುಪ್ರೀಂಕೋರ್ಟ್, ಪ್ರಕರಣವನ್ನು ಪಟ್ನಾ ಹೈಕೋರ್ಟ್‌ಗೆ ಮತ್ತೆ ವರ್ಗಾಯಿಸಿದೆ.

ಅಪರಾಧಿ ಮುನ್ನಾ ಪಾಂಡೆ ಸಲ್ಲಿಸಿರುವ ಕ್ರಿಮಿನಲ್ ಮೇಲ್ಮನವಿ ಹಾಗೂ ಮರಣ ದಂಡನೆ ಕುರಿತು ಹೊಸದಾಗಿ ವಿಚಾರಣೆ ನಡೆಸುವಂತೆಯೂ ಹೈಕೋರ್ಟ್‌ಗೆ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಜೆ.ಬಿ.ಪಾರ್ದೀವಾಲಾ ಹಾಗೂ ಪ್ರಶಾಂತಕುಮಾರ್ ಮಿಶ್ರಾ ಅವರಿದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿದೆ. 2015ರಲ್ಲಿ ನಡೆದಿದ್ದ ಪ್ರಕರಣ ಇದಾಗಿದೆ.

'10 ವರ್ಷದ ಬಾಲಕಿಗೆ ಆಮಿಷ ಒಡ್ಡಿ, ಆಕೆ ಮೇಲೆ ಅತ್ಯಾಚಾರ ಎಸಗಿ, ನಂತರ ಕೊಲೆ ಮಾಡಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲನೆ ನಡೆಸಿದ ನಂತರ, ನಮ್ಮಲ್ಲಿ ಸಂಶಯ ಮನೆ ಮಾಡಿತು. ಅಂತಿಮವಾಗಿ ಆಘಾತಕಾರಿ ಸಂಗತಿಯೊಂದನ್ನು ಗಮನಿಸಿದೆವು' ಎಂದು ನ್ಯಾಯಮೂರ್ತಿಗಳು ಹೇಳಿದ್ದಾರೆ. 'ಈ ಆಘಾತಕಾರಿ ಸಂಗತಿ ನಮ್ಮ ಹಂತದಲ್ಲಿಯೂ ಗಮನಕ್ಕೆ ಬಾರದೇ ಹೋಗಿದ್ದಲ್ಲಿ, ಅದು ಗಂಭೀರವಾದ ನ್ಯಾಯ ವ್ಯವಸ್ಥೆಯ ವೈಫಲ್ಯವಾಗುತ್ತಿತ್ತು' ಎಂದು ನ್ಯಾಯಮೂರ್ತಿಗಳು ಹೇಳಿದ್ದಾರೆ.

'ಪ್ರಕರಣದಲ್ಲಿ ಸಹ ತಪ್ಪಿತಸ್ಥ ಬಾಲಕ ಆ ದುರಂತದ ದಿನ ಸಂತ್ರಸ್ತೆಯ ಮನೆಗೆ ಬಂದಿದ್ದ. ಟಿವಿ ನೋಡುವುದಕ್ಕಾಗಿ ಆತನೇ ಸಂತ್ರಸ್ತೆಯನ್ನು ತನ್ನ ಮನೆಗೆ ಕರೆದೊಯ್ದಿದ್ದ. ಬಾಲಕಿ ಕುರಿತು ನಾವು ವಿಚಾರಿಸಿದ ಸಂದರ್ಭದಲ್ಲಿ ಬಾಲಕನೇ ಮನೆ ಬಾಗಿಲಿಗೆ ಬೀಗ ಹಾಕುತ್ತಿದ್ದದ್ದು ಕಂಡುಬಂದಿತ್ತು ಎಂಬುದಾಗಿ ಎಲ್ಲ ಸಾಕ್ಷಿಗಳು ಪೊಲೀಸರ ಮುಂದೆ ಹೇಳಿಕೆ ನೀಡಿದ್ದಾರೆ' ಎಂಬ ಅಂಶವನ್ನು ನ್ಯಾಯಪೀಠ ಗಮನಿಸಿದೆ.

'ಸರ್ಕಾರಿ ವಕೀಲರಾಗಲಿ, ಪ್ರತಿಪಾದಿ ಪರ ವಕೀಲರಾಗಲಿ, ವಿಚಾರಣಾ ನ್ಯಾಯಾಲಯದ ನ್ಯಾಯಾಧೀಶರಾಗಲಿ ಈ ಸಂಗತಿ ಕುರಿತು ಸರಿಯಾಗಿ ಪರಿಶೀಲನೆ ನಡೆಸಿಲ್ಲ. ಸತ್ಯವನ್ನು ಹೊರತರಲು ಯತ್ನಿಸಿಲ್ಲ. ದುರದೃಷ್ಟವಶಾತ್, ಹೈಕೋರ್ಟ್ ಕೂಡ ಈ ವಿಷಯದಲ್ಲಿ ಚಿಂತನೆ ನಡೆಸಿಲ್ಲ' ಎಂದು ನ್ಯಾಯಪೀಠ ಹೇಳಿದೆ.

'ಪ್ರಕರಣದ ವಿಚಾರಣೆ ವೇಳೆ, ಪ್ರತಿವಾದಿಗಳ ಪರ ವಕೀಲ ಹಾಗೂ ಸರ್ಕಾರಿ ವಕೀಲರು ಸಾಕ್ಷಿಗಳನ್ನು ಸಮರ್ಪಕವಾಗಿ ಪಾಟಿ ಸವಾಲಿಗೆ ಒಳಪಡಿಸುವಲ್ಲಿ ವಿಫಲರಾಗಿದ್ದಾರೆ. ವಿಚಾರಣಾ ನ್ಯಾಯಾಲಯದ ನ್ಯಾಯಾಧೀಶರು ಮೂಕ ಪ್ರೇಕ್ಷಕರಂತೆ ವರ್ತಿಸಿದ್ದಾರೆ' ಎಂದೂ ಪೀಠ ಹೇಳಿದೆ.

'ಮರಣ ದಂಡನೆ ವಿಧಿಸಿದ ಸಂದರ್ಭದಲ್ಲಿ, ಸೆಷನ್ಸ್ ಕೋರ್ಟ್ ಹೊರಡಿಸಿದ ಆದೇಶ ಸರಿ ಇದೆಯೇ ಎಂಬುದನ್ನು ಪರಿಶೀಲಿಸುವುದು ಮಾತ್ರವಲ್ಲ, ಇನ್ನೂ ಹೆಚ್ಚಿನ ತನಿಖೆ ಅಥವಾ ಹೆಚ್ಚುವರಿ ಸಾಕ್ಷ್ಯಗಳ ಸಂಗ್ರಹಕ್ಕೆ ಹೈಕೋರ್ಟ್ ನಿರ್ದೇಶಿಸಬೇಕಿತ್ತು' ಎಂದು ಹೇಳಿದೆ.

'ಪೊಲೀಸರು ಕೂಡ ವಿಧಿವಿಜ್ಞಾನ ಪ್ರಯೋಗಾಲಯದ ವರದಿಯನ್ನು ಸಂಗ್ರಹಿಸಿಲ್ಲ ಇಲ್ಲವೇ ಕೋರ್ಟ್‌ಗೆ ಹಾಜರುಪಡಿಸಿಲ್ಲ. ಬಂಧನದ ನಂತರ, ಮೇಲ್ಮನವಿದಾರನನ್ನು (ಮುನ್ನಾ ಪಾಂಡೆ) ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿಲ್ಲ. ಅತ್ಯಾಚಾರ ಸಂತ್ರಸ್ತೆಯನ್ನು ಹತ್ಯೆ ಮಾಡಿರುವಂತಹ ಈ ಪ್ರಕರಣದಲ್ಲಿ ಈ ಎಲ್ಲ ಸಂಗತಿಗಳಿಗೆ ಮಹತ್ವ ಇದೆ ಎಂಬುದನ್ನು ಪೊಲೀಸರು ಅರಿಯಬೇಕಿತ್ತು' ಎಂದು ಹೇಳುವ ಮೂಲಕ ನ್ಯಾಯಪೀಠವು ಪ್ರಕರಣಕ್ಕೆ ಸಂಬಂಧಿಸಿ ಆಗಿರುವ ಗಂಭೀರ ಲೋಪಗಳನ್ನು ವಿವರಿಸಿದೆ.

ಸುಪ್ರೀಂ ಕೋರ್ಟ್‌ಗೆ ಅಕ್ಬರ್ ಲೋನ್ ಪ್ರಮಾಣಪತ್ರ ಸಲ್ಲಿಕೆ

ನವದೆಹಲಿ (ಪಿಟಿಐ): ನ್ಯಾಷನಲ್ ಕಾನ್ಫರೆನ್ಸ್ ನಾಯಕ ಮೊಹಮ್ಮದ್ ಅಕ್ಬರ್ ಲೋನ್ ಅವರು, 'ಭಾರತ ಸಂವಿಧಾನವನ್ನು ಗೌರವಿಸುತ್ತೇನೆ ಮತ್ತು ದೇಶದ ಪ್ರಾದೇಶಿಕ ಸಮಗ್ರತೆಯನ್ನು ರಕ್ಷಿಸುತ್ತೇನೆ' ಎಂದು ಸುಪ್ರೀಂ ಕೋರ್ಟ್‌ನಲ್ಲಿ ಮಂಗಳವಾರ ಪ್ರಮಾಣಪತ್ರ ಸಲ್ಲಿಸಿದರು.

ಜಮ್ಮು ಮತ್ತು ಕಾಶ್ಮೀರಕ್ಕೆ 370ನೇ ವಿಧಿಯಡಿ ನೀಡಿದ್ದ ವಿಶೇಷ ಸ್ಥಾನಮಾನ ರದ್ದತಿ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ಕುರಿತು ಸೋಮವಾರ ವಿಚಾರಣೆ ನಡೆಯಿತು. ಈ ಸಂದರ್ಭದಲ್ಲಿ ಅಕ್ಬರ್ ಲೋನ್ ಅವರು 2018ರಲ್ಲಿ ವಿಧಾನಸಭೆಯಲ್ಲಿ 'ಪಾಕಿಸ್ತಾನ ಜಿಂದಾಬಾದ್' ಘೋಷಣೆ ಕೂಗಿದ್ದಾರೆ ಎಂಬ ಆರೋಪದ ಬಗ್ಗೆ ತೀವ್ರ ಚರ್ಚೆಯಾಯಿತು. ಆಗ 'ಸಂವಿಧಾನದ ಬಗ್ಗೆ ತಮಗೆ ನಿಷ್ಠೆ ಇದೆ' ಎಂದು ಅಕ್ಬರ್ ಲೋನ್ ಪ್ರಮಾಣ ಪತ್ರ ಸಲ್ಲಿಸಬೇಕು ಸುಪ್ರೀಂ ಕೋರ್ಟ್ ತಾಕೀತು ಮಾಡಿತ್ತು.

ಲೋನ್ ಪರ ಹಾಜರಿದ್ದ ಹಿರಿಯ ವಕೀಲ ಕಪಿಲ್ ಸಿಬಲ್ ಅವರು ಐವರು ನ್ಯಾಯಮೂರ್ತಿಗಳನ್ನು ಒಳಗೊಂಡ ನ್ಯಾಯಪೀಠಕ್ಕೆ ಪ್ರಮಾಣ ಪತ್ರ ಸಲ್ಲಿಸಿದರು. ಅದನ್ನು ಪರಿಶೀಲಿಸುವುದಾಗಿ ಕೋರ್ಟ್ ತಿಳಿಸಿತು.

ಕೇಂದ್ರ ಸರ್ಕಾರದ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ಪ್ರಮಾಣ ಪತ್ರದಲ್ಲಿದ್ದ, 'ಭಾರತ ಒಕ್ಕೂಟದ ಜವಾಬ್ದಾರಿಯುತ ಮತ್ತು ಕರ್ತವ್ಯ ನಿಷ್ಠೆ ಇರುವ ಪ್ರಜೆ ನಾನು. ಸಂವಿಧಾನದ 32ನೇ ವಿಧಿಯಡಿ ಈ ನ್ಯಾಯಾಲಯದ ಮೆಟ್ಟಿಲೇರುವ ಹಕ್ಕನ್ನು ಚಲಾಯಿಸಿದ್ದೇನೆ' ಎಂಬ ಸಾಲಿನ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು.

ಸಂಕ್ಷಿಪ್ತ ಸುದ್ದಿ

ಕೇಜ್ರಿವಾಲ್ ಪತ್ನಿಗೆ ಕೋರ್ಟ್ ಸಮನ್ಸ್

ನವದೆಹಲಿ (ಪಿಟಿಐ): ಎರಡು ವಿಧಾನಸಭಾ ಕ್ಷೇತ್ರಗಳ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿದ ಆರೋಪಕ್ಕೆ ಸಂಬಂಧಿಸಿದಂತೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಪತ್ನಿ ಸುನಿತಾ ಕೇಜ್ರಿವಾಲ್ ಅವರಿಗೆ ದೆಹಲಿ ಕೋರ್ಟ್ ಸಮನ್ಸ್ ಜಾರಿ ಮಾಡಿದೆ.

ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಅರ್ಜಿಂದರ್ ಕೌರ್ ಅವರು, ನ.18ರಂದು ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಿದ್ದಾರೆ.

ಬಿಜೆಪಿ ನಾಯಕ ಹರೀಶ್ ಖುರಾನಾ, 'ಸುನಿತಾ ಕೇಜ್ರಿವಾಲ್, ಉತ್ತರ ಪ್ರದೇಶದ ಸಾಹಿಬಾಬಾದ್ ಮತ್ತು ದೆಹಲಿಯ ಚಾಂದನಿ ಚೌಕ್ ವಿಧಾನಸಭಾ ಕ್ಷೇತ್ರಗಳ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿದ್ದಾರೆ. ಈ ಮೂಲಕ ಜನ ಪ್ರಾತಿನಿಧ್ಯ ಕಾಯ್ದೆ (ಆರ್‌ಪಿ) ಉಲ್ಲಂಘಿಸಿದ್ದಾರೆ ಎಂದು ದೂರು ನೀಡಿದ್ದರು.

'ಎಡಿಟರ್ಸ್ ಗಿಲ್ಡ್‌ಗೆ ಬಿರೇನ್ ಬೆದರಿಕೆ'

ನವದೆಹಲಿ (ಪಿಟಿಐ): 'ಮಣಿಪುರ ಘರ್ಷಣೆಯ ಕುರಿತಾದ ತಮ್ಮ ವರದಿಗಾರಿಕೆ ಮತ್ತು ಮಾಧ್ಯಮ ಪ್ರಸಾರದ ಬಗ್ಗೆ ಅಲ್ಲಿನ ಮುಖ್ಯಮಂತ್ರಿ ಎನ್. ಬಿರೇನ್ ಸಿಂಗ್ ಅವರು ಪ್ರತಿಕ್ರಿಯಿಸಿರುವ ರೀತಿ ಬೆದರಿಕೆಯೊಡ್ಡುವಂಥದ್ದು' ಎಂದು ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯಾ (ಇಜಿಐ) ಮಂಗಳವಾರ ತಿಳಿಸಿದೆ.

ಅಲ್ಲದೇ, 'ಅಧ್ಯಕ್ಷ ಹಾಗೂ ಇಬ್ಬರು ಸದಸ್ಯರ ವಿರುದ್ಧ ದಾಖಲಿಸಿರುವ ಎಫ್‌ಐಆರ್‌ಗಳನ್ನು ರದ್ದುಪಡಿಸಬೇಕು' ಎಂದೂ ಆಗ್ರಹಿಸಿದೆ.

'ಪತ್ರಕರ್ತರನ್ನು ಹಾಗೂ ಪತ್ರಿಕೋದ್ಯಮವನ್ನು ರಾಜ್ಯ ವಿರೋಧಿ ಹಾಗೂ ದೇಶ ವಿರೋಧಿ ಎಂದು ಬಿರೇನ್ ಅವರು ಉಲ್ಲೇಖಿಸಿರುವುದು ಕಳವಳಪಡುವ ಸಂಗತಿ' ಎಂದೂ ಅದು ಹೇಳಿದೆ.

ಹಿಂಸಾಚಾರ ಕುರಿತು ಮಾಧ್ಯಮ ಪ್ರಸಾರವನ್ನು ಪರಿಶೀಲಿಸಲು ಮಣಿಪುರಕ್ಕೆ ಭೇಟಿ ನೀಡಿದ್ದ ಇಜಿಐ ಅಧ್ಯಕ್ಷೆ ಸೀಮಾ ಮುಸ್ತಫಾ ಮತ್ತು ಸತ್ಯಶೋಧನಾ ತಂಡದ ಮೂವರು ಸದಸ್ಯರ ವಿರುದ್ಧ ಅಲ್ಲಿನ ಪೊಲೀಸರು ಸೋಮವಾರ ಎಫ್‌ಐಆರ್ ದಾಖಲಿಸಿದ್ದಾರೆ.

'ಭಾರತ್ ಮಾತಾ ಕಿ ಜೈ' ಘೋಷಣೆ ವಿರುದ್ಧ ಕಿಡಿಕಾರಿದ ಮಿಶ್ರಾ: ಆರೋಪ

ಜೈಪುರ (ಪಿಟಿಐ): ಸಭೆಯೊಂದರಲ್ಲಿ ಪಕ್ಷದ ಕಾರ್ಯಕರ್ತರು 'ಭಾರತ್ ಮಾತಾ ಕಿ ಜೈ' ಎಂದು ಘೋಷಣೆ ಕೂಗಿದ್ದಕ್ಕೆ ವಾಗ್ದಂಡನೆ ವಿಧಿಸಿದ ಆರೋಪದಲ್ಲಿ ನಾಯಕಿ ಆರಾಧನಾ ಮಿಶ್ರಾ ಅವರು ವಿವಾದಕ್ಕೊಳಗಾಗಿದ್ದಾರೆ.

ಘಟನೆಯ ಕುರಿತು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿರುವ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು, 'ಕಾಂಗ್ರೆಸ್ ಪಕ್ಷ 'ಭಾರತ ಮಾತಾ ಕಿ ಜೈ' ಎಂಬ ಘೋಷಣೆಯನ್ನು ಯಾಕೆ ದ್ವೇಷಿಸುತ್ತದೆ' ಎಂದು ಮಂಗಳವಾರ ಪ್ರಶ್ನಿಸಿದ್ದಾರೆ. 'ಕಾಂಗ್ರೆಸ್‌ಗೆ ದೇಶ ಅಥವಾ ಸಂವಿಧಾನ ಮತ್ತು ಸಾಂವಿಧಾನಿಕ ಸಂಸ್ಥೆಗಳ ಬಗ್ಗೆ ಗೌರವ ಇಲ್ಲ. ಒಂದು ಕುಟುಂಬವನ್ನು ವೈಭವೀಕರಿಸುವುದಕ್ಕೆ ಮಾತ್ರ ಆ ಪಕ್ಷಕ್ಕೆ ಕಾಳಜಿ' ಎಂದೂ ಆರೋಪಿಸಿದ್ದಾರೆ.

ರಾಜಸ್ಥಾನ ಬಿಜೆಪಿಯ ಯುವ ಘಟಕವು ಕಾಂಗ್ರೆಸ್ ವಿರುದ್ಧ ಬುಧವಾರ ಪ್ರತಿಭಟನೆ ನಡೆಸುವುದಾಗಿ ಘೋಷಿಸಿದೆ.

ರಾಜಸ್ಥಾನದಲ್ಲಿ ಕಾಂಗ್ರೆಸ್‌ನ ಚುನಾವಣಾ ವೀಕ್ಷಕರಾಗಿರುವ ಆರಾಧನಾ ಮಿಶ್ರಾ ಅವರು, 'ಈ ಘಟನೆಯನ್ನು ತಪ್ಪಾಗಿ ಅರ್ಥೈಸಲಾಗಿದೆ. ಯಾವುದೇ ಅಭ್ಯರ್ಥಿಯ ಪರವಾಗಿ ಘೋಷಣೆ ಕೂಗದಂತೆ ಪಕ್ಷದ ಕಾರ್ಯಕರ್ತರಿಗೆ ಹೇಳಿದ್ದೆ' ಎಂಬುದಾಗಿ ಸ್ಪಷ್ಟನೆ ನೀಡಿದ್ದಾರೆ.

ಘಟನೆಯ ವಿವರ: ರಾಜಸ್ಥಾನದ ವಿಧಾನಸಭಾ ಚುನಾವಣೆಗೆ ಪಕ್ಷದಿಂದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಸೋಮವಾರ ಸಭೆ ಕರೆಯಲಾಗಿತ್ತು. ಈ ವೇಳೆ ಅಭ್ಯರ್ಥಿಗಳ ಎರಡು ಗುಂಪುಗಳ ನಡುವೆ ಜಗಳ ನಡೆದಿತ್ತು. ಅಲ್ಲಿ ಚುನಾವಣಾ ವೀಕ್ಷಕರಾಗಿ ಆಗಮಿಸಿದ್ದ ಆರಾಧನಾ ಮಿಶ್ರಾ ಅವರು ಯಾವೊಬ್ಬ ಅಭ್ಯರ್ಥಿಯ ಪರವಾಗಿ ಘೋಷಣೆ ಕೂಗದಂತೆ ತಾಕೀತು ಮಾಡಿದ್ದರು.

ಆಗ ಕಾಂಗ್ರೆಸ್ ಕಾರ್ಯಕರ್ತರು 'ಭಾರತ್ ಮಾತಾ ಕಿ ಜೈ' ಎಂದು ಘೋಷಣೆ ಕೂಗಿದ್ದರು.

ಉದಯನಿಧಿ ಮಾಡಿದ್ದು ದ್ವೇಷ ಭಾಷಣ, ಕ್ರಮ ಜರುಗಿಸಿ: ಸಿಜೆಐಗೆ ಪ್ರಮುಖರ ಪತ್ರ

ನವದೆಹಲಿ (ಪಿಟಿಐ): 'ಸನಾತನ ಧರ್ಮದ ನಿರ್ಮೂಲನೆ ಕುರಿತ ಡಿಎಂಕೆ ಸಚಿವ ಉದಯನಿಧಿ ಸ್ಟಾಲಿನ್ ಅವರ ಹೇಳಿಕೆಯು 'ದ್ವೇಷ ಭಾಷಣ'ವಾಗಿದೆ. ಅವರ ವಿರುದ್ಧ ಸೂಕ್ತ ಕ್ರಮಜರುಗಿಸಬೇಕು' ಎಂದು ಕೋರಿ 262 ಪ್ರಮುಖ ನಾಗರಿಕರು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅವರಿಗೆ ಪತ್ರ ಬರೆದಿದ್ದಾರೆ.

'ಸ್ಟಾಲಿನ್ ಅವರು ದ್ವೇಷ ಭಾಷಣವನ್ನು ಮಾಡಿರುವುದಷ್ಟೇ ಅಲ್ಲ, ಅದಕ್ಕಾಗಿ ಕ್ಷಮೆ ಕೇಳಲೂ ನಿರಾಕರಿಸಿದ್ದಾರೆ' ಎಂದು ಪತ್ರದಲ್ಲಿ ಪ್ರಮುಖ ನಾಗರಿಕರು ಗಮನಸೆಳೆದಿದ್ದಾರೆ.

ದೆಹಲಿ ಹೈಕೋರ್ಟ್‌ನ ಮಾಜಿ ನ್ಯಾಯಮೂರ್ತಿ ಎಸ್.ಎನ್.ಧಿಂಗ್ರಾ ಅವರು ಸೇರಿದಂತೆ 14 ಮಂದಿ ನಿವೃತ್ತ ನ್ಯಾಯಮೂರ್ತಿಗಳು, 130 ಮಂದಿ ಮಾಜಿ ಅಧಿಕಾರಿಗಳು, ಸೇನಾಪಡೆಗಳ 118 ಮಾಜಿ ಅಧಿಕಾರಿಗಳು ಪತ್ರಕ್ಕೆ ಸಹಿ ಹಾಕಿದ್ದಾರೆ.

ಭಾರತದ ದೊಡ್ಡ ಜನಸಂಖ್ಯೆಯ ವಿರುದ್ಧದ ದ್ವೇಷ ಭಾಷಣ ಇದಾಗಿದೆ. ಭಾರತವು ಜಾತ್ಯಾತೀತ ರಾಷ್ಟ್ರ ಎಂಬ ಸಂವಿಧಾನದ ಆಶಯಕ್ಕೆ ವಿರುದ್ಧವಾಗಿದೆ. ಅವರ ವಿರುದ್ಧ ಕ್ರಮ ಅಗತ್ಯ ಎಂದು ಅಭಿಪ್ರಾಯಪಟ್ಟಿದ್ದಾರೆ.

ಗಂಭೀರ ಸ್ವರೂಪದ ಈ ವಿಷಯದಲ್ಲಿ ಕ್ರಮಕೈಗೊಳ್ಳುವಲ್ಲಿ ವಿಳಂಬವಾದಲ್ಲಿ ಅದು ನ್ಯಾಯಾಂಗ ನಿಂದನೆಯಾಗಲಿದೆ. ರಾಜ್ಯ ಸರ್ಕಾರ ಕ್ರಮ ಜರುಗಿಸಲು ನಿರಾಕರಿಸಿದ್ದು, ಈ ನೆಲದ ಕಾನೂನನ್ನು ಅಣಕ ಮಾಡುವಂತಿದೆ ಎಂದು ಪತ್ರದಲ್ಲಿ ಗಮನಸೆಳೆದಿದ್ದಾರೆ. ನ್ಯಾಯಾಂಗ ನಿಂದನೆ ಕುರಿತಂತೆ ಸುಪ್ರೀಂ ಕೋರ್ಟ್ ಸ್ವಯಂಪ್ರೇರಿತ ಕ್ರಮಕ್ಕೆ ಮುಂದಾಗಬೇಕು. ಕ್ರಮಜರುಗಿಸಲು ರಾಜ್ಯ ಸರ್ಕಾರ ವಿಫಲವಾಗಿರುವ ಕಾರಣ ದ್ವೇಷ ಭಾಷಣ ತಡೆಯಲು ನಿರ್ಣಾಯಕ ಹೆಜ್ಜೆ ಇಡಬೇಕು. ಸಮಾಜದಲ್ಲಿ ಶಾಂತಿ ರಕ್ಷಣೆಗೆ ಸೂಕ್ತ ಕ್ರಮ ಅಗತ್ಯ ಎಂದು ಹೇಳಿದ್ದಾರೆ.

ದ್ವೇಷ ಭಾಷಣ ಪ್ರಕರಣಗಳಲ್ಲಿ ಮೊಕದ್ದಮೆ ದಾಖಲಾಗುವವರೆಗೂ ಕಾಯದೇ ಕ್ರಮಜರುಗಿಸಬೇಕು ಎಂದು ಸುಪ್ರೀಂ ಕೋರ್ಟ್ ಹಿಂದೆ ರಾಜ್ಯ ಸರ್ಕಾರಗಳಿಗೆ ಆದೇಶಿಸಿತ್ತು ಎಂದು ಉಲ್ಲೇಖಿಸಿದ್ದಾರೆ. 'ಶಾಹೀನ್ ಅಬ್ದುಲ್ಲಾ ವರ್ಸಸ್ ಭಾರತ ಸರ್ಕಾರ ಮತ್ತು ಇತರರು' ಪ್ರಕರಣದಲ್ಲಿ ಈ ಆದೇಶ ನೀಡಲಾಗಿತ್ತು ಎಂದು ಉಲ್ಲೇಖಿಸಿದ್ದಾರೆ.

ತಮಿಳುನಾಡಿನಲ್ಲಿ ನಡೆದಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ್ದ ಉದಯನಿಧಿ ಸ್ಟಾಲಿನ್, ಸನಾತನ ಧರ್ಮವನ್ನು ಮಲೇರಿಯಾ ಮತ್ತು ಕೊರೊನಾ ಸೋಂಕಿಗೆ ಹೋಲಿಸಿದ್ದರು. ಇದರ ನಿರ್ಮೂಲನೆ ಮಾಡಬೇಕು ಎಂದು ಹೇಳಿದ್ದರು. ಇದು ವಿವಾದಾಸ್ಪದವಾಗಿದ್ದು, ರಾಷ್ಟ್ರವ್ಯಾಪಿ ಚರ್ಚೆಗೆ ಗ್ರಾಸವಾಗಿದೆ.

ಜ್ಞಾನವಾಪಿ ಸಮೀಕ್ಷೆ ಅವಧಿ ವಿಸ್ತರಣೆ ಮಸೀದಿ ಸಮಿತಿಯಿಂದ ಆಕ್ಷೇಪಣೆ

ವಾರಾಣಸಿ (ಉತ್ತರ ಪ್ರದೇಶ) (ಪಿಟಿಐ): ಜ್ಞಾನವಾಪಿ ಮಸೀದಿಯ ವೈಜ್ಞಾನಿಕ ಸಮೀಕ್ಷೆಯನ್ನು ಪೂರ್ಣಗೊಳಿಸಿ ವರದಿ ಸಲ್ಲಿಸಲು ಎಂಟು ವಾರಗಳವರೆಗೆ ಕಾಲಾವಕಾಶ ವಿಸ್ತರಿಸುವಂತೆ ಕೋರಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು (ಎಎಸ್‌ಐ) ನ್ಯಾಯಾಲಯಕ್ಕೆ ಸಲ್ಲಿಸಿರುವ ಅರ್ಜಿಗೆ, ಮಸೀದಿಯ ನಿರ್ವಹಣಾ ಸಮಿತಿಯು ಆಕ್ಷೇಪ ವ್ಯಕ್ತಪಡಿಸಿದೆ.

ಅಂಜುಮನ್ ಇಂತೇ ಜಾಮಿಯಾ ಮಸೀದಿ ಸಮಿತಿಯು ಸೋಮವಾರ ಆಕ್ಷೇಪಣಾ ಅರ್ಜಿ ಸಲ್ಲಿಸಿದೆ. ಸಮೀಕ್ಷೆ ನಡೆಸುವುದಷ್ಟೇ ಇಲಾಖೆಯ ಅಧಿಕಾರಿಗಳ ಕೆಲಸ. ಆದರೆ, ಯಾವುದೇ ಅನುಮತಿ ಇಲ್ಲದೆಯೇ ಮಸೀದಿ ಸಂಕೀರ್ಣದ ತಳಪಾಯ ಸೇರಿದಂತೆ ಹಲವೆಡೆ ಸಮೀಕ್ಷೆಗಾಗಿ ಅಗೆಯಲಾಗಿದೆ. ಇದು ಮಸೀದಿಯ ಸ್ವರೂಪಕ್ಕೆ ಅಪಾಯ ತರುತ್ತಿದೆ ಎಂದು ಅರ್ಜಿಯಲ್ಲಿ ಪ್ರಸ್ತಾಪಿಸಲಾಗಿದೆ.

ಎಎಸ್‌ಐ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾಯಾಲಯವು ಸೆಪ್ಟೆಂಬರ್ 8ಕ್ಕೆ ಮುಂದೂಡಿದೆ.

ಮಸೀದಿಯ ಸಮೀಕ್ಷೆ ನಡೆಸಲು ವಾರಾಣಸಿ ಜಿಲ್ಲಾ ನ್ಯಾಯಾಲಯವು ಜುಲೈ 21ರಂದು ಎಎಸ್‌ಐಗೆ ಅನುಮತಿ ನೀಡಿತ್ತು.

ಗ್ಯಾಸ್ ಪೈಪ್‌ಲೈನ್ ಯೋಜನೆಗಾಗಿ ಲಂಚ: ಕೆ.ಬಿ.ಸಿಂಗ್ ಬಂಧನ

ನವದೆಹಲಿ (ಪಿಟಿಐ): ಗ್ಯಾಸ್ ಪೈಪ್ ಲೈನ್ ಯೋಜನೆಗಳಲ್ಲಿ ಗುತ್ತಿಗೆದಾರರಿಗೆ ಅನುಕೂಲ ಮಾಡಿಕೊಡಲು ₹50 ಲಕ್ಷ ಲಂಚ ಪಡೆದ ಆರೋಪದಲ್ಲಿ ಭಾರತೀಯ ಅನಿಲ ಪ್ರಾಧಿಕಾರದ (ಜಿಎಐಎಲ್) ಕಾರ್ಯನಿರ್ವಾಹಕ ನಿರ್ದೇಶಕ (ಯೋಜನೆ) ಕೆ. ಬಿ. ಸಿಂಗ್ ಅವರನ್ನು ಸಿಬಿಐ ಬಂಧಿಸಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಅಲ್ಲದೆ, ವಡೋದರಾ ಮೂಲದ 'ಅಡ್ವಾನ್ಸ್ ಇನ್ಫ್ರಾಸ್ಟ್ರಕ್ಚರ್ಸ್' ನಿರ್ದೇಶಕ ಸುರೇಂದರ್ ಕುಮಾರ್ ಸೇರಿದಂತೆ ಇತರ ಮೂವರನ್ನು ಬಂಧಿಸಲಾಗಿದೆ.

ಶ್ರೀಕಾಕುಳಂನಿಂದ ಅಂಗುಲ್ ಮತ್ತು ವಿಜಯಪುರದಿಂದ ಔರೈಯಾ ನಡುವಿನ ಎರಡು ಪೈಪ್‌ಲೈನ್ ಯೋಜನೆಗಳಿಗಾಗಿ ಕಂಪನಿಗಳಿಗೆ ಅನುಕೂಲ ಮಾಡಿಕೊಡಲು ಲಂಚ ಪಡೆಯಲಾಗಿದೆ ಎಂದು ಆರೋಪಿಸಲಾಗಿದೆ. ಹಣ ಕೈಬದಲಾಗುತ್ತಿರುವ ಬಗ್ಗೆ ಲಭ್ಯವಾದ ಮಾಹಿತಿ ಮೇರೆಗೆ ಸಿಬಿಐ ಸೋಮವಾರ ಕಾರ್ಯಾಚರಣೆ ನಡೆಸಿತ್ತು.

ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ, ನೋಯ್ಡಾ ಮತ್ತು ವಿಶಾಖಪಟ್ಟಣಂನ ಹಲವು ಸ್ಥಳಗಳಲ್ಲಿ ಶೋಧ ನಡೆಯುತ್ತಿದೆ ಎಂದು ಅವರು ಹೇಳಿದರು.

ರಾಹುಲ್ ಸಂಸದ ಸ್ಥಾನ ಮರುಸ್ಥಾಪನೆ ಅಧಿಸೂಚನೆ ರದ್ದತಿಗೆ ಮನವಿ

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಲೋಕಸಭಾ ಸದಸ್ಯತ್ವವನ್ನು ಮರುಸ್ಥಾಪನೆ ಮಾಡಿರುವ ಅಧಿಸೂಚನೆ ರದ್ದುಗೊಳಿಸಬೇಕೆಂದು ಕೋರಿ ಲಖನೌ ಮೂಲದ ವಕೀಲ ಅಶೋಕ್ ಪಾಂಡೆ ಅವರು ಮಂಗಳವಾರ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

'ಸಂವಿಧಾನದ 102ನೇ ವಿಧಿ ಮತ್ತು ಜನ ಪ್ರಾತಿನಿಧ್ಯ ಕಾಯ್ದೆ 1951ರ ಸೆಕ್ಷನ್ 8 (3)ರ ಪ್ರಕಾರ ಮತ್ತು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಬಿ.ಆರ್. ಕಪೂರ್ ವರ್ಸಸ್ ತಮಿಳುನಾಡು ಪ್ರಕರಣದಲ್ಲಿ ನೀಡಿರುವ ತೀರ್ಪುಗಳ ಅನ್ವಯ, ಮೇಲ್ಮನವಿ ಅರ್ಜಿ ವಿಚಾರಣೆ ಪೂರ್ಣಗೊಳ್ಳುವವರೆಗೂ ಮರುಸ್ಥಾಪನೆ ಮಾಡುವುದು ಸರಿಯಲ್ಲ ಮನವಿಯಲ್ಲಿ ತಿಳಿಸಲಾಗಿದೆ.

2019ರಲ್ಲಿ ರಾಹುಲ್ ಅವರು ಮೋದಿ ಉಪನಾಮ ಕುರಿತು ನೀಡಿದ್ದ ಹೇಳಿಕೆಗೆ ಸಂಬಂಧಿಸಿದಂತೆ ಸೂರತ್ ನ್ಯಾಯಾಲಯದಲ್ಲಿ ಮಾನನಷ್ಟ ಮೊಕದ್ದಮೆ ದಾಖಲಿಸಲಾಗಿತ್ತು. ಇದೇ ಮಾರ್ಚ್‌ನಲ್ಲಿ ಪ್ರಕರಣದ ವಿಚಾರಣೆ ನಡೆಸಿದ್ದ ನ್ಯಾಯಾಲಯ ರಾಹುಲ್ ಅವರನ್ನು ದೋಷಿ ಎಂದು ಪರಿಗಣಿಸಿ 2 ವರ್ಷ ಜೈಲು ಶಿಕ್ಷೆ ವಿಧಿಸಿತ್ತು. ಇದನ್ನು ಪ್ರಶ್ನಿಸಿ ಗುಜರಾತ್ ಹೈಕೋರ್ಟ್ ಮೊರೆ ಹೋಗಿದ್ದರು. ಅಲ್ಲಿ ಅವರಿಗೆ ಹಿನ್ನಡೆಯಾಗಿತ್ತು. ಬಳಿಕ ರಾಹುಲ್ ಅವರು ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದರು. ಮೇಲ್ಮನವಿ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್ ರಾಹುಲ್ ಅವರಿಗೆ ಶಿಕ್ಷೆ ವಿಧಿಸಿ ಸೂರತ್ ನ್ಯಾಯಾಲಯ ನೀಡಿದ್ದ ತೀರ್ಪಿಗೆ ಆಗಸ್ಟ್ 4ರಂದು ತಡೆ ನೀಡಿತ್ತು. ಇದಾದ ಬಳಿಕ ಅವರ ಲೋಕಸಭಾ ಸದಸ್ಯತ್ವವನ್ನು ಮರು ಸ್ಥಾಪನೆ ಮಾಡಲಾಗಿತ್ತು.

ತಂತ್ರಜ್ಞಾನ ಪುರವಣಿ ಓದಿರಿ

ಹಾಸನ ನಗರಾಭಿವೃದ್ಧಿ ಪ್ರಾಧಿಕಾರ ಬಿ.ಎಂ.ರಸ್ತೆ, ಹಾಸನ.

ನಂ: ಹನಪ್ರಾ/ಎಸ್.ಎಂ.ಕೆ.ನಗರ/ಮೂ.ನಿ/ವಾ.ನಿ/ಇ-ಹರಾಜು/ಪ್ರಕಟಣೆ/01/2023–24 ದಿನಾಂಕ:01.09.2023

ಟೆಂಡರ್ ಪ್ರಕಟಣೆ

ಹಾಸನ ನಗರಾಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿರುವ ಎಸ್.ಎಂ.ಕೆ.ನಗರ (Airport enclave) ವಸತಿ ಬಡಾವಣೆಯಲ್ಲಿ ಮೂಲೆ ನಿವೇಶನ, ವಾಣಿಜ್ಯ ನಿವೇಶನ ಮತ್ತು ಮಧ್ಯಂತರ ನಿವೇಶನಗಳ ಇ-ಹರಾಜು ಸಾರ್ವಜನಿಕ ಪ್ರಕಟಣೆ ಇ-ಹರಾಜನ್ನು ಆರಂಭಿಸುವ ದಿನಾಂಕ:05.09.2023 ಭಾರತೀಯ ಕಾಲಮಾನ 17.00 ಗಂಟೆಯ ನಂತರ ಇ-ಹರಾಜಿನಲ್ಲಿ ಪಾಲ್ಗೊಳ್ಳಲು, ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ:20.09.2023 ಭಾರತೀಯ ಕಾಲಮಾನ 17.00 ಗಂಟೆವರೆಗೆ ಕ್ರಮ ಸಂಖ್ಯೆ:01 ರಿಂದ 30 ರವರೆಗಿನ ನಿವೇಶನಗಳ ಇ-ಹರಾಜನ್ನು ಮುಕ್ತಾಯಗೊಳಿಸಲು ಕೊನೆಯ ದಿನಾಂಕ:25.09.2023 ಭಾರತೀಯ ಕಾಲಮಾನ 17.00ಗಂಟೆಗೆ (ಸಂಜೆ-5.00ಗಂಟೆ) (ಡೆಲ್ಟಾ ಟೈಮ್ 5.00 ನಿಮಿಷ) ಕ್ರಮ ಸಂಖ್ಯೆ:31 ರಿಂದ 60 ರವರೆಗಿನ ನಿವೇಶನಗಳ ಇ-ಹರಾಜನ್ನು ಮುಕ್ತಾಯಗೊಳಿಸಲು ಕೊನೆಯ ದಿನಾಂಕ:26.09.2023 ಭಾರತೀಯ ಕಾಲಮಾನ 17.00ಗಂಟೆಗೆ (ಸಂಜೆ-5.00ಗಂಟೆ) (ಡೆಲ್ಟಾ ಟೈಮ್ 5.00 ನಿಮಿಷ) ಕ್ರಮ ಸಂಖ್ಯೆ:61 ರಿಂದ 90 ರವರೆಗಿನ ನಿವೇಶನಗಳ ಇ-ಹರಾಜನ್ನು ಮುಕ್ತಾಯಗೊಳಿಸಲು ಕೊನೆಯ ದಿನಾಂಕ:27.09.2023 ಭಾರತೀಯ ಕಾಲಮಾನ 17.00ಗಂಟೆಗೆ (ಸಂಜೆ-5.00ಗಂಟೆ) (ಡೆಲ್ಟಾ ಟೈಮ್ 5.00 ನಿಮಿಷ) ಇ-ಹರಾಜಿನಲ್ಲಿ ಭಾಗವಹಿಸುವವರು, ಹರಾಜಿನಲ್ಲಿರುವ ನಿವೇಶನದ ಒಟ್ಟು ಮೌಲ್ಯ ರೂ.30.00 ಲಕ್ಷದವರೆಗೆ ಪಾವತಿ ಮಾಡಬೇಕಾದ ಇ.ಎಂ.ಡಿ ಹಣ ಪ್ರತಿ ನಿವೇಶನಕ್ಕೆ ರೂ.50,000/- ಹಾಗೂ ರೂ.30.00 ಲಕ್ಷಕ್ಕಿಂತ ಮೇಲ್ಪಟ್ಟ ಮೌಲ್ಯದ ನಿವೇಶನಗಳಿಗೆ ಇ.ಎಂ.ಡಿ ಹಣ ಪ್ರತಿ ನಿವೇಶನಕ್ಕೆ ರೂ.1,00,000/- ಕನಿಷ್ಠ ಬಿಡ್ ಬದಲಾವಣೆ ಮೊತ್ತ ನಿವೇಶನಗಳಿಗೆ ರೂ.10000/- ಗಳು. ಇ-ಹರಾಜಿನಲ್ಲಿ ಭಾಗವಹಿಸಲು ಹೆಚ್ಚಿನ ಮಾಹಿತಿಗಾಗಿ ನಿವೇಶನಗಳ ವಿವರಕ್ಕೆ ಸಂಪರ್ಕಿಸಬೇಕಾದ ಅಂತರ್ಜಾಲ https://kppp.karnataka.gov.in ನಿವೇಶನಗಳ ವಿವರ, ಅಳತೆ, ಹಾಗೂ ಷರತ್ತುಗಳು ಈ ಕೆಳಕಂಡಂತಿವೆ.

ಎಸ್.ಎಂ.ಕೆ.ನಗರ ವಸತಿ ಬಡಾವಣೆಯಲ್ಲಿ ಲಭ್ಯವಿರುವ ಮೂಲೆ ನಿವೇಶನಗಳ ವಿವರಗಳು (ಕ್ರ.ಸಂ. 01 ರಿಂದ 30)

ಕ್ರ.ಸಂ	ನಿವೇಶನ ಸಂಖ್ಯೆ	Site Facing of roads	ಅಳತೆ (ಮೀಟರ್‌ಗಳಲ್ಲಿ)		ವಿಸ್ತೀರ್ಣ ಚ.ಮೀ	ಪ್ರಾಧಿಕಾರದಿಂದ ನಿಗದಿಪಡಿಸಿರುವ ಕನಿಷ್ಠ ಬೆಲೆ(ಪ್ರತಿ. ಚ.ಅಡಿ ಒಂದಕ್ಕೆ ರೂ.2250/-
			ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ		
1	1	S-E	(15.00+17.00)/2	(4.80+12.80)/2	140.80	3408768
2	22	S-E	(15.00+16.30)/2	(9.40+15.90)/2	197.97	4792854
3	46	S-W	(12.00+13.00)/2	(6.80+12.10)/2	118.13	2859927
4	1149	N-W	(15.50+8.60)/2	(28.30+27.50)/2	336.19	8139160
5	1170	S-W	(16.00+18.50)/2	(8.17+17.00)/2	217.09	5255749
6	1510	S-W	12.00	(7.25+7.20)/2	86.70	2099007
7	1531	S-E	12.00	(7.35+7.30)/2	87.90	2128059
8	1628	S-E	12.00	12.00+11.92/2	143.70	3478977
9	1629	N-W	10.00	12.00	120.00	2905200
10	1712	S-W	(11.98+11.95)/2	(6.25+6.30)/2	75.08	1817687
11	1866	S-W	9.00	(7.65+7.64)/2	68.81	1665890
12	1934	S-W	10.20	12.00	146.4	3544344
13	1987	N-E	12.00	9.20	110.40	2672784
14	2002	S-W	(13.20+21.10)/2	(15.00+17.00)/2	274.40	6643224
15	2038	S-W	(11.30+17.60)/2	(12.00+13.60)/2	184.96	4477882
16	2148	S-W	12.00	9.20	110.40	2672784
17	2259	N-E	12.20	6.80	82.96	2008462
18	2371	S-W	(15+26.40)/2	(18.00+21.70)/2	410.90	9947889
19	2372	S-E	(7.40+15.00)/2	(12.00+14.40)/2	147.84	3579206
20	2463	N-E	(10.40+9.00)/2	(12.10+6.80)/2	91.67	2219331
21	2503	N-E	(13.90+12.00)/2	(19.10+12.30)/2	203.31	4922135
22	2579	N-E	(19.00+18.00)/2	(20.40+14.40)/2	321.90	7793199
23	2641	N-E	(15.10+15.00)/2	(14.90+12.50)/2	206.19	4991860
24	2835	S-E	15.10	15.00	226.50	5483565
25	3040	S-E	18.00	14.90	268.20	6493122
26	3507	S-W	15.00	24.00	360.00	8715600
27	3509	N-W	(15.10+20.70)/2	(24.60+24.00)/2	434.97	10530624
28	3654	N-E	15.00	(11.00+9.10)/2	150.75	3649658
29	3669	S-E	(14.40+11.40)/2	(15.00+15.20)/2	194.79	4715866
30	3750	S-E	(16.30+16.60)/2	(18.00+18.20)/2	297.75	7208528

ಎಸ್.ಎಂ.ಕೆ.ನಗರ ವಸತಿ ಬಡಾವಣೆಯಲ್ಲಿ ಲಭ್ಯವಿರುವ ಮೂಲೆ ಮತ್ತು ವಾಣಿಜ್ಯ ನಿವೇಶನಗಳ ವಿವರಗಳು (ಕ್ರ.ಸಂ. 31 ರಿಂದ 60)

ಕ್ರ.ಸಂ	ನಿವೇಶನ ಸಂಖ್ಯೆ	Site Facing of roads	ಅಳತೆ (ಮೀಟರ್‌ಗಳಲ್ಲಿ)		ವಿಸ್ತೀರ್ಣ ಚ.ಮೀ	ಪ್ರಾಧಿಕಾರದಿಂದ ನಿಗದಿಪಡಿಸಿರುವ ಕನಿಷ್ಠ ಬೆಲೆ(ಪ್ರತಿ. ಚ.ಅಡಿ ಒಂದಕ್ಕೆ ರೂ.2250/-
			ಪೂರ್ವ–ಪಶ್ಚಿಮ			
31	3762	N-E	(19.40+16.60)/2	(18.20+18.00)/2	325.80	7887618
32	3911	S-E	(12.30+12.00)/2	12.15	182.25	4412273
33	4083	N-E	(11.60+9.30)/2	(15.10+15.00)/2	157.27	3807507
34	4114	N-W	9.00	15.00	135.00	3268350
35	4142	S-E	15.00	9.00	135.00	3268350
36	4199	S-W	15.00	9.00	135.00	3268350
37	4447	S-W	(15.00+15.10)/2	(12.30+14.30)/2	200.17	4846116
38	4448	S-E	(18.00+18.20)/2	(17.00+19.60)/2	331.23	8019078
39	4476	N-E	(19.80+16.60)/2	(18.30+18.00)/2	330.33	7997289
40	4477	N-W	(15.90+13.70)/2	(15.20+15.00)/2	219.71	5319179

ಎಸ್.ಎಂ.ಕೆ.ನಗರ ವಸತಿ ಬಡಾವಣೆಯಲ್ಲಿ ಲಭ್ಯವಿರುವ ವಾಣಿಜ್ಯ ನಿವೇಶನಗಳ ವಿವರಗಳು

ಕ್ರ.ಸಂ	ನಿವೇಶನ ಸಂಖ್ಯೆ	Site Facing of roads	ಅಳತೆ (ಮೀಟರ್‌ಗಳಲ್ಲಿ)		ವಿಸ್ತೀರ್ಣ ಚ.ಮೀ	ಪ್ರಾಧಿಕಾರದಿಂದ ನಿಗದಿಪಡಿಸಿರುವ ಕನಿಷ್ಠ ಬೆಲೆ(ಪ್ರತಿ. ಚ.ಅಡಿ ಒಂದಕ್ಕೆ ರೂ.3250/-
			ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ		
41	6340	East	32.00+32.40/2	36.70	1181.74	41325448
42	6341	East	24.40	36.40	888.16	31058955
43	6342	East	24.40	36.10	878.40	30717648
44	6343	East	24.40	35.95	875.96	30632321
45	6344	East	24.40	36.20	883.28	30888302
46	6345	East	24.40	36.20	883.28	30888302
47	6346	East	24.40	36.00	878.40	30717648
48	6347	East	24.40	36.00	878.40	30717648
49	6348	East	24.40	36.00	878.40	30717648
50	6349	East	24.40	36.00	878.40	30717648
51	6350	East	24.40	36.00	878.40	30717648
52	6351	East	24.40	35.90	875.96	30632321
53	6352	East	24.40	35.80	873.52	30546994
54	6353	East	24.40	35.80	873.52	30546994
55	6354	East	24.40	35.80	873.52	30546994
56	6355	East	24.40	35.80	873.52	30546994
57	6356	N-E	Odd	site	967.80	33843940
58	6357	S-E	Odd	site	599.81	20975272
59	6364	East	45.80+25.50/2	24.95+10.40/2	629.93	22028652
60	6365	East	Odd	site	1013.17	35430554

ಎಸ್.ಎಂ.ಕೆ.ನಗರ ವಸತಿ ಬಡಾವಣೆಯಲ್ಲಿ ಲಭ್ಯವಿರುವ ಮಧ್ಯಂತರ ನಿವೇಶನಗಳ ವಿವರಗಳು (ಕ್ರ.ಸಂ. 61 ರಿಂದ 90) ಎಸ್.ಎಂ.ಕೆ.ನಗರ ವಸತಿ ಬಡಾವಣೆಯಲ್ಲಿ ಲಭ್ಯವಿರುವ 15*24ಮೀಟರ್ ಮತ್ತು ಅಳತೆ ಸಾಲಿನ ಮಧ್ಯಂತರ ನಿವೇಶನಗಳ

ಕ್ರ.ಸಂ	ನಿವೇಶನ ಸಂಖ್ಯೆ	Site Facing of roads	ಅಳತೆ (ಮೀಟರ್‌ಗಳಲ್ಲಿ)		ವಿಸ್ತೀರ್ಣ ಚ.ಮೀ	ಪ್ರಾಧಿಕಾರದಿಂದ ನಿಗದಿಪಡಿಸಿರುವ ಕನಿಷ್ಠ ಬೆಲೆ(ಪ್ರತಿ. ಚ.ಅಡಿ ಒಂದಕ್ಕೆ ರೂ.2000/-
			ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ		
61	6302	West	24.00	15.00	360.00	7747200
62	6313	East	32.80+34.30/2	15.00	503.25	10829940
63	6314	East	31.50+32.80/2	15.00	482.25	10378020

ಎಸ್.ಎಂ.ಕೆ.ನಗರ ವಸತಿ ಬಡಾವಣೆಯಲ್ಲಿ ಲಭ್ಯವಿರುವ 12*18ಮೀಟರ್ ಅಳತೆ ಸಾಲಿನ ಮಧ್ಯಂತರ ನಿವೇಶನಗಳ ವಿವರಗಳು

ಕ್ರ.ಸಂ	ನಿವೇಶನ ಸಂಖ್ಯೆ	Site Facing of roads	ಅಳತೆ (ಮೀಟರ್‌ಗಳಲ್ಲಿ)		ವಿಸ್ತೀರ್ಣ ಚ.ಮೀ	ಪ್ರಾಧಿಕಾರದಿಂದ ನಿಗದಿಪಡಿಸಿರುವ ಕನಿಷ್ಠ ಬೆಲೆ(ಪ್ರತಿ. ಚ.ಅಡಿ ಒಂದಕ್ಕೆ ರೂ.2000/-
			ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ		
64	3758	East	18.00	12.00	216.00	464832
65	4451	East	18.00	12.00	216.00	464832
66	5108	South	12.00	27.50+26.40/2	323.40	695957

ಲೋಕಾಯುಕ್ತಕ್ಕೆ ಹೈಕೋರ್ಟ್ ತಿವಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೊದಲು ನಿಮ್ಮ ಮನೆಯನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಿ' ಎಂದು ಹೈಕೋರ್ಟ್ ಲೋಕಾಯುಕ್ತ ಪೊಲೀಸರಿಗೆ ಕಟುವಾಗಿ ತಿವಿದಿದೆ.

'ಲೋಕಾಯುಕ್ತರು ದಾಖಲಿಸಿರುವ ನನ್ನ ವಿರುದ್ಧ ದಾಖಲಿಸಿರುವ ಅಕ್ರಮ ಆಸ್ತಿ ಗಳಿಕೆ ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಕಾಳಪ್ಪ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾ. ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

'ಲೋಕಾಯುಕ್ತ ಪೊಲೀಸರು ಮತ್ತು ಪ್ರಾಸಿಕ್ಯೂಷನ್ ವೈಫಲ್ಯಗಳ ಬಗ್ಗೆ ಮಾತನಾಡಿದರೆ ಅದು ಸಂಪುಟಗಟ್ಟಲೆ ಆಗುತ್ತದೆ' ಎಂದು ಕಟುವಾಗಿ ನುಡಿದಿರುವ ನ್ಯಾಯಪೀಠ, 'ತನಿಖೆಗಳನ್ನು ನಿಗದಿತ ಕಾಲಮಿತಿಯಲ್ಲಿ ಪೂರ್ಣಗೊಳಿಸಿ. ಇಲ್ಲವಾದರೆ ಸಾರ್ವಜನಿಕ ಸಿಬ್ಬಂದಿಯ ನೆತ್ತಿಯ ಮೇಲೆ ತೂಗುಗತ್ತಿ ಸದಾ ತೂಗಾಡುತ್ತಿರುತ್ತದೆ. ಅವರ ಹಕ್ಕುಗಳಿಗೆ ಸೋಲಾಗುತ್ತದೆ' ಎಂದು ಎಚ್ಚರಿಸಿದೆ.

'ಅಂತಿಮ ವರದಿ ಸಲ್ಲಿಕೆಯಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿರುವುದನ್ನು ನೋಡಿದರೆ ಲೋಕಾಯುಕ್ತ ಪೊಲೀಸರಿಗೆ ಇಚ್ಛಾಶಕ್ತಿ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ' ಎಂದು ನ್ಯಾಯಪೀಠ ಹೇಳಿದೆ.

ಎಸ್.ಎಂ.ಕೆ.ನಗರ ವಸತಿ ಬಡಾವಣೆಯಲ್ಲಿ ಲಭ್ಯವಿರುವ 9*15ಮೀಟರ್ ಮಧ್ಯಂತರ ನಿವೇಶನಗಳ ವಿವರಗಳು

ಕ್ರ.ಸಂ	ನಿವೇಶನ ಸಂಖ್ಯೆ	Site Facing of roads	ಅಳತೆ (ಮೀಟರ್‌ಗಳಲ್ಲಿ)		ವಿಸ್ತೀರ್ಣ ಚ.ಮೀ	ಪ್ರಾಧಿಕಾರದಿಂದ ನಿಗದಿಪಡಿಸಿರುವ ಕನಿಷ್ಠ ಬೆಲೆ(ಪ್ರತಿ. ಚ.ಅಡಿ ಒಂದಕ್ಕೆ ರೂ.2000/-
			ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ		
67	2	East	15.00	9.10	135.00	2905200
68	4	East	15.00	9.00	135.00	2905200
69	6	East	15.00	9.00	135.00	2905200
70	7	East	15.00	9.00	135.00	2905200
71	16	West	15.00	9.00	135.00	2905200
72	56	South	9.00	14.90	135.00	2905200
73	61	South	9.00	15.00	135.00	2905200
74	63	South	9.00	15.00	135.00	2905200
75	65	South	9.00	15.00	135.00	2905200
76	66	South	9.00	15.00	135.00	2905200
77	517	West	21.80+21.60/2	9.00	195.30	4202856
78	519	West	22.85+22.35/2	9.00	203.40	4377168
79	522	West	24.15+23.70/2	9.00	215.32	4633686
80	1142	West	25.50+25.40/2	9.00	229.00	4928080

ಎಸ್.ಎಂ.ಕೆ.ನಗರ ವಸತಿ ಬಡಾವಣೆಯಲ್ಲಿ ಲಭ್ಯವಿರುವ 9*12ಮೀಟರ್ ಅಳತೆ ಸಾಲಿನ ಮಧ್ಯಂತರ ನಿವೇಶನಗಳ

ಕ್ರ.ಸಂ	ನಿವೇಶನ ಸಂಖ್ಯೆ	Site Facing of roads	ಅಳತೆ (ಮೀಟರ್‌ಗಳಲ್ಲಿ)		ವಿಸ್ತೀರ್ಣ ಚ.ಮೀ	ಪ್ರಾಧಿಕಾರದಿಂದ ನಿಗದಿಪಡಿಸಿರುವ ಕನಿಷ್ಠ ಬೆಲೆ(ಪ್ರತಿ. ಚ.ಅಡಿ ಒಂದಕ್ಕೆ ರೂ.2000/-
			ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ		
81	3562	North	9.00	14.55	130.95	2818044
82	3563	North	9.00	14.80	133.20	2866464
83	3613	North	9.35	7.00	65.45	1408484
84	3614	North	9.00	7.70	69.30	1491336

ಎಸ್.ಎಂ.ಕೆ.ನಗರ ವಸತಿ ಬಡಾವಣೆಯಲ್ಲಿ ಲಭ್ಯವಿರುವ 9*12ಮೀಟರ್ ಅಳತೆ ಸಾಲಿನ ಮಧ್ಯಂತರ ನಿವೇಶನಗಳ

ಕ್ರ.ಸಂ	ನಿವೇಶನ ಸಂಖ್ಯೆ	Site Facing of roads	ಅಳತೆ (ಮೀಟರ್‌ಗಳಲ್ಲಿ)		ವಿಸ್ತೀರ್ಣ ಚ.ಮೀ	ಪ್ರಾಧಿಕಾರದಿಂದ ನಿಗದಿಪಡಿಸಿರುವ ಕನಿಷ್ಠ ಬೆಲೆ(ಪ್ರತಿ. ಚ.ಅಡಿ ಒಂದಕ್ಕೆ ರೂ.2000/-
			ಪೂರ್ವ–ಪಶ್ಚಿಮ	ಉತ್ತರ–ದಕ್ಷಿಣ		
85	105	South	6.00	9.00	54.00	1162080
86	126	North	6.00	9.00	54.00	1162080
87	134	North	6.00	9.00	54.00	1162080
88	138	North	6.00	9.00	54.00	1162080
89	150	North	6.00	9.00	54.00	1162080
90	168	South	6.00	9.00	54.00	1162080

ಇ–ಹರಾಜಿನ ಷರತ್ತು ಮತ್ತು ನಿಯಮ ನಿಬಂಧನೆಗಳು ಕೆಳಕಂಡಂತಿವೆ:– 1.ಇ–ಹರಾಜಿನಲ್ಲಿ ಭಾಗವಹಿಸಲಿಚ್ಛಿಸುವವರು ಇ–ಹರಾಜಿಗೆ ಸಂಬಂಧಿಸಿದ ಮಾಹಿತಿಯನ್ನು https://kppp.karnataka.gov.in ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಮುಖಪುಟದ ಡೌನ್‌ಲೋಡ್‌ನಲ್ಲಿ ಟೆಂಡರ್‌ದಾರರಿಗೆ ಬಳಕೆದಾರರ ಕೈಪಿಡಿಗಳು ಇಲ್ಲಿ New e-Auction Bidding user manual ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್– 080–46010000 ಮತ್ತು 080–68948777 ಗೆ ಸಂಪರ್ಕಿಸಬಹುದು 2.ಪ್ಯಾನ್ ಕಾರ್ಡ್ (PAN Card, Addar Card) ಲಗತ್ತಿಸುವುದು. 3.ಇ–ಮೇಲ್ ವಿಳಾಸ/ ಮೊಬೈಲ್ ದೂರವಾಣಿ ಸಂಖ್ಯೆ/ಸ್ಥಿರ ದೂರವಾಣಿ (ಲ್ಯಾಂಡ್‌ಲೈನ್)ಸಂಖ್ಯೆ ನಮೂದಿಸಿರುವುದು. ನಿರ್ಧಿಷ್ಟಪಡಿಸಿದ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು, ವಿವರಗಳನ್ನು ಭರ್ತಿ ಮಾಡಿ, ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಬೇಕಾಗಿರುತ್ತದೆ. 4.ಪಾಲುದಾರ ಸಂಸ್ಥೆ/ಲಿಮಿಟೆಡ್ ಕಂಪನಿಗಳು/ಟ್ರಸ್ಟ್ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಹೀಗೆ ಭಾಗವಹಿಸುವ ಪಾಲುದಾರ ಸಂಸ್ಥೆ/ಲಿಮಿಟೆಡ್ ಕಂಪನಿಗಳು/ಟ್ರಸ್ಟ್ ಹರಾಜಿನಲ್ಲಿ ಭಾಗವಹಿಸುವ ಮುನ್ನ ತಮ್ಮ ಪಾಲುದಾರಿಕೆ ಸಂಸ್ಥೆಯ ನೊಂದಾವಣಿಯನ್ನು ಭಾರತ ದೇಶದಲ್ಲಿ ಮಾಡಿ ಕೊಂಡಿರಬೇಕು. 5.ಹರಾಜಿನ ನಿವೇಶನಗಳಿಗೆ ಸಂಬಂಧಿಸಿದ ಎಲ್ಲಾ ಕಾನೂನು ಪ್ರಕರಣಗಳು ಹಾಸನದ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುತ್ತದೆ. 6.ಇ.ಎಂ.ಡಿ.ಮೊತ್ತ ರೂ.50,000/– & ರೂ.1,00,000/– ಗಳನ್ನು ಹಾಗೂ ಇ–ಹರಾಜಿನ ಶುಲ್ಕವನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ DEBIT CARD/CREDIT CARD/NET BANKING ಮುಖಾಂತರ ಅಥವಾ ಡಿ.ಡಿ. ಯೊಂದಿಗೆ ಚಲನ್ ಮುದ್ರಿಸಿ ಐ.ಸಿ.ಐ.ಸಿ.ಐ. ಬ್ಯಾಂಕ್ ಶಾಖೆಗೆ ಪಾವತಿ ಮಾಡಬಹುದಾಗಿದೆ. 7.ಯಶಸ್ವಿ ಬಿಡ್‌ದಾರರು ಬಿಡ್ಡನ್ನು ಅಂಗೀಕೃತಗೊಂಡಿರುವ ಬಗ್ಗೆ ಇ–ಪೋರ್ಟಲ್ ಮುಖಾಂತರವೇ ಪರಿಶೀಲಿಸಿಕೊಂಡು, 25% ರಷ್ಟು ಬಿಡ್ ಮೊತ್ತವನ್ನು (ಇ.ಎಂ.ಡಿ. ರೂ. 50,000/– ಮತ್ತು ರೂ.1,00,000/–ಗಳನ್ನು ಹೊರತುಪಡಿಸಿ) ಇ–ಹರಾಜು ಮುಕ್ತಾಯಗೊಂಡು ಅಂಗೀಕೃತಗೊಂಡ ಅವಧಿಯ 72 ಗಂಟೆಗೆ (03ದಿನಗಳ ಒಳಗಾಗಿ) ಅಥವಾ ಅದರೊಳಗಾಗಿ ಕೆಳಕಂಡ ಬ್ಯಾಂಕ್ ಖಾತೆಗೆ ಪಾವತಿ ಮಾಡಬೇಕು (ಪಾವತಿಸಿದ ನಂತರ ಅದರ ಪ್ರತಿಯನ್ನು ಕಛೇರಿಗೆ ಸಲ್ಲಿಸುವುದು) ಸರ್ಕಾರಿ ರಜಾ/ಬ್ಯಾಂಕ್ ರಜಾ ಇದ್ದಲ್ಲಿ, ನಂತರದ ದಿನದಲ್ಲಿ (Next Day) ಪಾವತಿಸತಕ್ಕದ್ದು. ಹಾಗೂ ಪಾವತಿಸಲು ವಿಫಲರಾದಲ್ಲಿ ಇ.ಎಂ.ಡಿ. ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಪಾವತಿಯ ರೀತಿ: ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ. Beneficiary Name: Commissioner, Hassan Urban Development Authority, Hassan (HUDA) ಕ್ರಸಂ.1)**ಬ್ಯಾಂಕ್ ಹೆಸರು:**ಬ್ಯಾಂಕ್ ಆಫ್ ಬರೋಡ, ಪ್ರಾಧಿಕಾರದ ಶಾಖೆ, ಬಿ.ಎಂ.ರಸ್ತೆ, ಹಾಸನ **ಖಾತೆ ಸಂಖ್ಯೆ:**74730100000866 **ಐ.ಎಫ್.ಎಸ್.ಸಿ.ಕೋಡ್:**BARB0VJHUDA (ZERO) 2)**ಬ್ಯಾಂಕ್ ಹೆಸರು:** ಆಕ್ಸಿಸ್ ಬ್ಯಾಂಕ್, ಬಿ.ಎಂ.ರಸ್ತೆ, ಹಾಸನ **ಖಾತೆ ಸಂಖ್ಯೆ:**909010039129575 **ಐ.ಎಫ್.ಎಸ್.ಸಿ. ಕೋಡ್:**UTIB0000203 3)**ಬ್ಯಾಂಕ್ ಹೆಸರು:**ಐ.ಡಿ.ಬಿ.ಐ. ಬ್ಯಾಂಕ್, ಹಾಸನ **ಖಾತೆ ಸಂಖ್ಯೆ:**0365104000211345 **ಐ.ಎಫ್.ಎಸ್.ಸಿ. ಕೋಡ್:**IBKL0000365 4)**ಬ್ಯಾಂಕ್ ಹೆಸರು:**ಹೆಚ್.ಡಿ.ಸಿ.ಸಿ.ಬ್ಯಾಂಕ್, ಹಾಸನ **ಖಾತೆ ಸಂಖ್ಯೆ:**902020242000302 **ಐ.ಎಫ್.ಎಸ್.ಸಿ.ಕೋಡ್:**YESB0HDCCB2 5)**ಬ್ಯಾಂಕ್ ಹೆಸರು:** ಐ.ಸಿ.ಐ.ಸಿ.ಐ, ಬ್ಯಾಂಕ್, ಹಾಸನ **ಖಾತೆ ಸಂಖ್ಯೆ:** 105901004252 **ಐ.ಎಫ್.ಎಸ್.ಸಿ. ಕೋಡ್:** ICIC0001059 8.ಯಶಸ್ವಿ ಬಿಡ್‌ದಾರರು ನಿವೇಶನದ ಬಿಡ್‌ನ ಮೊತ್ತದ ಶೇಕಡಾ 25 ರಷ್ಟು ಪಾವತಿಸಿದ ನಂತರ ಇ–ಹರಾಜು ಬಿಡ್‌ನ್ನು ಪ್ರಾಧಿಕಾರ ಸ್ಥಿರೀಕರಣದ ಬಗ್ಗೆ ನಮೂನೆ 1 ರಲ್ಲಿ ತಿಳುವಳಿಕೆ ಪತ್ರವನ್ನು ಸ್ವೀಕರಿಸಿದ ದಿನಾಂಕದಿಂದ 45(ನಲವತ್ತೈದು) ದಿನಗಳೊಳಗಾಗಿ ವಸತಿ ಮೂಲೆ ನಿವೇಶನಗಳ ಪೂರ್ಣ ಹಣ ಸಂದಾಯ ಮಾಡಬೇಕು. ಅದಕ್ಕೆ ತಪ್ಪಿದಲ್ಲಿ ಶೇಕಡಾ 18 ರಂತೆ ಬಡ್ಡಿಯೊಂದಿಗೆ 90 (ತೊಂಭತ್ತು) ದಿನಗಳ ಕಾಲಾವಕಾಶ ವಿಸ್ತರಿಸಲಾಗುವುದು. ಪ್ರಾಧಿಕಾರವು ಒಪ್ಪಿದಲ್ಲಿ ಶೇಕಡಾ 21 ರಂತೆ ಬಡ್ಡಿ ದರದಲ್ಲಿ ಮುಂದಿನ 30 (ಮೂವತ್ತು) ದಿವಸಗಳ ಕಾಲಾವಕಾಶ ನೀಡಲಾಗುವುದು. ಈ ಮೇಲ್ಕಂಡ ಎಲ್ಲಾ ಕಾಲಾವಧಿಯು ಮುಗಿದ ನಂತರ ಮತ್ತೆ ಕಾಲಾವಕಾಶ ನೀಡಲು ನಿಯಮಾವಳಿಯಲ್ಲಿ ಅವಕಾಶವಿರುವುದಿಲ್ಲ. ನಿಗದಿತ ಅವಧಿ ಒಳಗಡೆ ಬಾಕಿ ಬಿಡ್ ಮೊತ್ತದ ಹಣ ಪಾವತಿಸದಿದ್ದಲ್ಲಿ ಹರಾಜು ಮೊತ್ತದ ಶೇಕಡಾ 25ರಷ್ಟು ಮುಂಗಡ ಠೇವಣಿ ಹಣವನ್ನು ಯಾವುದೇ ಸೂಚನೆ ನೀಡದೆ ಪ್ರಾಧಿಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಹಾಗೂ ಸದರಿ ಹರಾಜು ರದ್ದಪಡಿಸಿ, ಹರಾಜಿಗೆ ತಗಲಿದ ವೆಚ್ಚವನ್ನು ನಿಮ್ಮಿಂದ ವಸೂಲು ಮಾಡಲಾಗುವುದು. 9.ಯಶಸ್ವಿ ಬಿಡ್‌ದಾರರು ನಿಗದಿತ ಅವಧಿಯೊಳಗೆ ಹಣ ಪಾವತಿಸದಿದ್ದಲ್ಲಿ ನಿವೇಶನ ಮರು ಹರಾಜು ಮಾಡಲಾಗುವುದು. ಮರುಹರಾಜಿನಲ್ಲಿ ಮೊದಲ ಬಿಡ್‌ದಾರರಿಂದ ಕಡಿಮೆ ಬಿಡ್ ಮೊತ್ತಕ್ಕೆ ಹರಾಜಿನಲ್ಲಿ ಪ್ರಾಧಿಕಾರಕ್ಕೆ ನಷ್ಟವಾಗುವ ಮೊತ್ತವನ್ನು ಮೊದಲ ಬಿಡ್‌ದಾರರಿಂದ ವಸೂಲಿ ಮಾಡಲು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು. ಒಂದು ವೇಳೆ ಮೊದಲ ಬಿಡ್‌ದಾರರು ಬಿಡ್ ಮೊತ್ತಕ್ಕಿಂತ ಹೆಚ್ಚಿನ ಮೊತ್ತಕ್ಕೆ ಹರಾಜಿನಲ್ಲಿ ಬರುವ ಲಾಭಾಂಶ ಮೊದಲ ಬಿಡ್‌ದಾರರಿಗೆ ನೀಡಲಾಗುವುದಿಲ್ಲ. 10.ಹರಾಜಿನಲ್ಲಿ ನಿವೇಶನ ಪಡೆದವರು ನಿವೇಶನವನ್ನು ವಿಭಜಿಸಲು ನಿಯಮಾವಳಿಯಲ್ಲಿ ಅವಕಾಶವಿರುವುದಿಲ್ಲ. 11.ಹರಾಜಿನಲ್ಲಿ ನಿವೇಶನ ಪಡೆದವರು ಪ್ರಾಧಿಕಾರದಿಂದ ನಿವೇಶನ ನೋಂದಾಯಿಸಿಕೊಡುವಾಗ ವಿಧಿಸಿದ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು. 12.ನಿವೇಶನಗಳನ್ನು ಎಲ್ಲಿ ಹೇಗಿವೆಯೋ ಹಾಗೆಯೇ ಹರಾಜು ನಡೆಸಲಾಗುವುದು. 13.ಬ್ಯಾಂಕ್ ಸೇವಾ ಶುಲ್ಕ ಇತ್ಯಾದಿಗಳನ್ನು ಬಿಡ್ಡುದಾರರೇ ಭರಿಸತಕ್ಕದ್ದು. 14.ಅಖೈರು ಬಿಡ್ಡಾದ ನಂತರ ಸದರಿ ಬಿಡ್ಡನ್ನು ಅಂಗೀಕರಿಸುವ ಅಥವಾ ಯಾವುದೇ ಕಾರಣ ನೀಡದೆ, ತಿಳುವಳಿಕೆ ನೀಡದೆ ತಿರಸ್ಕರಿಸುವ ಹಕ್ಕನ್ನು ಪ್ರಾಧಿಕಾರ ಹೊಂದಿರುತ್ತದೆ. 15.ಈ ಹರಾಜನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಮೂಲೆ ಮತ್ತು ವಾಣಿಜ್ಯ ನಿವೇಶನಗಳ ವಿಲೇವಾರಿ ನಿಯಮ 1991ರ ನಿಯಮಾವಳಿ ರೀತ್ಯಾ ಕ್ರಮವಹಿಸಲಾಗುವುದು. 16.ನಿವೇಶನದ ವಿವರಕ್ಕೆ ಮತ್ತು ಇತರೆ ಮಾಹಿತಿಗಳಿಗೆ https://kppp.karnataka.gov.in ಲಾಗಿನ್ ಆಗಿ ಪಡೆಯಬಹುದು. 17.ಇ–ಹರಾಜಿನ ಯಶಸ್ವಿ ಬಿಡ್‌ದಾರರು (H-1 Bidders) ನಿವೇಶನದ ಬಿಡ್‌ನ ಮೊತ್ತದ ಶೇಕಡಾ 25ರಷ್ಟು ಹಣ ಪಾವತಿಸಿದ ನಂತರ ಪಾವತಿಸಿರುವ ರಸೀದಿ ಮತ್ತು ಸಂಬಂಧಿಸಿದ ದಾಖಲಾತಿಗಳನ್ನು ಕಛೇರಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು. 18.ಬಿಡ್‌ದಾರರು ಇ–ಪೋರ್ಟಲ್‌ನಲ್ಲಿ ನಿವೇಶನಕ್ಕಾಗಿ ರಿಜಿಸ್ಟ್ರೇಷನ್ ಮಾಡುವ ವೇಳೆ ಬ್ಯಾಂಕ್ ಖಾತೆ ಸಂಖ್ಯೆ ಮತ್ತು ಐ.ಎಫ್.ಎಸ್.ಸಿ ಕೋಡ್‌ನ್ನು ಸರಿಯಾಗಿ ರೀತಿಯಲ್ಲಿ ನಮೂದಿಸಬೇಕು. ತಪ್ಪಿದಲ್ಲಿ ಇ.ಎಂ.ಡಿ. ಮೊತ್ತವನ್ನು ಬ್ಯಾಂಕ್ ಖಾತೆಗೆ https://kppp.karnataka.gov.in ರವರು ವರ್ಗಾಯಿಸಲು ಸಾಧ್ಯವಾಗುವುದಿಲ್ಲ. 19.ಕ್ರ.ಸಂ. 01 ರಿಂದ 90 ನಿವೇಶನಗಳಿಗೆ ಕನಿಷ್ಠ ಬಿಡ್ ಬದಲಾವಣೆ ಮೊತ್ತ ರೂ.10000/– ಗಳು. 20.ಹರಾಜಿನಲ್ಲಿ ವಿಫಲರಾದವರಿಗೆ ಹರಾಜು ಅಂತಿಮಗೊಳಿಸಿದ ನಂತರ ಇ.ಎಂ.ಡಿ. ಮೊತ್ತವನ್ನು https://kppp.karnataka.gov.in ರವರು ನೇರವಾಗಿ ಬ್ಯಾಂಕ್ ಖಾತೆಗೆ ಮರುಪಾವತಿಸಲು ಕ್ರಮವಹಿಸುತ್ತಾರೆ. ಇ.ಎಂ.ಡಿ. ಮೊತ್ತವನ್ನು ಹಿಂದಿರುಗಿಸಲು ತಡವಾದ್ದಲ್ಲಿ, ಇ–ಮೇಲ್ ವಿಳಾಸ refund.eproc@karnataka.gov.in ಹಾಗೂ ದೂರವಾಣಿ ಸಂಖ್ಯೆ: 080–22230960, 080–22234115 ಸಂಪರ್ಕಿಸಬಹುದಾಗಿರುತ್ತದೆ. 21.ಇ–ಹರಾಜು ಕೊನೆಯ ಕ್ಷಣದಲ್ಲಿ ಬರುತ್ತಿರುವ ಬಿಡ್ಡುಗಳಿಗೆ ಡೆಲ್ಟಾ ಟೈಮ್ 5 ನಿಮಿಷಗಳ ಕಾಲ ವಿಸ್ತರಣೆಯಾಗುತ್ತದೆ. ಉದಾ: ಇ–ಹರಾಜಿನಲ್ಲಿ ಪಾಲ್ಗೊಳ್ಳಲು, ಆಸಕ್ತಿ ವ್ಯಕ್ತಪಡಿಸಲು ಅಂತಿಮ ಸಮಯ 5.00 ಎಂದಿದ್ದಲ್ಲಿ ಅದನ್ನು 4.57 ಗಂಟೆಗಳಿಂದ ಪ್ರಾರಂಭಿಸಿ, 5.02 ಘಂಟೆಗಳ ವರೆಗೆ ಅವಧಿ ವಿಸ್ತರಣೆಯಾಗುತ್ತದೆ. ಮತ್ತೆ ಯಾರಾದರೂ ಬಿಡ್‌ದಾರರು ಬಿಡ್ಡನ್ನು 5.01 ಘಂಟೆಗೆ ಮಾಡಿದ್ದಲ್ಲಿ 5.06 ವರೆಗೆ ಅವಧಿ ವಿಸ್ತರಣೆಯಾಗುತ್ತದೆ. 22.ಅಂತಿಮವಾಗಿ ನಿವೇಶನವನ್ನು ಬಿಡ್ಡುದಾರರಿಗೆ ಹಸ್ತಾಂತರಿಸುವ ಸಮಯದಲ್ಲಿ ನಿವೇಶನಗಳ ನಿಖರವಾದ ಅಳತೆಯಲ್ಲಿ ಯಾವುದೇ ವ್ಯತ್ಯಾಸ ಕಂಡು ಬಂದಲ್ಲಿ ಹೆಚ್ಚು/ಕಡಿಮೆ ದರವನ್ನು ಬಿಡ್ಡುದಾರರು ನೀಡಿರುವ ಬಿಡ್ಡಿನ ದರದ ಮೇಲೆ ನಿಗಧಿಪಡಿಸಲಾಗುವುದು. 23.ಹರಾಜಿಗೆ ಸಂಬಂಧಿಸಿದ ಮಾಹಿತಿಯನ್ನು www.hassan.uda.gov.in ವೆಬ್‌ಸೈಟ್‌ನಿಂದ ನೋಡಬಹುದಾಗಿದೆ. ನಿವೇಶನ ಮತ್ತು ಸ್ಥಳದ ಮಾಹಿತಿಗಾಗಿ ಸಂಪರ್ಕಿಸಬೇಕಾದ ಅಭಿಯಂತರರ ವಿವರ:– 1)ಶ್ರೀ.ಎಂ.ಸಿ.ಸತ್ಯನಾರಾಯಣ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮೊ:9448330622 2) ಶ್ರೀ.ಬಿ.ಕೆ.ಸಣ್ಣೇಗೌಡ, ನಗರ ಯೋಜಕರು ಮೊ:9741938357, 3)ಚನ್ನಕೇಶವ, ಕಿರಿಯ ಇಂಜಿನಿಯರ್ ಮೊ:9844740640,

ಸಹಿ/–(ಬಿ.ಎನ್.ಚಂದ್ರಶೇಖರ್)
ಕೆ.ಎಂ.ಎ.ಎಸ್. ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ, ಹಾಸನ

ಸಹಿ/– (ಸಿ.ಸತ್ಯಭಾಮ) ಭಾ.ಆ.ಸೇ.,
ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು,
ನಗರಾಭಿವೃದ್ಧಿ ಪ್ರಾಧಿಕಾರ, ಹಾಸನ.

ವಾಸಾಸಂಇ/ಹಿಸನಿ/ಹಾಸನ/275/ಕೆಎಸ್ಎಂಸಿಎ/278/2023–24

ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಶ್ರೀರಾಂಪುರ ಕ್ರಾಸ್, ಜಕ್ಕೂರು, ಬೆಂಗಳೂರು–560 064.

ಅರ್ಜಿ ಆಹ್ವಾನಿಸಲಾಗಿದೆ

ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯು ಐ.ಟಿ.ಐ/ ಡಿಪ್ಲೊಮಾ ಪೂರ್ಣಗೊಳಿಸಿರುವ ಅಭ್ಯರ್ಥಿಗಳಿಗಾಗಿ "ಸೋಲಾರ್ ಪಿ.ವಿ. ಇನ್ಸ್ಟಾಲರ್" ಬಗ್ಗೆ "ಉಚಿತ ಒಂದು ತಿಂಗಳ ವಸತಿಯುತ ತರಬೇತಿ" ಅರ್ಜಿ ಆಹ್ವಾನಿಸಲಾಗಿದೆ. ತರಬೇತಿಯ ಅವಧಿ 01 ತಿಂಗಳಾಗಿದ್ದು, ಉಚಿತ ಊಟ ಮತ್ತು ವಸತಿ ಸೌಲಭ್ಯವಿರುತ್ತದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **18.09.2023.** ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: **https://www.mgired.karnataka.gov.in** ದೂರವಾಣಿ: **080–23626359/ 8618247700/ 7483858279/ 9611757523.**

ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು

Mob No: 9448496026 E-Mail: dmkarwarkfcsc@yahoo.com Office Ph: 08382-226243

ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ

KARNATAKA FOOD & CIVIL SUPPLIES CORPORATION LIMITED

(Government of Karnataka Undertaking)
Room No. 08, D.C.Office Complex, M.G.Road, Karwar-581 301.
ಕೊಠಡಿ ಸಂಖ್ಯೆ. 08, ಡಿಸಿ ಕಛೇರಿ ಸಂಕೀರ್ಣ, ಎಂ.ಜಿ.ರಸ್ತೆ, ಕಾರವಾರ–581301

ನಂ.ಕಆನಾಸನಿನಿ/ಹೊ.ಸಿ./ಟೆಂಡರ್/2023–24 ದಿನಾಂಕ:05.09.2023

ಟೆಂಡರ್ ಪ್ರಕಟಣೆ

ಕೆಎಫ್‌ಸಿಎಸ್‌ಸಿ ಕಾರವಾರ ಜಿಲ್ಲಾ ಕಛೇರಿಗೆ ಹೊರಗುತ್ತಿಗೆ ಮತ್ತು ಕಾರ್ಮಿಕ ಇಲಾಖೆಯ ಶಾಪ್ಸ್ ಆಂಡ್ ಕಮರ್ಷಿಯಲ್ ಎಸ್ಟಾಬ್ಲಿಷಮೆಂಟ್, ಕನಿಷ್ಠ ವೇತನದ ಅಡಿಯಲ್ಲಿ, 11 ಜನ ಡಿ.ಇ.ಒ., ಒಬ್ಬ ಲೆಕ್ಕ ಸಹಾಯಕರು ಮತ್ತು ಒಬ್ಬ ನಾಲ್ಕನೇ ದರ್ಜೆ ನೌಕರರನ್ನು ಸೇವೆಗೆ ಹೊರಗುತ್ತಿಗೆ ಆಧಾರದಲ್ಲಿ ತಾತ್ಕಾಲಿಕವಾಗಿ ನಿಯೋಜಿಸಿಕೊಳ್ಳಲು ಇ-procurement portal ಮೂಲಕ **ದಿನಾಂಕ: 05.09.2023 ರಂದು** ಪ್ರಕಟಣೆಯನ್ನು ನೀಡಲಾಗಿದೆ. ಆಸಕ್ತಿಯುಳ್ಳವರು ಇ-procurement portal (http://www.kppp.karnataka.gov.in Tender Number KFCSCL/2023-24/SE0014/CALL-2) ಮೂಲಕ ಮಾಹಿತಿ ಪಡೆದುಕೊಂಡು Online (Download) ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಟೆಂಡರ್ ಅರ್ಜಿಯನ್ನು ಸಲ್ಲಿಸಲು **ಕೊನೆಯ ದಿನಾಂಕ: 14.09.2023ರ ಸಂಜೆ 5:00 ಗಂಟೆಯವರೆಗೆ** ಇರುತ್ತದೆ. ಇತರ ಹೆಚ್ಚಿನ ವಿವರಗಳನ್ನು ಟೆಂಡರ್ ಡಾಕ್ಯೂಮೆಂಟ್ ಮೂಲಕ ಪಡೆಯಬಹುದಾಗಿದೆ.

ಟೆಂಡರ್ ಸಂಖ್ಯೆ: **KFCSCL/2023-24/SE0014/CALL-2**

ಸಹಿ/– ಜಿಲ್ಲಾ ವ್ಯವಸ್ಥಾಪಕರು
ಕಆನಾಸನಿನಿ., ಕಾರವಾರ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಜಿಲ್ಲಾ ಪಂಚಾಯತ್, ಬೆಂಗಳೂರು ನಗರ ಜಿಲ್ಲೆ, ಶ್ರೀ.ಕಂಠೀರವ ಕ್ರೀಡಾಂಗಣ,
ಕಸ್ತೂರಬಾ ರಸ್ತೆ, ಗೇಟ್ ನಂ.12, ಕೊಠಡಿ ಸಂಖ್ಯೆ: 17–18,
ಬೆಂಗಳೂರು–560001 ದೂ: ಕಚೇರಿ: 080 22239771 ಮೊ: 9480886545
Email ID: adyssbangaloreurban12@gmail.com

ಸಂಖ್ಯೆ: **DYES/2023-24/SE0053** ದಿನಾಂಕ: **05/08/2023**

ಅಲ್ಪಾವಧಿ 'ಇ' ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು ನಗರ ಜಿಲ್ಲೆ ಇವರ ಕಚೇರಿಯ ವ್ಯಾಪ್ತಿಗೆ ಸೇರಿದ **ವಿದ್ಯಾನಗರ ಕ್ರೀಡಾ ಶಾಲೆ/ವಸತಿ ನಿಲಯದ ಸಿದ್ದಿ ಜನಾಂಗದ ಕ್ರೀಡಾಪಟುಗಳಿಗೆ ಅವಶ್ಯಕವಿರುವ ಒಬ್ಬರು ಬೆರಳಚ್ಚುಗಾರರು, ಒಬ್ಬರು ಕೇರ್ ಟೇಕರ್ ಮತ್ತು ಒಬ್ಬರು ಸ್ವಚ್ಛತಾ ಸಿಬ್ಬಂದಿ ಸೇವೆಯನ್ನು** ಹೊರಗುತ್ತಿಗೆ ಆಧಾರದ ಮೇಲೆ ಒದಗಿಸಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ದಿನಾಂಕಗಳು

'ಇ' ಪ್ರೊಕ್ಯೂರ್‌ಮೆಂಟ್ ನಲ್ಲಿ https://www.eproc.karnataka.gov.in ದಿನಾಂಕ: 02.09.2023 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ–ಟೆಂಡರಿಂಗ್ ಮುಖಾಂತರ ಆನ್‌ಲೈನ್‌ನಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 16/09/2023 ಸಂಜೆ: 4.00 ಗಂಟೆಯವರೆಗೆ "ಇ" ಪ್ರೊಕ್ಯೂರ್‌ಮೆಂಟ್‌ನಲ್ಲಿ ದಾಖಲು ಮಾಡಬಹುದು.
ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 19.09.2023 ರಂದು ಸಂಜೆ 4.30 ಗಂಟೆಗೆ.
ಆರ್ಥಿಕ ಬಿಡ್ ತೆರೆಯುವ ದಿನಾಂಕ: 20.09.2023 ರಂದು ಬೆಳಗ್ಗೆ 11.00 ಗಂಟೆಗೆ.
ಹೆಚ್ಚಿನ ವಿವರಗಳಿಗೆ ಮೇಲಿನ ಕಚೇರಿಯನ್ನು ಕಚೇರಿ ಕೆಲಸದ ವೇಳೆಯಲ್ಲಿ ಖುದ್ದು ಸಂಪರ್ಕಿಸಬಹುದು ಅಥವಾ ದೂರವಾಣಿ ಸಂಖ್ಯೆ: 080–22239771 ಅಥವಾ ಮೊಬೈಲ್ ಸಂಖ್ಯೆ: 9480886545 ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.

ಸಹಿ/–
(ಕೆ.ಶಶಿಕಲಾ)
ಸಹಾಯಕ ನಿರ್ದೇಶಕರು,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಬೆಂಗಳೂರು ನಗರ ಜಿಲ್ಲೆ

DIPR/CP/1172/GREENFMC/2023-24

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ,
ಬೆಂಗಳೂರು ಪೂರ್ವ ಯೋಜನೆ, 3ನೇ ಮಹಡಿ, ಅಂಚೆ ಕಛೇರಿ ಹತ್ತಿರ,
ಆರ್.ಟಿ. ನಗರ ಮುಖ್ಯ ರಸ್ತೆ, ಬೆಂಗಳೂರು–560032. ದೂ.: 080–29910051.

ಸಂಖ್ಯೆ : ಶಿ.ಅ.ಯೋ./ಬೆಂ.ಪೂ./ಆಸಾ/ಸಾಗಾಣಿಕೆ/ಇ–ಟೆಂಡರ್/2023–24/227
ದಿನಾಂಕ : 24–08–2023

ಟೆಂಡರ್ ಪ್ರಕಟಣೆ

2023–24 ನೇ ಸಾಲಿಗೆ ಅಂಗನವಾಡಿ ಕೇಂದ್ರಗಳಿಗೆ ಆಹಾರ ಸಾಮಗ್ರಿಗಳನ್ನು ಸಾಗಾಣಿಕೆ ಮಾಡಲು ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆಯನ್ನು ಹೊರಡಿಸಿರುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಶಿಶು ಅಭಿವೃದ್ಧಿ ಯೋಜನೆ ಆರ್. ಟಿ. ನಗರ ವ್ಯಾಪ್ತಿಯಲ್ಲಿ ಬರುವ 224 + 25 ಅಂಗನವಾಡಿ ಕೇಂದ್ರಗಳ ಫಲಾನುಭವಿಗಳ ಪೂರಕ ಪೌಷ್ಠಿಕ ಆಹಾರದ ಕಾರ್ಯಕ್ರಮದಡಿ 2023–24 ನೇ ಸಾಲಿಗೆ ಶಿಶು ಅಭಿವೃದ್ಧಿ ಯೋಜನೆ, ಬೆಂಗಳೂರು ಪೂರ್ವ ರವರ ಕಛೇರಿ ಗೋದಾಮಿನಿಂದ ಅನ್ವಯವಾಗುವಂತೆ ಅಂಗನವಾಡಿ ಕೇಂದ್ರಗಳಿಗೆ ಆಹಾರ ಸಾಮಗ್ರಿಗಳನ್ನು ಸಾಗಾಣಿಕೆ ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ಅಧಿನಿಯಮ 1999–2000 ರ ಹಾಗೂ ತಿದ್ದುಪಡಿಗಳನ್ವಯ, 6 ರಿಂದ 7 ಟನ್ ಸಾಮರ್ಥ್ಯದ 02 ಸರಕು ಸಾಗಾಣಿಕೆ ವಾಹನವನ್ನು ಹೊಂದಿರುವ ಮಹಿಳಾ ಮಂಡಳಿ / ಸ್ವಸಹಾಯ ಗುಂಪು / ಗ್ರಾಮ ಸಮುದಾಯಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ವೆಬ್‌ಸೈಟ್ : https://eproc.karnataka.gov.in ನಲ್ಲಿ ಲಾಗ್‌ಆನ್ ಮಾಡಿ ಅರ್ಜಿ ಸಲ್ಲಿಸಬಹುದು.

ವಿವರ : ಅಂಗನವಾಡಿ ಕೇಂದ್ರಗಳಿಗೆ ಆಹಾರ ಸಾಮಗ್ರಿಗಳನ್ನು ಸಾಗಾಣಿಕೆ, ಕೇಂದ್ರಗಳ ಸಂಖ್ಯೆ : 224 + 25, ಅಂದಾಜು ಮೊತ್ತ : ರೂ. 12.5 ಲಕ್ಷಗಳು, ಇ.ಎಂ.ಡಿ ಮೊತ್ತ : ರೂ. 50,000/–, ಟೆಂಡರ್‌ನ್ನು ಸಲ್ಲಿಸಲು ಪ್ರಾರಂಭಿಕ ದಿನಾಂಕ : 29–08–2023, ಟೆಂಡರ್‌ನ್ನು ಸಲ್ಲಿಸಲು ಅಂತಿಮ ದಿನಾಂಕ : 29–09–2023, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 02–10–2023, ಆರ್ಥಿಕ ಬಿಡ್ ತೆರೆಯುವ ದಿನಾಂಕ : ತಾಂತ್ರಿಕ ಬಿಡ್ ಮುಗಿದ ನಂತರ ತಿಳಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಬೆಂಗಳೂರು ಪೂರ್ವ ಯೋಜನೆ, ಆರ್. ಟಿ. ನಗರ, ಅಂಚೆ ಕಛೇರಿ ಹತ್ತಿರ, ಬೆಂಗಳೂರು – 560 032, ದೂರವಾಣಿ ಸಂಖ್ಯೆ : 080–2991 0051, ಇಮೇಲ್ : cdpoeast@gmail.com

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು,
ಬೆಂಗಳೂರು ಪೂರ್ವ ಯೋಜನೆ.

ವಾಸಾಇ/ಬೆಂ.ನ./1094/ಮಣಿಪಾಲ್/2023–24

ಪುರಸಭೆ ಕಾರ್ಯಾಲಯ, ಚಿಕ್ಕನಾಯಕನಹಳ್ಳಿ–572214, ತುಮಕೂರು ಜಿಲ್ಲೆ.

ದೂ: 08133–267223,
ಇ–ಮೇಲ್: itstaff_ulb_chikkanayakanahalli@yahoo.co.in
ವೆಬ್‌ಸೈಟ್: www.chikkanayakanahallitown.mrc.gov.in

ನಂ.ಪು.ಚಿ:ತಾಂತ್ರಿಕ/ಎಸ್.ಎಫ್.ಸಿ/ಸಿ.ಆರ್/02/2023–24 ದಿನಾಂಕ: 29.08.2023

ಟೆಂಡರ್ ಪ್ರಕಟಣೆ

ಚಿಕ್ಕನಾಯಕನಹಳ್ಳಿ ಪುರಸಭಾ ವ್ಯಾಪ್ತಿಯಲ್ಲಿ 2022–23 ನೇ ಸಾಲಿನ 15 ನೇ ಹಣಕಾಸು ಯೋಜನೆ, ನಿರ್ಮಲ ನಗರ ಹಾಗೂ ಪುರಸಭಾ ನಿಧಿ ಅನುದಾನ ಯೋಜನೆಯಡಿಯಲ್ಲಿ ತೆಗೆದುಕೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಕರ್ನಾಟಕ ಲೋಕೋಪಯೋಗಿ ಇಲಾಖೆ ನೊಂದಾಯಿತರಾದ ಹಾಗೂ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇಂಡೆಂಟ್ ಸಂಖ್ಯೆ: 3126, 2517, 3064, 3065, 3062, 2258, SEO700 ರ ಟೆಂಡರ್‌ಗಳಿಗೆ ನೋಂದಾಯಿಸಲ್ಪಟ್ಟ ಅರ್ಹ ದರ್ಜೆ ಸಿವಿಲ್ ಮತ್ತು ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ನ್ನು ಕೆಟಿಪಿಪಿ 2000 ರನ್ವಯ ಆಹ್ವಾನಿಸಲಾಗಿದೆ. ಇ–ಪ್ರಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ http://kppp.karnataka.gov.in ಮೂಲಕ ಸಂಪರ್ಕಿಸಿ ಅರ್ಜಿ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯ www.chikkanayakanahallitown.mrc.gov.in ವೆಬ್‌ಸೈಟ್‌ನಲ್ಲಿ ನೋಡಬಹುದು ಮತ್ತು ಕಛೇರಿ ವೇಳೆಯಲ್ಲಿ ಕಿರಿಯ ಅಭಿಯಂತರರನ್ನು ಸಂಪರ್ಕಿಸುವುದು.

1. ಭರ್ತಿ ಮಾಡಿದ ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ: 11.09.2023 ಸಂಜೆ 5.20 ವರೆಗೆ. 2. ಭರ್ತಿ ಮಾಡಿದ ಟೆಂಡರ್ ಫಾರಂತೆರೆಯುವ ದಿನಾಂಕ: 12.09.2023 ಸಂಜೆ 5.30 ಗಂಟೆಗೆ

ಸಹಿ/–ಆಡಳಿತಾಧಿಕಾರಿ
ಪುರಸಭೆ, ಚಿ.ನಾ.ಹಳ್ಳಿ

ಸಹಿ/–ಮುಖ್ಯಾಧಿಕಾರಿ
ಪುರಸಭೆ, ಚಿ.ನಾ.ಹಳ್ಳಿ

DIPR / TMK/147/KSMCA/2023-24

ಸುಭಾಷಿತ

ನಾವು ಮಾಡಿದ ಅಲ್ಪ ಸಾಧನೆಯು ಮಾಡಬೇಕಾದ ಬೃಹತ್ ಕಾರ್ಯಕ್ಕೆ ನಮ್ಮನ್ನು ಕುರುಡಾಗಿಸಬಾರದು.

–ಎಸ್.ರಾಧಾಕೃಷ್ಣನ್

ಜಿಡಿಪಿ ಬೆಳವಣಿಗೆ ಆಶಾದಾಯಕ ಹಣದುಬ್ಬರದ ನಿಯಂತ್ರಣದಲ್ಲಿದೆ ಹಿತ

ಈ ವರ್ಷದ ಏಪ್ರಿಲ್-ಜೂನ್ ತ್ರೈಮಾಸಿಕದ ಅವಧಿಯಲ್ಲಿ ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ಪ್ರಮಾಣವು ಶೇಕಡ 7.8ರಷ್ಟು ಆಗಿದೆ. ಇದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಅಂದಾಜಿಗಿಂತ ತುಸು ಕಡಿಮೆ ಆಗಿದ್ದರೂ, ವಿಶ್ವದ ಪ್ರಮುಖ ಆರ್ಥಿಕ ವ್ಯವಸ್ಥೆಗಳ ಪೈಕಿ ಅತ್ಯಂತ ವೇಗದ ಬೆಳವಣಿಗೆಯನ್ನು ಭಾರತ ಸಾಧಿಸಿದಂತೆ ಆಗಿದೆ. ಚೀನಾದ ಆರ್ಥಿಕ ಬೆಳವಣಿಗೆ ದರವು ಭಾರತದ ಬೆಳವಣಿಗೆ ದರಕ್ಕಿಂತ ಕಡಿಮೆ ಇದೆ. ಸೇವಾ ವಲಯದ ಬೆಳವಣಿಗೆ ಪ್ರಮಾಣವು ಎರಡು ಅಂಕಿಗಳಲ್ಲಿ ಇದ್ದದ್ದು, ಈ ಬೆಳವಣಿಗೆಗೆ ಬಲ ತುಂಬಿದೆ. ಹಿಂದಿನ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದ ನಂತರದ ಅತಿಹೆಚ್ಚಿನ ಬೆಳವಣಿಗೆ ಪ್ರಮಾಣ ಇದು. ಹೊಸ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ದೇಶದ ಅರ್ಥ ವ್ಯವಸ್ಥೆಯು ಈ ಪ್ರಮಾಣದಲ್ಲಿ ಬೆಳವಣಿಗೆ ಕಂಡಿರುವುದು ಸಂತಸ ತರುವ ಸಂಗತಿ ಎಂಬುದರಲ್ಲಿ ಎರಡು ಮಾತಿಲ್ಲ. ಈ ತ್ರೈಮಾಸಿಕದುದ್ದಕ್ಕೂ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 5ಕ್ಕಿಂತ ಕಡಿಮೆ ಇತ್ತು. ಇದು ಕೂಡ ಜಿಡಿಪಿ ಬೆಳವಣಿಗೆಯು ಉತ್ತೇಜನಕಾರಿ ಮಟ್ಟದಲ್ಲಿ ಇರುವುದಕ್ಕೆ ನೆರವಾಗಿ ಬಂದಿರಬಹುದು. ಆದರೆ ಜುಲೈನಲ್ಲಿ ಹಣದುಬ್ಬರ ದರವು ಮತ್ತೆ ಮಿತಿ ಮೀರಿ ಬೆಳೆದಿದೆ. ಅದರ ಪರಿಣಾಮವು ಜಿಡಿಪಿ ಬೆಳವಣಿಗೆಯ ಮೇಲೆ ಯಾವ ರೀತಿ ಇರಲಿದೆ ಎಂಬುದು ಇನ್ನಷ್ಟೇ ಗೊತ್ತಾಗಬೇಕಿದೆ.



ಹಣದುಬ್ಬರವನ್ನು ನಿಯಂತ್ರಿಸಲು ಆರ್‌ಬಿಐ ಯಾವ ಕ್ರಮ ಕೈಗೊಳ್ಳುತ್ತದೆ ಎಂಬುದು ಮುಖ್ಯವಾಗುತ್ತದೆ

ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಬಿಡುಗಡೆ ಮಾಡಿರುವ ಅಂಕಿ–ಅಂಶಗಳ ಪ್ರಕಾರ, ಕೃಷಿ ವಲಯವು ಜೂನ್ ತ್ರೈಮಾಸಿಕದಲ್ಲಿ ಶೇ 3.5ರಷ್ಟು ಬೆಳವಣಿಗೆ ಸಾಧಿಸಿದೆ. ತಯಾರಿಕಾ ವಲಯವು ಶೇ 4.7ರಷ್ಟು ಬೆಳವಣಿಗೆ ಕಂಡಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ತಯಾರಿಕಾ ವಲಯವು ಶೇ 6.1ರಷ್ಟು ಬೆಳವಣಿಗೆ ಕಂಡಿತ್ತು. ರಫ್ತು ಪ್ರಮಾಣ ತಗ್ಗಿರುವುದು ತಯಾರಿಕಾ ವಲಯದ ಬೆಳವಣಿಗೆಯ ಮೇಲೆ ಪರಿಣಾಮ ಬೀರಿರಬಹುದು. ಆದರೆ, ಕುಟುಂಬಗಳ ಮಟ್ಟದಲ್ಲಿ ಆಗುವ ಖರೀದಿಯು ಹೆಚ್ಚಿರುವುದು ಆಶಾದಾಯಕ ಬೆಳವಣಿಗೆ. ಇದು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಮೂಲಕ ಆಗಿರುವ ವರಮಾನ ಸಂಗ್ರಹ ದಲ್ಲಿಯೂ ಗೊತ್ತಾಗುತ್ತಿದೆ. ಈ ಬಾರಿಯ ಆರ್ಥಿಕ ಬೆಳವಣಿಗೆ ದರಕ್ಕೆ ಕೃಷಿ ವಲಯ ಹಾಗೂ ಸೇವಾ ವಲಯದಲ್ಲಿ ಆಗಿರುವ ಬೆಳವಣಿಗೆಯ ಕೊಡುಗೆ ದೊಡ್ಡದಿದೆ. ಆದರೆ, ಈ ಬಾರಿ ಮುಂಗಾರು ಮಳೆಯು ವಾಡಿಕೆಯಂತೆ ಆಗಿಲ್ಲ. ಇದರ ಪರಿಣಾಮ ಈಗ ಅಲ್ಲಲ್ಲಿ ಅರಿವಿಗೆ ಬರುತ್ತಿದೆ. ಜೂನ್ ನಂತರದಲ್ಲಿ ಆಹಾರ ವಸ್ತುಗಳ ಹಣದುಬ್ಬರದಲ್ಲಿ ಹೆಚ್ಚಳ ಆಗಿದೆ. ಅಗತ್ಯ ಆಹಾರ ಪದಾರ್ಥಗಳ ಬೆಲೆ ಏರಿಕೆಯು ತಕ್ಷಣಕ್ಕೆ ನಿಲ್ಲುವ ಸಾಧ್ಯತೆ ಇಲ್ಲ. ಮಳೆಯ ಕೊರತೆಯು ದೇಶದ ಗ್ರಾಮೀಣ ಪ್ರದೇಶಗಳ ಜನರ ಆದಾಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ ಎನ್ನುವುದಕ್ಕೆ ಹೆಚ್ಚಿನ ಅಧ್ಯಯನದ ಅಗತ್ಯ ಇಲ್ಲ. ಇದರ ಪರಿಣಾಮವಾಗಿ, ಗ್ರಾಮೀಣ ಪ್ರದೇಶಗಳ ಜನರನ್ನು ಗುರಿಯಾಗಿಸಿಕೊಂಡಿರುವ ವಿವಿಧ ಉದ್ಯಮ ವಲಯಗಳೂ ತೊಂದರೆ ಅನುಭವಿಸ ಬೇಕಾಗಬಹುದು. ಅದು ಯಾವ ಪ್ರಮಾಣದಲ್ಲಿ ಇರುತ್ತದೆ ಎಂಬುದು ಸೆಪ್ಟೆಂಬರ್ ತ್ರೈಮಾಸಿಕದ ಜಿಡಿಪಿ ಬೆಳವಣಿಗೆ ಅಂಕಿ–ಅಂಶಗಳು ಪ್ರಕಟವಾದಾಗ ಗೊತ್ತಾಗಲಿದೆ.

ಹಣದುಬ್ಬರವು ಮತ್ತೆ ಹೆಚ್ಚಳವಾಗಿದೆ ಎಂಬುದನ್ನು ಜುಲೈ ತಿಂಗಳ ಅಂಕಿ–ಅಂಶಗಳು ಹೇಳಿವೆ. ಇದನ್ನು ನಿಯಂತ್ರಿಸಲು ಆರ್‌ಬಿಐ ಯಾವ ಕ್ರಮ ಕೈಗೊಳ್ಳುತ್ತದೆ ಎಂಬುದು ಮುಖ್ಯವಾಗುತ್ತದೆ. ಹಣಕಾಸು ನೀತಿಯ ವಿಚಾರದಲ್ಲಿ ಆರ್‌ಬಿಐ ಇನ್ನಷ್ಟು ಬಿಗಿಯಾದ ನಿಲುವು ತಾಳಿದರೆ, ಜಿಡಿಪಿ ಬೆಳವಣಿಗೆಗೆ ಪೆಟ್ಟು ಬೀಳುತ್ತದೆ. ಹೀಗಾಗಬಾರದು ಎಂದಾದರೆ, ಹಣದುಬ್ಬರದ ಪ್ರಮಾಣವು ತಗ್ಗಬೇಕು ಹಾಗೂ ಅದು ಸ್ಥಿರವಾಗಬೇಕು. ಇದು ಸಾಧ್ಯವಾಗಬೇಕು ಎಂದಾದರೆ ಸರ್ಕಾರಗಳ ನೆರವು ಬೇಕು. ಹಲವು ಪ್ರಮುಖ ರಾಜ್ಯಗಳಲ್ಲಿ ಚುನಾವಣೆ ಹತ್ತಿರವಾಗುತ್ತಿದೆ. ಲೋಕಸಭಾ ಚುನಾವಣೆ ಕೂಡ ಸನಿಹಕ್ಕೆ ಬಂದಿದೆ. ಹೀಗಾಗಿ, ಹಣದುಬ್ಬರ ನಿಯಂತ್ರಣದ ವಿಚಾರದಲ್ಲಿ ಸರ್ಕಾರಗಳಿಂದ ಒಂದಿಷ್ಟು ನೆರವು ಸಿಗುವುದು ಖಚಿತ ಎಂಬ ನಿರೀಕ್ಷೆಯನ್ನು ಆರ್‌ಬಿಐ ಹೊಂದಬಹುದೇನೋ. ಹಣದುಬ್ಬರ ನಿಯಂತ್ರಣವು ಸರ್ಕಾರಗಳಿಂದ ಸಿಗುವ ನೆರವಿನ ಪ್ರಮಾಣವು ಯಾವ ಮಟ್ಟದಲ್ಲಿ ಇರುತ್ತದೆ, ನೆರವು ಎಷ್ಟರಮಟ್ಟಿಗೆ ಪ್ರಯೋಜನಕ್ಕೆ ಬರುತ್ತದೆ ಎಂಬುದನ್ನು ಆಧರಿಸಿ ನಿಂತಿದೆ. ಹಣದುಬ್ಬರದ ನಿಯಂತ್ರಣದಲ್ಲಿ ಜಿಡಿಪಿಯ ಹಿತವೂ ಅಡಗಿದೆ.

ದಿನದ ಟ್ವೀಟ್

ಅವಹೇಳನ ಏಕೆ?

ಹರೀಶ್ ಸಾಳ್ವೆ ಅವರು 68ನೇ ವಯಸ್ಸಿನಲ್ಲಿ ಮೂರನೇ ಮದುವೆಯಾದ ಬಗ್ಗೆ ಹಲವರು ಅಪಹಾಸ್ಯ ಮಾಡಿದ್ದಾರೆ. ಆದರೆ ನಾನು ಅದನ್ನು ವಿಭಿನ್ನವಾಗಿ ನೋಡುತ್ತೇನೆ. ಪ್ರೀತಿ ಎಂಬುದು ಯಾರಿಗೆ ಬೇಕಾದರೂ ಯಾವ ಸ್ಥಳದಲ್ಲಾದರೂ ಯಾವ ಸಮಯದಲ್ಲಿಯಾದರೂ ಅಂಕುರಿಸಬಹುದು. ಅದು ಸಂಭ್ರಮಿಸುವಂತಹ ಸಂಗತಿಯೇ ವಿನಾ ಅವಹೇಳನ ಮಾಡುವಂತಹದ್ದಲ್ಲ.

ಗೌತಮ್ ಮಾಚಯ್ಯ, ಪತ್ರಕರ್ತ

ಕಿಡಿನುಡಿ

ಅಧಿಕಾರ ಕೇಂದ್ರೀಕರಣವು ರಾಷ್ಟ್ರೀಯ ಪಕ್ಷಗಳ ಆಸ್ತಿಯನ್ನು ಹೆಚ್ಚಿಸುತ್ತಲೇ ಹೋಗುತ್ತದೆ.

(ದೇಶದ 8 ರಾಷ್ಟ್ರೀಯ ಪಕ್ಷಗಳ ಒಟ್ಟು ಆಸ್ತಿ ಮೌಲ್ಯ ಒಂದೇ ವರ್ಷದಲ್ಲಿ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿರುವುದಕ್ಕೆ ಪ್ರತಿಕ್ರಿಯೆ)

ಅರುಣ್ ಜಾವಗಲ್, ಕನ್ನಡಪರ ಕಾರ್ಯಕರ್ತ

25 ವರ್ಷಗಳ ಹಿಂದೆ

ಭಾನುವಾರ, 6-9-1998

• ಶಿಕ್ಷಕರ ಮುಷ್ಕರ ಅಂತ್ಯ: ನಾಳೆ ಕಾಲೇಜು ಆರಂಭ

ನವದೆಹಲಿ, ಸೆ. 5 (ಪಿಟಿಐ, ಯುಎನ್‌ಐ)– ಕಳೆದ 26 ದಿನಗಳಿಂದ ದೇಶದಾದ್ಯಂತ ನಡೆಯುತ್ತಿದ್ದ ವಿಶ್ವವಿದ್ಯಾಲಯ ಹಾಗೂ ಕಾಲೇಜು ಶಿಕ್ಷಕರ ಮುಷ್ಕರವನ್ನು ಇಂದು ರಾತ್ರಿ ಹಿಂದಕ್ಕೆ ಪಡೆಯಲಾಯಿತು.

ವಿಶ್ವವಿದ್ಯಾಲಯ ಶಿಕ್ಷಕರ ಸಂಘಗಳ ಪ್ರತಿನಿಧಿಗಳು ಮತ್ತು ಕೇಂದ್ರ ಮಾನವ ಸಂಪನ್ಮೂಲ ಸಚಿವ ಮುರಳಿ ಮನೋಹರ ಜೋಷಿ ಅವರ ನಡುವೆ ಸಂಧಾನ ಏರ್ಪಟ್ಟದ್ದರಿಂದ ಮುಷ್ಕರ ನಿಲ್ಲಿಸಲಾಗಿದೆ ಎಂದು ಅಧಿಕೃತವಾಗಿ ಪ್ರಕಟಿಸಲಾಗಿದೆ.

ಆದರೆ ಮುಷ್ಕರದಲ್ಲಿ ಭಾಗವಹಿಸಿರುವ ಕೆಲವು ಶಿಕ್ಷಕರ ಸಂಘಗಳು ಮುಷ್ಕರ ವಾಪಸ್ ಪಡೆದಿರುವ ಬಗ್ಗೆ ಯಾವುದೇ ಖಚಿತ ನಿಲುವು ವ್ಯಕ್ತಪಡಿಸಿಲ್ಲ. ಕೇಂದ್ರ ವಿಶ್ವವಿದ್ಯಾಲಯಗಳ ಶಿಕ್ಷಕರ ಸಂಘ ನಾಳೆ ಸಭೆ ಸೇರಿ ನಿರ್ಧಾರ ಕೈಗೊಳ್ಳುವುದಾಗಿ ಹೇಳಿದೆ.

• ಪ್ರಾದೇಶಿಕ ಮೈತ್ರಿ: ಕಾಂಗ್ರೆಸ್‌ನಲ್ಲಿ ಭಿನ್ನಮತ

ಪಂಚಮಡಿ, ಸೆ. 5 (ಪಿಟಿಐ–ಯುಎನ್‌ಐ)– ಕೇಂದ್ರದಲ್ಲಿ ಪಕ್ಷದ ನೇತೃತ್ವದಲ್ಲಿ ಸಮ್ಮಿಶ್ರ ಸರ್ಕಾರ ರಚಿಸುವುದರ ಕುರಿತಂತೆ ಕಾಂಗ್ರೆಸ್‌ನ ಹಲವು ಧುರೀಣರು ವಿಭಿನ್ನ ನಿಲುವು ತಳೆದಿದ್ದಾರೆ.

ಇಲ್ಲಿ ನಡೆಯುತ್ತಿರುವ ಆಯ್ದ ಕಾಂಗ್ರೆಸ್ಸಿಗರ ವಿಶೇಷ ಅಧಿವೇಶನದಲ್ಲಿ ಪ್ರಾದೇಶಿಕ ಪಕ್ಷಗಳೊಂದಿಗೆ ಚುನಾವಣಾ ಹೊಂದಾಣಿಕೆ ಮಾಡಿಕೊಳ್ಳುವುದನ್ನು ಹಲವು ಧುರೀಣರು ಬೆಂಬಲಿಸಿದರೆ, ಹಲವರು ಟೀಕಿಸಿದ್ದಾರೆ.

ಮುಲಾಯಂ ಸಿಂಗ್, ಲಾಲೂ ಪ್ರಸಾದ್ ಹಾಗೂ ಮಾಯಾವತಿ ಮುಂತಾದವರು 'ನಂಬಿಕೆಗೆ ಅರ್ಹರಲ್ಲ'ದ ಕಾರಣ ಅವರೊಡನೆ ಮೈತ್ರಿ ಬೆಳೆಸುವುದರ ವಿರುದ್ಧ ಹಲವು ಧುರೀಣರು ಎಚ್ಚರಿಸಿದ್ದಾರೆ.

50 ವರ್ಷಗಳ ಹಿಂದೆ

ಗುರುವಾರ, 6-9-1973

• ಹಾಸನ ವಿದ್ಯಾರ್ಥಿಗಳ ಪ್ರದರ್ಶನ: ಅಶ್ರುವಾಯು–ಲಾಠಿ ಪ್ರಯೋಗ

ಹಾಸನ, ಸೆ. 5– ಹಾಸನ ನಗರದ ಹಲವೆಡೆಗಳಲ್ಲಿ ವಿದ್ಯಾರ್ಥಿ ಪ್ರದರ್ಶನಕಾರರ ಮೇಲೆ ಇಂದು ಪೊಲೀಸರು ನಡೆಸಿದ ಲಾಠಿ ಪ್ರಹಾರ ಮತ್ತು ಅಶ್ರುವಾಯು ಪ್ರಯೋಗದಿಂದ ನೂರಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಗಾಯಗೊಂಡರು.

'ಬೆಲೆಗಳ ಏರಿಕೆ, ಅರಸೀಕೆರೆಯಲ್ಲಿ ಪೊಲೀಸರ ಹದ್ದು ಮೀರಿದ ವರ್ತನೆ ಮತ್ತು ಹಾಸನದಲ್ಲಿ ಪೊಲೀಸ್ ಕಸ್ಟಡಿಯಲ್ಲಿದ್ದ ರಾಜು ಎಂಬ ಯುವಕನ ಸಾವಿನ ಕುರಿತು ಪ್ರತಿಭಟಿಸಲು ವಿದ್ಯಾರ್ಥಿ ಫೆಡರೇಷನ್‌ನವರು ಇಂದು ಹಾಸನ ಬಂದ್‌ಗೆ ಕರೆಯಿತ್ತಿದ್ದರು.

ಬಂದ್ ಅಂಗವಾಗಿ ಸುಮಾರು ಎರಡು ಸಹಸ್ರ ವಿದ್ಯಾರ್ಥಿಗಳ ಮೆರವಣಿಗೆ ಪ್ರಥಮ ದರ್ಜೆ ಕಾಲೇಜ್ ಬಳಿಯಿಂದ ಊರಿನ ಮುಖ್ಯ ಬೀದಿಗಳಲ್ಲಿ ಹೊರಟು, ಜಿಲ್ಲಾ ಕಚೇರಿ ಬಳಿಗೆ ಬಂದಾಗ ಗೊಂದಲ ಆರಂಭವಾಯಿತು.

• ನಗರದಲ್ಲಿ ಕಾಲೇಜ್ ಶಿಕ್ಷಕರ ಧರಣಿ: ವಿಧಾನಸೌಧ ಚಲೊ

ಬೆಂಗಳೂರು, ಸೆ. 5–ಶಿಕ್ಷಕರ ದಿನವನ್ನು 'ಪ್ರತಿಭಟನಾ ದಿನ'ವಾಗಿ ಆಚರಿಸಿದ ಕಾಲೇಜು ಶಿಕ್ಷಕರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಇಂದು ರಸ್ತೆಗೆ ಇಳಿದರು.

ಪ್ರಾತಃಕಾಲದಿಂದ ಸಂಜೆವರೆಗೆ ನಗರದ ಸರ್ಕಾರಿ ಕಾಲೇಜು ಮುಂದೆ ಧರಣಿ ಹೂಡಿ ಸಂಜೆ ವಿಧಾನಸೌಧ ಚಲೋ ನಡೆಸಿದರು.

ಕೈಯಲ್ಲಿ ಸೀಮೆಸುಣ್ಣ ಹಿಡಿದು, ಪಾಠ ಹೇಳಿದ ಗುರುಗಳು ಭಿತ್ತಿಪತ್ರಗಳನ್ನು ಹಿಡಿದು ಘೋಷಣೆಗಳನ್ನು ಕೂಗಿದರು. ಪ್ರತಿಭಟನಾ ದಿನಾಚರಣೆ ಅಂಗವಾಗಿ ಕಪ್ಪು ಬ್ಯಾಡ್ಜ್‌ಗಳನ್ನು ಧರಿಸಿದ್ದರು.

ಸರ್ಕಾರಿ ಕಾಲೇಜಿನಲ್ಲಿ ಮತ್ತು ವಿಧಾನ ಸೌಧದ ಮುಂದೆ ನಡೆದ ಎರಡು ಸಭೆಗಳನ್ನು ಉದ್ದೇಶಿಸಿ ಭಾಷಣ ಮಾಡಿದ ನಾಯಕ ಗುರುಗಳು, 'ನಮ್ಮ ಬೇಡಿಕೆಗಳು ಈಡೇರುವವರೆಗೆ ಹೋರಾಟ ನಿಲ್ಲುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

ವಿಜ್ಞಾನಿಗಳಲ್ಲಿ ಅಂದಿನಿಂದ ಇಂದಿನವರೆಗೂ ಆಸ್ತಿಕರೂ ಇದ್ದಾರೆ, ನಾಸ್ತಿಕರೂ ಇದ್ದಾರೆ

ಋಷಿವಾಕ್ಯದೊಡನೆ ವಿಜ್ಞಾನ ಕಲೆ...

ಅನುತ್ತರ

ಎಸ್. ಸೂರ್ಯಪ್ರಕಾಶ ಪಂಡಿತ್

ಡಿವಿಜಿ ಅವರ ಮಿತ್ರರೊಬ್ಬರಿಗೆ ಕತ್ತು ಉಳುಕಿತ್ತಂತೆ. ಸ್ನೇಹಿತರೊಬ್ಬರು ಹೇಳಿದರು: 'ಮಂತ್ರ ಹಾಕಿದರೆ ಉಳುಕು ಹೋಗುತ್ತದೆ.' ಕೂಡಲೇ ಡಿವಿಜಿ ಹೇಳಿದರು: 'ಹೌದು ಹೌದು! ಮಂತ್ರ ಹಾಕಿ ನೀವಿದರೆ ಹೊರಟುಹೋಗುತ್ತದೆ!!'

'ಚಂದ್ರಯಾನ 3'ರ ಸಮಯದಲ್ಲಿ ಕೆಲವರು ಇಸ್ರೊ ವಿಜ್ಞಾನಿಗಳು ತಿರುಪತಿಗೆ ಹೋದಾಗ ನಡೆದ ಚರ್ಚೆಗಳ ಸಂದರ್ಭದಲ್ಲಿ ಈ ಪ್ರಸಂಗ ನೆನಪಾಯಿತು. ನಮ್ಮ ಮಾನಸಿಕತೆಯಲ್ಲಿರುವ ವಿಜ್ಞಾನ ಮತ್ತು ಧಾರ್ಮಿಕ ನಂಬಿಕೆಗಳ ಸಾಮರಸ್ಯವನ್ನು ಡಿವಿಜಿ ಮಾತು ಧ್ವನಿಸಿದೆ.

ತಿರುಪತಿಗೆ ಹೋಗಿಬಂದ ವಿಜ್ಞಾನಿಗಳನ್ನು ಕೆಲವರು ಟೀಕಿಸಿ, 'ಇದು ಮೌಢ್ಯ' ಎಂದು ಜರಿದರು. ಕೆಲವರಂತೂ 'ಚಂದ್ರಯಾನ'ದ ವೈಫಲ್ಯವನ್ನೇ ಹಂಬಲಿಸಿದರು! ವಿಜ್ಞಾನದ ಯಶಸ್ಸಿಗಿಂತಲೂ ದೇಶದ ಹೆಮ್ಮೆಗಿಂತಲೂ ಅವರಿಗೆ ತಮ್ಮ 'ರಾಜಕೀಯ'ವೇ ಮುಖ್ಯವಾಯಿತು. ಅನಂತರ, ಇಸ್ರೊ ಮುಖ್ಯಸ್ಥ ಎಸ್. ಸೋಮನಾಥ್ ಚಂದ್ರಯಾನದ ಯಶಸ್ಸಿನ ಬಳಿಕ ಭದ್ರಕಾಳಿ ದೇವಸ್ಥಾನದಲ್ಲಿ ಪೂಜೆಯನ್ನು ಸಲ್ಲಿಸಿದರು. 'ಬಾಹ್ಯ ಜಗತ್ತಿನ ಅನ್ವೇಷಣೆಗಾಗಿ ವಿಜ್ಞಾನವನ್ನೂ ಅಂತರಂಗದ ಅನ್ವೇಷಣೆಗಾಗಿ ಅಧ್ಯಾತ್ಮವನ್ನೂ ಆಶ್ರಯಿಸಿದ್ದೇನೆ' ಎಂಬ ಅರ್ಥದ ಮಾತುಗಳನ್ನು ಆ ಸಮಯದಲ್ಲಿ ಹೇಳಿದರು. ಈ ಮಾತುಗಳಿಗೂ ಪರ, ವಿರೋಧಗಳು ಎದುರಾದವು. ಇಂಥ ಸಂದರ್ಭಗಳಲ್ಲಿ ನಡೆಯುವ 'ಚರ್ಚೆ'ಗಳಲ್ಲಿ ರಾಗ–ದ್ವೇಷಗಳು ಕಾಣಿಸಿಕೊಳ್ಳುತ್ತಿವೆಯೇ ವಿನಾ ವಸ್ತುನಿಷ್ಠ ವಿಶ್ಲೇಷಣೆ ವಿರಳವಾಗುತ್ತಿದೆ. ಇದು ಖೇದಕರ ಬೆಳವಣಿಗೆ.

ಯಾರಿಗಾದರೂ 'ವಿಜ್ಞಾನ'ದ ಬಗ್ಗೆಯಷ್ಟೇ ಪ್ರೀತಿ ಅಥವಾ 'ಧರ್ಮ'ದ ಬಗ್ಗೆಯಷ್ಟೇ ಪ್ರೀತಿ ಇದ್ದಾಗ ಸಮಸ್ಯೆಗಳು ಎದುರಾಗುತ್ತವೆ. ಈ ಎರಡರ ವ್ಯಾಪ್ತಿ, ಶಕ್ತಿಗಳು ಎಲ್ಲಿಯತನಕ ಎಂಬುದರ ಅರಿವು ಈ 'ಗುಂಪಿನವರಲ್ಲಿ' ಇಲ್ಲದಿದ್ದಾಗ ಆಯಾ ವಿಷಯಗಳ ಸಮರ್ಥನೆಯು ಬಾಲಿಶತನದ ದಾರಿಯನ್ನು ಹಿಡಿಯುತ್ತದೆ. 'ವಿಜ್ಞಾನಕ್ಕೆ ಗೊತ್ತಿಲ್ಲದ ಸಂಗತಿಗಳೇ ಸೃಷ್ಟಿಯಲ್ಲಿ ಇಲ್ಲ' ಎಂದು ಭ್ರಮಿಸಿ, ವಿಜ್ಞಾನಿಗಳ ಧಾರ್ಮಿಕ ವಿಶ್ವಾಸ, ಶ್ರದ್ಧೆಯನ್ನು ಮೌಢ್ಯ ಎಂದು ಟೀಕಿಸಲಾಗುತ್ತದೆ. ವಾಸ್ತವದಲ್ಲಿ ಇಂಥವರು ಧಾರ್ಮಿಕತೆಯ 'ಮೌಢ್ಯ'ವನ್ನು ಟೀಕಿಸುವ ಉಮೇದಿನಲ್ಲಿ 'ವಿಜ್ಞಾನದ ಸರ್ವಜ್ಞತೆ' ಎಂಬ ಮೌಢ್ಯದ ಅನುಯಾಯಿಗಳೇ ಆಗಿರುತ್ತಾರೆ.

ವಿಜ್ಞಾನಿಗಳಲ್ಲಿ ಅಂದಿನಿಂದ ಇಂದಿನವರೆಗೂ ಆಸ್ತಿಕರೂ ನಾಸ್ತಿಕರೂ ಇದ್ದಾರೆ. ವೈಜ್ಞಾನಿಕ ಸತ್ಯಗಳು ವೈಯಕ್ತಿಕ ನಂಬಿಕೆಗಳಿಗಿಂತ ಹೊರತಾದ ಪಾತಳಿಯ ಮೇಲೆ ಸ್ಥಾಪಿತವಾಗುವಂಥವು. ಈ ವಾಸ್ತವ ವಿಜ್ಞಾನಿಗಳಿಗೆ ಗೊತ್ತು. ಹೀಗಾಗಿ, ಅವರಲ್ಲಿ ಈ ವಿಷಯವಾಗಿ ಅಷ್ಟಾಗಿ ಗೊಂದಲಗಳಿರವು. ಆದರೆ ವಿಜ್ಞಾನದ ಲಕ್ಷಣದ ಬಗ್ಗೆ ಸ್ಪಷ್ಟತೆ ಇಲ್ಲದ ಕೆಲವರು ಸ್ವಘೋಷಿತ ವೈಜ್ಞಾನಿಕ ಮನೋ–ಧರ್ಮದವರು ಮಾತ್ರ ಗೊಂದಲದಲ್ಲಿ ಒದ್ದಾಡುತ್ತಿರುತ್ತಾರೆ. ಈ ಗುಂಪಿನವರ ಪೂರ್ವಗ್ರಹ ಎಷ್ಟು ಆಳವಾಗಿರುತ್ತದೆ ಎಂದರೆ, ವಿಜ್ಞಾನಿಗಳೇ ವಿಜ್ಞಾನದ ಇತಿಮಿತಿಗಳ ಬಗ್ಗೆ ಹೇಳಿದರೂ ಕೇಳಲು ಇವರು ಸಿದ್ಧರಿರುವುದಿಲ್ಲ!

ಜಗತ್ತಿನಲ್ಲಿ ಎಷ್ಟೋ ಶ್ರೇಷ್ಠ ವಿಜ್ಞಾನಿಗಳು ಧಾರ್ಮಿಕರೂ ಆಗಿದ್ದರು. ಕಾಲಾನಂತರದಲ್ಲಿ ಜಗತ್ತು ಅವರ ವಿಜ್ಞಾನವನ್ನು ಸ್ವೀಕರಿಸಿದೆಯೇ ವಿನಾ ಅವರ ಧಾರ್ಮಿಕ ನಂಬಿಕೆಗಳನ್ನಲ್ಲ. ಆದರೆ ಅವರ ವೈಯಕ್ತಿಕ 'ಧಾರ್ಮಿಕತೆ' ಅವರ ಜ್ಞಾನಾನ್ವೇಷಣಕ್ಕೆ ದಾರಿಬುತ್ತಿಯಾಗಿ ಒದಗಿರುತ್ತದೆ. ನ್ಯೂಟನ್ ಮತ್ತು ನಮ್ಮವರೇ ಆದ ಶ್ರೀನಿವಾಸ ರಾಮಾನುಜನ್ – ಇಂಥ ಹಲವರು ಮಹಾಪ್ರತಿಭೆಗಳ ವೈಯಕ್ತಿಕ ನಂಬಿಕೆಗಳೂ ಜ್ಞಾನಾನ್ವೇಷಣೆಯ ಸಿದ್ಧಿಗಳೂ ಇಲ್ಲಿ ಸ್ಮರಣಾರ್ಹ.

ಯುರೋಪ್, ಚೀನಾ ಮತ್ತು ಭಾರತೀಯ ವೈಜ್ಞಾನಿಕ ಪರಂಪರೆಗಳ ಸಾಮ್ಯ, ವೈಷಮ್ಯಗಳ ಬಗ್ಗೆ ವಿದ್ವಾಂಸ ಫ್ರಿಟ್ಸ್ ಸ್ಟಾಲ್ ಬಹಳ ಹಿಂದೆಯೇ ಲೇಖನವೊಂದನ್ನು ಬರೆದಿದ್ದಾರೆ. ಅಲ್ಲಿ ಅವರು ಜ್ಞಾನದ ಲಕ್ಷಣವನ್ನು ನಿರೂಪಿಸಲು ಬಳಸಿಕೊಂಡಿರುವ ಮಾತು ಶಂಕರಾಚಾರ್ಯರದ್ದು ಎನ್ನುವುದು ಗಮನಾರ್ಹ. 'ವಸ್ತುವಿನ ತತ್ವದ ಜ್ಞಾನವು ಪುರುಷನ ಬುದ್ಧಿಯನ್ನು ಅನುಸರಿಸಿ ಸಿದ್ಧವಾಗುವಂಥದ್ದಲ್ಲ; ಅದು ವಸ್ತುವಿಗೆ ಅಧೀನವಾಗಿಯೇ ಉಂಟಾಗುವುದು'. ಶಂಕರರ ಈ ಮಾತು ನಮ್ಮ ಸಂಸ್ಕೃತಿಯು ಸಾಧಿಸಿರುವ ವಿಜ್ಞಾನ–ಧಾರ್ಮಿಕತೆಗಳ ಸಾಮರಸ್ಯಕ್ಕೆ ಅದ್ಭುತ ಸಾಕ್ಷ್ಯವಾಗಿದೆ. ಸೋಮನಾಥ್ ಅವರ ಮಾತಿನಲ್ಲಿ ಕಾಣಬೇಕಾಗಿರುವುದು ಕೂಡ ಇಂಥ ಸಾಮರಸ್ಯವನ್ನೇ.

ಎ.ಕೆ. ರಾಮಾನುಜನ್ ಅವರ ಪ್ರಬಂಧವೊಂದು ಇಲ್ಲಿ ಅಧ್ಯಯನಾರ್ಹ. 'ಭಾರತೀಯ ವಿಚಾರಧಾರೆ ಎಂಬುದಿದೆಯೆ?' (ಈಸ್ ದೇರ್ ಆ್ಯನ್ ಇಂಡಿಯನ್ ವೇ ಆಫ್ ಥಿಂಕಿಂಗ್?) ಎಂಬ ಪ್ರಶ್ನೆಗೆ ಉತ್ತರದ ಹುಡುಕಾಟದಲ್ಲಿ ತೊಡಗುವ ಈ ಪ್ರಬಂಧವು, ಭಾರತೀಯ ಆಲೋಚನಾಕ್ರಮದ ಕೆಲವೊಂದು ಮಾದರಿಗಳನ್ನು ನಿರೂಪಿಸುತ್ತದೆ. ಲೇಖಕರ ತಂದೆ ಗಣಿತಜ್ಞ, ಖಗೋಳಶಾಸ್ತ್ರಜ್ಞ. ಜೊತೆಗೆ ಸಂಸ್ಕೃತಪಂಡಿತ, ಜ್ಯೋತಿಷಿ. ಅವರನ್ನು ನೋಡಲು ವಿದೇಶದಿಂದ ಗಣಿತಜ್ಞರೂ, ಸ್ಥಳೀಯ ಸಂಪ್ರದಾಯಸ್ಥ ಪಂಡಿತರೂ ಬರುತ್ತಿದ್ದರು. 'ಒಂದೇ ಮಿದುಳಿನಲ್ಲಿ ಖಗೋಳಶಾಸ್ತ್ರ ಮತ್ತು ಜ್ಯೋತಿಷ ಎರಡೂ ಹೇಗೆ ಇರಬಲ್ಲವು?' ಇದು ಲೇಖಕರ ಆಶ್ಚರ್ಯಕ್ಕೆ ಕಾರಣವಾಗುತ್ತಿದ್ದಿತು. ಅವರ ತಂದೆ ಹಣೆಗೆ ನಾಮವನ್ನಿಟ್ಟು, ಭಗವದ್ಗೀತೆಯ ಪಾರಾಯಣವನ್ನೂ ಮಾಡುತ್ತಿದ್ದರು, ಅನಂತರ ಬರ್ಟ್ರೆಂಡ್ ರಸಲ್ ಅವರನ್ನೂ ಮೆಚ್ಚಿ, ಓದುತ್ತಿದ್ದರು. 'ಇದು ಹೇಗೆ ಸಾಧ್ಯವಾದೀತು' ಎಂದು ಕೇಳಿದರೆ, ಅವರು ಹೇಳುತ್ತಿದ್ದರಂತೆ: 'ಗೀತೆಯನ್ನು ಓದುವುದು ನನ್ನ ಮನಸ್ಸಿನ ಸ್ವಾಸ್ಥ್ಯಕ್ಕೆ. ಅಲ್ಲದೆ ಮಿದುಳಿನಲ್ಲಿ ಎರಡು ಗೋಳಗಳಿವೆಯಲ್ಲ!' ಹಲವರಿಗೆ ಇದು 'ಹಿಪಾಕ್ರಸಿ'ಯಾಗಿ ಕಾಣುತ್ತಿದ್ದಿರಬಹುದು. ಆದರೆ, ಯಾವುದರ ವ್ಯಾಪ್ತಿ ಎಲ್ಲಿಯತನಕ ಎಂಬುದರ ಸ್ಪಷ್ಟತೆ ಅವರಲ್ಲಿತ್ತು.

ಭಾರತೀಯ ಆಲೋಚನೆಯ ವೈಶಿಷ್ಟ್ಯ ಇರುವುದೇ ಜ್ಞಾನದ 'ಶಿವ–ಶಕ್ತಿ' ಸ್ವರೂಪವನ್ನು 'ಸಂದರ್ಭನಿಷ್ಠ'ವಾಗಿ ಗ್ರಹಿಸುವ ಅದರ ಪ್ರಬುದ್ಧತೆಯಲ್ಲಿ. ಎಲ್ಲಿಯವರೆಗೂ ಕತ್ತನ್ನು ಉಳುಕಿಸಿಕೊಂಡವನಿಗೂ ಅದನ್ನು ನೀವುತ್ತಿರುವವನಿಗೂ 'ಮಂತ್ರ' ಮತ್ತು 'ನೀವು'– ಈ ಎರಡು ಕ್ರಿಯೆಗಳ ಫಲದ ಗೊತ್ತು ಗುರಿಗಳ ಸ್ಪಷ್ಟತೆ ಇರುತ್ತದೆಯೋ ಅಲ್ಲಿಯವರೆಗೂ ಆ ಇಬ್ಬರ ವೈಚಾರಿಕ ಆರೋಗ್ಯಕ್ಕೆ ಧಕ್ಕೆ ಇರದು. ಉಪನಿಷತ್ತುಗಳಲ್ಲಿಯೇ ಇಂಥ ಪ್ರಬುದ್ಧ ಚಿಂತನೆ ಇದೆ. ಪರ–ಅಪರಾವಿದ್ಯೆ, ಪ್ರೇಯಸ್ಸು–ಶ್ರೇಯಸ್ಸುಗಳ ಕಲ್ಪನೆ– ಇವೆಲ್ಲವೂ ಇದೇ ಮಾದರಿಯ ಚಿಂತನೆಗಳು.

ಭಾರತೀಯ ವೈಜ್ಞಾನಿಕ ಪರಂಪರೆಯ ಬಗ್ಗೆ ಸೋಮನಾಥ್ ಅವರು ಆಡಿದ್ದ ಮಾತುಗಳು ಈ ಸಂದರ್ಭದಲ್ಲಿ ಮುನ್ನೆಲೆಗೆ ಬಂದವು. ಪ್ರಾಚೀನ ಭಾರತೀಯ ವೈಜ್ಞಾನಿಕ ಪರಂಪರೆಯನ್ನು ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲವಷ್ಟೆ. ಸೂರ್ಯಸಿದ್ಧಾಂತ, ಆರ್ಯಭಟೀಯ – ಇವೆಲ್ಲವೂ ಭಾರತೀಯ ಗಣಿತ–ಖಗೋಳವಿಜ್ಞಾನದ ಸಾಧನೆಗಳೇ ಹೌದು. ಜವಾಹರಲಾಲ್ ನೆಹರೂ ಅವರೂ ಭಾರತೀಯ ಗಣಿತ ಪರಂಪರೆಯ ಸಾಧನೆಗಳನ್ನು ಕೊಂಡಾಡಿದ್ದಾರೆ; ಮಾತ್ರವಲ್ಲ, ಧಾರ್ಮಿಕ ಪರಂಪರೆಗೂ ಗಣಿತದ ಸಾಧನೆಗೂ ಇದ್ದ ಸಂಬಂಧವನ್ನೂ ಗುರುತಿಸಿದ್ದಾರೆ. ಸೋಮನಾಥ್ ಅವರ ಮಾತುಗಳ ಹಿನ್ನೆಲೆಯಲ್ಲಿ ನಾವು ಗಂಭೀರವಾಗಿ ಆಲೋಚಿಸಬೇಕಾದದ್ದು, ವೈಜ್ಞಾನಿಕತೆಯೂ ಆಧ್ಯಾತ್ಮಿಕತೆಯೂ ಗಟ್ಟಿಯಾಗಿದ್ದ ಪರಂಪರೆಯೊಂದು ಸದ್ಯ ಎರಡರಲ್ಲೂ ತನ್ನ ಹೊಳಪನ್ನು ಕಳೆದುಕೊಳ್ಳಲು ಕಾರಣಗಳೇನು? ಸುಮಾರು ನೂರೈವತ್ತು ಕೋಟಿ ಜನಸಂಖ್ಯೆಗೆ ತಕ್ಕ ಪ್ರಮಾಣದಲ್ಲಿ ನಮ್ಮ ವೈಜ್ಞಾನಿಕ ಸಾಧನೆಗಳು ಕಾಣಿಸಿಕೊಳ್ಳುತ್ತಿಲ್ಲವೇಕೆ? ತವರುನೆಲದಲ್ಲೇ ಆಧ್ಯಾತ್ಮಿಕತೆ ಸವಕಲಾಗುತ್ತಿರುವುದಕ್ಕೆ ಕಾರಣಗಳೇನು?

ಇಂದು ನಮ್ಮ ಗ್ರಹಿಕೆಗಳಿಗೇ ಗ್ರಹಣ ಹಿಡಿದಂತಿದೆ. ಇದಕ್ಕೆ ಕಾರಣ ನಮ್ಮ ಎಲ್ಲ ತಿಳಿವಳಿಕೆಗಳ ಮೂಲವಾದ ಶಿಕ್ಷಣ ಪದ್ಧತಿ. ಆನಂದ ಕುಮಾರಸ್ವಾಮಿ ಈ ಪದ್ಧತಿಯನ್ನು ಕುರಿತು 'Nowadays, nothing is taught of Self-knowledge, but only of Ego-knowledge' ಎಂದಿರುವುದು ಮನನೀಯವಾಗಿದೆ. ನಮ್ಮ ನಡೆ ನುಡಿಗಳಲ್ಲಿ ಆತ್ಮಾವಲೋಕನಕ್ಕೆ ('ಆತ್ಮ'ವು ದೇಹವನ್ನೂ ಚೈತನ್ಯವನ್ನೂ ಸಂಕೇತಿಸುತ್ತದೆ; ಇಲ್ಲಿ 'ಆತ್ಮಾವಲೋಕನ' ಎಂದರೆ ಅಂತರಂಗ, ಬಹಿರಂಗಗಳ ಪ್ರಜ್ಞಾಯಾನ) ಅವಕಾಶವೇ ಇಲ್ಲವಾಗುತ್ತಿದೆ, ಅಹಂಕಾರವೊಂದೇ ಮೆರೆಯುತ್ತಿದೆ. ಆದುದರಿಂದಲೇ ನಮ್ಮಲ್ಲಿ ವ್ಯಷ್ಟಿ ಮೂಲದಲ್ಲಿ ಇರಬೇಕಾದ ಪ್ರಬುದ್ಧತೆಯೂ ಸಮಷ್ಟಿ ಮೂಲದಲ್ಲಿ ಇರಬೇಕಾದ ಬದ್ಧತೆಯೂ ಮರೆಯಾಗುತ್ತಿವೆ. 'ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ ಜಸವು ಜನಜೀವನಕೆ' – ಡಿವಿಜಿಯವರ ಈ ಸೂತ್ರದಲ್ಲಿ ಭಾರತೀಯ ಪ್ರಜ್ಞಾಪರಂಪರೆಯ ಗಟ್ಟಿತನವಿದೆ. ಇದರ ಅನುಸಂಧಾನದಲ್ಲಿಯೇ ನಾವು ನಮ್ಮ ಅಂತರಂಗ, ಬಹಿರಂಗದ ಸಾಮರಸ್ಯವನ್ನು ಸಾಧಿಸಿಕೊಳ್ಳಬೇಕಿದೆ.

ಚುರುಮುರಿ

ಅತಿಥಿ ಮೇಷ್ಟ್ರು

• ಮಣ್ಣೆ ರಾಜು

ಹಾರ, ಶಾಲು ಹಿಡಿದು ವಿದ್ಯಾರ್ಥಿಗಳ ಗುಂಪು ಶಂಕ್ರಿ ಮೇಷ್ಟ್ರು ಮನೆಗೆ ಬಂತು.

'ಶಿಕ್ಷಕರ ದಿನದ ಪ್ರಯುಕ್ತ ನಿಮ್ಮನ್ನು ಗೌರವಿಸಲು ಬಂದಿದ್ದೇವೆ' ಎಂದ ಒಬ್ಬ.

'ಸಾರ್... ಶರ್ಟ್, ಪ್ಯಾಂಟ್ ಹಾಕ್ಕೊಳ್ಳಿ, ಸನ್ಮಾನದ ಫೋಟೊ, ವಿಡಿಯೊವನ್ನು ಫೇಸ್‌ಬುಕ್, ವಾಟ್ಸ್‌ಆ್ಯಪ್‌ಗೆ ಹಾಕ್ಬೇಕು' ಅಂದ ಇನ್ನೊಬ್ಬ.

ಪತ್ನಿ ಸುಮಿ ಮೇಷ್ಟ್ರನ್ನು ರೂಮಿಗೆ ಕರೆದೊಯ್ದರು.

'ಯುಗಾದಿ ಹಬ್ಬದ ಶರ್ಟ್ ಹಾಕ್ಕೊಳ್ತೀನಿ' ಅಂದ್ರು ಶಂಕ್ರಿ. 'ಅದನ್ನು ಒಗೆದಿಲ್ಲಾರೀ, ಪಿಂಕ್ ಕಲರ್ದು ಹಾಕ್ಕೊಳ್ಳಿ' ಸುಮಿ ಪಿಸುಗುಟ್ಟಿದರು.

'ಅದರ ಹೊಲಿಗೆ ಬಿಚ್ಚಿಕೊಂಡಿದೆ, ಎರಡು ಗುಂಡಿ ಕಿತ್ತುಹೋಗಿವೆ. ಗ್ರೀನ್ ಕಲರ್ದು ಬಣ್ಣ ಬಿಳಿಚಿಕೊಂಡಿದೆ...'

ಸುಮಿ ಗೊಂದಲಕ್ಕೀಡಾದರು. ಎಂದೋ ಮಡಿಸಿಟ್ಟು ಮರೆತಿದ್ದ ಮದುವೆ ಕೋಟು ನೆನಪಾಯ್ತು. ಅದನ್ನು ತೆಗೆದು ದೂಳು ಒದರಿ ಗಂಡನಿಗೆ ತೊಡಿಸಿದರು.

ಶಂಕ್ರಿ ಮೇಷ್ಟ್ರು, ಸುಮಿ ಮೇಡಂಗೆ ಸನ್ಮಾನ ಮಾಡಿದ ವಿದ್ಯಾರ್ಥಿಗಳು ಫೋಟೊ, ವಿಡಿಯೊ ಮಾಡಿಕೊಂಡರು. ಅವರಲ್ಲೊಬ್ಬ ರೀಲ್ಸ್ ಮಾಡಿದ, 'ನೋಡಿ ಫ್ರೆಂಡ್ಸ್, ಇವರು ನಮ್ಮ ಲೆಕ್ಚರರ್. ಒಳ್ಳೆ ಮೇಷ್ಟ್ರು... ಸನ್ಮಾನದ ಬಗ್ಗೆ ಶಂಕ್ರಿ ಮೇಷ್ಟ್ರು ಏನು ಹೇಳ್ತಾರೆ ಕೇಳೋಣ...' ಮೇಷ್ಟ್ರು ಮುಖಕ್ಕೆ ಮೊಬೈಲ್ ಹಿಡಿದ.

'ಶ್ರದ್ಧೆಯಿಂದ ಓದಿ, ಉನ್ನತ ಸ್ಥಾನಮಾನ ಪಡೆದು ಉತ್ತಮ ಪ್ರಜೆಗಳಾಗಿ ಬಾಳಿರಿ. ನಿಮ್ಮನ್ನು ಕೂರಿಸುವಷ್ಟು ಕುರ್ಚಿಗಳು ನಮ್ಮ ಚಿಕ್ಕ ಬಾಡಿಗೆ ಮನೆಯಲ್ಲಿ ಇಲ್ಲ. ಚಾಪೆ ಮೇಲೆ ಕೂರಲೂ ಜಾಗವಿಲ್ಲದೆ ಕೆಲವರು ನಿಂತೇ ಇದ್ದೀರಿ, ಅನನುಕೂಲಕ್ಕೆ ವಿಷಾದಿಸುತ್ತೇನೆ' ಎಂದರು.

'ಮೇಷ್ಟರ ಧರ್ಮಪತ್ನಿ ಸುಮಿ ಮೇಡಂ ಏನು ಹೇಳ್ತಾರೆ ಕೇಳೋಣ...' ಸುಮಿಯವರಿಗೆ ಮೊಬೈಲ್ ಹಿಡಿದ. 'ಅತಿಥಿ ಉಪನ್ಯಾಸಕರನ್ನು ಸರ್ಕಾರ, ಇಲಾಖೆ ಕಡೆಗಣಿಸಿದರೂ ನೀವು ಗೌರವ ಕೊಟ್ಟು ಬಂದು ಸನ್ಮಾನ ಮಾಡಿದ್ರಿ, ಥ್ಯಾಂಕ್ಸ್...' ಎಂದರು.

ಸುಮಿ ಕೊಟ್ಟ ಕಾಫಿ, ಬಿಸ್ಕೆಟ್ ಸವಿದು ವಿದ್ಯಾರ್ಥಿಗಳು ಹೊರಟರು.

ಸಂಗತ

ಹೀಗಿತ್ತು ಬದುಕಿನ ಪಯಣದ ಪಾಠ...

ವಿದ್ಯಾರ್ಥಿಗಳ ವಯೋಸಹಜ ಮಿತಿ, ನ್ಯೂನತೆಗಳನ್ನು ಲೆಕ್ಕಿಸದೆ ಶಿಕ್ಷಕರು ಅವರಿಗೊಂದಿಷ್ಟು ಪ್ರೀತಿ ತೋರಿ, ಗಮನ ಹರಿಸಿದಲ್ಲಿ ಅವರು ಇನ್ನಷ್ಟು ಎತ್ತರಕ್ಕೆ ಏರಿಯಾರು

• ಎಚ್.ಬಿ.ಚಂದ್ರಶೇಖರ್

ಎಸ್ಎಸ್ಎಲ್‌ಸಿಯಲ್ಲಿ ಸಹಪಾಠಿಗಳಾಗಿದ್ದ ಎಲ್ಲಾ ಸ್ನೇಹಿತರು 42 ವರ್ಷಗಳ ಬಳಿಕ ಸೇರಿದ್ದೆವು. ಎಸ್ಎಸ್ಎಲ್‌ಸಿ ಪೂರೈಸಿದ ನಂತರ ನಮ್ಮ ಶಿಕ್ಷಣ ಮತ್ತು ಬದುಕಿನ ಹಾದಿಗಳು ನಮ್ಮನ್ನು ಎಲ್ಲಿಗೆ ಕೊಂಡೊಯ್ದು ನಿಲ್ಲಿಸಿವೆ ಎಂಬುದನ್ನು ಎಲ್ಲರೂ ಮೆಲುಕು ಹಾಕಿದೆವು. ನಾವು ತರಗತಿಯಲ್ಲಿ ಕೂರುತ್ತಿದ್ದ ಜಾಗ, ಅಲ್ಲಿ ಮಾಡಿದ ಕೀಟಲೆ, ತುಂಟಾಟಗಳನ್ನು ನೆನಪಿಸಿಕೊಂಡು ಸಂಭ್ರಮಿಸಿದೆವು.

ಓದುವಾಗ ನಾವೆಲ್ಲಾ ಹೇಗೇಗೋ ಇದ್ದವರು ನಿಧಾನವಾಗಿ ಬದುಕಿನ ಪಯಣದ ಓಟದ ಲಯ ಕಂಡುಕೊಂಡಿದ್ದು ವಿಸ್ಮಯದ ಸಂಗತಿ ಎನಿಸುತ್ತದೆ. ಎಸ್ಎಸ್ಎಲ್‌ಸಿಯಲ್ಲಿ ಫೇಲ್ ಆಗಿ, ಪೂರಕ ಪರೀಕ್ಷೆಯಲ್ಲಿ ಸಹ ಫೇಲ್ ಆಗಿ ನಂತರದ ವಾರ್ಷಿಕ ಪರೀಕ್ಷೆಯಲ್ಲಿ ಪಾಸಾಗಿ, ಇಂಗ್ಲಿಷ್ ಭಾಷಾ ವಿಷಯದಲ್ಲಿ ಸ್ನಾತಕ ಪದವಿ ಪಡೆದು, ಉಪನ್ಯಾಸಕನಾಗಿ, ನಂತರ ಕೆಪಿಎಸ್‌ಸಿ ಪರೀಕ್ಷೆ ಬರೆದು ಪಾಸಾಗಿ ಈಗ ಜಿಲ್ಲಾ ಮಟ್ಟದ ಅಧಿಕಾರಿಯಾಗಿರುವ ಸ್ನೇಹಿತನ ಸಾಧನೆಯ ಕತೆ ನಮಗೆ ತಿಳಿದೇ ಇರಲಿಲ್ಲ.

ಪ್ರೌಢಶಾಲಾ ಹಂತದಲ್ಲಿ ಓದುತ್ತಿದ್ದಾಗ ಹೆಚ್ಚು ಮಾತನಾಡದೆ ಮೌನಿಯಾಗಿದ್ದ ಇನ್ನೊಬ್ಬ ಸ್ನೇಹಿತ ಹಲವು ವರ್ಷಗಳಿಂದ ಕಾಲೇಜೊಂದನ್ನು ನಡೆಸುತ್ತಿದ್ದಾನೆ. ಸದ್ಯದಲ್ಲೇ ಇನ್ನೊಂದು ಕಾಲೇಜು ಪ್ರಾರಂಭ ಮಾಡುತ್ತಿರುವುದಾಗಿ ಆತ ಹೇಳಿದಾಗ ನಂಬಲಾಗಲೇ ಇಲ್ಲ.

ಹೀಗೆ ಕೆಲವರು ಉಪನ್ಯಾಸಕರು, ಇನ್ನು ಹಲವರು ಎಂಜಿನಿಯರ್‌ಗಳು, ಉದ್ಯಮಿಗಳು ಆಗಿರುವ ಕತೆಗಳನ್ನು ತೆರೆದಿಟ್ಟರು. ಕೆಲವರು ತಮ್ಮ ಜೀವನದ ಏರಿಳಿತಗಳನ್ನು ನಿಭಾಯಿಸಿಕೊಂಡು ತಮ್ಮದೇ ಗತಿಯಲ್ಲಿ ಮುಂದುವರಿಯುತ್ತಿರುವ ಪರಿ ಕುತೂಹಲಕರವಾಗಿತ್ತು. ಒಂದಿಬ್ಬರು ಬದುಕಿನ ಪಯಣವನ್ನೇ ಮುಗಿಸಿದ್ದಾರೆ ಎಂಬ ಸಂಗತಿ ತಿಳಿದು ನೋವಾಯಿತು. ಇನ್ನು ಕೆಲವರು ಎಲ್ಲಿದ್ದಾರೆ, ಹೇಗಿದ್ದಾರೆ ಎಂಬ ಸುಳಿವು ಸಿಕ್ಕಿಲ್ಲ.

ಇವರೆಲ್ಲರಲ್ಲಿ ಸ್ನೇಹಿತನೊಬ್ಬ ಹಂಚಿಕೊಂಡ ಮಾತು ಚಿಂತನೆಗೆ ಹಚ್ಚುವಂತಿತ್ತು. ಓದುವಾಗ ಸೌಮ್ಯ ಸ್ವಭಾವದ ಅವನ ಮನೆಯಲ್ಲಿ ಸವಾಲಿನ ಜೀವನದ ಜೊತೆಗೆ ಕಠಿಣ ಶಿಸ್ತು ಇತ್ತು. ಒಂದಷ್ಟು ಆತ್ಮ ವಿಶ್ವಾಸದ ಕೊರತೆ ಇದ್ದಂತೆ ಕಾಣುತ್ತಿದ್ದ ಇವನು ಶಾಲೆಯಲ್ಲಿ ಇತರ ಕೆಲವು ಹುಡುಗರಂತೆ ಮುದುಡಿಕೊಂಡು ಇರುತ್ತಿದ್ದ. ಆದರೆ ಹಲವು ಬಾರಿ ತಾನು ಮಾಡದಿದ್ದ ತಪ್ಪುಗಳಿಗೆ ಶಿಕ್ಷಕರಿಂದ ಹೊಡೆತ, ಬಿರುನುಡಿಗಳನ್ನು ಕೇಳಿದ್ದ ಇವನಲ್ಲಿ ಮೊದಲೇ ಮುರುಟಿದ್ದ ಆತ್ಮವಿಶ್ವಾಸ ಚಿಗುರಲೇ ಇಲ್ಲ ಎಂಬುದು ಅವನು ಹಂಚಿಕೊಂಡ ಮಾತುಗಳಿಂದ ಮೊನ್ನೆ ತಿಳಿಯಿತು.

ಎಲ್ಲರೂ ತಮ್ಮದೇ ರೀತಿಯಲ್ಲಿ ತಮ್ಮ ವಿಷಯಗಳನ್ನು ಹಂಚಿಕೊಳ್ಳುತ್ತಿದ್ದರೆ ಇವನು ಮಾತ್ರ 'ನನಗೆ ಹೇಳಲು ಏನೂ ಇಲ್ಲ. ನನಗಿರುವ ನೆನಪುಗಳು ಶಿಕ್ಷಕರಿಂದ ತಿಂದ ಹೊಡೆತಗಳು ಅಷ್ಟೆ' ಎಂದು ಕಣ್ಣಂಚಿನಲ್ಲಿ ನೀರು ತಂದುಕೊಂಡಾಗ ಎಲ್ಲರೂ ಬೇಸರದಿಂದ ಅರೆಕ್ಷಣ ಮೌನಕ್ಕೆ ಜಾರಿದೆವು. ಪ್ರಸ್ತುತ ತನ್ನದೇ ರೀತಿಯಲ್ಲಿ ಬದುಕನ್ನು ಪ್ರಾಮಾಣಿಕವಾಗಿ ಕಟ್ಟಿಕೊಂಡು ಜೀವನ ಮುಂದುವರಿಸಿದ್ದಾನೆ.

ನಾವೆಲ್ಲರೂ ಹೀಗೇ ಅಲ್ಲವೇ, ಹೇಗೋ ಇದ್ದವರು ಒಂದಷ್ಟು ಮೇಲೆ ಕೆಳಗೆ ಆಚೆ ಈಚೆ ಎಂಬಂತೆ ನಮ್ಮದೇ ವಿಧಾನದಲ್ಲಿ ವಿಶಿಷ್ಟ ರೀತಿಯಲ್ಲಿ ಒಂದು ಬದುಕು ಕಟ್ಟಿಕೊಳ್ಳುತ್ತೇವೆ ತಾನೇ. ಯಾರ ಬದುಕೂ ಶ್ರೇಷ್ಠ ಅಥವಾ ಕನಿಷ್ಠ ಎಂದಾಗಿರುವುದಿಲ್ಲ ಎನಿಸಿತು.

ಹೌದು, ಶಾಲೆಯಲ್ಲಿ ಓದುವಾಗ ನೋಡಲು ಪೀಚಲು, ತಡವರಿಸುವ ಓದು, ಬಾರದ ಗಣಿತ ಹೀಗೆ ಹಲವು ರೀತಿಯಲ್ಲಿ ಮಿತಿಗಳನ್ನು ಹೊಂದಿದ ಮಕ್ಕಳು ಹಲವು ವರ್ಷಗಳ ನಂತರ ಉತ್ತಮ ಸಾಧನೆ ಮಾಡಿ, ಶಿಕ್ಷಕರೆದುರು ನಿಲ್ಲುತ್ತಾರೆ. ಆದರೆ ತಮ್ಮ ಶಾಲಾ ದಿನಗಳಲ್ಲಿ ಶಿಕ್ಷಕರು ಮಾಡಿದ ಅವಮಾನ, ನೀಡಿದ ಶಿಕ್ಷೆ ಅವರ ಮನದಲ್ಲಿ ಮಡುಗಟ್ಟಿ ನಿಂತಿರುತ್ತವೆ.



ಎಸ್ಎಸ್ಎಲ್‌ಸಿ ನಪಾಸಾದರೆ ಎಲ್ಲಾ ಮುಗಿಯಿತು ಎಂಬಂತೆ ಹೆಚ್ಚಿನ ಪೋಷಕರು, ಶಿಕ್ಷಕರು ಅವರೊಂದಿಗೆ ವ್ಯವಹರಿಸುತ್ತಾರೆ. ಓದು, ಬರಹ, ಲೆಕ್ಕದ ಕೌಶಲ ಇಲ್ಲದವರೂ ಹಂತ ಹಂತವಾಗಿ ಎದ್ದು, ಬಿದ್ದು, ಸುಧಾರಿಸಿಕೊಂಡು, ಸಾಧನೆಯ ಮೆಟ್ಟಿಲನ್ನು ಒಂದೊಂದಾಗಿ ಏರುತ್ತಾ ಹೋಗುತ್ತಾರೆ. ಕೆಲವೊಮ್ಮೆ ಶಾಲಾ ದಿನಗಳಲ್ಲಿ ಅವರಿಗಿಂತ ಬುದ್ಧಿವಂತ ಎಂದು ಕರೆಸಿಕೊಳ್ಳುವ ಸಹಪಾಠಿಗಳಿಗಿಂತ ಜೀವನದಲ್ಲಿ ಅಗಾಧ ಮಟ್ಟದ ಸಾಧನೆಯನ್ನೇ ಮಾಡಿಬಿಡುತ್ತಾರೆ. ಆದರೆ ಅವರ ಆರಂಭದ ದಿನಗಳಲ್ಲಿ ಅವರಲ್ಲಿರುವ ವಯೋಸಹಜ ಮಿತಿ, ನ್ಯೂನತೆಗಳನ್ನು ಲೆಕ್ಕಿಸದೆ, ಅವರಿಗೊಂದಿಷ್ಟು ಪ್ರೀತಿ ತೋರಿ, ಗಮನ ಹರಿಸಿದಲ್ಲಿ ಅವರು ಇನ್ನಷ್ಟು ಎತ್ತರಕ್ಕೆ ಏರಿಯಾರು. ಅದಕ್ಕೂ ಮಿಗಿಲಾಗಿ ಅವರ ಮುಗ್ಧ ಮನಸ್ಸು ಮುದುಡದೆ ಹೂವಿನಂತೆ ಅರಳಲು ಶಿಕ್ಷಕರು ಕಾರಣರಾಗುತ್ತಾರೆ.

ಈ ದಿಸೆಯಲ್ಲಿ ಎಲ್ಲ ವಿದ್ಯಾರ್ಥಿಗಳಿಗೂ ಒಂದಷ್ಟು ಪ್ರೀತಿಯನ್ನು ಸಮನಾಗಿ ಉಣಬಡಿಸುವ ಶಿಕ್ಷಕರು ಅವರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿಯುತ್ತಾರೆ.

15-20 ವರ್ಷ ಸೇವೆ ಸಲ್ಲಿಸಿರುವ ಶಿಕ್ಷಕರು ಒಂದು ಪ್ರಯತ್ನ ಮಾಡಿ, ಹಲವು ವರ್ಷಗಳ ಹಿಂದೆ ಅವರ ದೃಷ್ಟಿಯಲ್ಲಿ ಹೇಗೇಗೋ ಎನ್ನುವಂತೆ ಇದ್ದವರು ಮುಂದೆ ಏನಾಗಿದ್ದಾರೆ ಎನ್ನುವುದನ್ನು ಕಂಡುಕೊಳ್ಳುವ ಕಿರು ಪ್ರಯತ್ನ ಮಾಡಬೇಕು. ಇಂತಹ ದಾಖಲೀಕರಣದಿಂದ, ಶಿಕ್ಷಣ ಕ್ಷೇತ್ರಕ್ಕೆ ಅಮೂಲ್ಯ ಎನಿಸುವ ಒಂದಷ್ಟು ಹೊಳಹುಗಳು ಸಿಗುವುದರಲ್ಲಿ ಸಂಶಯವಿಲ್ಲ.

ಲೇಖಕ: ಹಿರಿಯ ಉಪನ್ಯಾಸಕ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ಬೆಂಗಳೂರು ನಗರ ಜಿಲ್ಲೆ

ವಾಚಕರ ವಾಣಿ

ಮೌಲ್ಯಗಳ ಕುಸಿತದ ಸೂಚಕ

ಜೆಇಇ ಮತ್ತು ನೀಟ್‌ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಕೋಚಿಂಗ್ ನೀಡುವುದಕ್ಕೆ ಹೆಸರಾಗಿರುವ ರಾಜಸ್ಥಾನದ ಕೋಟಾ ನಗರದಲ್ಲಿ ವಿದ್ಯಾರ್ಥಿಗಳ ಮೇಲೆ ನಡೆಯುವ 'ಶೈಕ್ಷಣಿಕ ಕ್ರೌರ್ಯ'ದ ಕಣ್ಣೀರಿನ ಕಥನಗಳನ್ನು ವಿವರಿಸುವ ಲೇಖನ (ಆಳ-ಅಗಲ, ಪ್ರ.ವಾ., ಸೆ. 4) ಸಮಾಜದಲ್ಲಿ ಮೌಲ್ಯಗಳ ಕುಸಿತದ ಸೂಚಕ ಅಷ್ಟೆ.

ಇಂದು ಯಾವುದೇ ಶಿಕ್ಷಣ ಸಂಸ್ಥೆ, ಪಾಲಕರು ಮತ್ತು ಶಿಕ್ಷಕರ ಸಂಘಗಳು ಮಾನವೀಯ ಮೌಲ್ಯಗಳಿಗೆ ಪ್ರಾಧಾನ್ಯ ಕೊಡುವುದಾಗಿ ಹೇಳಬಲ್ಲವೇ? ಈ ಎಲ್ಲವನ್ನೂ ಒಟ್ಟಾರೆ ಗಮನಿಸಿದರೆ, ಆತಂಕ, ಭಯ ಉಂಟಾಗುತ್ತದೆ. ಎಲ್ಲಿಂದ, ಹೇಗೆ ಪ್ರಾರಂಭಿಸಬೇಕು ಎಂದು ಹೇಳುವವರು, ಕೇಳುವವರು ಬೇಕಲ್ಲವೇ?

ಸಿದ್ರಾಮಪ್ಪ ದಿನ್ನಿ, ಬೆಂಗಳೂರು

ಗುರು ಗುರುವೇ, ಲಘುವಲ್ಲ

'ಶಿಕ್ಷಕರ ದಿನಾಚರಣೆ'ಯನ್ನು ಮಂಗಳವಾರ ಶಾಲಾ ಕಾಲೇಜುಗಳಲ್ಲಿ ಸಂಭ್ರಮ, ಸಡಗರದಿಂದ ಆಚರಿಸಲಾಗಿದೆ. ಸರ್ಕಾರ, ಸಂಘ ಸಂಸ್ಥೆಗಳು ಉತ್ತಮ ಶಿಕ್ಷಕರಿಗೆ ಪ್ರಶಸ್ತಿ, ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಶಿಕ್ಷಕರ ಕುರಿತು ಉಪನ್ಯಾಸ ಏರ್ಪಡಿಸುವ ಮೂಲಕ, ಪತ್ರಿಕೆಗಳಲ್ಲಿ ಲೇಖನಗಳನ್ನು ಪ್ರಕಟಿಸುವ ಮೂಲಕ ಅವರ ಸೇವೆಯನ್ನು ಸ್ಮರಿಸಲಾಗಿದೆ. ಇದು ಗುರುಗಳ ಜೊತೆಗೆ ಶಿಷ್ಯವೃಂದಕ್ಕೂ ಸಂತೋಷ ತರುವ ಸಂಗತಿಯೇ. ಆದರೆ, ವೃತ್ತಿಜೀವನದಲ್ಲಿ ಶಿಕ್ಷಕರ ಬವಣೆ ಏನು ಎಂಬುದನ್ನೂ ಅರ್ಥ ಮಾಡಿಕೊಂಡು ಅದನ್ನು ಪರಿಹರಿಸುವ ಪ್ರಯತ್ನ ಮಾಡದಿದ್ದರೆ, ಅವರ ಬಗೆಗಿನ ಸಂಭ್ರಮಾಚರಣೆಗಳಿಗೆ ಅರ್ಥವಿಲ್ಲ. ಸರ್ಕಾರಿ ಶಾಲಾ ಕಾಲೇಜುಗಳ ಬೋಧಕರ ಸಮಸ್ಯೆಗಳು ಒಂದು ತೆರನಾಗಿದ್ದರೆ, ಖಾಸಗಿ ವಲಯದ ಶಿಕ್ಷಕರ ನೋವು ಇನ್ನೊಂದು ಬಗೆಯದಾಗಿರುತ್ತದೆ. ಉದಾಹರಣೆಗೆ, ಸರ್ಕಾರಿ ಶಾಲಾ ಕಾಲೇಜು ಬೋಧಕರು, ತಮ್ಮ ಶಾಲೆಯ ಅಥವಾ ಕಾಲೇಜಿನ ಸಮಸ್ಯೆಗಳ ಪರಿಹಾರಕ್ಕಾಗಿ ಅಥವಾ ತಮ್ಮ ವೃತ್ತಿ ಸಂಬಂಧದ ಸಮಸ್ಯೆಗಳ ಪರಿಹಾರಕ್ಕಾಗಿ ಸಂಬಂಧಪಟ್ಟ ಕಚೇರಿಗಳಿಗೆ ಎಡತಾಕಿದರೆ, ಅಲ್ಲಿಯ ಅಧಿಕಾರಿಗಳು, ನೌಕರರು ಕನಿಷ್ಠ ಗೌರವವನ್ನೂ ತೋರದೆ ದರ್ಪದಿಂದ ನಡೆದುಕೊಳ್ಳುವುದು ಎಲ್ಲ ಶಿಕ್ಷಕರಿಗಾಗುವ ಅನುಭವ.

ಇನ್ನು ಖಾಸಗಿ ಶಾಲಾ ಕಾಲೇಜು ಬೋಧಕರನ್ನು ಅಲ್ಲಿಯ ಆಡಳಿತ ಮಂಡಳಿಗಳು ಕಾರ್ಮಿಕರಂತೆ ಲಘುವಾಗಿ ಕಾಣುವುದನ್ನು ಗಮನಿಸಬಹುದು. ಇದು ನಿಲ್ಲಬೇಕು. ಇದರ ಜೊತೆಗೆ ಸರ್ಕಾರಿ ಅಥವಾ ಖಾಸಗಿ ಶಾಲಾ ಕಾಲೇಜುಗಳ ಶಿಕ್ಷಕರಲ್ಲಿ ವಿಜ್ಞಾನ, ಗಣಿತ ಬೋಧಿಸುವ ಶಿಕ್ಷಕರು ಶ್ರೇಷ್ಠ, ಕನ್ನಡ, ಸಂಸ್ಕೃತ, ಹಿಂದಿ ಬೋಧಿಸುವವರು ಕನಿಷ್ಠ, ವಾಣಿಜ್ಯ, ಸಮಾಜವಿಜ್ಞಾನ ಬೋಧಿಸುವ ಶಿಕ್ಷಕರು ಮಧ್ಯಮ ಎಂದು ಪರಿಗಣಿಸಿ, ಅದರಂತೆ ಗೌರವ ಮತ್ತು ಪಗಾರ ಕೊಡುವ ಪರಿಪಾಟ ರೂಢಿಯಲ್ಲಿದೆ. ಇಂಥ ತಾರತಮ್ಯಗಳನ್ನು ತೊರೆದು 'ಶಿಕ್ಷಕರ ದಿನಾಚರಣೆ' ಆಚರಿಸಿದಾಗ ಮಾತ್ರ ಆ ಆಚರಣೆ ಅರ್ಥಪೂರ್ಣವಾಗುತ್ತದೆ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಪ್ರತಿ ರಾಜ್ಯಕ್ಕೂ ಸಿಗಲಿ ನ್ಯಾಯಯುತ ಪ್ರಾತಿನಿಧ್ಯ

'ಲೋಕಸಭಾ ಕ್ಷೇತ್ರ: ಮರುವಿಂಗಡಣೆಯ ಮರ್ಮ' ಎಂಬ ದೇವನೂರ ಮಹಾದೇವ ಅವರ ಲೇಖನ (ಪ್ರ.ವಾ., ಸೆ. 5) ನಮ್ಮ ರಾಜಕೀಯ ವ್ಯವಸ್ಥೆಗೆ ಎಚ್ಚರಿಕೆಯ ಗಂಟೆಯೇ ಸರಿ. ಸ್ವಾತಂತ್ರ್ಯ ಬರುವ ಮುನ್ನ 562 ರಾಜ್ಯಗಳಿದ್ದವು. ರಾಜರು, ಸಾಮಂತರ ಆಳ್ವಿಕೆಯಿತ್ತು. ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದ ನಂತರ, ಇವುಗಳನ್ನೆಲ್ಲ ಒಗ್ಗೂಡಿಸಿ ಭಾಷೆಯ ಆಧಾರದ ಮೇಲೆ ರಾಜ್ಯಗಳು ರಚನೆಯಾದವು. ಸಂವಿಧಾನ ರಚನಾ ಸಮಿತಿ ಸಭೆಯಲ್ಲಿ ಬಿ.ಆರ್.ಅಂಬೇಡ್ಕರ್ ಅವರು ಮಾತನಾಡುತ್ತಾ, 'ಕೇಂದ್ರಕ್ಕೆ ಅಪರಿಮಿತ ಅಧಿಕಾರವಿಲ್ಲ. ಕೇಂದ್ರವಾಗಲಿ ನ್ಯಾಯಾಲಯವಾಗಲಿ ತನ್ನ ವ್ಯಾಪ್ತಿಯ ವಿಭಜಕ ಗೆರೆಯನ್ನು ಮೀರುವಂತಿಲ್ಲ' ಎಂದು ಹೇಳಿದ್ದರು. ಇತ್ತೀಚೆಗೆ ರಾಜ್ಯಗಳ ಅಧಿಕಾರದಲ್ಲಿ ಕೇಂದ್ರ ಸರ್ಕಾರದ ಹಸ್ತಕ್ಷೇಪವು ಹೆಚ್ಚುತ್ತಿದೆ. ಇದು ಒಕ್ಕೂಟ ಧರ್ಮಕ್ಕೆ ವಿರುದ್ಧವಾದ ನಡೆ. ಪ್ರತಿ ರಾಜ್ಯಕ್ಕೂ ಸಮಾನ ಹಕ್ಕು ಮತ್ತು ಸಮಾನ ಪ್ರಾತಿನಿಧ್ಯ ಸಿಗಲೇಬೇಕು.

ಜನಸಂಖ್ಯೆ ಆಧಾರದ ಮೇಲೆ ಈಗ ಕ್ಷೇತ್ರಗಳ ಮರುವಿಂಗಡಣೆ ಮಾಡಿದರೆ ಕಡಿಮೆ ಜನಸಂಖ್ಯೆಯ ರಾಜ್ಯಗಳ ಹಿತಕ್ಕೆ ಧಕ್ಕೆಯಾಗಲಿದೆ. ಈ ನಡೆಯು ಒಕ್ಕೂಟ ವ್ಯವಸ್ಥೆಗೆ ಮಾರಕವಾಗುತ್ತದೆ. ಎಲ್ಲಾ ಪಕ್ಷಗಳ ಸಂಸತ್ ಸದಸ್ಯರು ಇಂತಹ ಪ್ರಯತ್ನಗಳನ್ನು ವಿರೋಧಿಸಬೇಕು. ಯಥಾಸ್ಥಿತಿಯನ್ನು ಕಾಪಾಡಿಕೊಳ್ಳಲು ಕೇಂದ್ರ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಬೇಕು.

ಅತ್ತಿಹಳ್ಳಿ ದೇವರಾಜ, ಹಾಸನ

ಅಸಾಧಾರಣ ಸಾಧನೆಯೇ ಮಾನದಂಡವಾಗಲಿ

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷ ಸ್ಥಾನದ ನೇಮಕಕ್ಕೆ ಇದ್ದ 'ಅರ್ಹತೆ'ಯ ನಿಯಮಗಳನ್ನು ಸರ್ಕಾರ ಸಡಿಲಿಸಿದ್ದು, ಶಾಸಕರೊಬ್ಬರನ್ನು ಈ ಸ್ಥಾನಕ್ಕೆ ನೇಮಕ ಮಾಡುವ ಉದ್ದೇಶ ಇದರ ಹಿಂದಿರುವ ಸಾಧ್ಯತೆ ಇದೆ ಎಂದು ವರದಿಯಾಗಿದೆ (ಪ್ರ.ವಾ., ಸೆ. 5). ಇದು ನಿಜವಾದರೆ, ಸರ್ಕಾರವು ಇಂತಹ ಸ್ಥಾನಗಳ ನೇಮಕಕ್ಕೆ ನಿಯಮಗಳನ್ನು ಮಾಡುವ ಅಗತ್ಯವಾದರೂ ಇದೆಯೇ? ಪಕ್ಷಕ್ಕಾಗಿ ದುಡಿದವರಿಗೆ ಮಾತ್ರ ನಿಗಮ, ಮಂಡಳಿಗಳಲ್ಲಿ ಅವಕಾಶ ಎಂದು ಒಂದೇ ಒಂದು ನಿಯಮವನ್ನು ಅಧಿಕೃತವಾಗಿ ಘೋಷಣೆ ಮಾಡಿಬಿಟ್ಟರೆ ಆಯಿತು. ಆಗ ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಪದೇಪದೇ ನಿಯಮಗಳನ್ನು ಬದಲಾಯಿಸುವ ಅಗತ್ಯ ಬರುವುದಿಲ್ಲ ಮತ್ತು ಆರೋಪದಿಂದಲೂ ಮುಕ್ತವಾಗಬಹುದು!

ನಿಗಮ, ಮಂಡಳಿಗಳಿಗೆ ನೇಮಕ ಮಾಡುವಾಗ ಆಯಾ ಕ್ಷೇತ್ರದಲ್ಲಿ ಅಸಾಧಾರಣ ಸಾಧನೆ ಮಾಡಿದವರನ್ನು ಗುರುತಿಸಿ ನೇಮಕ ಮಾಡಿದರೆ ಸಹಜವಾಗಿ ಅಭಿವೃದ್ಧಿಯನ್ನು ನಿರೀಕ್ಷಿಸಬಹುದು. ಇಂಥವರಲ್ಲಿ ಶಾಸಕರು ಮತ್ತು ಪಕ್ಷದ ಕಾರ್ಯಕರ್ತರೂ ಇದ್ದರೆ ಅಭ್ಯಂತರವಿಲ್ಲ. ಆದರೆ, ಪಕ್ಷದ ಕಾರ್ಯಕರ್ತರಿಗೇ ಅವಕಾಶ ಸಿಗಬೇಕು, ಅದಕ್ಕಾಗಿಯೇ ನಿಗಮ, ಮಂಡಳಿಗಳು ಇರುವುದು ಎಂಬ ನಿಲುವಿಗೇ ಮೇಲುಗೈಯಾದರೆ ಪಕ್ಷ ಮತ್ತು ಕಾರ್ಯಕರ್ತರಿಗೆ ಅನುಕೂಲವಷ್ಟೆ!

ಡಾ. ಜಿ.ಬೈರೇಗೌಡ, ಕೊಡಿಗೇಹಳ್ಳಿ, ನೆಲಮಂಗಲ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಲಿಂಗ ಸಮಾನತೆ ತರಬಲ್ಲದೇ ಯುಸಿಸಿ?

• ಜಯ್ನಾ ಕೊಠಾರಿ

> ಕಾನೂನು ಸುಧಾರಣೆ ಮೂಲಕ ಲಿಂಗ ಸಮಾನತೆ ಸಾಧಿಸಬೇಕಿರುವ ಅವಶ್ಯಕತೆ ಇರುವುದು ಧಾರ್ಮಿಕ ಅಲ್ಪಸಂಖ್ಯಾತರಲ್ಲಿ ಮಾತ್ರ ಎಂಬ ಗ್ರಹಿಕೆ ಇದೆ. ಆದರೆ, ವಾಸ್ತವದಲ್ಲಿ ಲಿಂಗ ಸಮಾನತೆಯನ್ನು ಸಾಧಿಸಲು ಎಲ್ಲಾ ಧರ್ಮಗಳಲ್ಲೂ ಕಾನೂನು ಸುಧಾರಣೆ ತರುವ ಅವಶ್ಯಕತೆ ಇದೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ

ಏಕರೂಪ ನಾಗರಿಕ ಸಂಹಿತೆ ಚರ್ಚೆ

ಏಕರೂಪ ನಾಗರಿಕ ಸಂಹಿತೆಯನ್ನು (ಯುಸಿಸಿ) ಜಾರಿಗೆ ತರಲು ಅಣಿಯಾಗಿದ್ದೇವೆ ಎಂದು ಕೇಂದ್ರ ಸರ್ಕಾರ ಘೋಷಿಸಿದೆ. ಇದು ಸಮಾಜದ ಕೆಲವು ವಕೀಲರು, ಮಹಿಳಾ ಹಕ್ಕುಗಳ ಹೋರಾಟಗಾರರು, ಕಾನೂನು ತಜ್ಞರು, ಧಾರ್ಮಿಕ ಮುಖಂಡರು ಮತ್ತು ಜನಸಾಮಾನ್ಯರನ್ನೂ ಚಿಂತೆಗೆ ದೂಡಿದೆ.

ಹಾಗಿದ್ದರೆ, ಏನಿದು ಏಕರೂಪ ನಾಗರಿಕ ಸಂಹಿತೆ ಮತ್ತು ನಾವು ಇದನ್ನು ಹೇಗೆ ಅರ್ಥೈಸಿಕೊಳ್ಳಬೇಕು?

ಈ ಸಂಹಿತೆಯ ಬೇರುಗಳು ನಮ್ಮ ಸಂವಿಧಾನದಲ್ಲಿಯೇ ಇವೆ. 'ದೇಶದಾದ್ಯಂತ ಏಕರೂಪ ನಾಗರಿಕ ಸಂಹಿತೆಯನ್ನು ಜಾರಿ ಮಾಡಬಹುದು' ಎಂದು ನಮ್ಮ ಸಂವಿಧಾನದ 44ನೇ ವಿಧಿ ಹೇಳುತ್ತದೆ. ಆದರೆ, ಈ ಸಂಹಿತೆಯನ್ನು ಹೇಗೆ ಜಾರಿ ಮಾಡಬೇಕು ಅಥವಾ ಈ ಸಂಹಿತೆಯು ಹೇಗೆ ಕೆಲಸ ಮಾಡಬೇಕು ಎನ್ನುವ ಕುರಿತು ಈ ವಿಧಿಯಲ್ಲಿ ಸ್ಪಷ್ಟವಾದ ವಿವರಣೆ ಇಲ್ಲ.

ವಿವಾಹ, ವಿಚ್ಛೇದನ, ಮಕ್ಕಳ ಪಾಲನೆ-ನಿರ್ವಹಣೆ, ದತ್ತು ಸ್ವೀಕಾರ ಮತ್ತು ಉತ್ತರಾಧಿಕಾರಕ್ಕೆ ಸಂಬಂಧಿಸಿ ಆಯಾ ಧರ್ಮಕ್ಕೆ ಅನುಗುಣವಾದ ಕಾನೂನುಗಳು ನಮ್ಮ ನ್ಯಾಯಾಂಗ ವ್ಯವಸ್ಥೆಯಲ್ಲಿವೆ. ಈ ಎಲ್ಲವೂ ಆಯಾ ಧರ್ಮದ ವೈಯಕ್ತಿಕ ಕಾನೂನುಗಳಿಗೆ ಅನುಗುಣವಾಗಿ ಇದೆ. ಹಿಂದೂಗಳಿಗೆ, ಕ್ರೈಸ್ತರಿಗೆ, ಪಾರ್ಸಿಗಳಿಗೆ ಇಂತಹ ಪ್ರತ್ಯೇಕ ಕಾಯ್ದೆಗಳಿವೆ. ಮುಸ್ಲಿಮರಿಗೂ ವೈಯಕ್ತಿಕ ಕಾನೂನುಗಳಿದ್ದು, ಅವೆಲ್ಲವೂ ಸಂಹಿತೆಯಾಗಿಲ್ಲ. ಇತ್ತೀಚೆಗಷ್ಟೇ ತಿದ್ದುಪಡಿ ತಂದುದರಿಂದ, ಮುಸ್ಲಿಂ ಮಹಿಳಾ (ವಿಚ್ಛೇದನದ ಹಕ್ಕಿನ ರಕ್ಷಣೆ) ಕಾಯ್ದೆ-1986 ಮಾತ್ರ ಸಂಹಿತೆಯ ರೂಪ ಪಡೆದಿದೆ. ಈ ವಿವಿಧ ಧಾರ್ಮಿಕ ವೈಯಕ್ತಿಕ ಕಾನೂನುಗಳ ಜೊತೆಯಲ್ಲಿಯೇ ವಿಶೇಷ ವಿವಾಹ ಕಾಯ್ದೆ-1954 ಅನ್ನು ಕೂಡ ನಾವು ರೂಪಿಸಿಕೊಂಡಿದ್ದೇವೆ. ಯಾವುದೇ ಧರ್ಮದ ವ್ಯಕ್ತಿಗಳು ಈ ಕಾಯ್ದೆಯ ಅಡಿಯಲ್ಲಿ ವಿವಾಹವಾಗಬಹುದು. ಈ ಕಾಯ್ದೆಯು ವಿವಾಹ, ವಿಚ್ಛೇದನ ಹಾಗೂ ಮಕ್ಕಳ ಪಾಲನೆಯ ಹಕ್ಕುಗಳನ್ನು ನಿರ್ವಹಿಸುತ್ತದೆ.

ಏಕರೂಪ ನಾಗರಿಕ ಸಂಹಿತೆ ಜಾರಿ ಅಂದ ತಕ್ಷಣ ಎಲ್ಲಾ ಧರ್ಮದ ಜನರಿಗೂ ಒಂದೇ ಕಾನೂನು ಅನ್ವಯವಾಗುತ್ತದೆ ಎಂಬ ಸಾಮಾನ್ಯ ಗ್ರಹಿಕೆ ಜನರದ್ದು. ಆದರೆ, ಕೌಟುಂಬಿಕ ಕಾನೂನುಗಳಲ್ಲಿ ಲಿಂಗ ಸಮಾನತೆ ಇರಬೇಕು ಎಂಬುದು ಯುಸಿಸಿ ಜಾರಿಯ ಹಿಂದಿನ ಉದ್ದೇಶ. ಯುಸಿಸಿ ಜಾರಿ ಹಿಂದಿನ ಉದ್ದೇಶ ಸಮಾನತೆಯೇ ಆಗಿದ್ದರೆ, ಅದನ್ನು ಜಾರಿಗೆ ತರುವ ಮುನ್ನ ಸಂವಿಧಾನಾತ್ಮಕವಾಗಿ ಕಡ್ಡಾಯವಾಗಿರುವ 'ಸಮಾನವಾಗಿ ಕಾಣುವ' ಮತ್ತು 'ತಾರತಮ್ಯವಿಲ್ಲದ' ಸ್ಥಿತಿಯನ್ನು ಅನುಷ್ಠಾನಕ್ಕೆ ತರಬೇಕು.

ಯುಸಿಸಿಯಲ್ಲಿ ಹಲವು ಸಮಸ್ಯೆಗಳಿವೆ. ಅವುಗಳಲ್ಲಿ ಕೆಲವು ಇಂತಿವೆ:

ಪ್ರಸ್ತಾವಿತ ಯುಸಿಸಿ ಕಡ್ಡಾಯವೇ ಅಥವಾ ಸ್ವಯಂಪ್ರೇರಿತವೇ ಎಂಬುದು ಮೊದಲ ಪ್ರಶ್ನೆ. ಇದನ್ನು ಭವಿಷ್ಯದಲ್ಲಿ ಸಂಸತ್ತು ನಿರ್ಧರಿಸಬೇಕು ಎಂದು ಸಂವಿಧಾನ ರಚನೆಯ ವೇಳೆಯೇ ನಿರ್ಧರಿಸಲಾಗಿತ್ತು. ಯಾವ ವ್ಯಕ್ತಿಯು ಈ ಸಂಹಿತೆಗೆ ಬದ್ಧವಾಗಿರುತ್ತೇನೆ ಎಂದು ಘೋಷಿಸಿಕೊಳ್ಳುತ್ತಾನೋ ಅಂಥ ವ್ಯಕ್ತಿಗೆ ಮಾತ್ರ ಈ ಕಾನೂನು ಅನ್ವಯವಾಗುವಂತೆ ಕಾನೂನಿನಲ್ಲಿ ಅವಕಾಶ ಮಾಡಿಕೊಡುವ ಕೆಲಸವನ್ನು ಸಂಸತ್ತು ಮಾಡಬೇಕು. ಇದು ಯುಸಿಸಿ ಜಾರಿಯ ಆರಂಭಿಕ ಸ್ವರೂಪವಾಗಿರಬೇಕು ಎಂದು ಅಂಬೇಡ್ಕರ್ ಹೇಳಿದ್ದರು. ಆ ಪ್ರಕಾರ ನೋಡುವುದಾದರೆ ಸಂಪೂರ್ಣವಾಗಿ ಸ್ವಯಂಪ್ರೇರಿತವೇ ಆಗಿರುವ ವಿಶೇಷ ವಿವಾಹ ಕಾಯ್ದೆ-1954 ನಮ್ಮಲ್ಲಿ ಈಗಾಗಲೇ ಇದೆ.

90ರ ದಶಕದಲ್ಲೂ ಯುಸಿಸಿಯ ಚರ್ಚೆ ಮುನ್ನೆಲೆಗೆ ಬಂದಿತ್ತು. ಯುಸಿಸಿ ಜಾರಿಗೆ ಬಂದರೆ, ಅದರಿಂದ ವಾಪಸಾಗುವ ಆಯ್ಕೆಯನ್ನೂ ಅದು ಹೊಂದಿರಬೇಕು ಎಂಬ ಒತ್ತಾಯ ಆಗ ಕೇಳಿಬಂದಿತ್ತು. 'ಯುಸಿಸಿಯಲ್ಲಿ 'ವಾಪಸಾತಿ ಆಯ್ಕೆ'ಯನ್ನು ನೀಡಬೇಕು. ಒಬ್ಬ ವ್ಯಕ್ತಿ ಯುಸಿಸಿಯನ್ನು ಒಪ್ಪಿಕೊಂಡಿದ್ದು ಮುಂದೊಂದು ದಿನ ಅವನು ತನ್ನ ಧರ್ಮದ ವೈಯಕ್ತಿಕ ಕಾನೂನುಗಳಿಗೆ ಮರಳಬೇಕು ಎಂದುಕೊಂಡರೆ, ಹಾಗೆ ಮರಳುವ ಆಯ್ಕೆಯನ್ನು ಯುಸಿಸಿಯಲ್ಲಿ ಸೇರಿಸಿರಬೇಕು' ಎಂದು ಮಹಿಳಾ ಹಕ್ಕುಗಳ ಕಾರ್ಯನಿರತ ಗುಂಪೊಂದು ಒತ್ತಾಯಿಸಿತ್ತು. ಈಗ ಜಾರಿಯಲ್ಲಿರುವ ವಿಶೇಷ ವಿವಾಹ ಕಾಯ್ದೆಯಲ್ಲಿ 'ಆಯ್ಕೆ'ಯ (ಆಪ್ಟ್ ಇನ್) ಅವಕಾಶವಷ್ಟೇ ಇದೆ. ವಿಶೇಷ ವಿವಾಹ ಕಾಯ್ದೆಯಿಂದ ವಾಪಸಾಗಲು (ಆಪ್ಟ್ ಔಟ್) ಅವಕಾಶವಿಲ್ಲ. ಆದರೆ ಯುಸಿಸಿಯನ್ನು ಜಾರಿಗೆ ತರುವಾಗ, ಅದರಿಂದ ವೈಯಕ್ತಿಕ ಕಾನೂನುಗಳಿಗೆ ವಾಪಸಾಗುವ ಅವಕಾಶವನ್ನು ಸೇರಿಸಲೇಬೇಕು.

ಮಾಯ್ರಾ ಅಲಿಯಾಸ್ ವೈಷ್ಣವಿ ವಿಲಾಸ್ ಶಿರ್‌ಶಿಕಾರ್ ಮತ್ತು ಇತರರು ಹಾಗೂ ಉತ್ತರ ಪ್ರದೇಶ ಸರ್ಕಾರದ ನಡುವಣ ಪ್ರಕರಣದಲ್ಲಿ, ಕೆಲವು ಅಂತರಧರ್ಮೀಯ ಮದುವೆಗಳ ವಿಚಾರಣೆ ನಡೆಸುವಾಗ 2021ರಲ್ಲಷ್ಟೇ ಯುಸಿಸಿಯ ಬಗ್ಗೆ ಅಲಹಾಬಾದ್ ಹೈಕೋರ್ಟ್ ಚರ್ಚಿಸಿತ್ತು. ಯುಸಿಸಿಯ ಅಗತ್ಯವಿದೆ. ಆದರೆ ಅದು, 75 ವರ್ಷಗಳ ಹಿಂದೆ ಅಂಬೇಡ್ಕರ್ ಅವರು ಹೇಳಿದಂತೆ ಸಂಪೂರ್ಣ ಸ್ವಯಂಪ್ರೇರಿತ ಸ್ವರೂಪದ್ದು ಆಗಬಾರದು. ಅಂಬೇಡ್ಕರ್ ಹೇಳಿದ್ದು ಅಂದಿನ ಸಂದರ್ಭಕ್ಕೆ ಅನುಗುಣವಾಗಿತ್ತು. ಆದರೆ ಈಗ ಹಾಗೆ ಮಾಡಲಾಗದು ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿತ್ತು. ಇವನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಹೇಳುವುದಾದರೆ, 'ಆಯ್ಕೆ ಮಾಡಿಕೊಳ್ಳುವ' ಮತ್ತು 'ವೈಯಕ್ತಿಕ ಕಾನೂನುಗಳಿಗೆ ಮರಳುವ' ಅವಕಾಶಗಳು ಇರುವ ಯುಸಿಸಿಯೇ ಹೆಚ್ಚು ಕಾರ್ಯಸಾಧ್ಯವಾದುದು. ಯುಸಿಸಿ ಬಗ್ಗೆ ಚರ್ಚೆ ಆರಂಭಿಸುವ ಮುನ್ನ ಈ ಎಲ್ಲಾ ವಿವರಗಳು ಲಭ್ಯವಾಗಬೇಕು.

ಎರಡನೆಯದಾಗಿ, ಕಾನೂನು ಸುಧಾರಣೆ ಮೂಲಕ ಲಿಂಗ ಸಮಾನತೆ ಸಾಧಿಸಬೇಕಿರುವ ಅವಶ್ಯಕತೆ ಇರುವುದು ಧಾರ್ಮಿಕ ಅಲ್ಪಸಂಖ್ಯಾತರಲ್ಲಿ ಮಾತ್ರ ಎಂಬ ಗ್ರಹಿಕೆ ಇದೆ. ಆದರೆ, ವಾಸ್ತವದಲ್ಲಿ ಲಿಂಗ ಸಮಾನತೆಯನ್ನು ಸಾಧಿಸಲು ಎಲ್ಲಾ ಧರ್ಮಗಳಲ್ಲೂ ಕಾನೂನು ಸುಧಾರಣೆ ತರುವ ಅವಶ್ಯಕತೆ ಇದೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ.

ಮುಸ್ಲಿಮರ ವೈಯಕ್ತಿಕ ಕಾನೂನಿನಡಿಯಲ್ಲಿ ಬಹುಪತ್ನಿತ್ವಕ್ಕೆ ಇರುವ ಅವಕಾಶವನ್ನು ತೊಡೆದುಹಾಕಬೇಕು ಎಂಬ ಆಗ್ರಹವಿರುವಂತೆಯೇ, ಹಿಂದೂ ಕಾನೂನುಗಳಲ್ಲಿಯೂ ಸುಧಾರಿಸಬೇಕಾದ ಹಲವು ಅಂಶಗಳಿವೆ. ಹಿಂದೂ ವಿವಾಹ ಕಾಯ್ದೆಯಲ್ಲಿರುವ 'ದಾಂಪತ್ಯದ ಹಕ್ಕು ಮರುಸ್ಥಾಪನೆ' ಅಂತಹ ಅಂಶಗಳಲ್ಲಿ ಒಂದು. ದಬ್ಬಾಳಿಕೆ ಸ್ವರೂಪದ ವೈವಾಹಿಕ ಸಂಬಂಧದಿಂದ ಮಹಿಳೆ ಹೊರಬರುವುದನ್ನು ದಾಂಪತ್ಯದ ಹಕ್ಕು ತಡೆಯುತ್ತದೆ. ಉತ್ತರಾಧಿಕಾರವನ್ನು ನಿರ್ಧರಿಸುವ ಹಿಂದೂ ಅವಿಭಕ್ತ ಕುಟುಂಬಗಳ ಅಧಿಕಾರವೂ ಹಿಂದೂ ವೈಯಕ್ತಿಕ ಕಾನೂನುಗಳಲ್ಲಿನ ದೊಡ್ಡ ಸವಾಲಾಗಿದೆ. ಯುಸಿಸಿ ಅಡಿಯಲ್ಲಿ ಈ ಎಲ್ಲಾ ಅಂಶಗಳನ್ನೂ ಸುಧಾರಣೆ ಮಾಡಲಾಗುವುದೇ?

ಎಲ್‌ಜಿಬಿಟಿಕ್ಯೂ ಸಮುದಾಯದ ಜನರ ವಿವಾಹ, ದತ್ತು ಮತ್ತು ಇತರೆ ವಿಷಯಗಳನ್ನೂ ಯುಸಿಸಿ ಒಳಗೊಳ್ಳುತ್ತದೆಯೇ ಎನ್ನುವುದು ಮೂರನೆಯ ಮತ್ತು ಬಹುಮುಖ್ಯವಾದ ಪ್ರಶ್ನೆ.

ಸಲಿಂಗ ವಿವಾಹಕ್ಕೆ ಸಂಬಂಧಿಸಿದಂತೆ ವಿವಾಹದ ಸಮಾನ ಹಕ್ಕುಗಳ ಕುರಿತು ಸುಪ್ರೀಂ ಕೋರ್ಟ್ ವಾದ-ಪ್ರತಿವಾದವನ್ನು ಆಲಿಸುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಿರುವ ಸಂದರ್ಭದಲ್ಲೇ ಯುಸಿಸಿ ಚರ್ಚೆ ಮುನ್ನೆಲೆಗೆ ಬಂದಿದೆ. 1954ರ ವಿಶೇಷ ವಿವಾಹ ಕಾಯ್ದೆಯ ಅಂಶಗಳ ಸಾಂವಿಧಾನಿಕ ಸಿಂಧುತ್ವವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದೆ. ಈ ವಿಚಾರದಲ್ಲಿ ನಿರ್ಧಾರ ತೆಗೆದುಕೊಳ್ಳುವ ಕೆಲಸ ನ್ಯಾಯಾಲಯದ್ದಲ್ಲ, ಬದಲಿಗೆ ಕಾನೂನು ತರುವ ಮೂಲಕ ಇದನ್ನು ನಿರ್ಧರಿಸುವ ಅಧಿಕಾರ ಸಂಸತ್ತಿನದ್ದು ಎಂದೇ ಕೇಂದ್ರ ಸರ್ಕಾರ ವಾದಿಸುತ್ತಿದೆ.

ಈ ವಿಚಾರದಲ್ಲಿ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ತನ್ನದೇ ಎಂಬುದು ಸರ್ಕಾರದ ದೃಢ ನಿಲುವಾದರೆ, ಪ್ರಸ್ತಾವಿತ ಯುಸಿಸಿ ಸಲಿಂಗ ವಿವಾಹ ಮತ್ತು ಲಿಂಗತ್ವ ಅಲ್ಪಸಂಖ್ಯಾತರ ವಿವಾಹದ ಹಕ್ಕುಗಳನ್ನೂ ಒಳಗೊಂಡಿರಬೇಕಿತ್ತು. ಆದರೆ, ಯುಸಿಸಿ ಕುರಿತಾದ ಸರ್ಕಾರದ ಪ್ರಸ್ತಾವ, ಸಂವಾದಗಳೆಲ್ಲವೂ ಈ ವಿಚಾರದಲ್ಲಿ ಸಂಶಯಕ್ಕೆ ಎಡೆಮಾಡಿಕೊಡುವಂತೆ ಮೌನವಹಿಸಿವೆ.

ಕೌಟುಂಬಿಕ ಕಾನೂನುಗಳಲ್ಲಿ ಲಿಂಗ ಸಮಾನತೆ ಸಾಧಿಸಬೇಕು ಎಂಬುದರ ಜತೆಗೆ ಬೇರೆ ಜಾತಿ, ಬೇರೆ ಧರ್ಮದವರನ್ನು ಮದುವೆ ಆಗುವ ಮೂಲಭೂತ ಹಕ್ಕಿನ ಕುರಿತು ಮೊದಲು ಕಾನೂನು ರೂಪಿಸಬೇಕಾಗಿದೆ. ಮನೆಯವರನ್ನು, ಸಮಾಜವನ್ನು ಎದುರು ಹಾಕಿಕೊಂಡು ಅಂತರ್ಜಾತಿ, ಅಂತರಧರ್ಮೀಯ ವಿವಾಹ ಆಗುವವರ ಮರ್ಯಾದೆಗೇಡು ಹತ್ಯೆಗಳನ್ನು ತಡೆಗಟ್ಟಬೇಕಿದೆ. ಪ್ರಸ್ತಾವಿತ ಯುಸಿಸಿ ಈ ಎಲ್ಲಾ ಅಂಶಗಳನ್ನು ಒಳಗೊಳ್ಳುವುದೇ?

ಈ ಹೊತ್ತಿನ ಮಟ್ಟಿಗೆ ಏಕರೂಪ ನಾಗರಿಕ ಸಂಹಿತೆಯು ಖಾಲಿ ಹಾಳೆಯಷ್ಟೇ. ಈ ಸಂಹಿತೆಯಲ್ಲಿ ಉತ್ತರಕ್ಕಿಂತ ಪ್ರಶ್ನೆಗಳೇ ಹೆಚ್ಚಿವೆ. ಲಿಂಗ ಸಮಾನತೆಯ ಸಮಾಜದ ಕನಸನ್ನು ನನಸು ಮಾಡಿಕೊಳ್ಳಬೇಕು ಎಂದಾದರೆ, ಇಂಥ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಿದೆ. ಇದಕ್ಕೆ ಚರ್ಚೆ ನಡೆಯಬೇಕಿದೆ ಮತ್ತು ಒಮ್ಮತ ಮೂಡಬೇಕಿದೆ. ಹಾಗಿದ್ದಾಗ ಮಾತ್ರವೇ ಈ ಏಕರೂಪ ನಾಗರಿಕ ಸಂಹಿತೆಯಲ್ಲಿ ಏನೇನಿರಬೇಕು ಎಂಬುದರ ಬಗ್ಗೆ ಒಮ್ಮತಕ್ಕೆ ಬರಲು ಸಾಧ್ಯ.

ಲೇಖಕಿ: ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲೆ

ಕಾಲ ಪಕ್ವವಾಗಿಲ್ಲ

ಏಕರೂಪ ನಾಗರಿಕ ಸಂಹಿತೆಯನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕು ಎಂದು ಭಾರತದ ಸಂವಿಧಾನದಲ್ಲಿ ಹೇಳಿಲ್ಲ. ಏಕರೂಪ ನಾಗರಿಕ ಸಂಹಿತೆ ಜಾರಿಗೊಳಿಸಲು ಸರ್ಕಾರಗಳು ಪ್ರಯತ್ನ ಮಾಡಬೇಕು ಎಂಬ ಅಂಶ ಸಂವಿಧಾನದಲ್ಲಿದೆ. ಈ ವಿಷಯ ಸಂವಿಧಾನ ರಚನಾ ಸಭೆಯಲ್ಲಿ ಚರ್ಚೆಗೆ ಬಂದಿತ್ತು. ಅಲ್ಲಿ ಒಮ್ಮತದ ನಿರ್ಣಯಕ್ಕೆ ಬರಲು ಸಾಧ್ಯವಾಗದ ಕಾರಣಕ್ಕೆ ಏಕರೂಪ ನಾಗರಿಕ ಸಂಹಿತೆಯನ್ನು ಕಡ್ಡಾಯ ಮಾಡಲಿಲ್ಲ. ಯುಸಿಸಿಯ ಸ್ವರೂಪ ಏನು ಎಂಬುದರ ಕುರಿತು ಸಂವಿಧಾನ ಅಥವಾ ಯಾವುದೇ ಕಾನೂನು ಅಥವಾ ಯಾವುದೇ ನ್ಯಾಯಾಲಯದ ಆದೇಶ ತೀರ್ಪಿನಲ್ಲಿ ಸ್ಪಷ್ಟಪಡಿಸಿಲ್ಲ. ಅದರ ಸ್ವರೂಪ ಏನು ಎಂಬುದು ಮೊದಲು ಸ್ಪಷ್ಟವಾಗಬೇಕು. ಪ್ರಧಾನಿ, ಉಪ ರಾಷ್ಟ್ರಪತಿ, ಆಡಳಿತ ಪಕ್ಷದ ಮುಖಂಡರಲ್ಲೇ ಈ ಬಗ್ಗೆ ಸ್ಪಷ್ಟತೆ ಇಲ್ಲ.

ಏಕರೂಪ ನಾಗರಿಕ ಸಂಹಿತೆಗೆ ನನ್ನ ವಿರೋಧ ಇಲ್ಲ. ಆದರೆ, ಅದನ್ನು ತರಲು ಈಗ ಕಾಲ ಪಕ್ವವಾಗಿಲ್ಲ. ಕೆಲವು ಪ್ರಮುಖ ವಿಷಯಗಳಲ್ಲಿ ಸಮಾನ ಸಂಹಿತೆಯನ್ನು ತರಲು ಪ್ರಯತ್ನ ಆಗಬೇಕು. ಮಹಿಳೆಯರ ಜೀವನಾಂಶ, ದತ್ತು ಪಡೆಯುವುದು, ಆಸ್ತಿ ಹಕ್ಕು ಮತ್ತಿತರ ವಿಷಯಗಳಲ್ಲಿ ಏಕರೂಪತೆ ಇರಬೇಕೆಂಬ ತೀರ್ಪುಗಳು ಬಂದಿವೆ. ಅವುಗಳ ಆಧಾರದಲ್ಲಿ ಸಮಾನ ಸಂಹಿತೆಗಳನ್ನು (ಕೋಡ್) ತರಬೇಕು. ಆ ಮೂಲಕ ಏಕರೂಪ ನಾಗರಿಕ ಸಂಹಿತೆ ಜಾರಿಗೆ ವೇದಿಕೆ ಸಿದ್ಧಗೊಳಿಸಬೇಕು. ಅದರ ಜತೆಯಲ್ಲೇ ನಮ್ಮಲ್ಲಿ ಇರುವ ಧರ್ಮಗಳಲ್ಲಿನ ಅವೈಜ್ಞಾನಿಕ, ಅಪ್ರಸ್ತುತ ಅಂಶಗಳಿಗೆ ತಿಲಾಂಜಲಿ ನೀಡಿ, ಸುಧಾರಣೆ ತರುವ ಕೆಲಸ ಧರ್ಮ ಗುರುಗಳಿಂದ ಆರಂಭವಾಗಬೇಕು.

ಎಚ್.ಎನ್. ನಾಗಮೋಹನ್ ದಾಸ್, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ

ಸರ್ವಧರ್ಮಗಳ ಅಭಿಪ್ರಾಯ ಸಂಗ್ರಹವಾಗಲಿ

ಏಕರೂಪ ನಾಗರಿಕ ಸಂಹಿತೆ ಭಾರತದ ಸಂವಿಧಾನ ಕರ್ತೃಗಳ ಒಂದು ಅದ್ವಿತೀಯ ಪರಿಕಲ್ಪನೆ. ಇದನ್ನು ನ್ಯಾಯಾಲಯಗಳ ಮುಖೇನ ಅನುಷ್ಠಾನಗೊಳಿಸಲು ಸಾಧ್ಯವಿಲ್ಲ. ಇದನ್ನು ನಿಭಾಯಿಸುವ ಜವಾಬ್ದಾರಿ ಕೇವಲ ಸರ್ಕಾರಕ್ಕೆ ಬಿಟ್ಟದ್ದು. ಆದರೆ, ಈ ಪರಿಕಲ್ಪನೆ ಇನ್ನೂ ಕಾರ್ಯಾನುಷ್ಠಾನಗೊಂಡಿಲ್ಲ. ಇದಕ್ಕೆ ಮುಖ್ಯ ಕಾರಣ ಧರ್ಮೀಯ ಮತ್ತು ಸಾಂಸ್ಕೃತಿಕ ವೈವಿಧ್ಯ ಹಾಳಾಗುತ್ತದೆ ಎಂಬ ಕೂಗು. ಹಿಂದೂ ಸಂಪ್ರದಾಯದಲ್ಲಿನ ಆಸ್ತಿ ಉತ್ತರದಾಯಿತ್ವ, ಕೇರಳದಲ್ಲಿ ಚಾಲ್ತಿಯಲ್ಲಿರುವ ಮರಮಕ್ಕತಾಯಂ ಕಾಯ್ದೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಣಬರುವ ಅಳಿಯ ಕಟ್ಟು(ಸಂತಾನ ನೀತಿ), ಮಿತಾಕ್ಷರ ಮತ್ತು ದಯಾಬಾಗ, ವರ್ಗವಿಭಜನೆ ನೀತಿಗಳು ಮುಂತಾದ ವಿಭಿನ್ನತೆಗಳು ಸಮಾನ ನಾಗರಿಕ ಸಂಹಿತೆ ಜಾರಿಗೆ ಬಂದರೆ ನೀತಿ ಬಾಹಿರವಾಗುತ್ತವೆ.

ಏಕರೂಪ ನಾಗರಿಕ ಸಂಹಿತೆಯನ್ನು ಸಂಸತ್ತಿನ ಸಭಾ ಬಲದ ಆಧಾರದಲ್ಲಿ ಜಾರಿಗೆ ತರುವ ಮುನ್ನ ಸರ್ವಧರ್ಮಗಳ ಅಭಿಪ್ರಾಯಗಳನ್ನು ಸಂಗ್ರಹ ಮಾಡಿ ಸಹಯೋಗದೊಂದಿಗೆ ತಂದರೆ ಏಕಭಾರತೀಯತೆ ಸ್ಥಾಪಿತವಾಗುವುದರಲ್ಲಿ ಸಂದೇಹವಿಲ್ಲ. ಕೇವಲ ಸಂಸತ್ ಬಲದ ಆಧಾರದಲ್ಲಿ ಔಪಚಾರಿಕ ಕಾನೂನಿನ ರೂಪದಲ್ಲಿ ಇದನ್ನು ಹೇರಿದರೆ ಖಂಡಿತವಾಗಿಯೂ ವಿಷಮ ಪರಿಸ್ಥಿತಿ ಉಂಟಾಗುತ್ತದೆ ಎಂಬುದರಲ್ಲಿ ಸಂದೇಹ ಬೇಡ.

ಎಂ.ಎಸ್.ಶ್ಯಾಮಸುಂದರ್, ಹಿರಿಯ ವಕೀಲ, ಹೈಕೋರ್ಟ್

ಸಿನಿ ಬಿಟ್ಸ್

ವಿಭಿನ್ನ ಪಾತ್ರಗಳಲ್ಲಿ ಪ್ರಮೋದ್ ಶೆಟ್ಟಿ

ಹಲವು ಸಿನಿಮಾಗಳಲ್ಲಿ ಪ್ರಮುಖ ಪಾತ್ರ ಮಾಡಿರುವ ನಟ ಪ್ರಮೋದ್ ಶೆಟ್ಟಿ, ನಾಯಕನಾಗಿ ಸಾಲು ಸಾಲು ಸಿನಿಮಾಗಳನ್ನು ಒಪ್ಪಿಕೊಂಡಿದ್ದಾರೆ. ಒಂದಕ್ಕಿಂತ ಒಂದು ಭಿನ್ನ ಪಾತ್ರಗಳಲ್ಲಿ ಪ್ರಮೋದ್ ಕಾಣಿಸಿಕೊಂಡಿದ್ದು, **'ಶಭಾಷ್ ಬಡ್ಡಿಮಗ್ನೆ'** ಚಿತ್ರದ ಫಸ್ಟ್ ಲುಕ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಬಿ.ಎಸ್.ರಾಜಶೇಖರ್ ಕಥೆ ಬರೆದು, ನಿರ್ದೇಶಿಸಿರುವ ಈ ಚಿತ್ರದ ಮೋಷನ್ ಪೋಸ್ಟರ್ ಅನ್ನು ನಟ ರಕ್ಷಿತ್ ಶೆಟ್ಟಿ ಬಿಡುಗಡೆಗೊಳಿಸಿ ಗೆಳೆಯನಿಗೆ ಶುಭ ಕೋರಿದರು. ಕಿಶನ್ ಪ್ರೊಡಕ್ಷನ್ಸ್ ಲಾಂಛನದಲ್ಲಿ ಪ್ರಕಾಶ್ ನಿರ್ಮಾಣ ಮಾಡುತ್ತಿರುವ ಚಿತ್ರದಲ್ಲಿ ಆದ್ಯಪ್ರಿಯಾ ನಾಯಕಿ.

'ವಡ್ಡಾರಾಧಕ', 'ಶಬರಿ' ಕಿರುಚಿತ್ರಗಳಿಂದ ಭರವಸೆ ಮೂಡಿಸಿರುವ ಯುವ ನಿರ್ದೇಶಕ ಅನೀಶ್ ಶರ್ಮಾ ನಿರ್ದೇಶಿಸಿ, ಪ್ರಮೋದ್ ಶೆಟ್ಟಿ ಮುಖ್ಯಭೂಮಿಕೆಯಲ್ಲಿರುವ **'ಕರಿಕಾನು ಗುಡ್ಡದ ಮೇಲೊಂದು ಅಧಿಕ ಪ್ರಸಂಗ'** ಚಿತ್ರದ ಶೀರ್ಷಿಕೆ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಮಲೆನಾಡಿನ ಹಾಸ್ಯಮಯ ಕಥೆಯನ್ನು ಹೊಂದಿರುವ ಚಿತ್ರದಲ್ಲಿ ಪ್ರಮೋದ್ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಕಾಣಿಸಿಕೊಂಡಿದ್ದಾರೆ. ಚಿತ್ತರಂಜನ್ ಕಶ್ಯಪ್, ವಲ್ಲಭ್ ಸೂರಿ, ಸುನಿತ್ ಹಲಗೇರಿ ಈ ಚಿತ್ರದ ನಿರ್ಮಾಪಕರು. ಈಗಾಗಲೇ ಚಿತ್ರೀಕರಣ ಮುಗಿಸಿರುವ ಚಿತ್ರತಂಡ ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ಮಗ್ನವಾಗಿದೆ. ರಾಘು ಶಿವಮೊಗ್ಗ, ಕಿರಣ್ ನಾಯಕ್, ಮಂಜುನಾಥ್ ಹೆಗಡೆ ಮೊದಲಾದವರು ಚಿತ್ರದಲ್ಲಿ ಇದ್ದಾರೆ.

ಪ್ರಮೋದ್ ಶೆಟ್ಟಿ ನಾಯಕನಾಗಿ ನಟಿಸಿರುವ **'ಜಲಂಧರ'** ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದ್ದು, ಮುಂದಿನ ಕೆಲಸಗಳು ಬಿರುಸಿನಿಂದ ಸಾಗಿವೆ. ವಿಷ್ಣು ವಿ. ಪ್ರಸನ್ನ ಚೊಚ್ಚಲ ನಿರ್ದೇಶನದ ಈ ಚಿತ್ರ ಕ್ರೈಮ್ ಥ್ರಿಲ್ಲರ್ ಕಥಾಹಂದರ ಹೊಂದಿದೆ. ಕಾವೇರಿ ನದಿ ದಡದ ಮಧುವತ್ತಿ ಎಂಬ ಊರಿನಲ್ಲಿ ನಡೆಯುವ ಕಥೆಯನ್ನು ಹೊಂದಿರುವ ಚಿತ್ರವನ್ನು ಸ್ಟೆಪ್ ಅಪ್ ಪಿಕ್ಚರ್ಸ್ ಲಾಂಛನದಲ್ಲಿ ಮದನ್ ಎಸ್ ನಿರ್ಮಾಣ ಮಾಡುತ್ತಿದ್ದಾರೆ. ಲೋಕೇಶ್ ಗೌಡ, ರಘು ರಮಣಕೊಪ್ಪ, ಬಾಲ ರಾಜವಾಡಿ ಮುಂತಾದವರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ.



'ಶಭಾಷ್ ಬಡ್ಡಿಮಗ್ನೆ' ಚಿತ್ರದ ಫಸ್ಟ್ ಲುಕ್

ಅ.6ಕ್ಕೆ 'ಲವ್' ತೆರೆಗೆ

ವೃಷ ಪಾಟೀಲ್

ಮಹೇಶ ಸಿ. ಅಮ್ಮಳ್ಳಿದೊಡ್ಡಿ ನಿರ್ದೇಶಿಸಿರುವ ಹೊಸ ಸಿನಿಮಾ 'ಲವ್' ಅ.6ರಂದು ತೆರೆಗೆ ಬರಲಿದೆ. ಇತ್ತೀಚೆಗಷ್ಟೇ ಚಿತ್ರದ ಟ್ರೈಲರ್ ರಿಲೀಸ್ ಆಯಿತು.

'ಹೊಸಬರಿಗೆ ಮಾಸ್ ಸಿನಿಮಾಗಳು ಸೂಕ್ತವಾಗುವುದಿಲ್ಲ ಎನ್ನುವ ಕಾರಣಕ್ಕೆ ಲವ್ ಜಾನರ್ ಸಿನಿಮಾ ಮಾಡಿದ್ದೇನೆ. ಸಿನಿಮಾ ಈಗಾಗಲೇ ಸೆನ್ಸಾರ್ ಆಗಿದೆ. ನೈಜ ಘಟನೆಯಿಂದ ಪ್ರೇರೇಪಿತನಾಗಿ ಈ ಚಿತ್ರದ ಕಥೆ ಹೆಣೆದಿದ್ದೇನೆ. ಕಳೆದ ಜನವರಿಯಲ್ಲಿ ಶೂಟಿಂಗ್ ಆರಂಭಿಸಿ ಮಾರ್ಚ್ ತಿಂಗಳಿಗೆ ಪೂರ್ಣಗೊಳಿಸಿದೆವು' ಎನ್ನುತ್ತಾರೆ ಮಹೇಶ. ಚಿತ್ರದಲ್ಲಿ ಪ್ರಜಯ್ ಜಯರಾಮ್ ನಾಯಕನಾಗಿ ನಟಿಸಿದ್ದು, ವೃಷ ಪಾಟೀಲ್ ನಾಯಕಿಯಾಗಿ ನಟಿಸಿದ್ದಾರೆ. ಇದು ಇವರಿಬ್ಬರ ಚೊಚ್ಚಲ ಸಿನಿಮಾ. ಶ್ರೀಕಾಲ ಭೈರವೇಶ್ವರ ಮೂವೀ ಮೇಕರ್ಸ್‌ನಡಿ ದಿವಾಕರ್ 'ಲವ್' ಚಿತ್ರ ನಿರ್ಮಿಸುತ್ತಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

'1966, ಗೋಪಾಷ್ಟಮಿ ತಿಥಿಯಂದು, 3-7 ಲಕ್ಷ ಸಾಧುಗಳು ಗೋಹತ್ಯೆ ನಿಲ್ಲಿಸುವ ಕಾಯಿದೆ ಜಾರಿ ಮಾಡಬೇಕೆಂದು ದೆಹಲಿಯಲ್ಲಿ ಹಸುಗಳೊಂದಿಗೆ ಪ್ರತಿಭಟಿಸುತ್ತಾರೆ. ಪ್ರಧಾನಿ ಇಂದಿರಾಗಾಂಧಿ ಗೋಲೀಬಾರ್‌ಗೆ ಆದೇಶಿಸುತ್ತಾಳೆ. ಸುಮಾರು 5,000 ಸಾಧು ಸಂತರನ್ನು ಮತ್ತು ಹಸುಗಳನ್ನು ಗುಂಡಿಕ್ಕಿ ಕೊಲ್ಲಲಾಗುತ್ತದೆ...' ಎಂದಿರುವ ಪೋಸ್ಟ್‌ವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಆದರೆ, ಅದರಲ್ಲಿ ನೀಡಿರುವ ಮಾಹಿತಿಗಳು ತಪ್ಪಾಗಿವೆ.

> 1966 , ಗೋಪಾಷ್ಟಮಿ (ಗೋವುಗಳನ್ನು ಪೂಜಿಸುವ ಹಬ್ಬ) ತಿಥಿಯಂದು , 3-7 ಲಕ್ಷ ಸಾಧುಗಳು ಗೋಹತ್ಯೆ ನಿಲ್ಲಿಸುವ ಕಾಯಿದೆ ಜಾರಿ ಮಾಡಬೇಕೆಂದು ದೆಹಲಿಯಲ್ಲಿ ಹಸುಗಳೊಂದಿಗೆ ಪ್ರತಿಭಟಿಸುತ್ತಾರೆ . ಪ್ರಧಾನಿ ಇಂದಿರಾಗಾಂಧಿ ಗೋಲೀ ಬಾರ್ ಗೆ ಆದೇಶಿಸುತ್ತಾಳೆ . ಸುಮಾರು 5000 ಸಾಧು ಸಂತರನ್ನು ಮತ್ತು ಹಸುಗಳನ್ನು ಗುಂಡಿಕ್ಕಿ ಕೊಲ್ಲಲಾಗುತ್ತದೆ .

1966ರ ನ. 7ರಂದು ಗೋಹತ್ಯೆ ನಿಲ್ಲಿಸುವ ಕಾಯ್ದೆ ಜಾರಿಗೆ ಆಗ್ರಹಿಸಿ ಸರ್ವದಳೀಯ ಗೋರಕ್ಷಾ ಮಹಾಭಿಯಾನ ಸಮಿತಿ ಸತ್ಯಾಗ್ರಹವನ್ನು ಹಮ್ಮಿಕೊಂಡಿತ್ತು. ಇದಕ್ಕೆ ಜನಸಂಘದ ಬೆಂಬಲವೂ ಇತ್ತು. ಸತ್ಯಾಗ್ರಹದಲ್ಲಿ ಸುಮಾರು ಒಂದು ಲಕ್ಷ ಸಾಧುಗಳು ಸೇರಿದ್ದರು. ಧಾರ್ಮಿಕ ಮುಖಂಡರ, ಸಂಸದ ಸ್ವಾಮಿ ರಾಮೇಶ್ವರಾನಂದರ ಭಾಷಣಗಳಿಂದ ಉತ್ತಾಹಿತರಾದ ಸತ್ಯಾಗ್ರಹಿಗಳು ಸಂಸತ್ತಿಗೆ ಮುತ್ತಿಗೆ ಹಾಕಲು ಯತ್ನಿಸಿದರು. ಈ ವೇಳೆ ಪೊಲೀಸರು ಹಾಗೂ ಗುಂಪಿನ ನಡುವೆ ಸಂಘರ್ಷ ಏರ್ಪಟಿತ್ತು. ಈ ಘಟನೆಯಲ್ಲಿ ಎಂಟು ಮಂದಿ ಮೃತಪಟ್ಟಿದ್ದಾರೆ ಎಂದು ಪತ್ರಿಕೆಗಳು ವರದಿ ಮಾಡಿದ್ದವು. ಇದೇ ಸಂಖ್ಯೆಯನ್ನೇ ಸರ್ಕಾರವು ಸಂಸತ್ತಿಗೂ ನೀಡಿದೆ. ಆದ್ದರಿಂದ, ಸತ್ಯಾಗ್ರಹಕ್ಕೆ 3-7 ಲಕ್ಷ ಜನರು ಸೇರಿದ್ದರು ಮತ್ತು 5 ಸಾವಿರ ಸಾಧುಗಳ ಹತ್ಯೆ ನಡೆದಿತ್ತು ಎಂಬುದು ಸುಳ್ಳು ಎಂದು 'ಇಂಡಿಯಾ ಟುಡೆ' ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ಮೌನ-ಮಾತಿನ ಶಕ್ತಿ

ನುಡಿ ಬೆಳಗು



ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ತೀರಾ ಕಡಿಮೆ ಮಾತನಾಡುತ್ತಾ ಮುಗುಮ್ಮಾಗಿ ಇರುವವರು ಪಾಪದ ಜನ, ತುಂಬಾ ಸಭ್ಯರು ಎಂಬುದು ಬಹಳ ಜನರ ನಂಬಿಕೆ. ಹೆಚ್ಚು ತುಟಿಬಿಚ್ಚದ ಈ ಜನರ ಬಗ್ಗೆ ಮೃದು ಅನುಮಾನಗಳು ಕೂಡ ಇರುವುದಿಲ್ಲ. ಆದರೆ ಅಂತರಂಗದಲ್ಲಿ ಇವರು ಯಾರೂ ಮೌನಿಗಳಲ್ಲವಂತೆ. ಎಲ್ಲರಿಗಿಂತ ಹೆಚ್ಚು ಭಾಷೆಯನ್ನು ಬಳಸುವ ಇವರ ಮನಸ್ಸಿಗೆ ಸ್ಪೀಕರ್ ಇಲ್ಲದ ಕಾರಣ ಏನೂ ಕೇಳಿಸುವುದಿಲ್ಲ.

ಮೌನದ ಮಂದಿ ಅನ್ಯರ ಮಾತಿನ ಬಗ್ಗೆ ಯಾವ ನಿಲುವು ತಳೆದಿದ್ದಾರೆ ಎಂದು ಅರ್ಥ ಮಾಡಿಕೊಳ್ಳುವುದು ಬಲು ಕಷ್ಟದ ಕೆಲಸ. ಪಟಪಟ ಎಂದು ಮಾತಾಡುವ ಮಂದಿ ಹೆಚ್ಚು ಮುಚ್ಚಿಟ್ಟುಕೊಳ್ಳುವ ಗೋಜಿಲ್ಲದವರು. ನುಡಿಚಾಳಿಯ ವ್ಯಕ್ತಿಗಳ ಮನಸ್ಸಿಗೂ ಮಾತಿಗೂ ಯಾವುದೇ ತಡೆಗೋಡೆಗಳು ಇರುವುದಿಲ್ಲ. ಇಂತಹವರ ನಡುವೆ ಮಹಾಮೌನಿಗಳು ದೈವ ಸ್ವರೂಪಿಗಳಾಗಿ ಕಾಣುವುದು ಸಹಜವೇ.

ಮಹಾಮೌನಿಗಳು ಅಪರೂಪಕ್ಕೆ ಒಂದೇ ಒಂದು ವಾಕ್ಯ ತೆಗೆದು ಎಸೆದರೂ ಅದು ಸ್ಫೋಟಕದಷ್ಟು ಬಲಶಾಲಿ. ಎಲ್ಲರನ್ನೂ ಕ್ಷಣಮಾತ್ರದಲ್ಲಿ ಗಪ್ ಚಿಪ್ ಮಾಡಬಲ್ಲ ವಾಕ್ದಂಡ. ದೀರ್ಘಮೌನ ಮಾತಾದರೆ ಜೀರ್ಣಿಸಿಕೊಳ್ಳುವುದು ಕಷ್ಟ. ಹೀಗಾಗಿಯೇ 'ಅವರು ಮಾತಾಡಲ್ಲ. ಮಾತಾಡಿದ್ರೆ, ಮನೆಯೇ ಉಳಿಯಲ್ಲ' ಎಂದು ಹಿರಿಯರು ಗಾದೆ ಹೇಳಿದ್ದು.

ಈ ಪಾಟಿ ಜನ ಸುತ್ತಮುತ್ತ ವಟವಟ ಎನ್ನುವುದೇ ತಾಳಿಕೊಳ್ಳಲು ಆಗದಿರುವಾಗ ಈ ತುಟಿ ಅರಳಿಸದ ಕೆಲವೇ ಜನರ ಬಗ್ಗೆ ನಾವೇಕೆ ಹೆಚ್ಚು ತಲೆಕೆಡಿಸಿಕೊಳ್ಳಬೇಕು? ಅಚ್ಚರಿ ಎಂದರೆ ಈ ಮೌನದ ಮಂದಿ ಮನಸ್ಸಿನಲ್ಲಿ ನಮಗಿಂತ ಹೆಚ್ಚು ಮಾತಾಡುತ್ತಾರಂತೆ. ಇವರು ಅಪರೂಪಕ್ಕೆ ಬಳಸುವ ಭಾಷೆಗೆ ತೀಕ್ಷತೆ ಮತ್ತು ತೀವ್ರತೆ ಹೆಚ್ಚು. ನುಡಿಗಳನ್ನು ಮನಸ್ಸಿನೊಳಗೇ ತಿರುತಿರುವಿ ಹದಗೊಳಿಸಿ ಸೂಕ್ತ ಸಮಯದಲ್ಲಿ ಅವರು ಬಾಂಬಿನಂತೆ ಒಗೆಯಬಲ್ಲರು.

ಬಿಡುವು ಕೊಡದೆ ಒದರಾಡುವ ಜನರೂ ಒಮ್ಮೊಮ್ಮೆ ಮೌನರಾಗುವುದುಂಟು. ಆಗ ಇವರು ಸಿಟ್ಟಾಗಿದ್ದಾರೆ ಇಲ್ಲವೇ ಮುನಿಸಿಕೊಂಡು ಮುಖವೂದಿಸಿಕೊಂಡಿದ್ದಾರೆ ಎಂದು ಅರ್ಥೈಸಿಕೊಳ್ಳಬಹುದು. ಆದರೆ ಮೌನವನ್ನೇ ತಮ್ಮ ಆಭರಣವೆಂದು ಸ್ವೀಕರಿಸಿದ ಜನರ ಒಳನುಡಿಗಳ ಅರಿವುದಾದರೂ ಹೇಗೆ? ಕೆಲವೊಮ್ಮೆ ಮೌನ ನಮ್ಮ ಬದುಕಿನ ಅನೇಕ ಪ್ರಶ್ನೆಗಳಿಗೆ ಉತ್ತರ ಹುಡುಕುವ ತಾಣವಾಗಿಯೂ ಕೆಲಸ ಮಾಡಬಲ್ಲದು. ಎಷ್ಟೋ ಸಲ ಏಕಾಂತದಲ್ಲಿ ಸುಮ್ಮನೆ ಕೂತ ನಾವು ಅದೆಷ್ಟೋ ಗೋಜಲು ಗೊಂದಲಗಳಿಗೆ ಪರಿಹಾರ ಹುಡುಕಿಕೊಂಡಿಲ್ಲ!

ಮಾತು ಅವಶ್ಯವಿದ್ದಲ್ಲಿ ಮೌನವಾಗುವುದು ಅಪಾಯ. ಮಾತಿಗೆ ಅರ್ಥವಿಲ್ಲದಾಗ ಮೌನವಾಗಿರುವುದು ಶ್ರೇಯಸ್ಕರ. ಸಂಬಂಧಗಳು ಉಳಿದು ಭದ್ರವಾಗುವಲ್ಲಿಯೂ ಸಿಡಿದು ಹೋಳಾಗುವುದರಲ್ಲಿಯೂ ಮೌನದ ಪಾತ್ರ ದೊಡ್ಡದು. ಮಾತನ್ನು ಸಹಿಸುವುದು ಕಷ್ಟವಾದರೆ ಮೌನವನ್ನು ತಡೆದುಕೊಳ್ಳುವುದು ಇನ್ನಷ್ಟು ಕಷ್ಟ. ಮೌನಗಳೆಲ್ಲಾ ಮಾತಾಗಬೇಕು. ಕೆಲವರ ಮಾತು ನಿಶ್ಶಬ್ದವಾಗಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಸೆಪ್ಟೆಂಬರ್ 6, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ಸಪ್ತಮಿ ಗಂ. 15-38 ನಕ್ಷತ್ರ: ಕೃತ್ತಿಕಾ ಗಂ. 09-20 ಯೋಗ: ಹರ್ಷಣ ಗಂ. 22-25 ಕರಣ: ಬವ ಗಂ. 15-38, ಸಿಂಹ ಮಾಸದ 20 ನೇ ದಿನ, ಮಳೆನಕ್ಷತ್ರ: ಪೂರ್ವ ಫಲ್ಗುಣಿ 2. ರಾಹುಕಾಲ : ಮಧ್ಯಾಹ್ನ 12-00 – 01-30, ಸೂರ್ಯೋದಯ : 06-23 ಸೂರ್ಯಾಸ್ತ : 06-35, ಮುಸ್ಲಿಂ ದಿನಾಂಕ : 20 ಸಫರ್, ದಿನ ವಿಶೇಷ : ಶ್ರೀ ಕೃಷ್ಣ ಜನ್ಮಾಷ್ಟಮಿ, ವಾದಿತ್ರಾದಿ (ಸಿಂಧಿ), ಚೆಲ್ಲುಮ್ (ಮುಸ್ಲಿಂ)

ಅದೃಷ್ಟ ಸಂಖ್ಯೆ : 9, 1

ಮೇಷ: ಹೊಸ ಜವಾಬ್ದಾರಿಗಳನ್ನು ವಹಿಸಿಕೊಳ್ಳುವ ಮೊದಲು ಮಹಾಗಣಪತಿ ಸೇವೆ ಮಾಡಿರಿ. ಆಹಾರವನ್ನು ಹಾಳು ಮಾಡುವುದು ಸರಿಯಲ್ಲ. ನಿಮ್ಮನ್ನು ಅವಲಂಬಿಸಿರುವವರನ್ನು ನೋಡಿಕೊಳ್ಳುವ ಜವಾಬ್ದಾರಿ ಹೆಚ್ಚಲಿದೆ.

ವೃಷಭ: ಆತ್ಮೀಯರ ಮತ್ತು ಬಂಧುವರ್ಗದವರ ಸಹಾಯ ಸ್ವೀಕರಿಸುವುದು ಅಗೌರವವೆಂದು ಭಾವಿಸಬೇಡಿ. ನಿಮ್ಮ ಗ್ರಹಗತಿಗಳು ಉತ್ತಮವಾಗಿದ್ದು ಅದೃಷ್ಟ ಹುಡುಕಿಕೊಂಡು ಬರಲಿದೆ. ಈ ದಿನ ನೀವು ಆಧ್ಯಾತ್ಮದತ್ತ ವಾಲಲಿದ್ದೀರಿ.

ಮಿಥುನ: ಆಗಾಗ ಹಲವಾರು ವಿಚಾರಗಳಲ್ಲಿ ತೊಂದರೆ ಕಂಡುಬಂದರೂ ಎಲ್ಲಾ ಸಮಸ್ಯೆಗಳು ಪರಿಹಾರವಾಗುವುದು. ಸೋದರಿಯ ವಿಷಯದಲ್ಲಿ ಧಾರಾಳಿತನ, ಅನುಕಂಪ ಮೂಡುವುದು. ಹೊಸ ಕಾರ್ಯಗಳಿಗೆ ಸೂಕ್ತ ಸಮಯವಲ್ಲ.

ಕರ್ಕಾಟಕ: ನಿಯಮ ಉಲ್ಲಂಘನೆ ಮಾಡುವುದು, ಧೋರಣೆಯಿಂದ ಇರುವುದು, ದಬ್ಬಾಳಿಕೆ ನಡೆಸುವ ನಿಮ್ಮ ರೀತಿನೀತಿಯನ್ನು ಬದಲಿಸಿಕೊಳ್ಳುವ ಹಾದಿ ಹುಡುಕಿಕೊಳ್ಳಿರಿ. ಯೋಗಾಸನ ಶಿಕ್ಷಕರಿಗೆ ಬೇಡಿಕೆ ಹೆಚ್ಚಾಗುವುದು.

ಸಿಂಹ: ಕಾರ್ಯಕ್ಷೇತ್ರದಲ್ಲಿ ಶತ್ರುಗಳು ಹಿನ್ನಡೆ ಅನುಭವಿಸಿ ಮನಸ್ಸಿಗೆ ಸಮಾಧಾನ ದೊರಕಲಿದೆ. ಕುಟುಂಬದ ಸದಸ್ಯರಲ್ಲಿ ಆದಷ್ಟು ತಾಳ್ಮೆ-ಸಮಾಧಾನದಿಂದ ವರ್ತಿಸಬೇಕಾದೀತು. ಕ್ರೀಡಾಪಟುಗಳಿಗೆ ಪ್ರೋತ್ಸಾಹ ಲಭ್ಯ.

ಕನ್ಯಾ: ವ್ಯಾಪಾರ ವ್ಯವಹಾರದಲ್ಲಿ ನಿಮಗಾಗಿರುವ ಮೋಸ, ವಂಚಕರ ಕೈವಾಡದಂತಹ ಸಂಗತಿಗಳು ಬೆಳಕಿಗೆ ಬರುತ್ತದೆ. ತಂದೆಯವರಿಗೆ ಇದ್ದ ಹೃದಯ ಸಂಬಂಧಿ ವ್ಯಾಧಿ ಉತ್ತಮ ರೀತಿಯಲ್ಲಿ ಸುಧಾರಿಸಲಿದೆ.

ತುಲಾ: ಮನೆಯಲ್ಲಿ ನಡೆದ ಅಹಿತರ ಘಟನೆಯಿಂದಾಗಿ ಮಾನಸಿಕ ಹಾಗೂ ದೈಹಿಕವಾಗಿ ಆರೋಗ್ಯಕ್ಕೆ ಹಾನಿಯುಂಟಾಗಲಿದೆ. ಸಂಶೋಧನಾ ಕಾರ್ಯಗಳಲ್ಲಿ ಆಸಕ್ತಿ ವೃದ್ಧಿ. ಸಮಾಜ ಸೇವೆಯಲ್ಲಿ ನಿಮ್ಮ ಶ್ರಮವಿರಲಿ.

ವೃಶ್ಚಿಕ: ಲೇವಾದೇವಿ ವ್ಯವಹಾರದವರಿಗೆ ನಂಬಿಕೆದ್ರೋಹದಂತ ಘಟನೆಗಳು ಅತ್ಯಂತ ವಿಶ್ವಾಸದ ವ್ಯಕ್ತಿಗಳಿಂದ ನಡೆಯಬಹುದು. ವಿವಿಧ ರೀತಿ ಧನಾದಾಯ ಮಾರ್ಗವು ಗೋಚರಿಸಲಿದೆ. ಕೃಷಿ ಕಾರ್ಯದಲ್ಲಿ ಹಿನ್ನಡೆಯಾಗುವುದು.

ಧನು: ಆರಕ್ಷಕ ಸಿಬ್ಬಂದಿಗೆ ಕೆಲಸದ ಒತ್ತಡ ಅಥವಾ ಕೆಲಸದ ಸಮಯ ಹೆಚ್ಚಲಿದೆ. ದೇಹಾರೋಗ್ಯ ಉತ್ತಮವಾಗಿ ಮಕ್ಕಳೊಡನೆ ಆಟ ಪಾಠಗಳಲ್ಲಿ ಪಾಲ್ಗೊಳ್ಳುವಿರಿ. ವೃತ್ತಿ ಬದುಕಿನಲ್ಲಿ ಉನ್ನತ ಸ್ಥಾನರಕ್ಕೇರಲು ಸಕಾಲವಾಗಿದೆ.

ಮಕರ: ಹುಟ್ಟೂರಿನಲ್ಲಿ ಕೃಷಿ ಮಾಡುವ ಅಥವಾ ಕೃಷಿ ಭೂಮಿ ಖರೀದಿಸುವ ಆಲೋಚನೆ ನೆರವೇರುವುದು. ಅನ್ನಪೂರ್ಣೇಶ್ವರಿಯನ್ನು ಪ್ರತಿ ನಿತ್ಯವು ಮನೆಯಲ್ಲಿ ಪೂಜಿಸುವುದರಿಂದ ಬಿಕ್ಕಟ್ಟಿನ ಪರಿಸ್ಥಿತಿ ನಿವಾರಣೆಯಾಗುವುದು.

ಕುಂಭ: ಪುಸ್ತಕ ವ್ಯಾಪಾರಿಗಳಿಗೆ ಅದರಲ್ಲೂ ಮುಖ್ಯವಾಗಿ ಇತಿಹಾಸಕ್ಕೆ ಸಂಬಂಧಿಸಿದ ಪುಸ್ತಕ ವ್ಯಾಪಾರದಲ್ಲಿ ಉತ್ತಮ ಲಾಭವಾಗುವ ಸಂಭವವಿದೆ. ವಿದ್ಯಾಭ್ಯಾಸದ ಸಮಯದಲ್ಲಿನ ಸ್ನೇಹಿತರ ಸಂಪರ್ಕ ಆಗುವುದು.

ಮೀನ: ಭೂ ಸಂಬಂಧ ಕೆಲಸ ಕಾರ್ಯಗಳು ಹಾಗೂ ಸರ್ಕಾರದ ಕೆಲಸಗಳು ನಿಧಾನವಾದರೂ ಮೇಲಧಿಕಾರಿಗಳ ಸಹಾಯದಿಂದ ಸಂಪನ್ನಗೊಳ್ಳುವುದು. ಮೋಜು-ಮಸ್ತಿನ ಜೀವನದತ್ತ ಮನಸ್ಸು ಸೆಳೆಯುವುದು.

ಪದಬಂಧ 5433 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಜೀವವನ್ನು ಕೊಡುವುದು (4)
3.ಅಪ್ಪನ ಈ ರೂಪ ಬಲು ವಿರಳ! (4)
5.ನಡುವಿನಿಂದ ಶುರುವಾದ ಕಂಪನ (3)
8.ಮಿಥ್ಯವಲ್ಲ!ಇದು ಜೋಡಿ! (3)
9.ಪ್ರಮಾಣ ಪತ್ರವನ್ನು ಹೀಗೂ ಹೇಳುವರು(5)
10.ತಲೆಯಲ್ಲಿರುವ ಅನ್ನದ ಪಾತ್ರೆ (3)
11.ಎಲೆ ಅಡಿಕೆ ಚೀಲ (3)
15.ಕನ್ನಡಿಗನಿಗೆ ನೀಡಿದ ರಿಬೇಟ್! (4)
16.ಆಸೆ ಅಥವಾ ಬಯಕೆ (4)

ಮೇಲಿಂದ ಕೆಳಕ್ಕೆ
1.ಚೀನದಲ್ಲಿ ಕಂಡದ್ದೆಲ್ಲಾ ಹಳೆಯದು ಬಿಡಿ!(3)
2.ನಡುಗುತ್ತಿರುವ ಸೊಂಟ! (2)
3.ಮಾವನ ಹೆಂಡತಿ (2)
4.ಇದು ಬೇರೆಯವರ ಹಣ (4)
6.ಕಲೆಯಲ್ಲಿರುವ ಆಹ್ವಾನ! (4)
7.ತಾಪದ ಹೊತ್ತಿನಲ್ಲಿ ವ್ಯಕ್ತವಾದ ಅತೀ ದುಃಖ (3)
8.ಗೆಳೆಯನಿಂದ ಆಗಿರುವ ವಂಚನೆ (4)
10.ತರತರದ ಕಾಯಿಪಲ್ಲೆ (4)
12.ಜಾತ್ರೆಯಲ್ಲಿ ಕೂಡಿದ ಜನ ಸಂದಣಿ (3)
13. ದಾಯದಿಯನ್ನು ಹೀಗೂ ಕರೆಯುವರು (2)
14.ಹಿರಿಯ ಸಹೋದರಿಯಿಲ್ಲಿ ತಿರುಗಿದ್ದಾಳೆ (2)



5432ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ಸುರಂಗ 5.ನಿಷ್ಪಕ್ಷಪಾತ
6.ಸಮೀಪ 7.ಗುಳಂಬ
8.ರಾಷ್ಟ್ರೀಕರಣ
9.ಸಮಾಧಿ 10.ಕಟಾಕ್ಷ
13.ದಂತಮಂಜನ 14.ಜಕಾತಿ

ಮೇಲಿಂದ ಕೆಳಕ್ಕೆ:
1.ಮಂದಹಾಸ
2.ಸಾಕ್ಷರ 3.ಸುತ
4.ಗಲ್ಲುಗಂಬ 5.ನಿರಪರಾಧಿ
7.ಗುಣಕಥನ 9.ಸತ್ಕುಲಜ
11.ಕ್ಷಪಣಕ 12.ಸಾಮಂತ
13.ದಂತ

ಸುಡೊಕು 5819

	3					5		7
	2		6		7		4	
		5		4			9	1
	4				1		7	
8				2			1	4
	9		7			6		
9				3		4		
			4		8		2	
2		4						3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5818 ಸುಡೊಕು

9	3	1	5	6	7	8	4	2
6	7	2	4	8	9	3	1	5
5	8	4	3	1	2	6	7	9
3	5	7	2	9	8	4	6	1
2	9	8	6	4	1	5	3	7
4	1	6	7	5	3	2	9	8
7	2	9	8	3	6	1	5	4
8	6	5	1	7	4	9	2	3
1	4	3	9	2	5	7	8	6

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹382-546
ದ್ವಿತಳಿ (ಬಿ.ವಿ)	₹344-660

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹145
ಆರ್‌ಎಸ್‌ಎಸ್-5	₹138
ಗುಡ್ ಲಾಟ್	₹125

(ಪ್ರತಿ ಕೆ.ಜಿಗೆ)

ಷೇರುಪೇಟೆ ವಹಿವಾಟು ▲152

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,528
ಇಂದಿನ ಅಂತ್ಯ	19,574
▲	46
ದಿನದ ಗರಿಷ್ಠ	19,587

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹475
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹475

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1730(1720)
ಸೋಯಾ (ರಿಫೈನ್ಡ್)	₹920(925)
ಸೂರ್ಯಕಾಂತಿ (ರಿಫೈನ್ಡ್)	₹922(925)
ಪಾಮೋಲಿನ್	₹843(850)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹2,000-2,700
ಮಧ್ಯಮ	₹1500-2000
ಸಣ್ಣ	₹1000-1500

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹8500-8780
ಕೆ.ಆರ್. ಪೇಟೆ (ಇತರ)	₹8000-8000
ತುರುವೇಕೆರೆ	₹8700-8700

ಮುಂಬೈ ಧಾರಣೆ

ಶೇಂಗಾ

5–9–2023

ಜಾವಾ 70/80(ಹೊಸ)	12700-12800
ಜಾವಾ 80/90(ಹೊಸ)	12100-12200
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12300-12400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1740(1730)
ಒಂದು ವಾರದ ಡೆಲಿವರಿ	1735(1725)
ಸೋಯಾ ಕಚ್ಚಾ	865(872)
ಪಾಮ್ ವಾರದ ಡೆಲಿವರಿ	841(848)
ಸೂರ್ಯಕಾಂತಿ ಎಣ್ಣೆ ಕಚ್ಚಾ	850(850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	59,200(59150)
ಬೆಳ್ಳಿ ಕೆ.ಜಿ	72,400(73250)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಚಿರಸ್ಮರಣೆ

ಶ್ರೀಮತಿ ನಂಜಮ್ಮ
ನಿಧನ: 06-09-2021
ಲೇಟ್ ಶ್ರೀ ರಾಮಣ್ಣನವರ ಪತ್ನಿ
(ಸಂಸ್ಥಾಪಕರು: ಪಲ್ಲವಿ ಕನ್‌ಸ್ಟ್ರಕ್ಷನ್ಸ್)
ಸದಾ ನಿಮ್ಮ ನೆನಪಿನಲ್ಲಿರುವ...
ಡಾ. ಸಿ. ರಾಮಚಂದ್ರ, ಡಾ. ಪಲ್ಲವಿ ವಿ.ಆರ್.
ಕುಮಾರಿ ಸಂಹಿತಾ ರಾಮಚಂದ್ರ
ಕುಮಾರಿ ಅನ್ವಿತಾ ರಾಮಚಂದ್ರ ಹಾಗೂ ಬಂಧು-ಮಿತ್ರರು

ನಿಧನ

ಜನನ: 01.11.1942 ಮರಣ: 05.09.2023
ಶ್ರೀಯುತ ಮುನಿಯಪ್ಪ
ಶ್ರೀಯುತರು ದಿ: 05.09.2023 ರಂದು ದೈವಾಧೀನರಾಗಿರುತ್ತಾರೆ.
ದಿನಾಂಕ: 06.09.2023ರಂದು ಬೆಳಿಗ್ಗೆ 9.30ಕ್ಕೆ ಟಿ.ಆರ್.ಮಿಲ್ ಸ್ಮಶಾನದಲ್ಲಿ ಅಂತಿಮ ವಿಧಿ ವಿಧಾನಗಳನ್ನು ನಡೆಸಲಾಗುವುದು.
ದುಃಖತಪ್ತರು
ಶ್ರೀಮತಿ ಶಿವರುದ್ರಮ್ಮ ಮತ್ತು ಮಕ್ಕಳು
ಬೆಂಗಳೂರು–560086.
ಫೋನ್: 8095684529

ಎರಡು ಅಂಶಗಳಷ್ಟು ಕಡಿಮೆ ಆದ ಪಿಎಂಐ ಸೂಚ್ಯಂಕ

ಸೇವಾ ವಲಯದಲ್ಲಿ ಅಲ್ಪ ಇಳಿಕೆ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ಚಟುವಟಿಕೆಗಳು ಆಗಸ್ಟ್ ತಿಂಗಳಲ್ಲಿ ತುಸು ಇಳಿಕೆ ಕಂಡಿದೆ. ಜುಲೈನಲ್ಲಿ 62.3ರಷ್ಟು ಇದ್ದ ಎಸ್‌ಆ್ಯಂಡ್‌ಪಿ ಗ್ಲೋಬಲ್ ಇಂಡಿಯಾ ಸರ್ವಿಸಸ್ ಪಿಎಂಐ ಬ್ಯುಸಿನೆಸ್ ಆ್ಯಕ್ಟಿವಿಟಿ ಇಂಡೆಕ್ಸ್ ಆಗಸ್ಟ್‌ನಲ್ಲಿ 60.1ಕ್ಕೆ ಇಳಿಕೆ ಕಂಡಿದೆ.

ಸೂಚ್ಯಂಕವು 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇದ್ದರೆ ಅದನ್ನು ಬೆಳವಣಿಗೆ ಎಂದು ಪರಿಗಣಿಸಲಾಗುತ್ತದೆ. 50ಕ್ಕಿಂತ ಕಡಿಮೆ ಇದ್ದರೆ, ಅದನ್ನು ಕುಸಿತವೆಂದು ಅರ್ಥೈಸಲಾಗುತ್ತದೆ.

‘ಭಾರತದ ಸೇವಾ ವಲಯದ ಕಂಪನಿಗಳು ಆಗಸ್ಟ್ ತಿಂಗಳಲ್ಲಿ ಗುರುತರ ಮೈಲಿಗಲ್ಲನ್ನು ದಾಟಿವೆ. ರಫ್ತು ವಹಿವಾಟಿನಲ್ಲಿ ಅವು ದಾಖಲೆಯ ಏರಿಕೆಯನ್ನು ಕಂಡಿವೆ. ಏಷ್ಯಾ ಪೆಸಿಫಿಕ್, ಯುರೋಪ್, ಉತ್ತರ ಅಮೆರಿಕ ಮತ್ತು ಮಧ್ಯಪ್ರಾಚ್ಯದಿಂದ ಹೆಚ್ಚಿನ ಬೇಡಿಕೆ ಬಂದಿದೆ’ ಎಂದು ಎಸ್‌ಆ್ಯಂಡ್‌ಪಿ ಗ್ಲೋಬಲ್ ಮಾರ್ಕೆಟ್ ಇಂಟೆಲಿಜೆನ್ಸ್‌ನ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನಾ ಡಿ ಲಿಮಾ ಹೇಳಿದ್ದಾರೆ.

ಮುಖ್ಯಾಂಶಗಳು
- ಸೇವಾ ವಲಯದಲ್ಲಿ ಹೆಚ್ಚಿದ ನೇಮಕ
- ಕಾಂಪೊಸಿಟ್ ಪಿಎಂಐ ಸೂಚ್ಯಂಕದಲ್ಲಿ ಕೂಡ ಅಲ್ಪ ಇಳಿಕೆ
- ಉತ್ತರ ಅಮೆರಿಕ, ಯೂರೋಪ್‌ನಿಂದ ಹೆಚ್ಚಿದ ಬೇಡಿಕೆ

‘ಬೇಡಿಕೆ ಹೆಚ್ಚಾಗಿದ್ದುದು ಮುನ್ನೋಟದ ಬಗ್ಗೆ ಆಶಾವಾದ ಹೆಚ್ಚುವಂತೆ ಮಾಡಿದೆ. ಇದು ಆರ್ಥಿಕ ಬೆಳವಣಿಗೆಯ ದೃಷ್ಟಿಯಿಂದ ಒಳ್ಳೆಯದು’ ಎಂದು ಲಿಮಾ ಹೇಳಿದ್ದಾರೆ. ಆಗಸ್ಟ್‌ನಲ್ಲಿ ಸೇವಾ ವಲಯದಲ್ಲಿ ಹೊಸಬರ ನೇಮಕ ಕೂಡ ಹೆಚ್ಚಾಗಿದೆ. ಉದ್ಯೋಗ ಸೃಷ್ಟಿಯ ಪ್ರಮಾಣವು ಕಳೆದ ನವೆಂಬರ್ ನಂತರದ ಅತಿ ಹೆಚ್ಚಿನದ್ದಾಗಿದೆ.

ಸೇವಾ ವಲಯದ ಹಾಗೂ ತಯಾರಿಕಾ ವಲಯದ ಚಟುವಟಿಕೆಗಳನ್ನು ಒಟ್ಟಾಗಿ ಹೇಳುವ ಎಸ್‌ಆ್ಯಂಡ್‌ಪಿ ಗ್ಲೋಬಲ್ ಇಂಡಿಯಾ ಕಾಂಪೊಸಿಟ್ ಪಿಎಂಐ ಔಟ್‌ಪುಟ್ ಸೂಚ್ಯಂಕವು ಜುಲೈನಲ್ಲಿ 61.9 ಇದ್ದಿದ್ದು, ಆಗಸ್ಟ್‌ನಲ್ಲಿ 60.9ಕ್ಕೆ ಇಳಿಕೆ ಕಂಡಿದೆ. ಹೀಗಿದ್ದರೂ 12 ವರ್ಷಗಳಲ್ಲಿ ದಾಖಲಾಗಿರುವ ಅತ್ಯಂತ ವೇಗದ ಬೆಳವಣಿಗೆ ದರಗಳ ಪೈಕಿ ಇದೂ ಒಂದು.

ನಾಮನಿರ್ದೇಶನ ಖಾತರಿಗೆ ನಿರ್ಮಲಾ ಕರೆ

ಮುಂಬೈ (ಪಿಟಿಐ): ಬ್ಯಾಂಕ್ ಹಾಗೂ ಇತರ ಹಣಕಾಸು ಸಂಸ್ಥೆಗಳು ತಮ್ಮ ಗ್ರಾಹಕರು ಅವರ ಖಾತೆಗಳಿಗೆ ನಾಮನಿರ್ದೇಶನದ ವಿವರ ನೀಡುವಂತೆ ನೋಡಿಕೊಳ್ಳಬೇಕು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಹಣಕ್ಕೆ ವಾರಸುದಾರರು ಇಲ್ಲದಂತೆ ಆಗಬಾರದು ಎಂಬ ಉದ್ದೇಶದಿಂದ ಹಣಕಾಸು ಸಂಸ್ಥೆಗಳು ಇದನ್ನು ಮಾಡಬೇಕು ಎಂದು ನಿರ್ಮಲಾ ಹೇಳಿದ್ದಾರೆ.

‘ಬ್ಯಾಂಕ್, ಮ್ಯೂಚುವಲ್ ಫಂಡ್, ಷೇರು ಮಾರುಕಟ್ಟೆ ಸೇರಿದಂತೆ ಇಡೀ ಹಣಕಾಸು ವ್ಯವಸ್ಥೆಯು ಗ್ರಾಹಕರ ಹಣವನ್ನು ನಿರ್ವಹಿಸುವ ಸಂದರ್ಭದಲ್ಲಿ ಭವಿಷ್ಯದ ಬಗ್ಗೆಯೂ ಆಲೋಚಿಸಬೇಕು. ಗ್ರಾಹಕರು ತಮ್ಮ ಉತ್ತರಾಧಿಕಾರಿ ಯಾರು ಎಂಬುದನ್ನು ತಿಳಿಸುವಂತೆ ಮಾಡಬೇಕು, ಉತ್ತರಾಧಿಕಾರಿಯ ಹೆಸರು, ವಿಳಾಸವನ್ನು ಅವರು ನೀಡುವಂತೆ ಮಾಡಬೇಕು’ ಎಂದು ನಿರ್ಮಲಾ ಅವರು ಜಾಗತಿಕ ಫಿನ್‌ಟೆಕ್ ಮೇಳದಲ್ಲಿ ಹೇಳಿದ್ದಾರೆ.

ವರದಿಯೊಂದರ ಪ್ರಕಾರ, ವಾರಸುದಾರರು ಇಲ್ಲದ ಹಣದ ಮೊತ್ತವು ಬ್ಯಾಂಕಿಂಗ್ ವ್ಯವಸ್ಥೆಯಲ್ಲೇ ₹35 ಸಾವಿರ ಕೋಟಿ ದಾಟಿದೆ. ಹಣಕಾಸು ವ್ಯವಸ್ಥೆಯಲ್ಲಿ ಇಂತಹ ಹಣದ ಒಟ್ಟು ಮೊತ್ತವು ₹1 ಲಕ್ಷ ಕೋಟಿಗಿಂತ ಹೆಚ್ಚು ಎನ್ನಲಾಗಿದೆ.

ನಿರ್ಮಲಾ ಸೀತಾರಾಮನ್

ಯಾರೂ ಕೇಳದೆ ಉಳಿದಿರುವ ಖಾತೆಗಳನ್ನು ಗುರುತಿಸಲು ಸಾರ್ವಜನಿಕರಿಗೆ ನೆರವಾಗುವ ಉದ್ದೇಶದಿಂದ ಆರ್‌ಬಿಐ ಈಚೆಗೆ ಪ್ರತ್ಯೇಕ ಪೋರ್ಟಲ್ ಆರಂಭಿಸಿದೆ.

ಫಿನ್‌ಟೆಕ್ ಉದ್ಯಮ ವಲಯದ ಕಂಪನಿಗಳು ದೇಶಕ್ಕೆ ನೆರವಾಗಿರುವ ಬಗೆಯನ್ನು ವಿವರಿಸಿದ ನಿರ್ಮಲಾ, ‘ಕಳೆದ ನಾಲ್ಕು ವರ್ಷಗಳಲ್ಲಿ ಡಿಮ್ಯಾಟ್ ಖಾತೆಗಳ ಸಂಖ್ಯೆಯು ಎರಡೂವರೆ ಪಟ್ಟು ಹೆಚ್ಚಾಗಿದೆ. 2019–20ರಲ್ಲಿ ದೇಶದಲ್ಲಿ ಡಿಮ್ಯಾಟ್ ಖಾತೆಗಳ ಸಂಖ್ಯೆಯು 4.1 ಕೋಟಿ ಇತ್ತು. ಇದು 2022–23ರಲ್ಲಿ 10 ಕೋಟಿಗೆ ತಲುಪಿದೆ’ ಎಂದಿದ್ದಾರೆ.

ಮ್ಯೂಚುವಲ್ ಫಂಡ್ ಉದ್ಯಮವು ನಿರ್ವಹಣೆ ಮಾಡುತ್ತಿರುವ ಸಂಪತ್ತಿನ ಮೊತ್ತವು ಒಂದು ದಶಕದಲ್ಲಿ ಭಾರಿ ಏರಿಕೆ ಕಂಡಿದೆ. 2014ರಲ್ಲಿ ₹10 ಲಕ್ಷ ಕೋಟಿ ಇದ್ದ ಮೊತ್ತವು ಈಗ ₹46.37 ಲಕ್ಷ ಕೋಟಿಗೆ ಹೆಚ್ಚಾಗಿದೆ ಎಂದು ನಿರ್ಮಲಾ ಅವರು ಹೇಳಿದ್ದಾರೆ.

ಆಯ ತಪ್ಪಿ ಬಿದ್ದ ನಿತೀಶ್ ಕುಮಾರ್

ಪಟ್ನಾ (ಪಿಟಿಐ): ಪಟ್ನಾ ವಿಶ್ವವಿದ್ಯಾಲಯದಲ್ಲಿ ಶಿಕ್ಷಕರ ದಿನದ ಅಂಗವಾಗಿ ಮಂಗಳವಾರ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಆಯತಪ್ಪಿ ಬಿದ್ದರು.

ನಾಮಫಲಕ ಅನಾವರಣ ಮಾಡುವ ಸಂದರ್ಭದಲ್ಲಿ ನಿತೀಶ್ ಕುಮಾರ್ ಆಯ ತಪ್ಪಿದರು. ಅಲ್ಲೇ ಇದ್ದ ಭದ್ರತಾ ಸಿಬ್ಬಂದಿ ಅವರನ್ನು ಹಿಡಿದು ಮೇಲೆತ್ತಿದರು. ಇದರಿಂದ ನಿತೀಶ್ ಕುಮಾರ್ ವಿಚಲಿತರಾಗಲಿಲ್ಲ. ತಕ್ಷಣವೇ ವೇದಿಕೆಯತ್ತ ಬಂದ ಅವರು ಮಾಜಿ ರಾಷ್ಟ್ರಪತಿ ಸರ್ವಪಲ್ಲಿ ರಾಧಾಕೃಷ್ಣನ್ ಅವರ ಫೋಟೊಗೆ ಹೂವಿನ ಹಾರ ಹಾಕಿ ನಮಸ್ಕರಿಸಿದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	750-800
ನಡುಗೋಲು	900-950
ರಾಶಿ	1000-1100
ರಾಶಿ ಉತ್ತಮ	1150-1200
ಹೆರಕಿದ್ದು	1600-1700
ಹಸಿರು (ಸಾಧಾರಣ)	1200-1250
ಹಸಿರು ಉತ್ತಮ	1600-1700
ಹಸಿರು ಅತಿ ಉತ್ತಮ	1900-2000
ಕಾಳುಮೆಣಸು -	620
ಅಡಿಕೆ	
ಬಂಟ್ವಾಳ	
ಕೋಕ	13000-25000
ಹೊಸತು	28000-45000
ಹಳತು	46000-48500
ಕಾರ್ಕಳ	
ಹೊಸತು	30000-45000
ಹಳತು	40000-48500
ಸಾಗರ	
ಕೆಂಪುಗೋಟು	26989-36309
ರಾಶಿ	47469-48299
ಸಿಪ್ಪೆಗೋಟು	22009-22199
ಚಾಲಿ	37809-38569
ಶಿವಮೊಗ್ಗ	
ಬೆಟ್ಟೆ	46700-51340
ರಾಶಿ	37111-49821
ಸಿದ್ದಾಪುರ	
ಬಿಳಿಗೋಟು	32209-36070
ಚಾಲಿ	37889-41509
ಕೋಕ	31099-35808
ಕೆಂಪುಗೋಟು	31469-35699
ರಾಶಿ	43069-48549
ತಟ್ಟಿಬೆಟ್ಟೆ	37609-42869
ಶಿರಸಿ	
ಬೆಟ್ಟೆ	31299-46669
ಬಿಳಿಗೋಟು	28191-36609
ಚಾಲಿ	37500-42721
ಕೆಂಪುಗೋಟು	32099-6223
ರಾಶಿ	45699-49399
ಯಲ್ಲಾಪುರ	
ಬಿಳಿಗೋಟು	26899-36299
ಚಾಲಿ	37609-42399
ಕೋಕ	20099-29899
ಕೆಂಪುಗೋಟು	27099-36790
ರಾಶಿ	47099-54509
ತಟ್ಟಿಬೆಟ್ಟೆ	37599-46299

ಸಾಲದ ಖಾತೆಗೆ ಯುಪಿಐ ಜೋಡಣೆ: ಆರ್‌ಬಿಐ

ಮುಂಬೈ (ಪಿಟಿಐ): ಬ್ಯಾಂಕ್ ಸಾಲದ ಖಾತೆಗಳಲ್ಲಿ ಇರುವ ಹಣವನ್ನೂ ಯುಪಿಐ ವಹಿವಾಟಿಗೆ ಬಳಸಿಕೊಳ್ಳ ಬಹುದು ಎಂದು ಆರ್‌ಬಿಐ ಹೇಳಿದೆ. ಜಮಾ ಮೊತ್ತವನ್ನು ಮಾತ್ರ ಯುಪಿಐ ವ್ಯವಸ್ಥೆ ಮೂಲಕ ಪಾವತಿಗೆ ಬಳಸಿಕೊಳ್ಳಲು ಇದುವರೆಗೆ ಅವಕಾಶ ಇತ್ತು.

ಸಾಲದ ಖಾತೆಗೆ ಹಣ ಹಾಕುವುದಕ್ಕೆ ಹಾಗೂ ಸಾಲದ ಖಾತೆಯಿಂದ ಹಣ ಪಾವತಿ ಮಾಡುವುದಕ್ಕೆ ಕೂಡ ಯುಪಿಐ ಬಳಕೆ ಮಾಡುವ ಬಗ್ಗೆ ಆರ್‌ಬಿಐ ಏಪ್ರಿಲ್‌ನಲ್ಲಿ ಪ್ರಸ್ತಾಪಿಸಿತ್ತು.

ಈಗಿರುವ ವ್ಯವಸ್ಥೆಯು ಉಳಿತಾಯ ಖಾತೆಗಳು, ಒ.ಡಿ. ಖಾತೆಗಳು, ಪ್ರಿಪೇಯ್ಡ್ ವಾಲೆಟ್‌ಗಳು ಹಾಗೂ ರುಪೇ ಕ್ರೆಡಿಟ್ ಕಾರ್ಡ್‌ಗಳನ್ನು ಯುಪಿಐ ಜೊತೆ ಜೋಡಿಸಲು ಅವಕಾಶ ಕಲ್ಪಿಸುತ್ತದೆ. ಈಗ ಸಾಲದ ಖಾತೆಯನ್ನು ಕೂಡ ಜೋಡಿಸಲು ಆರ್‌ಬಿಐ ಅವಕಾಶ ಕಲ್ಪಿಸಿದೆ.

‘ಖಾತೆ ರಹಿತ ಸಚಿವ: ಉದ್ದೇಶ ಈಡೇರದು’

ಚೆನ್ನೈ (ಪಿಟಿಐ): ‘ಎಂ.ಕೆ.ಸ್ಟಾಲಿನ್ ನೇತೃತ್ವದ ತಮಿಳುನಾಡು ಸರ್ಕಾರದಲ್ಲಿ ವಿ.ಸೆಂಥಿಲ್ ಬಾಲಾಜಿ ಅವರು ಖಾತೆ ರಹಿತ ಸಚಿವರಾಗಿ ಮುಂದುವರಿಯುವುದರಲ್ಲಿ ಯಾವುದೇ ಉದ್ದೇಶ ಈಡೇರುವುದಿಲ್ಲ’ ಎಂದು ಮದ್ರಾಸ್ ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಇದು, ಸ್ವಚ್ಛ ಹಾಗೂ ಉತ್ತಮ ಆಡಳಿತದ ಚಿಂತನೆಗೂ ವಿರುದ್ಧವಾಗಿದೆ ಎಂದು ಮುಖ್ಯ ನ್ಯಾಯಮೂರ್ತಿ ಎಸ್.ವಿ.ಗಂಗಾಪುರ್‌ವಾಲಾ ಮತ್ತು ನ್ಯಾಯಮೂರ್ತಿ ಪಿ.ಡಿ.ಆದಿಕೇಶವಲು ಅವರಿದ್ದ ಪೀಠ ಅಭಿಪ್ರಾಯಪಟ್ಟಿತು. ಇಬ್ಬರು ವಕೀಲರು, ಎಐಎಡಿಎಂಕೆ ಮಾಜಿ ಸಂಸದ ಡಾ.ಜೆ.ಜಯ ವರ್ಧನ ಈ ಸಂಬಂಧ ಅರ್ಜಿ ಸಲ್ಲಿಸಿದ್ದರು.

ಸೆಂಥಿಲ್ ಬಾಲಾಜಿ ಖಾತೆರಹಿತ ಸಚಿವರಾಗಿರುವ ಕ್ರಮಬದ್ಧತೆ ಪ್ರಶ್ನಿಸಿ ಜಯವರ್ಧನ, ವಕೀಲ ರಾಮಚಂದ್ರನ್ ಅರ್ಜಿ ಸಲ್ಲಿಸಿದ್ದರು. ವಕೀಲ ಎಂ.ಎಲ್. ರವಿ ಅವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿ, ಸಚಿವ ಸ್ಥಾನದಿಂದ ಸೆಂಥಿಲ್ ಅವರನ್ನು ವಜಾಮಾಡಿ, ಸದ್ಯ ಯಥಾಸ್ಥಿತಿಯಲ್ಲಿಸಿರುವ ರಾಜ್ಯಪಾಲರ ಆದೇಶವನ್ನು ರದ್ದುಪಡಿಸಲು ಕೋರಿದ್ದರು.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ನಾಗೇಶ್ವರ ರಾವ್, ಕಗ್ಗದಾಸಪುರ, ಬೆಂಗಳೂರು

● ಪ್ರಶ್ನೆ: ನಾನು ಸರ್ಕಾರಿ ನೌಕರಿ ಹಾಗೂ ವರ್ಗಾವಣೆಯ ಕಾರಣ ಕಳೆದ ಕೆಲವು ವರ್ಷಗಳಲ್ಲಿ ರಾಜ್ಯದ ವಿವಿಧ ಸ್ಥಳಗಳಲ್ಲಿ ಕೆಲಸ ಮಾಡಬೇಕಾಯಿತು. ಆಗ ಆಯಾ ಭಾಗದ ಬ್ಯಾಂಕುಗಳಲ್ಲಿ ನಾನು ಉಳಿತಾಯ ಖಾತೆ ತೆರೆದು ನನ್ನ ಮನೆಮಂದಿಗೆ ಹಣ ಕಳುಹಿಸುತ್ತಿದ್ದೆ. ಆದರೆ ಕಳೆದ ಕೆಲವು ವರ್ಷಗಳಿಂದ ನಾನು ಆ ಖಾತೆಗಳಲ್ಲಿ ವ್ಯವಹಾರ ನಡೆಸುತ್ತಿಲ್ಲ. ಇದರಿಂದ ತೊಂದರೆ ಇದೆಯೇ? ಇದರಲ್ಲಿರುವ ಹಣ ನಾನು ಹಿಂಪಡೆಯಬಹುದೇ? ಹಳೆಯ ಠೇವಣಿಗಳನ್ನು ಆರ್‌ಬಿಐ ವೆಬ್ ಪೋರ್ಟಲ್ ಮೂಲಕ ಹಿಂಪಡೆಯಬಹುದು ಎಂದು ಓದಿದ್ದೇನೆ. ಇದರ ಪ್ರಯೋಜನ ಪಡೆಯಲು ಸಾಧ್ಯವೇ?

ಉತ್ತರ: ಯಾವುದೇ ಬ್ಯಾಂಕ್ ಖಾತೆಯಲ್ಲಿ ಎರಡು ವರ್ಷಗಳಿಗೂ ಅಧಿಕ ಕಾಲ ವ್ಯವಹಾರ ಮಾಡದಿದ್ದರೆ ಅಂತಹ ಖಾತೆಗಳನ್ನು ಆರ್‌ಬಿಐ ನಿರ್ದೇಶನದ ಅನುಸಾರ ಬ್ಯಾಂಕುಗಳು ತಟಸ್ಥವಾಗಿ ಇರಿಸಬೇಕಾಗುತ್ತದೆ. ಅಂತಹ ಖಾತೆಗಳಲ್ಲಿ ಮತ್ತೆ ವ್ಯವಹರಿಸಬೇಕು ಎಂದಾದರೆ ಕೆವೈಸಿ ದಾಖಲೆ ನೀಡಿ ತಾವೇ ಆ ಖಾತೆಯ ಹಕ್ಕುದಾರರು ಎಂಬುದನ್ನು ಗ್ರಾಹಕರು ತಿಳಿಸಬೇಕಾಗುತ್ತದೆ. ನಂತರ ಸಹಜ ವ್ಯವಹಾರಕ್ಕೆ ಅನುವು ಮಾಡಿಕೊಡಲಾಗುತ್ತದೆ.

ಹತ್ತು ವರ್ಷಗಳವರೆಗೆ ಕಾರ್ಯನಿರ್ವಹಿಸದ ಉಳಿತಾಯ ಅಥವಾ ಚಾಲ್ತಿ ಖಾತೆಗಳಲ್ಲಿನ ಬಾಕಿಗಳು ಅಥವಾ ಅವಧಿ ಮುಕ್ತಾಯದ ದಿನಾಂಕದಿಂದ ಹತ್ತು ವರ್ಷಗಳೊಳಗೆ ನಗದೀಕರಿಸದೆ ಉಳಿದ ಠೇವಣಿಗಳನ್ನು ‘ಕ್ಲೈಮ್ ಮಾಡದ ಠೇವಣಿಗಳು’ ಎಂದು ಬ್ಯಾಂಕುಗಳು ವರ್ಗೀಕರಿಸಬೇಕಾಗುತ್ತದೆ. ಇಂತಹ ಮೊತ್ತವನ್ನು ಬ್ಯಾಂಕುಗಳು ಆರ್‌ಬಿಐ ನಿರ್ವಹಿಸುವ ‘ಠೇವಣಿದಾರರ ಶಿಕ್ಷಣ ಮತ್ತು ಜಾಗೃತಿ ನಿಧಿ’ಗೆ ವರ್ಗಾಯಿಸಬೇಕು. ಆದರೆ ಅಂತಹ ಠೇವಣಿಗಳ ಮೇಲೆ ಉಳಿತಾಯ ಖಾತೆಗೆ ಅನ್ವಯಿಸುವ ಬಡ್ಡಿ ದರದಲ್ಲಿ ಖಾತೆದಾರರಿಗೆ ಬಡ್ಡಿ ನೀಡಲಾಗುತ್ತದೆ.

ಠೇವಣಿದಾರರು ಅಥವಾ ಮೃತ ಠೇವಣಿದಾರರ ನಾಮನಿರ್ದೇಶಿತರು ಅತವಾ ಕಾನೂನುಬದ್ಧ ಉತ್ತರಾಧಿಕಾರಿಗಳು ಠೇವಣಿಗಳನ್ನು ಗುರುತಿಸಲು ಮತ್ತು ಹಣ ಪಡೆಯಲು ಯಾವತ್ತೂ ಅವಕಾಶವಿದೆ. ನೀವು ಓದಿರುವ ಮಾಹಿತಿಯಂತೆ, ಆರ್‌ಬಿಐ ಒಂದು ಕೇಂದ್ರೀಕೃತ ಪೋರ್ಟಲ್ ರೂಪಿಸಿದೆ. https://udgam.rbi.org.in/unclaimed-deposits ಜಾಲತಾಣಕ್ಕೆ ಭೇಟಿ ನೀಡಿ ನಿಮ್ಮ ಮೊಬೈಲ್ ಸಂಖ್ಯೆ, ಪ್ಯಾನ್, ಹೆಸರು ಇತ್ಯಾದಿ ಮಾಹಿತಿ ನೀಡಿ ಹತ್ತು ವರ್ಷಕ್ಕೂ ಅಧಿಕ ಅವಧಿಯ, ವರ್ಗಾವಣೆಗೊಂಡ ಠೇವಣಿಗಳ ಬಗ್ಗೆ ಮಾಹಿತಿ ಪಡೆಯಬಹುದು. ಪ್ರಸ್ತುತ ಕೆಲವು ಬ್ಯಾಂಕುಗಳ ಮಾಹಿತಿಯಷ್ಟೇ ಇಲ್ಲಿ ಲಭ್ಯವಿದ್ದರೂ ಮುಂದೆ ಎಲ್ಲಾ ಬ್ಯಾಂಕುಗಳ ಮಾಹಿತಿ ಸಿಗಲಿದೆ. ಮಾತ್ರವಲ್ಲ ಬ್ಯಾಂಕುಗಳೂ ತಮ್ಮ ಪೋರ್ಟಲ್‌ನಲ್ಲಿ ಇಂತಹ ಮಾಹಿತಿ ಸಿಗುವಂತೆ ವ್ಯವಸ್ಥೆ ಮಾಡುತ್ತಿವೆ. ಒಂದು ವೇಳೆ ಯಾವುದೇ ಮಾಹಿತಿ ಜಾಲತಾಣದಲ್ಲಿ ಲಭ್ಯವಿಲ್ಲದಿದ್ದರೂ ನೇರವಾಗಿ ಬ್ಯಾಂಕನ್ನು ಸಂಪರ್ಕಿಸಿ ಅರ್ಜಿ ಸಲ್ಲಿಸುವ ಮೂಲಕವೂ ಸಮಸ್ಯೆ ಪರಿಹರಿಸಿಕೊಳ್ಳಬಹುದು. ನಿಮ್ಮ ಹಣವನ್ನು ಖಚಿತವಾಗಿ ಮರಳಿ ಪಡೆಯಬಹುದು.

ಹೆಸರು ಬೇಡ, ಊರು ಬೇಡ

● ಪ್ರಶ್ನೆ: ನನಗೆ ಹಿರಿಯ ನಾಗರಿಕರಿಗೆ ಅನ್ವಯವಾಗುವ ದೀರ್ಘಾವಧಿ ಬಂಡವಾಳ ವೃದ್ಧಿ (ಎಲ್‌ಟಿಸಿಜಿ) ತೆರಿಗೆ ಬಗ್ಗೆ ಮಾಹಿತಿ ಬೇಕು. ನಾನು 30 ವರ್ಷಗಳ ಹಿಂದೆ ಕೊಂಡಿದ್ದ ನಿವೇಶನ, ಅದರಲ್ಲಿ 25 ವರ್ಷಗಳ ಹಿಂದೆ ಕಟ್ಟಿದ ವಾಸದ ಮನೆ, ಈಗ ಹತ್ತು ವರ್ಷಗಳ ಹಿಂದೆ ನನ್ನ ತಾಯಿಯ ಮರಣಶಾಸನದ ಮೂಲಕ ನನಗೆ ದೊರಕಿದ ಮತ್ತೊಂದು ಖಾಲಿ ನಿವೇಶನ, ಎರಡನ್ನೂ ಮಾರಾಟ ಮಾಡಬೇಕೆಂದಿದ್ದೇನೆ. ಅದರಿಂದ, ಅಂದಾಜು ಒಂದೂವರೆ ಕೋಟಿ ರೂಪಾಯಿ ಸಿಗಬಹುದು. ಅದರಲ್ಲಿ ಬಹುಪಾಲು ಮೊತ್ತವನ್ನು ಬ್ಯಾಂಕಿನಲ್ಲಿ ಠೇವಣಿ ಇರಿಸಿ, ಅದರಿಂದ ಬಡ್ಡಿ ಪಡೆಯಬಹುದೆಂಬ ಆಶಯವಿದೆ.

ಹಿರಿಯ ನಾಗರಿಕರ ವಾರ್ಷಿಕ ಆದಾಯ ₹3 ಲಕ್ಷದೊಳಗೆ ಇದ್ದಲ್ಲಿ, ಅವರಿಗೆ ತೆರಿಗೆಯಿಂದ ವಿನಾಯಿತಿ ಇದೆ ಎಂಬುದಾಗಿ ಓದಿದ ನೆನಪು. ಇದು ನಿಜವೇ? ನನಗೀಗ 73 ವರ್ಷ ವಯಸ್ಸು. ಇಲ್ಲಿಯವರೆಗೆ, ಎಲ್ಲಾ ವರ್ಷಗಳಲ್ಲೂ ನನ್ನ ವಾರ್ಷಿಕ ಆದಾಯ ₹3 ಲಕ್ಷದೊಳಗೇ ಇದೆ. ಇದರಲ್ಲಿ ಹೆಚ್ಚಿನ ಅಂಶ ಠೇವಣಿ ಮೇಲಿನ ಬಡ್ಡಿ ಆದಾಯ. ಹೀಗೆ ಮಾರಾಟ ಮಾಡಿ ಬರುವ ಮೊತ್ತಕ್ಕೆ ನಾನು ತೆರಿಗೆ ಕಟ್ಟಬೇಕಾಗುತ್ತದೆಯೇ? ಅಥವಾ ನನ್ನ ವಯಸ್ಸು ಮತ್ತು ನನ್ನ ಇಲ್ಲಿಯವರೆಗಿನ ವಾರ್ಷಿಕ ಆದಾಯದ ಮೇಲಿಂದ, ನನಗೆ ಈ ದೀರ್ಘಾವಧಿ ಬಂಡವಾಳ ತೆರಿಗೆಯಿಂದ ವಿನಾಯಿತಿ ಸಿಗುತ್ತದೆಯೇ?

ಉತ್ತರ: ನೀವು ನೀಡಿರುವ ಮಾಹಿತಿಯ ಪ್ರಕಾರ ನಿಮಗೆ ಪ್ರತಿ ವರ್ಷ ಬ್ಯಾಂಕ್ ಠೇವಣಿಯಿಂದ ಬಡ್ಡಿ ಆದಾಯ ಬರುತ್ತದೆ. ನಿಮ್ಮ ಹೆಸರಲ್ಲಿ ಇರುವ ನಿವೇಶನ ಹಾಗೂ ಮನೆಯ ಮಾರಾಟದಿಂದ ಈ ವರ್ಷ ಒಂದಿಷ್ಟು ಆದಾಯ ಬರಲಿದೆ. ನಿಮಗೆ ₹3 ಲಕ್ಷದ ಮೂಲ ಆದಾಯಕ್ಕೆ ತೆರಿಗೆ ವಿನಾಯಿತಿ ಸಿಗುತ್ತದೆ. ಆದರೆ ಬಂಡವಾಳ ಆಸ್ತಿ ಮಾರಾಟದಿಂದ ಲಾಭ ಬಂದಾಗ, ವಿನಾಯಿತಿಯನ್ನು ಮೊದಲು ವಜಾ ಮಾಡಿಕೊಳ್ಳುವ ಅವಕಾಶ ಇರುವುದು ವೈಯಕ್ತಿಕ ತೆರಿಗೆ ದರದಲ್ಲಿ ತೆರಿಗೆಗೊಳಪಡುವ ಆದಾಯಕ್ಕೆ. ಅನಂತರ, ಉಳಿದ ಮೊತ್ತದ ಮೇಲಷ್ಟೇ ನೀವು ವಿನಾಯಿತಿ ಪಡೆಯಬಹುದು. ಉದಾಹರಣೆಗೆ, ನಿಮ್ಮ ಬಡ್ಡಿ ಆದಾಯ ವರ್ಷಕ್ಕೆ ₹2.50 ಲಕ್ಷ ಎಂದಿಟ್ಟುಕೊಳ್ಳಿ. ಅದೇ ರೀತಿ ₹1.50 ಕೋಟಿಯ ಆಸ್ತಿ ಮಾರಾಟದಿಂದ ಬಂದ ತೆರಿಗೆಗೊಳಪಡುವ ಬಂಡವಾಳ ಲಾಭ ₹50 ಲಕ್ಷ ಎಂದಿಟ್ಟುಕೊಳ್ಳಿ. ಮೊದಲು ನಿಮಗೆ ಅನ್ವಯಿಸುವ ಮೂಲ ತೆರಿಗೆ ವಿನಾಯಿತಿ ಮೊತ್ತವಾದ ₹3 ಲಕ್ಷದಿಂದ ಬಡ್ಡಿ ಆದಾಯವನ್ನು ಕಳೆದು ಉಳಿದ ಮೊತ್ತವಾದ ₹50,000ವನ್ನಷ್ಟೇ ವಿನಾಯಿತಿ ಎಂದು ಪರಿಗಣಿಸಿ ಉಳಿದ ₹49.50 ಲಕ್ಷದ ಮೇಲೆ ಶೇ 20.8ರ ದರದಲ್ಲಿ ನೀವು ತೆರಿಗೆ ಕಟ್ಟಬೇಕು.

ನಿಮ್ಮ ಸರಿಯಾದ ತೆರಿಗೆ ಮೊತ್ತ ಲೆಕ್ಕ ಹಾಕಲು 2001ರಲ್ಲಿದ್ದ ನಿಮ್ಮ ಆಸ್ತಿಯ ಮೌಲ್ಯ ಹಾಗೂ ಪ್ರಸ್ತುತ ಹಣದುಬ್ಬರ ಮೌಲ್ಯಾಂಕದೊಂದಿಗೆ ಸರಿಹೊಂದಿಸಿದಾಗ ಬರುವ ಮೌಲ್ಯವನ್ನು ತಿಳಿಯುವ ಮಾಹಿತಿ ಸಂಗ್ರಹಿಸಿ. ಬಂಡವಾಳ ಆಸ್ತಿ ಲಾಭಕ್ಕೆ ಸೀಮಿತವಾಗಿ ಆದಾಯ ತೆರಿಗೆಯ ‘ಅಧ್ಯಾಯ 6-ಎ’ ಅಡಿ ಹೇಳುವ ವಿನಾಯಿತಿಗಳು, ಸಾಮಾನ್ಯ ಹೂಡಿಕೆಗಳಾದ ವಿಮಾ ಕಂತು ಪಾವತಿ, ಪಿಪಿಎಫ್, ಶಾಲೆ ಶುಲ್ಕ, ಬಡ್ಡಿ ಆದಾಯ ವಿನಾಯಿತಿ ಇತ್ಯಾದಿಗಳಿಗೆ ಸಂಬಂಧಪಟ್ಟು ತೆರಿಗೆ ವಿನಾಯಿತಿ ಸಿಗದು. ನಿಮಗೆ ಆದಾಯ ತೆರಿಗೆಯ ಸೆಕ್ಷನ್ 54ರ ಅಡಿ ಹೇಳಿರುವಂತೆ ಹೊಸ ಮನೆ ಕೊಂಡುಕೊಳ್ಳುವ ಮೂಲಕ ಅಥವಾ ಸೆಕ್ಷನ್ 54ಇಸಿ ಅಡಿ ಹೇಳಿರುವ ಕೆಲವು ನಿರ್ದಿಷ್ಟ ಬಾಂಡ್‌ಗಳನ್ನು 5 ವರ್ಷಗಳ ಮಟ್ಟಿಗೆ ಖರೀದಿಸುವ ಮೂಲಕ ತೆರಿಗೆ ಪ್ರಮಾಣವನ್ನು ತಗ್ಗಿಸಬಹುದು.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ
ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001, ಇ–ಮೇಲ್:businessdesk@prajavani.co.in

ಮಹಿಳಾ ಮೀಸಲು ಮಸೂದೆ ಅಂಗೀಕಾರಕ್ಕೆ ಕವಿತಾ ಆಗ್ರಹ

ಹೈದರಾಬಾದ್ (ಪಿಟಿಐ): ಸಂಸತ್‌ನ ವಿಶೇಷ ಅಧಿವೇಶನದಲ್ಲಿ ಪಕ್ಷಭೇದ ಮರೆತು ಈಗಾಗಲೇ ಮಂಡಿಸಿರುವ ಮಹಿಳಾ ಮೀಸಲಾತಿ ಮಸೂದೆಗೆ ಅಂಗೀಕಾರ ನೀಡಲು ಎಲ್ಲಾ ಪಕ್ಷಗಳು ಒಗ್ಗಟ್ಟು ಪ್ರದರ್ಶಿಸಬೇಕು ಎಂದು ಭಾರತ ರಾಷ್ಟ್ರ ಸಮಿತಿ ನಾಯಕಿ ಹಾಗೂ ತೆಲಂಗಾಣದ ಎಂಎಲ್‌ಸಿ ಕೆ. ಕವಿತಾ ಒತ್ತಾಯಿಸಿದ್ದಾರೆ.

ಕಾಂಗ್ರೆಸ್, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರು ಸೇರಿದಂತೆ 47 ಪಕ್ಷಗಳ ಮುಖ್ಯಸ್ಥರಿಗೆ ಈ ಕುರಿತು ಅವರು ಪ್ರತ್ಯೇಕವಾಗಿ ಪತ್ರ ಬರೆದಿದ್ದಾರೆ.

ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ಕಲ್ಪಿಸುವುದಕ್ಕೆ ಸಂಬಂಧಿಸಿದ ಮಸೂದೆ ಮಂಡನೆಯಾಗಿ ಹಲವು ವರ್ಷಗಳೇ ಕಳೆದಿವೆ. ಇದಕ್ಕೆ ಸಂಸತ್‌ನ ಉಭಯ ಸದನಗಳಲ್ಲಿ ಒಪ್ಪಿಗೆ ಸಿಕ್ಕಿಲ್ಲ. ಸೆಪ್ಟೆಂಬರ್ 18ರಿಂದ ನಡೆಯುವ ಅಧಿವೇಶನದಲ್ಲಿ ಈ ಮಸೂದೆಗೆ ಅನುಮೋದನೆ ನೀಡಬೇಕು ಎಂದು ಕೋರಿದ್ದಾರೆ.

ಮಹಿಳೆಯರಿಗೆ ರಾಜಕೀಯ ಮೀಸಲಾತಿ ಕಲ್ಪಿಸುವುದು ಪ್ರತ್ಯೇಕ ವಿಷಯವಲ್ಲ. ನ್ಯಾಯಯುತ ಹಾಗೂ ಸಮಾನವಾದ ರಾಜಕೀಯ ಭೂಮಿಕೆ ನಿರ್ಮಾಣವೇ ಇದರ ಹಿಂದಿರುವ ಮೂಲ ಆಶಯವಾಗಿದೆ. ಹಾಗಾಗಿ, ರಾಜಕೀಯ ಭಿನ್ನಾಭಿಪ್ರಾಯವನ್ನು ಬದಿಗೊತ್ತಿ ಮಸೂದೆಯ ಅಂಗೀಕಾರಕ್ಕೆ ಒಮ್ಮತ ಪ್ರದರ್ಶಿಸಬೇಕು ಎಂದು ಒತ್ತಾಯಿಸಿದ್ದಾರೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಆಂಧ್ರಪ್ರದೇಶದ ಮುಖ್ಯಮಂತ್ರಿ ವೈ.ಎಸ್. ಜಗನ್‌ಮೋಹನ್ ರೆಡ್ಡಿ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹಾಗೂ ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಸೇರಿದಂತೆ ವಿವಿಧ ಪಕ್ಷಗಳ ಮುಖ್ಯಸ್ಥರಿಗೆ ಬರೆದಿರುವ ಪತ್ರದಲ್ಲಿ ಮಸೂದೆಯ ಮಹತ್ವ ಕುರಿತು ವಿವರಿಸಿದ್ದಾರೆ.

ಮೀಸಲಾತಿ ಮಿತಿ ಕೈಬಿಡಲು ಶರದ್ ಪವಾರ್ ಒತ್ತಾಯ

ಜಲಗಾಂವ (ಪಿಟಿಐ): ‘ಮೀಸಲಾತಿ ಸೌಲಭ್ಯದ ವ್ಯಾಪ್ತಿಗೆ ಹೆಚ್ಚಿನ ಸಮುದಾಯಗಳನ್ನು ತರಲು ಅನುವಾಗುವಂತೆ ಈಗಿನ ಶೇ 50ರ ಗರಿಷ್ಠ ಮಿತಿಯನ್ನು ಕೈಬಿಡಬೇಕು ಹಾಗೂ ಶೇ 15–16ರಷ್ಟು ಏರಿಸಬೇಕು’ ಎಂದು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು ಮಂಗಳವಾರ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಶರದ್ ಪವಾರ್ ಅವರು, ‘ಒಬಿಸಿ ಕೋಟಾದ ವ್ಯಾಪ್ತಿಗೆ ಹೆಚ್ಚಿನ ಸಮುದಾಯಗಳನ್ನು ಸೇರಿಸಿದರೆ ಸದ್ಯ ಆ ಕೋಟಾ ಪರಿಧಿಯಲ್ಲಿರುವ ಬಡವರಿಗೆ ಅನ್ಯಾಯ ಆಗಲಿದೆ ಎಂಬುದು ಕೆಲವರ ವಾದವಾಗಿದೆ. ಇದನ್ನು ತಳ್ಳಿಹಾಕಲಾಗದು’ ಎಂದೂ ಅಭಿಪ್ರಾಯಪಟ್ಟರು.

ಮೀಸಲಾತಿಗಿರುವ ಹಾಲಿ ಶೇಕಡ 50ರ ಮಿತಿ ಕೈಬಿಡುವ ಹಾಗೂ ಶೇ 15–16ರಷ್ಟು ಹೆಚ್ಚಿಸುವ ಅಧಿಕಾರ ಕೇಂದ್ರ ಸರ್ಕಾರದ್ದಾಗಿದ್ದು, ಸಂಸತ್ತಿನ ಮೂಲಕ ಜಾರಿಗೊಳಿಸಬೇಕಾಗಿದೆ ಎಂದರು. ಒಬಿಸಿ ಮತ್ತು ಇತರೆ ಸಮುದಾಯದವರ ನಡುವೆ ವ್ಯತ್ಯಾಸ ಇರಬಾರದು ಎಂದು ಹೇಳಿದರು.

ಶರದ್ ಪವಾರ್

ಸರ್ಕಾರಿ ಉದ್ಯೋಗ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಮೀಸಲಾತಿ ನೀಡಬೇಕು ಎಂದು ಒತ್ತಾಯಿಸಿ ಮಹಾರಾಷ್ಟ್ರದಲ್ಲಿ ಮರಾಠ ಸಮುದಾಯವು ತೀವ್ರ ಪ್ರತಿಭಟನೆಯನ್ನು ನಡೆಸುತ್ತಿದೆ.

ಜಾಲ್ನಾ ಜಿಲ್ಲೆಯ ಅಂತರ್‌ವಾಲಿ ಸಾರಥಿ ಗ್ರಾಮದಲ್ಲಿ ಹಿಂಸಾಚಾರ ನಿರತ ಗುಂಪು ಚದುರಿಸಲು ಪೊಲೀಸರು ಕಳೆದ ಶುಕ್ರವಾರ ಅಶ್ರುವಾಯು ಪ್ರಯೋಗಿಸಿದ್ದರು. ಈ ಮೂಲಕ ಮರಾಠ ಮೀಸಲಾತಿ ಪ್ರಶ್ನೆ ಮತ್ತೆ ಮುನ್ನೆಲೆಗೆ ಬಂದಿತ್ತು. ಮರಾಠ ಕೋಟಾ ಮೀಸಲಿಗೆ ಒತ್ತಾಯಿಸಿ ಧರಣಿ ನಿರತನನ್ನು ಆಸ್ಪತ್ರೆಗೆ ಕರೆದೊಯ್ಯಲು ಜನತೆ ಅವಕಾಶ ನೀಡಿರಲಿಲ್ಲ.

ಹಿಂಸಾಚಾರ ಘಟನೆಯಲ್ಲಿ 40 ಮಂದಿ ಪೊಲೀಸರು ಸೇರಿ ಹಲವರು ಗಾಯಗೊಂಡಿದ್ದರು. ಸಾರಿಗೆ ಸಂಸ್ಥೆಯ 15 ಬಸ್‌ಗಳಿಗೆ ಬೆಂಕಿ ಹಚ್ಚಲಾಗಿತ್ತು.

ಉಮರ್ ಖಾಲಿದ್ ಜಾಮೀನು ಅರ್ಜಿ ವಿಚಾರಣೆ ಮುಂದಕ್ಕೆ

ನವದೆಹಲಿ: ಜೆಎನ್‌ಯು ಮಾಜಿ ವಿದ್ಯಾರ್ಥಿ ಉಮರ್ ಖಾಲಿದ್ ಅವರ ಜಾಮೀನು ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ಒಂದು ವಾರ ಮುಂದೂಡಿತು. 2020ರಲ್ಲಿ ನಡೆದ ದೆಹಲಿ ಹಿಂಸಾಚಾರದಲ್ಲಿ ಪಿತೂರಿ ನಡೆಸಿದ ಆರೋಪದ ಮೇಲೆ ಖಾಲಿದ್ ವಿರುದ್ಧ ಕಾನೂನು ಬಾಹಿರ ಚಟುವಟಿಕೆ ತಡೆ ಕಾಯ್ದೆ (ಯುಎಪಿಎ) ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

ಖಾಲಿದ್ ಪರ ವಕಾಲತ್ತು ವಹಿಸಿರುವ ಹಿರಿಯ ವಕೀಲ ಕಪಿಲ್ ಸಿಬಲ್ ಅವರು ವಿಚಾರಣೆ ವೇಳೆ ಲಭ್ಯರಿಲ್ಲದ ಕಾರಣ ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಮತ್ತು ದೀಪಂಕರ್ ದತ್ತಾ ಅವರನ್ನು ಒಳಗೊಂಡ ಪೀಠವು ವಿಚಾರಣೆಯನ್ನು ಮುಂದೂಡಿತು.

ಇದಕ್ಕೂ ಹಿಂದೆ, ನ್ಯಾಯಮೂರ್ತಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಆ.9ರಂದು ಜಾಮೀನು ಅರ್ಜಿಯ ವಿಚಾರಣೆಯಿಂದ ಹಿಂದೆ ಸರಿದಿದ್ದರು.

ಯುಎಪಿಎ ಪ್ರಕರಣದಲ್ಲಿ ಜಾಮೀನು ಕೋರಿ ಖಾಲಿದ್ ಸಲ್ಲಿಸಿದ್ದ ಅರ್ಜಿಯನ್ನು 2022ರ ಅಕ್ಟೋಬರ್ 18ರಂದು ದೆಹಲಿ ಹೈಕೋರ್ಟ್ ತಿರಸ್ಕರಿಸಿತ್ತು. ಇತರ ಆರೋಪಿಗಳ ಜತೆಗೆ ಖಾಲಿದ್ ನಿರಂತರ ಸಂಪರ್ಕದಲ್ಲಿದ್ದಾರೆ. ಅಲ್ಲದೇ, ಮೇಲ್ನೋಟಕ್ಕೆ ಅವರ ವಿರುದ್ಧ ಆರೋಪಗಳು ನಿಜವಾಗಿವೆ ಎಂದು ದೆಹಲಿ ಹೈಕೋರ್ಟ್ ಹೇಳಿತ್ತು.

ಉಮರ್ ಖಾಲಿದ್

ಖಾಲಿದ್ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು. ನ್ಯಾಯಮೂರ್ತಿ ಎ.ಎಸ್ ಬೋಪಣ್ಣ ಮತ್ತು ಪ್ರಶಾಂತ್ ಕುಮಾರ್ ಮಿಶ್ರಾ ಅವರ ಪೀಠವು ಮೊದಲಿಗೆ ಅರ್ಜಿಯ ವಿಚಾರಣೆ ನಡೆಸಿತ್ತು.

ಪೌರತ್ವ ತಿದ್ದುಪಡಿ ಕಾಯ್ದೆ ಮತ್ತು ರಾಷ್ಟ್ರೀಯ ಪೌರತ್ವ ನೋಂದಣಿ ವಿರುದ್ಧ ನಡೆದ ಪ್ರತಿಭಟನೆಯು ಹಿಂಸಾಚಾರಕ್ಕೆ ತಿರುಗಿತ್ತು. ಗಲಭೆಯಲ್ಲಿ 53 ಮಂದಿ ಮೃತಪಟ್ಟಿದ್ದು, 700 ಜನರು ಗಾಯಗೊಂಡಿದ್ದರು. ಈ ಪ್ರಕರಣದಲ್ಲಿ ಖಾಲಿದ್, ಶಾರ್ಜೀಲ್ ಇಮಾಮ್ ಸೇರಿದಂತೆ ಹಲವರ ವಿರುದ್ಧ ಯುಎಪಿಎ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 6366430266, 6366430366

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

Wanted

ಕೂಡಲೇ ಬೇಕಾಗಿದ್ದಾರೆ: 7th 8th 10th, ಪಿಯುಸಿ, ಐಟಿಐ, ಡಿಪ್ಲೋಮ ಯಾವುದೇ ಪದವಿ ಪಾಸ್/ಫೇಲ್ ಹುದ್ದೆಗೆ ಕೂಡಲೇ ನೇರ ನೇಮಕಾತಿಗಾಗಿ ಕರೆಮಾಡಿ. 8884997575, 8884553030

General

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ಬಳಿ ಇರುವ ಹಾಸ್ಟೆಲ್ ಗಾಗಿ ಸೌತ್ ಇಂಡಿಯನ್ ವೆಜ್/ನಾನ್ ವೆಜ್ ಕುಕ್‌ಗಳು ತಕ್ಷಣ ಬೇಕಾಗಿದ್ದಾರೆ. ಆಕರ್ಷಕ ಸಂಬಳ. ಸಂಪರ್ಕಿಸಿ: 9739013813, 8317354764, 8197910301

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಟಿ.ವಿ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ,ಪಿಯುಸಿ, ಡಿಗ್ರಿ, ITIನವರುಗಳು 16,600-65,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ 7259552930

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 20,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು- 76 ತಕ್ಷಣ ಸಂಪರ್ಕಿಸಿ: 9148525233, 7899235388

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು, ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. ರೂ.12,000- 17,000. 8951315839, 9880120052

ರೆಂಟಲ್ ಪ್ರಾಪರ್ಟೀಸ್

Accommodation Available

House

ಮಲ್ಲೇಶ್ವರನಲ್ಲಿ ಒಂದು 3ಬಿಹೆಚ್ ಕೆ ಇಂಡಿಪೆಂಡೆಂಟ್ ಮನೆ ಬಾಡಿಗೆಗೆ ಲಭ್ಯವಿದೆ. ಬ್ರೋಕರ್ಸ್ ಕ್ಷಮಿಸಿ. 60,000/- ಸ್ವಲ್ಪ ನೆಗೊಶಿಯೇಬಲ್. ಸಂಪರ್ಕಿಸಿ: 9538523028

ಭವಿಷ್ಯ

Astrology

ಸ್ತ್ರೀವಶೀಕರಣ, ಪುರುಷ ವಶೀಕರಣ, ಮಾಟಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967

ವೈಯಕ್ತಿಕ

Change of Name

CHANGE OF NAME
I, **Ramaiah** S/o Rajaiah R/at. # 13/12, Singasandra, Bengaluru- 68, have changed my name from **B.SREERAMULU** to **RAMAIAH**
Hereafter in all my dealings and documents, I will be Known by name **RAMAIAH** only. Vide affidavit dated 04.09.2023 before Notary C.V.EARAPPA, Bangalore

ಪ್ರವಾಸ

Travel

7.9.2023 ಮತ್ತು 29.9.2023 ರಿಂದಧರ್ಮಸ್ಥಳ- ಹೊರನಾಡು- ಕೊಲ್ಲೂರು, ಮುರುಡೇಶ್ವರ- ಸಿಗಂದೂರು. 27.9.2023 ರಿಂದ ಚಾರ್ಧಾಮ್ ಪ್ರವಾಸ ಕೇದಾರನಾಥ್, ಗಂಗೋತ್ರಿ, ಬದರೀನಾಥ್,ಯಮುನೋತ್ರಿ 28.9.2023 ರಿಂದಶಿರಡಿ, ನಾಸಿಕ್,ತ್ರೈಂಬಕೇಶ್ವರ, ಕೊಲ್ಲಾಪುರ. 30.9.2023 ರಿಂದಊಟಿ, ಈಶಾ ಫೌಡೇಶನ್,ಕುಡುಮುಡಿ, ಪಳನಿ. 8.10.2023 ರಿಂದಭದ್ರಾಚಲಂ, ಹೈದ್ರಾಬಾದ್, ಶ್ರೀಶೈಲ,ಮಂತ್ರಾಲಯ. 9.10.2023 ರಿಂದವೈಷ್ಣೋದೇವಿ,ವಾಘಬಾರ್ಡರ್, ದೆಹಲಿ,ಹರಿದ್ವಾರ, ಆಗ್ರಾ,ಅಮೃತಸರ್. ಶ್ರೀಗುರುರಾಜ ಟ್ರಾವೆಲ್ಸ್- 9449652555, 8123099913, 9611082432

ಅಕ್ಟೋಬರ್ ತಿಂಗಳಲ್ಲಿ ಕಾಶಿ, ಗಯಾ,ಪ್ರಯಾಗ ಪ್ರವಾಸ, 7ದಿನ ವೈಷ್ಣೋದೇವಿ ಪ್ರವಾಸ, ರಾಜಸ್ಥಾನ ಪ್ರವಾಸ 10ದಿನ. ಆರ್.ಗಾಂಧಿ ಟೂರ್ಸ್. 9945445809/ 9902433500

ಸೆಪ್ಟಂಬರ್ ಅಕ್ಟೋಬರ್ ತಿಂಗಳಲ್ಲಿ 8/13/21 ದಿನಗಳ ಕಾಶಿ,ಗಯಾ,ಪೂರಿಜಗನ್ನಾಥ್/ ಗಂಗೋತ್ರಿ,ಯಮುನೋತ್ರಿ ಬದರಿನಾಥ್,ಕೇದಾರನಾಥ್ ದೆಹಲಿ/ 12 ದಿನಗಳ ಸೋಮನಾಥ್,ದ್ವಾರಕಾ ಮಹಾಕಾಳೇಶ್ವರ,ಮಾತೃಗಯಾ ಅಹಮದಾಬಾದ್ ಓಂಕಾರೇಶ್ವರ್ ಡಿಸೆಂಬರ್ ತಿಂಗಳಲ್ಲಿ 6 ದಿನಗಳ ಕನ್ಯಾಕುಮಾರಿ ರಾಮೇಶ್ವರ,ಮಧುರೈ 'ಶ್ರೀಸುಧಾ ಟ್ರಾವೆಲ್ಸ್' 9448119290 9019301300

17.11.2023 02.12.2023 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 04.11.2023 22.11.2023 08.12.2023 ದುಬೈ,ಅಬುದಾಬಿ 5 ದಿನಗಳು. 27.10.2023 06.12.2023 ನೇಪಾಳ 9 ದಿನಗಳು. 06.10.2023 23.12.2023 ಭೂತಾನ್ 8 ದಿನಗಳು. 09.10.2023 17.11.2023 11.12.2023 ಶ್ರೀಲಂಕಾ 6 ದಿನಗಳು. 04.10.2023 22.11.2023 06.12.2023 ರಾಜಸ್ಥಾನ್ 9 ದಿನಗಳು. 27.10.2023 25.11.2023 12.12.2023 ಗುಜರಾತ್ 8 ದಿನಗಳು 27.10.2023 27.11.2023 ಅಸ್ಸಾಂ,ಮೇಘಾಲಯ 9 ದಿನಗಳು 06.10.2023 11.11.2023 11.12.2023 ಕಾಶಿ,ಗಯಾ,ಅಲಹಾಬಾದ್ 7 ದಿನಗಳು. 07.10.2023 11.11.2023 ದೆಹಲಿ,ಆಗ್ರಾ,ಜೈಪುರ್ 6 ದಿನಗಳು. ಸಂಪರ್ಕಿಸಿ: ಜೈನ್ ಟ್ರಾವೆಲ್ಸ್ ಮಲ್ಲೇಶ್ವರ. ಬೆಂಗಳೂರು.03 9448402248 7022547922

8 ದಿನಗಳ ಕಾಶಿಯಾತ್ರೆ. 12ದಿನಗಳ ಚಾರ್‌ಧಾಮ್‌ಯಾತ್ರೆ. 12 ದಿನಗಳ ನೇಪಾಳ,ಮುಕ್ತಿನಾಥ್. 10 ದಿನಗಳ ಗುಜರಾತ್. ಸಂಪರ್ಕಿಸಿ: ಶ್ರೀನಂದಿ ಹಾಲಿಡೇಸ್ 9980270467 9740228186

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 21/09 ನೇಪಾಳ, ಮುಕ್ತಿನಾಥ್, ಕಠ್ಮಂಡು, ಪಶುಪತಿನಾಥ, ಮನೋಕಾಮನಾ 25/10 ಗುಜರಾತ್, ನಾಗನಾಥ್, ಸೋಮನಾಥ್, ದ್ವಾರಕಾ.9964527782, 9591017782.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD Classifieds More value, more impact
ಪ್ರಜಾವಾಣಿ
REAL ESTATE
The 1st thing to do when Selling/Buying your Property
#1 PLACE YOUR AD HERE
www.dhclassifieds.com BOOK NOW
Book your ad with us now!
For more details contact:
+91 9731810277 | +91 9900428036 | +91 9845114560 | +91 9901641752 | +91 9886213331 | 080- 45557163/164

ವಿಶ್ವಕಪ್ ಟೂರ್ನಿಗೆ ಭಾರತ ತಂಡ ಪ್ರಕಟ: ರಾಹುಲ್, ಇಶಾನ್ ಕಿಶನ್‌ಗೆ ಅವಕಾಶ

‘ಪಾಂಡ್ಯ ಲಯವೇ ಗೆಲುವಿಗೆ ಬಲ’

ಪ್ರಜಾವಾಣಿ ವಾರ್ತೆ

ಪಲೇಕೆಲೆ, ಶ್ರೀಲಂಕಾ: ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರು ಉತ್ತಮ ಲಯ ಕಾಪಾಡಿಕೊಂಡರೆ ತಮ್ಮ ತಂಡಕ್ಕೆ ಜಯದ ಅವಕಾಶ ಹೆಚ್ಚುವುದು ಖಚಿತ ಎಂದು ಭಾರತ ತಂಡದ ನಾಯಕ ರೋಹಿತ್ ಶರ್ಮಾ ಹೇಳಿದರು.

ಅಕ್ಟೋಬರ್–ನವೆಂಬರ್‌ನಲ್ಲಿ ನಡೆಯುವ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಗೆ ಮಂಗಳವಾರ ತಂಡವನ್ನು ಪ್ರಕಟಿಸಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

‘ಹಾರ್ದಿಕ್ ಲಯ ಕಾಪಾಡಿಕೊಳ್ಳುವುದು ಮಹತ್ವದ ಅಂಶ. ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಅವರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡುವುದು ಮುಖ್ಯವಾಗಿದೆ. ಹೋದ ವರ್ಷವೂ ಅವರು ಎರಡೂ ವಿಭಾಗಗಳಲ್ಲಿ ಉತ್ತಮವಾಗಿ ಆಡಿದ್ದರು’ ಎಂದರು. ಹಾರ್ದಿಕ್ ತಂಡದ ಉಪನಾಯಕರಾಗಿ ಆಯ್ಕೆಯಾಗಿದ್ದಾರೆ.

ಶ್ರೀಲಂಕಾದಲ್ಲಿ ನಡೆಯುತ್ತಿರುವ ಏಷ್ಯಾ ಕಪ್ ಟೂರ್ನಿಯಲ್ಲಿ ಈಚೆಗೆ ಪಾಕಿಸ್ತಾನ ಎದುರಿನ ಪಂದ್ಯದಲ್ಲಿ ಹಾರ್ದಿಕ್ ಅರ್ಧಶತಕ ಗಳಿಸಿದ್ದರು. ಯುವ ಆಟಗಾರ ಇಶಾನ್ ಕಿಶನ್ ಜೊತೆಗೆ ಶತಕದ ಜೊತೆಯಾಟವಾಡಿದ್ದರು. ಈ ಕುರಿತು ರೋಹಿತ್ ಮೆಚ್ಚುಗೆ ವ್ಯಕ್ತಪಡಿಸಿದರು.

‘ಪಾಕ್ ಎದುರಿನ ಪಂದ್ಯದಲ್ಲಿ ಹಾರ್ದಿಕ್ ಆಟವು ಉತ್ಕೃಷ್ಟವಾಗಿತ್ತು. ಬೌಲರ್‌ಗಳನ್ನು ಆತ್ಮವಿಶ್ವಾಸದಿಂದ ಎದುರಿಸಿದರು. ಹೊಣೆಗಾರಿಕೆಯಿಂದ ಬ್ಯಾಟಿಂಗ್ ಮಾಡಿದ ರೀತಿ ಗಮನ ಸೆಳೆದಿತ್ತು. ಬೌಲಿಂಗ್‌ನಲ್ಲಿಯೂ ಅವರು ಉತ್ತಮವಾಗಿದ್ದಾರೆ. ಹೋದ ವರ್ಷವೂ ಅವರು ಚೆನ್ನಾಗಿ ಬೌಲಿಂಗ್ ಮಾಡಿದ್ದರು’ ಎಂದು ಹೇಳಿದರು.

ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ಭಾರತ ತಂಡ; (ಎಡದಿಂದ ಬಲಕ್ಕೆ), ಮೇಲಿನ ಸಾಲು: ರೋಹಿತ್ ಶರ್ಮಾ, ಹಾರ್ದಿಕ್ ಪಾಂಡ್ಯ, ವಿರಾಟ್ ಕೊಹ್ಲಿ, ಕೆ.ಎಲ್ ರಾಹುಲ್, ಶ್ರೇಯಸ್ ಅಯ್ಯರ್, ಮಧ್ಯದ ಸಾಲು: ಶುಭಮನ್ ಗಿಲ್, ಇಶಾನ್ ಕಿಶನ್, ರವೀಂದ್ರ ಜಡೇಜ, ಸೂರ್ಯಕುಮಾರ್ ಯಾದವ್, ಅಕ್ಷರ್ ಪಟೇಲ್, ಕೆಳಗಿನ ಸಾಲು; ಕುಲದೀಪ್ ಯಾದವ್, ಶಾರ್ದೂಲ್ ಠಾಕೂರ್, ಮೊಹಮ್ಮದ್ ಸಿರಾಜ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಶಮಿ –ಪಿಟಿಐ ಚಿತ್ರ

2013ರಲ್ಲಿ ಭಾರತ ತಂಡವು ಚಾಂಪಿಯನ್ಸ್ ಟ್ರೋಫಿ ಜಯಿಸಿತ್ತು. ಅದರ ನಂತರ ಇಲ್ಲಿಯವರೆಗೆ ಯಾವುದೇ ಐಸಿಸಿ ಟ್ರೋಫಿಯನ್ನೂ ಗೆದ್ದಿಲ್ಲ.

ಈ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ರೋಹಿತ್, ‘ಫಿಫ್ಟಿ–50 ಕ್ರಿಕೆಟ್ ಮಾದರಿಯು ವಿಭಿನ್ನವಾಗಿದೆ. ಈ ವಿಶ್ವಕಪ್‌ನಲ್ಲಿ ಒಂಬತ್ತು ಲೀಗ್ ಪಂದ್ಯ, ಸೆಮಿಫೈನಲ್ ಹಾಗೂ ಫೈನಲ್ ಪಂದ್ಯಗಳನ್ನು ಆಡುವ ಅವಕಾಶಗಳಿವೆ. ಆದ್ದರಿಂದ ಸೋಲಿನಿಂದ ಪುಟಿದೇಳುವ ಅವಕಾಶಗಳು ಹೆಚ್ಚು. ಟಿ20 ಮಾದರಿಯಲ್ಲಿ ಕಡಿಮೆ ಸಮಯ ಇರುತ್ತದೆ. ಆದರೆ ಏಕದಿನ ಮಾದರಿಯಲ್ಲಿ ತಂತ್ರಗಾರಿಕೆ ರೂಪಿಸಲು ಬಹಳಷ್ಟು ಸಮಯ ಇರುವುದರಿಂದ ಉತ್ತಮ ಫಲಿತಾಂಶ ನಿರೀಕ್ಷಿಸಬಹುದು’ ಎಂದರು.

ತಂಡದಲ್ಲಿ ಇಬ್ಬರು ವಿಕೆಟ್‌ಕೀಪರ್: ಅನುಭವಿ ಬ್ಯಾಟರ್ ಮತ್ತು ವಿಕೆಟ್‌ಕೀಪರ್ ಆಗಿರುವ ಕೆ.ಎಲ್. ರಾಹುಲ್ ಹಾಗೂ ಯುವಪ್ರತಿಭೆ ಇಶಾನ್ ಕಿಶನ್ ಅವರನ್ನು ತಂಡಕ್ಕೆ ಆಯ್ಕೆ ಮಾಡಲಾಗಿದೆ. ಇಶಾನ್ ಎರಡನೇ ವಿಕೆಟ್‌ಕೀಪರ್ ಆಗಿ ಆಯ್ಕೆಯಾಗಿದ್ದಾರೆ. ಅವರು ಇತ್ತೀಚಿನ ಕೆಲವು ಪಂದ್ಯಗಳಲ್ಲಿ ಬ್ಯಾಟಿಂಗ್ ಮತ್ತು ಕೀಪಿಂಗ್‌ನಲ್ಲಿ ಗಮನ ಸೆಳೆದಿದ್ದಾರೆ.

‘ರಾಹುಲ್ ಉತ್ತಮವಾಗಿ ಸಿದ್ಧಗೊಂಡಿರುವಂತೆ ಕಾಣಿಸುತ್ತಿದ್ದಾರೆ. ಅವರು ತಂಡಕ್ಕೆ ಶ್ರೇಷ್ಠ ಕಾಣಿಕೆ ನೀಡುವ ಭರವಸೆ ಇದೆ. ಅವರ ಸೇರ್ಪಡೆಯಿಂದ ತಂಡವು ಸಮತೋಲನಗೊಳ್ಳಲಿದೆ. ಕಳೆದ ಎರಡು ದಿನಗಳಲ್ಲಿ ಎನ್‌ಸಿಎನಲ್ಲಿ ಅವರು ಕೆಲವು ಪಂದ್ಯಗಳಲ್ಲಿ ಚೆನ್ನಾಗಿ ಆಡಿದ್ದಾರೆ’ ಎಂದು ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರ್ಕರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

‘ರಾಹುಲ್ ಹಾಗೂ ಇಶಾನ್ ಅಂತಿಮ ಹನ್ನೊಂದರಲ್ಲಿ ಸ್ಥಾನ ಉಳಿಸಿಕೊಳ್ಳಲು ಪೈಪೋಟಿ ನಡೆಸಬೇಕಿದೆ’ ಎಂದೂ ಅಜಿತ್ ಹೇಳಿದ್ದಾರೆ.

ಏಕದಿನ ಕ್ರಿಕೆಟ್ ವಿಶ್ವಕಪ್ ಕರ್ನಾಟಕದ ಹೆಜ್ಜೆಗುರುತು

ವರ್ಷ	ಆಟಗಾರರು
1975	ಜಿ.ಆರ್. ವಿಶ್ವನಾಥ್ ಬ್ರಿಜೇಶ್ ಪಟೇಲ್
1979	ಜಿ.ಆರ್. ವಿಶ್ವನಾಥ್ ಬ್ರಿಜೇಶ್ ಪಟೇಲ್
1983	ಸೈಯದ್ ಕಿರ್ಮಾನಿ ರೋಜರ್ ಬಿನ್ನಿ
1987	ರೋಜರ್ ಬಿನ್ನಿ
1992	ಜಾವಗಲ್ ಶ್ರೀನಾಥ್
1996	ಜಾವಗಲ್ ಶ್ರೀನಾಥ್, ಅನಿಲ್ ಕುಂಬ್ಳೆ, ವೆಂಕಟೇಶ್ ಪ್ರಸಾದ್
1999	ಜಾವಗಲ್ ಶ್ರೀನಾಥ್, ಅನಿಲ್ ಕುಂಬ್ಳೆ, ವೆಂಕಟೇಶ್ ಪ್ರಸಾದ್, ರಾಹುಲ್ ದ್ರಾವಿಡ್
2003	ಜಾವಗಲ್ ಶ್ರೀನಾಥ್, ಅನಿಲ್ ಕುಂಬ್ಳೆ, ರಾಹುಲ್ ದ್ರಾವಿಡ್
2007	ರಾಹುಲ್ ದ್ರಾವಿಡ್, ಅನಿಲ್ ಕುಂಬ್ಳೆ, ರಾಬಿನ್ ಉತ್ತಪ್ಪ
2011	—
2015	ಸ್ಟುವರ್ಟ್ ಬಿನ್ನಿ
2019	ಕೆ.ಎಲ್. ರಾಹುಲ್
*2023	ಕೆ.ಎಲ್. ರಾಹುಲ್

ಶ್ರೀಲಂಕಾಕ್ಕೆ ರೋಚಕ ಗೆಲುವು

ಏಷ್ಯಾ ಕಪ್ ಕ್ರಿಕೆಟ್: ಹೋರಾಡಿ ಸೋತ ಅಫ್ಗಾನಿಸ್ತಾನ

ಲಾಹೋರ್ (ಪಿಟಿಐ): ಅಫ್ಗಾನಿಸ್ತಾನ ತಂಡದ ದಿಟ್ಟ ಹೋರಾಟವನ್ನು ಬದಿಗೊತ್ತಿದ ಶ್ರೀಲಂಕಾ ತಂಡ, ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ 2 ರನ್‌ಗಳ ರೋಚಕ ಜಯ ಸಾಧಿಸಿತು.

ಗಡಾಫಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಶ್ರೀಲಂಕಾ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಕುಶಾಲ್ ಮೆಂಡಿಸ್ (92 ರನ್; 84ಎಸೆತಗಳು) ಅವರ ನೆರವಿನಿಂದ ತಂಡವು 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 291 ರನ್ ಗಳಿಸಿತು.

ರನ್‌ರೇಟ್‌ನಲ್ಲಿ ಬಾಂಗ್ಲಾದೇಶ ತಂಡವನ್ನು ಹಿಂದಿಕ್ಕಿ ಸೂಪರ್–4 ಹಂತ ಪ್ರವೇಶಿಸಲು ಅಫ್ಗಾನಿಸ್ತಾನ ತಂಡ 37.1 ಓವರ್‌ಗಳಲ್ಲಿ ಈ ಗುರಿ ಬೆನ್ನಟ್ಟಬೇಕಿತ್ತು. ತಂಡದ ಬ್ಯಾಟರ್‌ಗಳು ಬಿರುಸಿನ ಆಟವಾಡಿದರೂ 37.4 ಓವರ್‌ಗಳಲ್ಲಿ 289 ರನ್‌ಗಳಿಗೆ ಆಲೌಟಾಗಿ ನಿರಾಸೆ ಅನುಭವಿಸಿತು.

‘ಬಿ’ ಗುಂಪಿನಿಂದ ಶ್ರೀಲಂಕಾ ಮತ್ತು ಬಾಂಗ್ಲಾದೇಶ ತಂಡಗಳು ಸೂಪರ್–4 ಹಂತ ಪ್ರವೇಶಿಸಿದರೆ, ಹಶ್ಮತ್‌ಉಲ್ಲಾ ಶಾಹಿದಿ ಬಳಗ ಹೊರಬಿತ್ತು.

ಸ್ಫೋಟಕ ಆಟವಾಡಿದ ಮೊಹಮ್ಮದ್ ನಬಿ (65 ರನ್; 32 ಎ., 4X6, 6X5), ಅರ್ಧಶತಕ ಗಳಿಸಿದ ಶಾಹಿದಿ (59 ರನ್; 66 ಎ.) ಹಾಗೂ ಕೊನೆಯಲ್ಲಿ ಮಿಂಚಿದ ರಶೀದ್ ಖಾನ್ (ಔಟಾಗದೆ 27, 16 ಎ.) ಅವರ ಹೋರಾಟಕ್ಕೆ ಫಲ ದೊರೆಯಲಿಲ್ಲ.

ಮೆಂಡಿಸ್ ಆಸರೆ: ಇದಕ್ಕೂ ಮುನ್ನ ಮೊದಲು ಬ್ಯಾಟ್ ಮಾಡಿದ ಲಂಕಾ ತಂಡಕ್ಕೆ ಪಥುನ್ ನಿಸಾಂಕ (41; 40ಎ) ಮತ್ತು ದಿಮುತ ಕರುಣರತ್ನೆ (32; 35ಎ) ಆರಂಭಿಕ ವಿಕೆಟ್ ಜೊತೆಯಾಟದಲ್ಲಿ 63 ರನ್ ಸೇರಿಸಿ ಉತ್ತಮ ಆರಂಭ ನೀಡಿದರು.

11ನೇ ಓವರ್‌ನಲ್ಲಿ ಕರುಣಾರತ್ನೆ ಔಟಾದ ಬಳಿಕ ಕ್ರೀಸ್‌ಗೆ ಬಂದ ಬಲಗೈ ಬ್ಯಾಟರ್ ಮೆಂಡಿಸ್ ಬೌಲರ್‌ಗಳಿಗೆ ಸವಾಲಾದರು. ಅವರ ಆಟದಲ್ಲಿ ಆರು ಬೌಂಡರಿ ಮತ್ತು ಮೂರು ಸಿಕ್ಸರ್‌ಗಳು ದಾಖಲಾದವು.

15ನೇ ಓವರ್‌ನಲ್ಲಿ ನಿಸಾಂಕ ಅವರ ವಿಕೆಟ್ ಕೂಡ ಕಬಳಿಸಿದ ಗುಲ್ಬದೀನ್ ಮಿಂಚಿದರು. ತಮ್ಮ ಇನ್ನೊಂದು ಓವರ್‌ನಲ್ಲಿ ಸಮರವಿಕ್ರಂ ವಿಕೆಟ್ ಕೂಡ ಗುಲ್ಬದೀನ್ ಗಳಿಸಿದರು. ಆಗ ಮೆಂಡಿಸ್ ಜೊತೆಗೂಡಿದ ಅಸಲಂಕಾ (36; 43ಎ) ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ ಇಬ್ಬರೂ 102 ರನ್ ಸೇರಿಸಿದರು.

ಕುಶಾಲ್ ಮೆಂಡಿಸ್ ಬ್ಯಾಟಿಂಗ್ ಸೊಬಗು –ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 291 (ಪಥುಮ್ ನಿಸಾಂಕ 41, ದಿಮುತ ಕರುಣಾರತ್ನೆ 32, ಕುಶಾಲ್ ಮೆಂಡಿಸ್ 92, ಅಸಲಂಕಾ 36, ದುನಿತ್ ವೆಳಾಲಗೆ ಔಟಾಗದೆ 33, ಮಹೀಷ ತೀಕ್ಷಣ 28, ಗುಲ್ಬದೀನ್ 60ಕ್ಕೆ4, ರಶೀದ್ ಖಾನ್ 63ಕ್ಕೆ2)

ಅಫ್ಗಾನಿಸ್ತಾನ: 37.4 ಓವರ್‌ಗಳಲ್ಲಿ 289 (ರಹಮತ್ ಶಾ 45, ಹಶ್ಮತ್‌ಉಲ್ಲಾ ಶಾಹಿದಿ 59, ಮೊಹಮ್ಮದ್ ನಬಿ 65, ರಶೀದ್ ಖಾನ್ ಔಟಾಗದೆ 27, ಕಸುನ್ ರಜಿತಾ 79ಕ್ಕೆ 4, ಧನಂಜಯ ಡಿಸಿಲ್ವಾ 12ಕ್ಕೆ 2) ಫಲಿತಾಂಶ: ಶ್ರೀಲಂಕಾಕ್ಕೆ 2 ರನ್ ಗೆಲುವು

ಇಂದಿನ ಪಂದ್ಯ (ಸೂಪರ್ 4 ಹಂತ)

ಪಾಕಿಸ್ತಾನ– ಬಾಂಗ್ಲಾದೇಶ (ಮಧ್ಯಾಹ್ನ 3, ಲಾಹೋರ್)

ಹಿಮಾ ದಾಸ್‌ಗೆ ತಾತ್ಕಾಲಿಕ ಅಮಾನತು

ನವದೆಹಲಿ (ಪಿಟಿಐ): ಭಾರತದ ವೇಗದ ಓಟಗಾರ್ತಿ ಹಿಮಾ ದಾಸ್ ಅವರನ್ನು ರಾಷ್ಟ್ರೀಯ ಉದ್ದೀಪನ ಮದ್ದು ಸೇವನೆ ತಡೆ ಘಟಕವು (ನಾಡಾ) ತಾತ್ಕಾಲಿಕವಾಗಿ ಅಮಾನತು ಮಾಡಿದೆ. ಒಂದು ವರ್ಷದ ಅವಧಿಯಲ್ಲಿ ಮೂರು ಸಲ ಅವರು ತಮ್ಮ ವಾಸ್ತವ್ಯದ ಮಾಹಿತಿ ನೀಡಲು ವಿಫಲರಾಗಿರುವ ಕಾರಣಕ್ಕೆ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಈ ವರ್ಷದ ಆರಂಭದಲ್ಲಿ ಗಾಯಾಳಾಗಿರುವ ಕಾರಣಕ್ಕೆ 23 ವರ್ಷದ ಹಿಮಾ ಅವರನ್ನು ಹಾಂಗ್‌ಜೌ ಏಷ್ಯನ್ ಕ್ರೀಡಾಕೂಟದಲ್ಲಿ ಭಾಗವಹಿಸುವ ತಂಡಕ್ಕೆ ಆಯ್ಕೆ ಮಾಡಿರಲಿಲ್ಲ.

ಹಿಮಾ ದಾಸ್

‘ಈ ವಿಷಯ ನಿಜ. ಒಂದು ವರ್ಷದ ಅವಧಿಯಲ್ಲಿ ಅವರು ಮೂರು ಸಲ ಪರೀಕ್ಷಕರಿಗೆ ವಾಸ್ತವ್ಯದ ಮಾಹಿತಿ ನೀಡಿಲ್ಲ. ಹೀಗಾಗಿ ‘ನಾಡಾ’ ಅವರನ್ನು ತಾತ್ಕಾಲಿಕವಾಗಿ ಅಮಾನತು ಮಾಡಿದೆ’ ಎಂದು ಭಾರತ ತಂಡದ ಅಧಿಕಾರಿಯೊಬ್ಬರು ಹೆಸರು ಬಹಿರಂಗಪಡಿಸಬಾರದೆಂಬ ಷರತ್ತಿನ ಮೇಲೆ ಪಿಟಿಐಗೆ ತಿಳಿಸಿದರು.

ಈಗಾಗಲೇ ರಾಷ್ಟ್ರೀಯ ಶಿಬಿರ ತೊರೆದಿರುವ ಅಸ್ಸಾಮಿನ ಓಟಗಾರ್ತಿ, ಗರಿಷ್ಠ ಎರಡು ವರ್ಷದ ನಿಷೇಧ ಶಿಕ್ಷೆಗೆ ಒಳಗಾಗುವ ಸಾಧ್ಯತೆ ಇದೆ. ಅವರು ಎಸಗಿರುವ ತಪ್ಪಿನ ತೀವ್ರತೆ ಪರಿಗಣಿಸಿ ಶಿಕ್ಷೆಯನ್ನು ನಂತರ ಕನಿಷ್ಠ ಒಂದು ವರ್ಷಕ್ಕೆ ಇಳಿಸಲೂ ಅವಕಾಶವಿದೆ.

ವಿಶ್ವ ಉದ್ದೀಪನ ಮದ್ದು ತಡೆ ಘಟಕ (ವಾಡಾ) ನಿಯಮಗಳ ಪ್ರಕಾರ, 12 ತಿಂಗಳ ಅವಧಿಯಲ್ಲಿ ಮೂರು ಬಾರಿ ಅಥ್ಲೀಟ್ ಒಬ್ಬರು ತಮ್ಮ ಇರವಿನ (ವಾಸ್ತವ್ಯದ) ಬಗ್ಗೆ ಮಾಹಿತಿ ನೀಡದಿದ್ದರೆ/ ಮುಚ್ಚಿಟ್ಟಲ್ಲಿ ಅಥವಾ ಪರೀಕ್ಷೆ ತಪ್ಪಿಸಿಕೊಂಡಲ್ಲಿ ಅದು ಉದ್ದೀಪನ ಮದ್ದು ಸೇವನೆ ತಡೆ ನಿಯಮ ಉಲ್ಲಂಘಿಸಿದಂತೆ ಆಗುತ್ತದೆ.

ಹಿಮಾ ದಾಸ್ ಅವರು 2018ರ ಜಕಾರ್ತಾ ಏಷ್ಯನ್ ಕ್ರೀಡೆಗಳ 400 ಮೀ. ಓಟದಲ್ಲಿ ಬೆಳ್ಳಿಯ ಪದಕ ಗೆದ್ದಿದ್ದರು. ಮಹಿಳೆಯರ 4x400 ಮೀ. ರಿಲೇ ಓಟದಲ್ಲಿ ಮತ್ತು 4x400 ಮಿಕ್ಸೆಡ್ ರಿಲೇ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿಯ ಪದಕ ಗೆದ್ದ ತಂಡದಲ್ಲೂ ಅವರು ಓಡಿದ್ದರು.

ವಿಶ್ವಕಪ್ ಬಳಿಕ ಏಕದಿನ ಕ್ರಿಕೆಟ್‌ಗೆ ದಕ್ಷಿಣ ಆಫ್ರಿಕಾದ ಡಿಕಾಕ್ ನಿವೃತ್ತಿ

ಜೊಹಾನೆಸ್‌ಬರ್ಗ್ (ಪಿಟಿಐ): ದಕ್ಷಿಣ ಆಫ್ರಿಕಾದ ವಿಕೆಟ್‌ಕೀಪರ್ ಬ್ಯಾಟರ್ ಕ್ವಿಂಟನ್ ಡಿಕಾಕ್ ಅವರು ಮುಂಬರುವ ವಿಶ್ವಕಪ್ ಬಳಿಕ ಏಕದಿನ ಕ್ರಿಕೆಟ್‌ಗೆ ಗುಡ್‌ಬೈ ಹೇಳಲಿದ್ದಾರೆ.

ಡಿಕಾಕ್ ಅವರ ನಿವೃತ್ತಿ ನಿರ್ಧಾರ ವನ್ನು ಕ್ರಿಕೆಟ್ ದಕ್ಷಿಣ ಆಫ್ರಿಕಾ (ಸಿಎಸ್‌ಎ) ತನ್ನ ‘ಎಕ್ಸ್’ ಖಾತೆಯಲ್ಲಿ ಪ್ರಕಟಿಸಿದೆ.

ಭಾರತದಲ್ಲಿ ನಡೆಯಲಿರುವ ವಿಶ್ವಕಪ್ ಟೂರ್ನಿಗೆ ಸಿಎಸ್‌ಎ 15 ಸದಸ್ಯರ ತಂಡವನ್ನು ಪ್ರಕಟಿಸಿದ ಬೆನ್ನಲ್ಲೇ ಡಿಕಾಕ್ ಅವರ ನಿರ್ಧಾರ ಹೊರಬಿದ್ದಿದೆ. ದಕ್ಷಿಣ ಆಫ್ರಿಕಾ ತಂಡವನ್ನು ತೆಂಬಾ ಬವುಮಾ ಮುನ್ನಡೆಸಲಿದ್ದಾರೆ.

30 ವರ್ಷದ ಡಿಕಾಕ್ 2021ರ ಡಿಸೆಂಬರ್‌ನಲ್ಲಿ ಟೆಸ್ಟ್ ಕ್ರಿಕೆಟ್‌ಗೆ ದಿಢೀರ್ ನಿವೃತ್ತಿ ಪ್ರಕಟಿಸಿ ಅಚ್ಚರಿ ಉಂಟು ಮಾಡಿದ್ದರು. ಕುಟುಂಬದ ಜತೆ ಹೆಚ್ಚಿನ ಸಮಯ ಕಳೆಯುವ ಉದ್ದೇಶದಿಂದ ಈ ತೀರ್ಮಾನ ತೆಗೆದುಕೊಂಡದ್ದಾಗಿ ಹೇಳಿದ್ದರು. 54 ಟೆಸ್ಟ್‌ಗಳನ್ನು ಆಡಿರುವ ಅವರು 3,300 ರನ್ ಗಳಿಸಿದ್ದಾರೆ.

140 ಏಕದಿನ ಮತ್ತು 80 ಟಿ20 ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದು, ಕ್ರಮವಾಗಿ 5,966 ಹಾಗೂ 2,277 ರನ್ ಪೇರಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಹಾಕಿ ಫೈವ್ಸ್ ವಿಶ್ವಕಪ್: ‘ಬಿ’ ಗುಂಪಿನಲ್ಲಿ ಭಾರತ

ನವದೆಹಲಿ (ಪಿಟಿಐ): ಭಾರತ ತಂಡದವರು ಎಫ್‌ಐಎಚ್ ಪುರುಷರ ಹಾಕಿ ಫೈವ್ಸ್ ವಿಶ್ವಕಪ್ ಟೂರ್ನಿಯಲ್ಲಿ ಈಜಿಪ್ಟ್, ಸ್ವಿಟ್ಜರ್ಲೆಂಡ್ ಮತ್ತು ಜಮೈಕಾ ತಂಡಗಳ ಜತೆ ‘ಬಿ’ ಗುಂಪಿನಲ್ಲಿ ಸ್ಥಾನ ಪಡೆದುಕೊಂಡಿದ್ದಾರೆ.

ಚೊಚ್ಚಲ ಹಾಕಿ ಫೈವ್ಸ್ ವಿಶ್ವಕಪ್ ಟೂರ್ನಿ ಮಸ್ಕತ್‌ನಲ್ಲಿ ಮುಂದಿನ ವರ್ಷ ಜ.24 ರಿಂದ 31ರ ವರೆಗೆ ನಡೆಯಲಿದೆ. ಒಟ್ಟು 16 ತಂಡಗಳು ಪಾಲ್ಗೊಳ್ಳುತ್ತಿದ್ದು, ತಲಾ ನಾಲ್ಕು ತಂಡಗಳನ್ನೊಳಗೊಂಡ ನಾಲ್ಕು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ.

ನೆದರ್ಲೆಂಡ್ಸ್ ತಂಡವು ಪಾಕಿಸ್ತಾನ, ಪೋಲೆಂಡ್ ಮತ್ತು ನೈಜೀರಿಯಾ ಜತೆ ‘ಎ’ ಗುಂಪಿನಲ್ಲಿ ಆಡಲಿದೆ. ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಟ್ರಿನಿಡಾಡ್ ಅಂಡ್ ಟೊಬ್ಯಾಗೊ ಮತ್ತು ಕೆನ್ಯಾ ತಂಡಗಳು ‘ಸಿ’ ಗುಂಪಿನಲ್ಲಿ; ಆತಿಥೇಯ ಒಮಾನ್, ಮಲೇಷ್ಯಾ, ಅಮೆರಿಕ ಮತ್ತು ಫಿಜಿ ತಂಡಗಳು ‘ಡಿ’ ಗುಂಪಿನಲ್ಲಿ ಸ್ಥಾನ ಗಳಿಸಿವೆ.

‘ಹಾಕಿ ಫೈವ್ಸ್’ ಮಾದರಿಯಲ್ಲಿ ಪ್ರತಿ ತಂಡದಲ್ಲಿ ತಲಾ ಐವರು ಆಟಗಾರರು ಇರುವರು. ತಲಾ 10 ನಿಮಿಷಗಳ ಎರಡು ಅವಧಿಗಳ ಆಟ ನಡೆಯುತ್ತದೆ.

ವೇಟ್‌ಲಿಫ್ಟಿಂಗ್: ಶುಭಂಗೆ 3ನೇ ಸ್ಥಾನ

ರಿಯಾದ್ (ಪಿಟಿಐ): ಭಾರತದ ಶುಭಂ ತೋಡ್ಕರ್ ಅವರು ಇಲ್ಲಿ ನಡೆಯುತ್ತಿರುವ ವಿಶ್ವ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನ ಪುರುಷರ 61 ಕೆ.ಜಿ. ವಿಭಾಗದ ‘ಡಿ’ ಗುಂಪಿನಲ್ಲಿ ಮೂರನೇ ಸ್ಥಾನ ಪಡೆದರು.

ಮಹಾರಾಷ್ಟ್ರದ 26 ವರ್ಷದ ಶುಭಂ ಅವರು ಸೋಮವಾರ ನಡೆದ ಸ್ಪರ್ಧೆಯಲ್ಲಿ ಒಟ್ಟು 269 ಕೆ.ಜಿ (119 ಕೆ.ಜಿ + 150 ಕೆ.ಜಿ) ಭಾರ ಎತ್ತಿದರು. ಮೇ ತಿಂಗಳಲ್ಲಿ ನಡೆದಿದ್ದ ಏಷ್ಯನ್ ಚಾಂಪಿಯನ್‌ಷಿಪ್ (263 ಕೆ.ಜಿ.) ಮತ್ತು ಜುಲೈನಲ್ಲಿ ನಡೆದಿದ್ದ ಕಾಮನ್‌ವೆಲ್ತ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ (259 ಕೆ.ಜಿ.) ತೋರಿದ್ದ ಪ್ರದರ್ಶನಕ್ಕಿಂತ ಉತ್ತಮ ಸಾಧನೆ ಅವರಿಂದ ಮೂಡಿಬಂತು.

ಯುನೈಟೆಡ್ ತಂಡಕ್ಕೆ ಗೆಲುವು

ಬೆಂಗಳೂರು: ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 8–0ಯಿಂದ ಬಿಯುಎಫ್‌ಸಿ ತಂಡವನ್ನು ಮಣಿಸಿತು.

ಮಂಗಳವಾರ ನಡೆದ ಪಂದ್ಯದಲ್ಲಿ ಯುನೈಟೆಡ್ ತಂಡದ ಪರವಾಗಿ ಜೆರಿ ಒನೆಸೆಮಾಸ್ ಪುಲಮ್ಟೆ (50, 66ನೇ), ಚೆಸ್ಟರ್ ಪೌಲ್ ಲಿಂಗ್ಡೋ (58, 89ನೇ), ರಿಭವ್ ಸರ್ದೇಸಾಯಿ (69, 90 + 2ನೇ) ತಲಾ ಎರಡು ಗೋಲು ಗಳಿಸಿದರೆ, ಪಿ. ಕಮಲೇಶ್ (53ನೇ), ಅಹ್ಮದ್ ಫೈಜ್ ಖಾನ್ (76ನೇ) ತಲಾ ಒಂದು ಗೋಲು ದಾಖಲಿಸಿದರು.

ಮತ್ತೊಂದು ಪಂದ್ಯದಲ್ಲಿ ಕೊಡಗು ಎಫ್‌ಸಿ ತಂಡವು 2–1ರಿಂದ ಯಂಗ್ ಚಾಲೆಂಜರ್ಸ್ ಪರಾಭವಗೊಳಿಸಿತು. ಕೊಡಗು ತಂಡದ ಶ್ಲೋಕ್ ತಿವಾರಿ (7ನೇ), ಜೆಮ್ಮಿಯೆದ್ ಅಲಿ (56ನೇ) ತಲಾ ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು. ತನ್ಮಯ್ ಮೌನಿ (29) ಚಾಲೆಂಜರ್ಸ್ ತಂಡದ ಪರ ಏಕೈಕ ಗೋಲು ಗಳಿಸಿದರು.

ಜಿ20 ಆತಿಥ್ಯ: ಭಾರತಕ್ಕೆ ಪೂರ್ಣ ಸಹಕಾರ –ಚೀನಾ

ಬೀಜಿಂಗ್ (ಪಿಟಿಐ): ‘ನವದೆಹಲಿಯಲ್ಲಿ ನಡೆಯಲಿರುವ ಜಿ20 ಶೃಂಗಸಭೆಯ ಆತಿಥ್ಯವನ್ನು ವಹಿಸಲು ಭಾರತಕ್ಕೆ ಅಗತ್ಯವಿರುವ ಎಲ್ಲ ಬೆಂಬಲ ನೀಡಲಾಗುವುದು’ ಎಂದು ಚೀನಾ ಮಂಗಳವಾರ ಹೇಳಿದೆ.

ಅಲ್ಲದೆ, ಮಹತ್ವದ ಈ ಜಾಗತಿಕ ಸಮ್ಮೇಳನದ ಯಶಸ್ವಿಗಾಗಿ ಎಲ್ಲ ಭಾಗಿದಾರರ ಜೊತೆಗೂಡಿ ಕಾರ್ಯನಿರ್ವಹಿಸಲು ಸಿದ್ಧ ಎಂದೂ ತಿಳಿಸಿದೆ.

ಶೃಂಗಸಭೆಯಲ್ಲಿ ಚೀನಾ ದೇಶವನ್ನು ಪ್ರಧಾನಿ ಲಿ ಕ್ವಿಯಾಂಗ್ ಅವರು ಪ್ರತಿನಿಧಿಸುವರು. ಅಧ್ಯಕ್ಷ ಷಿ ಜಿನ್‌ಪಿಂಗ್ ಭಾಗವಹಿಸುತ್ತಿಲ್ಲ ಎಂದು ಚೀನಾದ ವಿದೇಶಾಂಗ ಸಚಿವಾಲಯ ಸೋಮವಾರವಷ್ಟೇ ಪ್ರಕಟಿಸಿತ್ತು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರರು, ‘ಅಂತರರಾಷ್ಟ್ರೀಯ ಆರ್ಥಿಕ ಸಹಕಾರಕ್ಕೆ ಸಂಬಂಧಿಸಿ ಜಿ20 ಶೃಂಗಸಭೆಯು ಪ್ರಮುಖ ಹಾಗೂ ಮುಂಚೂಣಿ ವೇದಿಕೆಯಾಗಿದೆ ಎಂದರು. ಈ ಶೃಂಗಸಭೆಯು ನವದೆಹಲಿಯಲ್ಲಿ ಸೆಪ್ಟೆಂಬರ್ 9–10ರಂದು ನಡೆಯಲಿದೆ.

ಗಡಿ ವಿವಾದವನ್ನು ಉಲ್ಲೇಖಿಸದೆಯೇ ಅವರು, ‘ಭಾರತ –ಚೀನಾ ಬಾಂಧವ್ಯ ಸ್ಥಿರವಾಗಿದೆ. ಉಭಯ ರಾಷ್ಟ್ರಗಳ ನಡುವೆ ವಿವಿಧ ಹಂತಗಳಲ್ಲಿ ಚರ್ಚೆ, ಸಂವಹನಗಳು ನಡೆದಿವೆ ಎಂದರು. ಲಡಾಖ್‌ನ ಗಾಲ್ವಾನ್ ಕಣಿವೆಯಲ್ಲಿ ಜೂನ್ 2020ರಲ್ಲಿ ನಡೆದಿದ್ದ ಘರ್ಷಣೆಯ ಬಳಿಕ ಉಭಯದ ದೇಶಗಳ ಬಾಂಧವ್ಯದಲ್ಲಿ ಬಿರುಕು ಮೂಡಿದೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ

‘ಪ್ರತಿಸ್ಪರ್ಧಿಯನ್ನೂ ಗುರು ಎಂದೇ ಪರಿಗಣಿಸುವೆ’

ನವದೆಹಲಿ (ಪಿಟಿಐ): ‘ಪ್ರತಿಸ್ಪರ್ಧಿಯನ್ನೂ ಗುರು ಎಂದು ಪರಿಗಣಿಸುತ್ತೇನೆ. ಅವರ ವರ್ತನೆ, ಸುಳ್ಳು ಮತ್ತು ಮಾತುಗಳು ನಾನು ಅನುಸರಿಸುತ್ತಿರುವ ಮಾರ್ಗ ಸರಿಯಾಗಿದೆ ಎಂದು ತೋರಿಸಿಕೊಡುತ್ತವೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದರು.

ಶಿಕ್ಷಕರ ದಿನದ ಹಿನ್ನೆಲೆಯಲ್ಲಿ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿರುವ ಅವರು, ‘ಸಮಾನತೆ ಮತ್ತು ಪ್ರೀತಿಯ ತತ್ವವನ್ನು ಸಾರಿದ ಮಹಾತ್ಮ ಗಾಂಧಿ, ಗೌತಮ ಬುದ್ಧ, ಶ್ರೀ ನಾರಾಯಣ ಗುರುಗಳಂಥ ಶ್ರೇಷ್ಠ ವ್ಯಕ್ತಿಗಳನ್ನು ಗುರುಗಳೆಂದು ಪರಿಗಣಿಸುತ್ತೇನೆ. ಶಿಕ್ಷಕರ ದಿನದಂದು ಮಾಜಿ ರಾಷ್ಟ್ರಪತಿ ಸರ್ವಪಲ್ಲಿ ರಾಧಾಕೃಷ್ಣನ್ ಅವರು ಸೇರಿದಂತೆ ಎಲ್ಲಾ ಗೌರವಾನ್ವಿತ ಗುರುಗಳಿಗೆ ನಮನ ಸಲ್ಲಿಸುತ್ತೇನೆ.

ರಾಹುಲ್ ಗಾಂಧಿ

ಜೀವನದಲ್ಲಿ ಗುರುವಿನ ಪಾತ್ರ ತುಂಬ ಮುಖ್ಯ. ಅವರು ಜೀವನವು ಪ್ರಕಾಶಿಸುವಂತೆ ಮತ್ತು ಸರಿಯಾದ ದಿಕ್ಕಿನಲ್ಲಿ ಸಾಗುವಂತೆ ಪ್ರೇರೇಪಿಸುತ್ತಾರೆ’ ಎಂದು ಹೇಳಿದ್ದಾರೆ.

‘ಈ ದೇಶದ ಜನರೂ ಗುರುಗಳಂತೆ. ‘ವಿವಿಧತೆಯಲ್ಲಿ ಏಕತೆ’ ಇದೆ ಮತ್ತು ಪ್ರತಿ ಸಮಸ್ಯೆ ವಿರುದ್ಧ ಧೈರ್ಯದಿಂದ ಹೋರಾಡಬೇಕು ಎಂದು ತೋರಿಸಿಕೊಟ್ಟಿದ್ದಾರೆ. ಅವರು ಮಾನವೀಯತೆಯ ಸಾಕಾರ ಮೂರ್ತಿಗಳು’ ಎಂದರು.

ಮಣಿಪುರ ಕುರಿತ ಹೇಳಿಕೆ ಅನಪೇಕ್ಷಿತ: ಭಾರತ ಟೀಕೆ

ವಿಶ್ವಸಂಸ್ಥೆ/ಜಿನೀವಾ (ಪಿಟಿಐ): ಮಣಿಪುರ ಬೆಳವಣಿಗೆ ಕುರಿತು ವಿಶ್ವ ಸಂಸ್ಥೆಯ ಪರಿಣತರ ಹೇಳಿಕೆಗಳನ್ನು ಭಾರತವು ತಿರಸ್ಕರಿಸಿದೆ. ‘ಇದು, ಅನಪೇ ಕ್ಷಿತ ಹಾಗೂ ದಾರಿತಪ್ಪಿಸುವ ಹೇಳಿಕೆ. ಈಶಾನ್ಯ ರಾಜ್ಯ ಸದ್ಯ ಶಾಂತಿಯುತ ವಾಗಿದೆ’ ಎಂದು ಪ್ರತಿಪಾದಿಸಿದೆ.

ಮಾನವ ಹಕ್ಕು ಕುರಿತ ಹೈಕಮಿಷನರ್ ಕಚೇರಿಯ ವಿಶೇಷ ಪ್ರಕ್ರಿಯಾ ಶಾಖೆಗೆ ಸೋಮವಾರ ಭಾರತೀಯ ಹೈಕಮಿಷನ್ ಈ ಕುರಿತು ಮೌಖಿಕವಾಗಿ ಪ್ರತಿಕ್ರಿಯೆ ನೀಡಿದೆ. ‘ಮಣಿಪುರದಲ್ಲಿ ಪರಿಸ್ಥಿತಿ ಸ್ಥಿರವಾಗಿದೆ. ಶಾಂತಿಯುತವಾಗಿದೆ. ಭಾರತ ಸರ್ಕಾರವು ಶಾಂತಿ ಸ್ಥಾಪನೆಗೆ ಅಗತ್ಯ ಕ್ರಮಕೈಗೊಂಡಿದೆ’ ಎಂದು ಹೇಳಿದೆ.

‘ನಮ್ಮ ಸರ್ಕಾರವು ಮಣಿಪುರವು ಒಳಗೊಂಡಂತೆ ದೇಶದ ಜನರ ಮಾನವ ಹಕ್ಕುಗಳ ರಕ್ಷಣೆಗೆ ಬದ್ಧವಾಗಿದೆ. ಈ ಸಂಬಂಧ ವಿಶ್ವಸಂಸ್ಥೆಯಪರಿಣತರು ನೀಡಲಾದ ಹೇಳಿಕೆಯನ್ನು ಅನಪೇಕ್ಷಿತ ಎಂದು ಭಾರತದ ಶಾಶ್ವತ ಮಿಷನ್ ತಿರಸ್ಕರಿಸುತ್ತದೆ’ ಎಂದು ಪ್ರತಿಕ್ರಿಯಿಸಿದೆ.

‘ಮಣಿಪುರದಲ್ಲಿ ಲೈಂಗಿಕ ಹಿಂಸಾಚಾರ, ನಿರಂತರ ದೌರ್ಜನ್ಯ, ಮನೆಗಳ ನಾಶ, ಬಲವಂತದ ತೆರವು ಕಾರ್ಯಾಚರಣೆ ಸೇರಿದಂತೆ ಮಾನವ ಹಕ್ಕುಗಳ ಗಂಭೀರ ಉಲ್ಲಂಘನೆಯಾಗಿದೆ’ ಎಂಬ ವರದಿಗಳ ಕುರಿತು ವಿಶ್ವಸಂಸ್ಥೆ ಪರಿಣತರ ಸಮೂಹ ಆತಂಕ ವ್ಯಕ್ತಪಡಿಸಿದ ಬಳಿಕ ಭಾರತ ಈ ಪ್ರತಿಕ್ರಿಯೆ ನೀಡಿದೆ.

ಅಸಾಂಜ್ ಗಡಿಪಾರು: ಅಮೆರಿಕಕ್ಕೆ ಶೀಘ್ರ ಆಸ್ಟ್ರೇಲಿಯಾ ಸಂಸದರ ನಿಯೋಗ

ಕ್ಯಾನ್‌ಬೆರಾ (ಎಪಿ): ವಿಕಿಲೀಕ್ಸ್ ಸಂಸ್ಥಾಪಕ ಜೂಲಿಯನ್ ಅಸಾಂಜ್ ಅವರನ್ನು ವಶಕ್ಕೆ ಪಡೆಯುವ ಪ್ರಯತ್ನವನ್ನು ಕೈಬಿಡುವಂತೆ ಒತ್ತಡ ಹೇರಲು ಈ ತಿಂಗಳು ಅಮೆರಿಕಕ್ಕೆ ತೆರಳುತ್ತಿದ್ದೇವೆ ಎಂದು ಆಸ್ಟ್ರೇಲಿಯಾ ಸಂಸದರ ಗುಂಪು ಮಂಗಳವಾರ ತಿಳಿಸಿದೆ.

ನಿಯೋಗವು ಮಾಜಿ ಉಪ ಪ್ರಧಾನಿ ಬರ್ನಾಬೆ ಜಾಯ್ಸ್ ಮತ್ತು ಐವರು ಸಂಸದರನ್ನು ಒಳಗೊಂಡಿದೆ.

‘ಅಸಾಂಜ್ ಅವರ ಆರೋಗ್ಯ ಹದಗೆಟ್ಟಿದೆ. ಇಂಥ ಸಂದರ್ಭದಲ್ಲಿ ಅವರ ಸ್ವಾತಂತ್ರ್ಯವನ್ನು ನಾವು ಕಾಯಲೇಬೇಕಿದೆ’ ಎಂದು ಪಕ್ಷೇತರ ಸಂಸದೆ ಮತ್ತು ನಿಯೋಗದ ಸದಸ್ಯೆ ಮೋನಿಕ್ ರ್ಯಾನ್ ತಿಳಿಸಿದ್ದಾರೆ.

ಈ ಮಧ್ಯೆ, ಆಸ್ಟ್ರೇಲಿಯಾ ಪ್ರಧಾನಿ ಆಂಥೋನಿ ಅಲ್ಬನೀಸ್ ಅವರೂ ಅಕ್ಟೋಬರ್‌ನಲ್ಲಿ ಅಮೆರಿಕಕ್ಕೆ ಭೇಟಿ ನೀಡಲಿದ್ದಾರೆ.

ಅಸಾಂಜ್

ಆಸ್ಟ್ರೇಲಿಯಾ ಪ್ರಜೆ ಅಸಾಂಜ್ ಅಮೆರಿಕಕ್ಕೆ ಸಂಬಂಧಿಸಿದ ಅನೇಕ ರಹಸ್ಯ ವಿಷಯಗಳನ್ನು ವಿಕಿಲೀಕ್ಸ್ ಮೂಲಕ ಸೋರಿಕೆ ಮಾಡಿರುವ ಆರೋಪ ಎದುರಿಸುತ್ತಿದ್ದಾರೆ. ಹೀಗಾಗಿ ಅವರ ಗಡಿಪಾರಿಗೆ ಅಮೆರಿಕ ಕಾನೂನು ಹೋರಾಟ ನಡೆಸುತ್ತಿದೆ. 4 ವರ್ಷಗಳಿಂದ ಅವರು ಲಂಡನ್‌ನ ಬೆಲ್ಮಾರ್ಶ್ ಸೆರೆಮನೆಯಲ್ಲಿದ್ದಾರೆ. ಅದಕ್ಕೂ ಮುನ್ನ ಅವರು ಲಂಡನ್‌ನ ಈಕ್ವೆಡಾರ್ ರಾಯಭಾರ ಕಚೇರಿಯಲ್ಲಿ 7 ವರ್ಷ ಆಶ್ರಯ ಪಡೆದಿದ್ದರು.

ಮಕ್ಕಳ ಸುರಕ್ಷತೆ: ಪೋಷಕರ ಆತಂಕ

ಸಿಂಗಪುರ (ಪಿಟಿಐ): ಶಾಲಾ ಪ್ರವಾಸದ ಸಂದರ್ಭದಲ್ಲಿ ರಸ್ತೆ ಅಪಘಾತದಲ್ಲಿ 17 ವರ್ಷದ ಭಾರತೀಯ ವಿದ್ಯಾರ್ಥಿ ಮೃತಪಟ್ಟ ಬಳಿಕ ಸಿಂಗಪುರದ ಅಂತರರಾಷ್ಟ್ರೀಯ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳ ಸುರಕ್ಷತೆ ಬಗ್ಗೆ ಪೋಷಕರಲ್ಲಿ ಆತಂಕ ಹೆಚ್ಚಾಗಿದೆ ಎಂದು ಮಾಧ್ಯಮವೊಂದು ವರದಿ ಮಾಡಿದೆ.

ಜೂನ್ 1ರಂದು ಸಹಪಾಠಿಗಳೊಂದಿಗೆ ಪ್ರವಾಸಕ್ಕೆ ತೆರಳಿದ್ದ ವೇಳೆ ಕೈರಾ ಕರ್ಮಾಕರ್ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದರು. ಘಟನೆ ಸಂದರ್ಭದಲ್ಲಿ ಅವರ ಜೊತೆ ಶಿಕ್ಷಕರು ಅಥವಾ ವಯಸ್ಕರು ಯಾರೂ ಇರಲಿಲ್ಲ. ಹೀಗಾಗಿ ಹಲವು ಪೋಷಕರಲ್ಲಿ ಕಳವಳ ಹೆಚ್ಚಾಗಿದೆ ಎಂದು ದಿ ಸ್ಟ್ರೈಟ್ ಟೈಮ್ಸ್ ಪತ್ರಿಕೆ ವರದಿ ಮಾಡಿದೆ.

ಐಎಸ್ ನಂಟಿನ ಉಗ್ರ ಜಾಲ ಪತ್ತೆ

ಬರ್ಲಿನ್ (ಎಪಿ): ಇಸ್ಲಾಮಿಕ್ ಸ್ಟೇಟ್ (ಐಎಸ್)ನೊಂದಿಗೆ ನಂಟು ಹೊಂದಿರುವ, ಒಂಬತ್ತು ಯುವಕರು ಮತ್ತು ಒಬ್ಬ ಮಹಿಳೆಯನ್ನು ಒಳಗೊಂಡ ಭಯೋತ್ಪಾದಕ ಜಾಲವನ್ನು ಆಸ್ಟ್ರಿಯಾದ ಭದ್ರತಾ ಅಧಿಕಾರಿಗಳು ಮಂಗಳವಾರ ಬೇಧಿಸಿದ್ದಾರೆ. ಒಬ್ಬ ಶಂಕಿತನನ್ನು ಬಂಧಿಸಲಾಗಿದ್ದು, ಇತರರನ್ನು ವಿಚಾರಣೆಗೆ ಒಳಪಡಿಸಲಾಗಿದೆ.

ಶಂಕಿತರು ಮೂಲಭೂತವಾದಿ, ಭಯೋತ್ಪಾದಕ ನಡವಳಿಕೆಗಳನ್ನು ಹೊಂದಿರುವುದು ತನಿಖೆಯಿಂದ ಗೊತ್ತಾಗಿದೆ ಎಂದು ಆಸ್ಟ್ರಿಯಾದ ಗುಪ್ತಚರ ಸೇವೆ ಡಿಎಸ್‌ಎನ್ ತಿಳಿಸಿದೆ. ಇನ್ನೂ ಹೆಚ್ಚಿನ ತನಿಖೆ ನಡೆಸುತ್ತಿರುವುದಾಗಿಯೂ ಅದು ಹೇಳಿದೆ. ಆದರೆ, ಶಂಕಿತರ ಕುರಿತ ಹೆಚ್ಚಿನ ವಿವರಗಳನ್ನು ಬಹಿರಂಗಪಡಿಸಿಲ್ಲ.

‘ಶಂಕಿತ ಉಗ್ರರು 15 ರಿಂದ 23 ವರ್ಷ ವಯಸ್ಸಿನವರಾಗಿದ್ದು, ಉತ್ತರ ಆಸ್ಟ್ರಿಯಾದ ಲಿಂಜ್ ನಗರದ ಬಳಿ ನೆಲೆಸಿದ್ದರು. ಐಎಸ್ ಮತ್ತು ಅದರ ಅಪರಾಧ ಚಟುವಟಿಕೆಗಳಿಗೆ ದೀರ್ಘಕಾಲದಿಂದಲೂ ನೇಮಕಾತಿಗಳನ್ನು ನಡೆಸುತ್ತಿದ್ದರು. ಮಸೀದಿ ಅಥವಾ ಪ್ರಾರ್ಥನಾ ಕೊಠಡಿ ಸ್ಥಾಪಿಸಲು ಯೋಜಿಸಿದ್ದರು’ ಎಂದು ಗುಪ್ತಚರ ಇಲಾಖೆ ತಿಳಿಸಿದೆ.

ಆಸ್ಟ್ರಿಯಾದ ಗೌಪ್ಯತೆ ನಿಯಮಗಳ ಪ್ರಕಾರ ಶಂಕಿತರ ಗುರುತನ್ನು ಬಹಿರಂಗಪಡಿಸುವಂತಿಲ್ಲ. ಹೀಗಾಗಿ ಅಧಿಕಾರಿಗಳು ಯಾವುದೇ ವಿವರ ನೀಡಿಲ್ಲ. ಆದರೆ, ಅವರು ಆಸ್ಟ್ರಿಯಾ, ಟರ್ಕಿ, ಇರಾಕ್, ರಷ್ಯಾ ಮತ್ತು ಕ್ರೊವೇಷಿಯಾದಿಂದ ಬಂದವರಾಗಿದ್ದಾರೆ ಎಂದು ಆಸ್ಟ್ರಿಯಾದ ಸುದ್ದಿ ಸಂಸ್ಥೆ ಎಪಿಎ ವರದಿ ಮಾಡಿದೆ.

ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ, ಮೈಸೂರು

ದೂರವಾಣಿ ಸಂಖ್ಯೆ:0821–2424070, ಇ–ಮೇಲ್:dudc_mys@yahoo.co.in

ಸಂಖ್ಯೆ:ಮುನಿಸಿ(1)ಇಂದಿರಾ ಕ್ಯಾಂಟೀನ್/ಸಿಆರ್–59/2023–24 ದಿನಾಂಕ:02.09.2023

ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ ಮೈಸೂರು ರವರು ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರುರವರ ಪರವಾಗಿ ಕೆ.ಟಿ.ಪಿ.ಪಿ.ಕಾಯ್ದೆ 1999 ಮತ್ತು ನಿಯಮ 2000ರನ್ವಯ ಮೈಸೂರು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಇಂದಿರಾ ಕ್ಯಾಂಟೀನ್‌ಗಳಿಗೆ ಆಹಾರ ಸರಬರಾಜು ಮಾಡಲು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದ್ವಿ ಲಕೋಟೆ ಪದ್ಧತಿಯಲ್ಲಿ ಕೆಜಿ–2 ಟೆಂಡರ್ ದಸ್ತವೇಜಿನ್ವಯ ಟೆಂಡರ್ ಆಹ್ವಾನಿಸಲಾಗಿರುತ್ತದೆ.

(ರೂ.ಲಕ್ಷಗಳಲ್ಲಿ)

ಕ್ರ ಸಂ	ಕಾಮಗಾರಿ ಹೆಸರು ಇಂಡೆಂಟ್ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ	ಇ.ಎಂ.ಡಿ.
1)	ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಇಂದಿರಾ ಕ್ಯಾಂಟೀನ್ ಮುಖಾಂತರ ಆಹಾರ ಸರಬರಾಜು ಮಾಡುವ ಕಾಮಗಾರಿ. ಪ್ಯಾಕೇಜ್–2 ಇಂಡೆಂಟ್ ಸಂಖ್ಯೆ DMA/2023-24/IND0414	302.04	4.53
2)	ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಇಂದಿರಾ ಕ್ಯಾಂಟೀನ್ ಮುಖಾಂತರ ಆಹಾರ ಸರಬರಾಜು ಮಾಡುವ ಕಾಮಗಾರಿ. ಪ್ಯಾಕೇಜ್–1 ಇಂಡೆಂಟ್ ಸಂಖ್ಯೆ DMA/2023-24/IND0415	385.99	5.79
3)	ಮೈಸೂರು ಜಿಲ್ಲೆಯ ನಂಜನಗೂಡು ಮತ್ತು ಹುಣಸೂರು ನಗರಸಭೆ, ಕೆ.ಆರ್.ನಗರ, ತಿ.ನರಸೀಪುರ ಮತ್ತು ಹೆಚ್.ಡಿ.ಕೋಟೆ ಪುರಸಭೆ ವ್ಯಾಪ್ತಿಯಲ್ಲಿ ಇಂದಿರಾ ಕ್ಯಾಂಟೀನ್ ಮುಖಾಂತರ ಆಹಾರ ಸರಬರಾಜು ಮಾಡುವ ಕಾಮಗಾರಿ. ಇಂಡೆಂಟ್ ಸಂಖ್ಯೆ DMA/2023-24/IND0413	384.71	5.77

ಅರ್ಹ ಸರಬರಾಜುದಾರರು **www.kppp.karnataka.gov.in** ಮುಖಾಂತರ ಟೆಂಡರನ್ನು ಸಲ್ಲಿಸಬಹುದಾಗಿರುತ್ತದೆ. ಪೂರ್ವಭಾವಿ” ಸಭೆ **ದಿನಾಂಕ: 16–09–2023, ಮಧ್ಯಾಹ್ನ 3.30ಗಂಟೆಗೆ.** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 04–10–2023 ಸಂಜೆ 5.00 ಗಂಟೆಯೊಳಗೆ.** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:05–10–2023, ಸಂಜೆ 5.30ಗಂಟೆಗೆ. ಪ್ರಕಟಣೆಯಲ್ಲಿ ನಿಗಧಿಪಡಿಸಿರುವ ದಿನಾಂಕಗಳು ಬದಲಾವಣೆಯಾದಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರವೇ ತಿಳಿಸಲಾಗುವುದು. ದಿನಪತ್ರಿಗಳಲ್ಲಿ ತಿಳಿಸಲಾಗುವುದಿಲ್ಲ.** ಹೆಚ್ಚಿನ ವಿವರಗಳನ್ನು ಜಿಲ್ಲಾ ನಗರಾಭಿವೃದ್ಧಿ ಕೋಶ ಜಿಲ್ಲಾ ನಗರಾಭಿವೃದ್ಧಿ ಕೋಶ ಜಿಲ್ಲಾ ಕಛೇರಿಗಳ ಸಂಕೀರ್ಣ ಬನ್ನೂರು ರಸ್ತೆ ಕಛೇರಿಯ ತಾಂತ್ರಿಕ ಶಾಖೆಯಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ ಹಾಗೂ e-Procurement website **www.kppp.karnataka.gov.in**ನಲ್ಲಿಯೂ ಪಡೆಯಬಹುದಾಗಿರುತ್ತದೆ.

ಸಹಿ/– ಯೋಜನಾ ನಿರ್ದೇಶಕರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಮೈಸೂರು ಜಿಲ್ಲೆ, ಮೈಸೂರು.

DIPR/MYS/KAVITA/298/2023-24

ಡಿ. ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

3ನೇ ಮಹಡಿ, ಟಿ.ಟಿ.ಎಂ.ಸಿ ‘ಬಿ’ ಬ್ಲಾಕ್, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು–560027.
ದೂರವಾಣಿ: 080–22223753/58 ಇ–ಮೇಲ್: dduttl.1980@gmail.com

No: DDUTTL/2023-24/RD/WORK_INDENT2 Date: 05-09-2023

ಇ–ಟೆಂಡರ್ ಪ್ರಕಟಣೆ

ಡಿ. ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿಮಿಟೆಡ್, ಬೆಂಗಳೂರು ಈ ಸಂಸ್ಥೆಯ ವತಿಯಿಂದ **Construction of Concrete Road to Dasanapura Truck Terminal Including Side Drains and Necessary Cross Drainage Works at Dasanapura Village, Bengaluru North.** ಕುರಿತು ಅಲ್ಪಾವಧಿ ಟೆಂಡರ್‌ನ್ನು (ಎರಡು ಬಿಡ್ ವ್ಯವಸ್ಥೆ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳು) ಅರ್ಹ ಏಜೆನ್ಸಿಗಳಿಂದ ಆಹ್ವಾನಿಸಲಾಗಿದೆ.

ಸದರಿ ಟೆಂಡರ್‌ಗಳಲ್ಲಿ ಭಾಗವಹಿಸಲು ಇಚ್ಚಿಸುವ ಅರ್ಹ ಏಜೆನ್ಸಿಗಳು ಇ–ಪ್ರೊಕ್ಯೂರ್‌ಮೆಂಟ್ **www.kppp.karnataka.gov.in** ಮೂಲಕ ತಮ್ಮ ಬಿಡ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಇ–ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ: **19–09–2023 ರಂದು ಸಂಜೆ 4.30 ಗಂಟೆಯವರೆಗೆ ಇರುತ್ತದೆ.** ಹೆಚ್ಚಿನ ವಿವರಗಳು ಬೇಕಾಗಿದ್ದಲ್ಲಿ **ವ್ಯವಸ್ಥಾಪಕ ನಿರ್ದೇಶಕರು, ಡಿಡಿಯುಟಿಟಿಎಲ್** ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಡಿಡಿಯುಟಿಟಿಎಲ್

ವಾಸಾಸಂಇ/ವಾ.ಪ್ರ/1189/ಅಡ್ವರ್ಟೋ/2023–24

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ

ನಂ. 5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು – 560009.
ದೂರವಾಣಿ: 080–22341230/35 ಇ–ಮೇಲ್: bmicapa@gmail.com

ಸಂಖ್ಯೆ:ಬಿಎಂಐಸಿಎಪಿಎ/ಭೂಉಬ–02/41/2022–23/785 ದಿನಾಂಕ: 05–09–2023

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ)ರ ಪ್ರಕಾರ)

ಶ್ರೀ ಜಿ. ಸತೀಶ್ ಕುಮಾರ್ ಬಿನ್ ಲೇಟ್ ಜವರಪ್ಪ ಇವರು ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಮಳೂರು ಹೋಬಳಿ, ಬೆಳೆಕೆರೆ ಗ್ರಾಮದ ಸರ್ವೆ ಸಂಖ್ಯೆ: 70/1ಬಿರ 0ಎ–14¾ ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ಕೆಟಿಸಿಪಿ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಮಹಾಯೋಜನೆಯಲ್ಲಿ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನನ್ನು **“ವ್ಯವಸಾಯ”** ವಲಯದಿಂದ **“ವಾಣಿಜ್ಯ”** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರು ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ತಿಳಿಸಿರುತ್ತಾರೆ.

1) ಈ ಜಮೀನಿನಲ್ಲಿ ವಾಣಿಜ್ಯ ಯೋಜನೆಗಳನ್ನು ಅಭಿವೃದ್ಧಿಪಡಿಸುವುದರಿಂದ, ಬಡವರು, ಮಧ್ಯಮ ವರ್ಗದವರಿಗೆ ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತವೆ.
2) ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ.
3) ಈ ವಾಣಿಜ್ಯ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ.
4) ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಯಾಗಿ ಅಭಿವೃದ್ಧಿಯಾಗುವುದರಿಂದ, ಸರ್ಕಾರದ ಬೊಕ್ಕಸಕ್ಕೆ ತೆರಿಗೆ ರೂಪದಲ್ಲಿ ಸಾಕಷ್ಟು ಆದಾಯ ಬರುತ್ತದೆ.

ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಅವುಗಳನ್ನು ಈ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ **ಸದಸ್ಯ–ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು** ಇವರಿಗೆ ಈ ಪ್ರಕಟಣೆಯಲ್ಲಿನ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಸದಸ್ಯ ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.

ವಾಸಾಸಂಇ/ವಾ.ಪ್ರ/1190/ಅಡ್ವರ್ಟೋ/2023–24

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಆಸ್ತಿ ಅಧಿಕಾರಿಗಳ ಕಛೇರಿ, ಗಾಕೃವಿಕೆ ಕ್ಯಾಂಪಸ್, ಬೆಂಗಳೂರು–560065.

ಸಂಖ್ಯೆ: ಆಅ/ಟಿ.ಎನ್/504/2023–24 ದಿನಾಂಕ: 29.08.2023

ಟೆಂಡರ್ ಪ್ರಕಟಣೆ

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ **ನವೆಂಬರ್ 2023**ರಲ್ಲಿ (4 ದಿನಗಳು) **ನಡೆಯುವ ಕೃಷಿ ಮೇಳಕ್ಕೆ ವಸ್ತು ಪ್ರದರ್ಶನ ಮಳಿಗೆ ಮತ್ತು ಇತರೆ ಕೆಲಸಗಳನ್ನು ಮಾಡಲು** ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ–3ರ ಮುಖಾಂತರ ನೋಂದಣಿ ಪಡೆದ ಕೆಪಿಡಬ್ಲ್ಯೂಡಿ ಗುತ್ತಿಗೆದಾರರುಗಳಿಂದ / ಅನುಮೋದಿತ ಸಂಸ್ಥೆಯಿಂದ ಈ ಕೆಳಕಂಡ ಕೆಲಸಕ್ಕೆ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಕರೆಯಲಾಗಿದೆ. ಟೆಂಡರ್ ಪ್ರಕಟಣೆಯ ವಿವರ, ಟೆಂಡರ್ ದಾಖಲಾತಿ, ಕೆಲಸದ ವಿವರಗಳು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **www.kppp.karnataka.gov.in** ರಲ್ಲಿ ದೊರೆಯುತ್ತದೆ. ಟೆಂಡರ್ ಡಾಕ್ಯುಮೆಂಟ್‌ನ ಶುಲ್ಕ ಮತ್ತು ಇ.ಎಂ.ಡಿ ಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಇ– ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು.

ದ್ವಿಲಕೋಟೆ ಪದ್ಧತಿಯ ಷರತ್ತುಗಳ ವಿವರಗಳನ್ನು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ–3 ರಂತೆ ಅಪ್‌ಲೋಡ್ ಮಾಡಲಾಗಿದೆ.

(1) ಪ್ರಿ–ಬಿಡ್ ಮೀಟಿಂಗ್ ಅನ್ನು ದಿನಾಂಕ: **19.09.2023**ರಂದು ಬೆಳಿಗ್ಗೆ 10.30 ಗಂಟೆಗೆ ನಡೆಸಲಾಗುವುದು. (2) ಖಾಲಿ ಟೆಂಡರ್ ಡಾಕ್ಯುಮೆಂಟ್‌ಗಳನ್ನು **www.kppp.karnataka.gov.in** ಇಂದ ಪಡೆಯಬಹುದು. (3) ಟೆಂಡರ್ ಸಲ್ಲಿಸುವ ಕೊನೆ ದಿನಾಂಕ: **21.09.2023**ರಂದು ಅಪರಾಹ್ನ 4 ಗಂಟೆಯವರೆಗೆ ಆಗಿರುತ್ತದೆ. (4) ತಾಂತ್ರಿಕ ಬಿಡ್ ಅನ್ನು ದಿನಾಂಕ: **23.09.2023**ರಂದು ಬೆಳಿಗ್ಗೆ 10.30 ಗಂಟೆಗೆ ತೆರೆಯಲಾಗುವುದು. (5) ಹಣಕಾಸಿನ ಬಿಡ್ ಅನ್ನು ದಿನಾಂಕ: **27.09.2023**ರಂದು ಬೆಳಿಗ್ಗೆ 10.30 ಗಂಟೆಗೆ ತೆರೆಯಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸುವುದು. ಫೋನ್ ನಂ.080–23332765 ಹಾಗೂ ಇ–ಪ್ರೊಕ್ಯೂರ್‌ಮೆಂಟ್‌ನ ಸಹಾಯವಾಣಿ-8046010000/8068948777, support@eprochelpdesk.com ನ್ನು ಸಂಪರ್ಕಿಸುವುದು.

ಸಹಿ/–
ಆಸ್ತಿ ಅಧಿಕಾರಿಗಳು

DIPR/CP/1175/AAA/2023-24

ಅಮೆರಿಕ ಓಪನ್ ಟೆನಿಸ್: ಸೆಮಿಫೈನಲ್ ಪ್ರವೇಶಿಸಿದ ಕೊಕೊ ಗಾಫ್

ಜ್ವರೇವ್, ಮೆಡ್ವಡೇವ್ ಮುನ್ನಡೆ

ನ್ಯೂಯಾರ್ಕ್ (ರಾಯಿಟರ್ಸ್): ಜರ್ಮನಿಯ ಅಲೆಕ್ಸಾಂಡರ್ ಜ್ವರೇವ್ ಸೋಮವಾರ ರಾತ್ರಿ ನಡೆದ ದೀರ್ಘ ಪಂದ್ಯದಲ್ಲಿ 6-4, 3-6, 6-2, 4-6, 6-3 ರಿಂದ ಆರನೇ ಶ್ರೇಯಾಂಕದ ಯಾನಿಕ್ ಸಿನ್ನರ್ ಅವರನ್ನು ಸೋಲಿಸಿ ಅಮೆರಿಕ ಓಪನ್ ಕ್ವಾರ್ಟರ್‌ಫೈನಲ್ ತಲುಪಿದರು.

ಈ ಟೂರ್ನಿಯ ಮಾಜಿ ರನ್ನರ್ ಅಪ್ ಆಗಿರುವ ಜ್ವರೇವ್ ಅವರು ಕ್ವಾರ್ಟರ್‌ಫೈನಲ್‌ನಲ್ಲಿ ಹಾಲಿ ಚಾಪಿಯನ್ ಹಾಗೂ ಅಗ್ರ ಶ್ರೇಯಾಂಕದ ಆಟಗಾರ ಕಾರ್ಲೋಸ್ ಅಲ್ಕರಾಜ್ ಅವರನ್ನು ಎದುರಿಸಲಿದ್ದಾರೆ. ಉತ್ತಮ ಲಯದಲ್ಲಿರುವ ಜರ್ಮನಿಯ ಆಟಗಾರ, ಅಮೋಘ ಓಟವನ್ನು ಮುಂದುವರಿಸುವ ಉತ್ಸಾಹದಲ್ಲಿದ್ದಾರೆ. ಪಾದದ ನೋವಿನಿಂದ 2022ರಲ್ಲಿ ಅವರು ಕೆಲವು ಟೂರ್ನಿಗಳಲ್ಲಿ ಆಡಿರಲಿಲ್ಲ.

ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ, ಬಾಲ್ಯಕಾಲದಿಂದ ಸ್ನೇಹಿತರಾಗಿರುವ ರಷ್ಯಾದ ಡೇನಿಯಲ್ ಮೆಡ್ವೆಡೇವ್ ಮತ್ತು ಆ್ಯಂಡ್ರಿ ರುಬ್ಲೇವ್ ಎದುರಾಗಲಿದ್ದಾರೆ. ನಮ್ಮಿಬ್ಬರ ಮಧ್ಯೆ ನೈಜ ಹೋರಾಟ ನಡೆಯಲಿದೆ. ಫಲಿತಾಂಶ ಏನೇ ಆದರೂ, ನಮ್ಮಿಬ್ಬರ ಸ್ನೇಹಕ್ಕೆ ಯಾವುದೇ ಸಮಸ್ಯೆಯಾಗದು ಎಂದು ಮೆಡ್ವೆಡೇವ್ ಹೇಳಿದ್ದಾರೆ.

2021ರಲ್ಲಿ ಚಾಂಪಿಯನ್ ಆಗಿದ್ದ ಮೆಡ್ವೆಡೇವ್ ನಾಲ್ಕನೇ ಸುತ್ತಿನಲ್ಲಿ 2-6, 6-4, 6-1, 6-2 ರಿಂದ ಆಸ್ಟ್ರೇಲಿಯಾದ ಆಟಗಾರ, 13ನೇ ಶ್ರೇಯಾಂಕದ ಅಲೆಕ್ಸ್ ಡಿ ಮಿನೋರ್ ವಿರುದ್ಧ ಜಯಗಳಿಸಿದರು. ಇನ್ನೊಂದು ಪಂದ್ಯದಲ್ಲಿ ರುಬ್ಲೇವ್ 6-3, 3-6, 6-3, 6-4 ರಿಂದ ಬ್ರಿಟನ್‌ನ ಜಾಕ್ ಡ್ರೇಪರ್ ಅವರನ್ನು ಹಿಮ್ಮೆಟ್ಟಿಸಿ ಎಂಟರ ಘಟ್ಟಕ್ಕೆ ತಲುಪಿದರು.

ರಷ್ಯಾದ ಈ ಇಬ್ಬರು ಆಟಗಾರರು ಈ ಹಿಂದೆ ಪ್ರಮುಖ ಟೂರ್ನಿಗಳಲ್ಲಿ ಏಳು ಬಾರಿ ಮುಖಾಮುಖಿ ಆಗಿದ್ದು, ಮೆಡ್ವೆಡೇವ್ ಐದು ಸಲ ಜಯಗಳಿಸಿದ್ದಾರೆ. ಕೊನೆಯ ಬಾರಿ, ಈ ವರ್ಷ ದುಬೈ ಓಪನ್‌ನಲ್ಲಿ ಎದುರಾಗಿದ್ದಾಗ ಮೆಡ್ವಡೇವ್ ಅವರೇ ಜಯಶಾಲಿ ಆಗಿದ್ದರು.

ಸೆಮಿಫೈನಲ್‌ಗೆ ಗಾಫ್: ಅಮೆರಿಕದ ಕೊಕೊ ಗಾಫ್, ಮಹಿಳೆಯರ ಸಿಂಗಲ್ಸ್ ವಿಭಾಗದ ಸೆಮಿಫೈನಲ್ ಪ್ರವೇಶಿಸಿದರು. ಮಂಗಳವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಅವರು 6-0, 6-2 ರಿಂದ ಎಲೆನಾ ಒಸ್ಟಪೆಂಕೊ ವಿರುದ್ಧ ಜಯಿಸಿದರು. ಕೇವಲ 1 ಗಂಟೆ 8 ನಿಮಿಷಗಳಲ್ಲಿ ಗೆದ್ದ ಅವರು ಇದೇ ಮೊದಲ ಬಾರಿ ನಾಲ್ಕರಘಟ್ಟ ಪ್ರವೇಶಿಸಿದ ಸಾಧನೆ ಮಾಡಿದರು.



ಗೆಲುವಿನ ಸಂಭ್ರಮದಲ್ಲಿ ಚೀನಾದ ಝೆಂಗ್ ಕ್ವಿನ್ವೆನ್ ಎಎಫ್‌ಪಿ ಚಿತ್ರ

ಕ್ವಿನ್ವೆನ್‌ಗೆ ಗೆಲುವು, ಜಬೇರ್ ನಿರ್ಗಮನ

ಕಳೆದ ವರ್ಷ ರನ್ನರ್ ಅಪ್ ಆಗಿದ್ದ ಆನ್ಸ್ ಜಬೇರ್ ಸೋಮವಾರ ನಡೆದ ಮಹಿಳಾ ಸಿಂಗಲ್ಸ್ ಪ್ರಿಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಚೀನಾದ ಝೆಂಗ್ ಕ್ವಿನ್ವೆನ್ ಅವರಿಗೆ ನೇರ ಸೆಟ್‌ಗಳಲ್ಲಿ ಮಣಿದರು. 6-2, 6-4 ರಿಂದ ಗೆದ್ದ 20 ವರ್ಷದ ಝೆಂಗ್ ಇದೇ ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರ ಎಂಟರ ಘಟ್ಟ ತಲುಪಿದರು.

23ನೇ ಶ್ರೇಯಾಂಕದ ಝೆಂಗ್, 2019ರಲ್ಲಿ ವಾಂಗ್ ಕ್ವಿಯಾಂಗ್ ಅವರ ನಂತರ ಅಮೆರಿಕ ಓಪನ್ ಎಂಟರ ಘಟ್ಟ ತಲುಪಿದ ಚೀನಾದ ಮೊದಲ ಆಟಗಾರ್ತಿ ಎನಿಸಿದರು. ಬೇಸ್‌ಲೈನ್‌ನಲ್ಲಿ ಆಕ್ರಮಣಕಾರಿ ಆಟವಾಡಿದ ಚೀನಾ ಆಟಗಾರ್ತಿ ಎದುರು ಐದನೇ ಶ್ರೇಯಾಂಕದ ಟ್ಯುನೀಷಿಯಾ ಆಟಗಾರ್ತಿ ನಿರುತ್ತರರಾದರು. ಝೆಂಗ್ 21 ವಿನ್ನರ್‌ಗಳನ್ನು ಸಿಡಿಸಿದರು.

ಜಬೇರ್ ಕಳೆದ ಐದು ಗ್ರ್ಯಾನ್‌ಸ್ಲಾಂ ಟೂರ್ನಿಗಳಲ್ಲಿ ಎರಡು ಬಾರಿ ವಿಂಬಲ್ಡನ್ ಸೇರಿ ಮೂರು ಬಾರಿ ಫೈನಲ್ ತಲುಪಿದ್ದರು.

ಹಾಕಿ: ಡಿವೈಇಎಸ್ 'ಎ' ತಂಡಕ್ಕೆ ಪ್ರಶಸ್ತಿ

ಗದಗ: ಬೆಂಗಳೂರಿನ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ (ಡಿವೈಇಎಸ್) 'ಎ' ತಂಡ ಮಂಗಳವಾರ 4-2 ಗೋಲುಗಳಿಂದ ಡಿವೈಇಎಸ್ 'ಬಿ' ತಂಡವನ್ನು ಸೋಲಿಸಿ, ಮಹಾತ್ಮ ಗಾಂಧಿ ಹಾಕಿ ಕ್ರೀಡಾಂಗಣದ ಉದ್ಘಾಟನೆ ಪ್ರಯುಕ್ತ ಆಯೋಜಿಸಲಾಗಿದ್ದ ಹಾಕಿ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡಿತು.

ವಿರಾಮದ ವೇಳೆ 2-1 ಗೋಲುಗಳಿಂದ ಮುಂದಿದ್ದ ಡಿವೈಇಎಸ್ 'ಎ' ತಂಡದ ಪರ ಅನಂತ್ (16ನೇ ನಿಮಿಷ), ವಚನ್ ಎಚ್.ಎ. (17ನೇ ನಿಮಿಷ), ಸಪನ್ ಅಯ್ಯಪ್ಪ (39ನೇ ನಿಮಿಷ) ಮತ್ತು ದೀಪಕ್ ಯಾದವ್ (49ನೇ ನಿಮಿಷ) ಅವರು ಗೋಲು ಗಳಿಸಿದರು. ಡಿವೈಇಎಸ್ 'ಬಿ' ತಂಡದ ಪರ ಮೋಕ್ಷಿತ್ (29ನೇ ನಿಮಿಷ), ಶಿವಕುಮಾರ್ (59ನೇ ನಿಮಿಷ) ಗೋಲು ಹೊಡೆದರು.

ಜಂಟಿ ಅಗ್ರಸ್ಥಾನದಲ್ಲಿ ಭಾರತದ ಗುಕೇಶ್

ಕೋಲ್ಕತ್ತ (ಪಿಟಿಐ): ಭಾರತದ ನಂ.1 ಆಟಗಾರ ಡಿ.ಗುಕೇಶ್ ಅವರು ಟಾಟಾ ಸ್ಟೀಲ್ ಚೆಸ್ ಟೂರ್ನಿಯ ಓಪನ್ ಬ್ಲಿಟ್ಜ್ ವಿಭಾಗದಲ್ಲಿ ಮೂರನೇ ಸುತ್ತಿನ ಬಳಿಕ ಇತರ ಮೂವರೊಂದಿಗೆ ಜಂಟಿ ಅಗ್ರಸ್ಥಾನದಲ್ಲಿದ್ದಾರೆ.

ಒಂದು ಗೆಲುವು ಮತ್ತು ಎರಡು ಡ್ರಾಗಳೊಂದಿಗೆ ಗುಕೇಶ್ ಎರಡು ಪಾಯಿಂಟ್ಸ್ ಹೊಂದಿದ್ದಾರೆ. ಟೂರ್ನಿಯಲ್ಲಿ ಇನ್ನೂ 6 ಸುತ್ತುಗಳು ಬಾಕಿಯಿವೆ.

ಅಜರ್‌ಬೈಜಾನ್‌ನ ತೈಮೂರ್ ರಜಬೋವ್, ಫ್ರಾನ್ಸ್‌ನ ಮ್ಯಾಕ್ಸಿಮ್ ಲಗ್ರೇವ್ ಮತ್ತು ಜರ್ಮನಿಯ ವಿನ್ಸೆಂಟ್ ಕೆಮೆರ್ ಅವರೂ ತಲಾ ಎರಡು ಪಾಯಿಂಟ್ಸ್ ಹೊಂದಿದ್ದಾರೆ.

ಟೆನಿಸ್: ಎರಡನೇ ಸುತ್ತಿಗೆ ಸೆಹಜ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಗ್ರಶ್ರೇಯಾಂಕದ ಆಟಗಾರ ಸೆಹಜ್ ಸಿಂಗ್ ಪವಾರ್, ಐಟಿಎಫ್ ಜೆ30 ಟೆನಿಸ್ ಟೂರ್ನಿಯ ಬಾಲಕರ ವಿಭಾಗದಲ್ಲಿ ಎರಡನೇ ಸುತ್ತು ಪ್ರವೇಶಿಸಿದರು.

ಕೆಎಸ್‌ಎಲ್‌ಟಿಎ ಕೋರ್ಟ್‌ನಲ್ಲಿ ಮಂಗಳವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ ಸೊಗಸಾದ ಆಟವಾಡಿದ ಅವರು 6-2, 6-1 ರಿಂದ ಕರ್ನಾಟಕದ ಸಂಚಿತ್ ರಾವ್ ವಿರುದ್ಧ ಗೆದ್ದರು.

ಕರ್ನಾಟಕದ ಆಟಗಾರರಾದ ಆರನೇ ಶ್ರೇಯಾಂಕದ ರೂರಿಕ್ ರಜನಿ ಮತ್ತು ಏಳನೇ ಶ್ರೇಯಾಂಕದ ತೇಜಸ್ ಅಹುಜಾ ಅವರು ಮೊದಲ ಸುತ್ತಿನಲ್ಲೇ ನಿರ್ಗಮಿಸಿದರು.

ಅರ್ಹತಾ ಸುತ್ತಿನಲ್ಲಿ ಗೆದ್ದು ಬಂದ ಆಟಗಾರ ಕೇಶವ್ ಗೋಯೆಲ್ ಅವರು 3-6, 6-2, 6-4 ರಿಂದ ರೂರಿಕ್ ಅವರನ್ನು ಮಣಿಸಿದರೆ, ಕೆವಿನ್ ಟೈಟಸ್ ಸುರೇಶ್ 6-3, 6-1 ರಿಂದ ತೇಜಸ್ ವಿರುದ್ಧ ಗೆದ್ದರು.

ಬಾಲಕಿಯರ ವಿಭಾಗದ ಪಂದ್ಯಗಳಲ್ಲಿ ಡನಿಕಾ ಫೆರ್ನಾಂಡೊ 6-4, 6-3 ರಿಂದ ಶಾಗುಣ್ ಕುಮಾರಿ ವಿರುದ್ಧ; ದಿಶಾ ಬೆಹೆರಾ 6-4, 6-4 ರಿಂದ ದಿಯಾ ಚೌಧರಿ ವಿರುದ್ಧ; ಶೈವಿ ಗೌರವ್ 6-2, 6-3 ರಿಂದ ಜಿ.ಡಿ. ಮೇಘನಾ ವಿರುದ್ಧ; ಅವತಿ 1-6, 6-2, 6-1 ರಿಂದ ಆಕೃತಿ ವಿರುದ್ಧ; ಸ್ನಿಗ್ಧಾ 6-3, 6-4 ರಿಂದ ದೇವಾಂಶಿ ಪ್ರಭುದೇಸಾಯಿ ವಿರುದ್ಧವೂ ಗೆದ್ದರು.

ಚೀನಾ ಓಪನ್: ಟ್ರೀಸಾ– ಗಾಯತ್ರಿ ಜೋಡಿಗೆ ಸೋಲು

ಪ್ರಣಯ್, ಲಕ್ಷ್ಯ ಸೇನ್‌ಗೆ ಆಘಾತ

ಹಾಂಗ್‌ಝೌ (ಪಿಟಿಐ): ಚೀನಾ ಓಪನ್ ಸೂಪರ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಮೊದಲ ದಿನವೇ ಭಾರತದ ಆಟಗಾರರು ವೈಫಲ್ಯ ಅನುಭವಿಸಿದರು. ಎಚ್.ಎಸ್. ಪ್ರಣಯ್, ಲಕ್ಷ ಸೇನ್, ಪ್ರಿಯಾಂಶು ರಾಜಾವತ್ ಮಂಗಳವಾರ ಮೊದಲ ಸುತ್ತಿನಲ್ಲೇ ಅನಿರೀಕ್ಷಿತ ಸೋಲಿನೊಡನೆ ನಿರ್ಗಮಿಸಿದರು.

ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರನ್ನು ಹೊರತುಪಡಿಸಿ, ಭಾರತದ ಇತರ ಆಟಗಾರರ ಸವಾಲು ಅಂತ್ಯಗೊಂಡಿದೆ. ಅವರು ಬುಧವಾರ ಮೊದಲ ಸುತ್ತಿನಲ್ಲಿ ಇಂಡೋನೇಷ್ಯಾದ ಮುಹಮ್ಮದ್ ಶೋಹಿಬುಲ್ ಫಿಕ್ರಿ ಮತ್ತು ಬಗಾಸ್ ಮೌಲಾನಾ ಅವರನ್ನು ಎದುರಿಸಲಿದ್ದಾರೆ.

ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ಪ್ರಣಯ್ ಅವರು ಪುರುಷರ ಸಿಂಗಲ್ಸ್‌ನಲ್ಲಿ ಮೊದಲ ಸುತ್ತಿನಲ್ಲೇ ಆಘಾತ ಅನುಭವಿಸಿದರು. ಈ ಋತುವಿನಲ್ಲಿ ಉತ್ತಮ ಲಯದಲ್ಲಿದ್ದು ವೃತ್ತಿಜೀವನದಲ್ಲೇ ಶ್ರೇಷ್ಠ ರ‍್ಯಾಂಕಿಂಗ್ (6ನೇ) ಪಡೆದಿರುವ ಪ್ರಣಯ್, 22ನೇ ಕ್ರಮಾಂಕದ ಎನ್‌ಜಿ ತ್ಸೆ ಯೊಂಗ್ (ಮಲೇಷ್ಯಾ) ಅವರಿಗೆ ಮಣಿದರು.

ಒಂದು ಗಂಟೆ ಆರು ನಿಮಿಷಗಳ ಕಾಲ ನಡೆದ ಹೋರಾಟದಲ್ಲಿ ಪ್ರಣಯ್ 12-21, 21-13, 18-21ರಿಂದ ಪರಾಭವಗೊಂಡರು.

ಲಕ್ಷ್ಯ ಸೇನ್ ಅವರು ಡೆನ್ಮಾರ್ಕ್‌ನ ಆ್ಯಂಡರ್ಸ್ ಆಂಟೊನ್ಸೆನ್ ವಿರುದ್ಧ ಪರಾಭವಗೊಂಡರು. ಒಂದು ಗಂಟೆ 18 ನಿಮಿಷಗಳ ಹೋರಾಟದಲ್ಲಿ 21-23, 21-16, 9-21ರಿಂದ ಮಣಿದರು.

ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ಮತ್ತೊಬ್ಬ ಆಟಗಾರ ಪ್ರಿಯಾಂಶು ರಾಜಾವತ್ ಅವರೂ ನಿರ್ಗಮಿಸಿದರು. ಅವರು 13-21, 24-26ರಿಂದ ಇಂಡೋನೇಷ್ಯಾದ ಶೇಸರ್ ಹಿರೇನ್ ರುಸ್ತಾವಿಟೊ ಎದುರು ಸೋತರು.

ಡಬಲ್ಸ್‌ನಲ್ಲೂ ನಿರಾಸೆ: ಮಹಿಳೆಯರ ಡಬಲ್ಸ್‌ನಲ್ಲಿ ಭಾರತದ ಟ್ರೀಸಾ ಜೋಲಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿ 18-21 11-21ರಿಂದ ಚೀನಾದ ಚೆನ್ ಕ್ವಿಂಗ್ ಚೆನ್ ಮತ್ತು ಜಿಯಾ ಯಿ ಫ್ಯಾನ್ ಜೋಡಿಗೆ ಶರಣಾಯಿತು. ಪುರುಷರ ಡಬಲ್ಸ್‌ನಲ್ಲಿ ಎಂ.ಆರ್. ಅರ್ಜುನ್ – ಧ್ರುವ್ ಕಪಿಲ 23-21, 21-19ರಿಂದ ಜಪಾನಿನ ಮಾಟ್ಸುಯಿ ಮತ್ತು ಟಕೆಯುಚಿ ಅವರಿಗೆ ಮಣಿಯಿತು.

ಬ್ಯಾಸ್ಕೆಟ್‌ಬಾಲ್: ಸೆಮಿಗೆ ಅಮೆರಿಕ

ಮನಿಲಾ (ಎಎಫ್‌ಪಿ): ಅಮೆರಿಕ ತಂಡ ಮಂಗಳವಾರ 100-63 ಪಾಯಿಂಟ್‌ಗಳಿಂದ ಇಟಲಿ ತಂಡವನ್ನು ಸೋಲಿಸಿ ವಿಶ್ವಕಪ್ ಬ್ಯಾಸ್ಕೆಟ್‌ಬಾಲ್ ಸೆಮಿಫೈನಲ್ ತಲುಪಿತು.

ಎರಡನೇ ಸುತ್ತಿನಲ್ಲಿ ಲಿಥುವೇನಿಯಾ ಎದುರು ಸೋತಿದ್ದ ಅಮೆರಿಕ ಚೇತರಿಸಿದ ರೀತಿ ಗಮನಸೆಳೆಯಿತು. ಅಮೆರಿಕ ತಂಡವು, ಶುಕ್ರವಾರ ನಡೆಯುವ ಸೆಮಿಫೈನಲ್‌ನಲ್ಲಿ ಜರ್ಮನಿ-ಲಾತ್ವಿಯಾ ಪಂದ್ಯದ ವಿಜೇತರನ್ನು ಎದುರಿಸಲಿದೆ. ಮಿಕಲ್ ಬ್ರಿಜಸ್ 24 ಪಾಯಿಂಟ್ಸ್ ಕಲೆಹಾಕಿದರೆ, ಟೈರೇಸ್ ಹಲಿಬುರ್ಟನ್ 18 ಪಾಯಿಂಟ್ಸ್ ಕಾಣಿಕೆ ನೀಡಿದರು. ಸೈಮನ್ ಫೊಂಟೆಚಿಯೊ ಇಟಲಿ ಪರ 18 ಪಾಯಿಂಟ್ಸ್ ಗಳಿಸಿದರು.



*Offer valid for a limited period only. T&C apply. # Ex-showroom price of TVS XL100 Heavy Duty Kick Start variant in Karnataka. T&C apply. ^ Mobile charger is available in select variants. + Based on TVSM internal test conditions. As compared to BS-IV models. T&C apply.

TVS 3 YEAR WARRANTY TVS CREDIT L&T Financial Services IDFC FIRST Bank SHRIRAM Finance IndusInd Bank

FOR ALL INSTITUTIONAL/BULK REQUIREMENTS PLEASE MAIL corporate.customersupport@tvsmotor.com ಅಧಿಕೃತ ಮುಖ್ಯ ವಿತರಕರು: ಬೆಂಗಳೂರು: ಜಯನಗರ: ಭಾರತ್ ಟಿವಿಎಸ್ ದೂ: 8971572817, ರಾಜಾಜಿನಗರ: ಬ್ರಿಡ್ಜ್‌ಸ್ಟೋನ್ ಟಿವಿಎಸ್ ದೂ: 8971624526, ನಾಗರಭಾವಿ: ಗ್ಲೋಬಲ್ 7619375566 , ಮಹಾಲಕ್ಷ್ಮಿ ಲೇಔಟ್: ಗ್ಲೋಬಲ್ ಟಿವಿಎಸ್ ದೂ: 7619265566, ದೊಮ್ಮಲೂರು: ಪಿ.ಆರ್.ಎನ್ ಟಿವಿಎಸ್ ದೂ: 6366936909, ಹಲಸೂರು: ಪಿ.ಆರ್.ಎನ್ ಟಿವಿಎಸ್ ದೂ: 6366936931, ಚಾಮರಾಜಪೇಟೆ: ಪಿ.ಆರ್.ಎನ್ ಟಿವಿಎಸ್ ದೂ: 6366936922, ಕೋರಮಂಗಲ: ಎನ್.ಆರ್.ಜಿ.ಸಿ ಟಿವಿಎಸ್ ದೂ: 9900860960, ಹೆಬ್ಬಗೋಡಿ: ಬೆಂಗಳೂರು ಟಿವಿಎಸ್ ದೂ: 8151095959/ 080-41141555, ಹರಲೂರು: ಬೆಂಗಳೂರು ಟಿವಿಎಸ್ ದೂ: 8494959555/ 8970859555, ಬನಶಂಕರಿ: ಸಿನರ್ಜಿ ಟಿವಿಎಸ್ ದೂ: 8792499451, ಕನಕಪುರ ರಸ್ತೆ: ಧನ್‌ಚರಣ್ ಟಿವಿಎಸ್ ದೂ: 9916183232, ಜಾಲಹಳ್ಳಿ ಕ್ರಾಸ್: ಪ್ರಕೃತಿ ಟಿವಿಎಸ್ ದೂ: 917814508304, ಗಂಗಾನಗರ: ಪ್ರಕೃತಿ ಟಿವಿಎಸ್ ದೂ: 7814508304, ಭದ್ರಪ್ಪ ಲೇಔಟ್: ಪ್ರಕೃತಿ ಟಿವಿಎಸ್ ದೂ: 7814508304, ಕಲ್ಯಾಣ ನಗರ: ಪಿ.ಆರ್.ಎನ್ ಟಿವಿಎಸ್ ದೂ: 6366936908, ಬೊಮ್ಮನಹಳ್ಳಿ: ಅರುಣಗಿರಿ ಟಿವಿಎಸ್ ದೂ: 9141954101, ಹೆಚ್.ಎಸ್.ಆರ್ ಲೇಔಟ್: ಕುಬೇರ ಟಿವಿಎಸ್ ದೂ: 8971601956, ಬೆಳ್ಳಂದೂರು: ಇಂಡಿಯನ್ ಟಿವಿಎಸ್ ದೂ: 9900500123, ಬನ್ನೇರುಘಟ್ಟ ರೋಡ್: ನಿಯೋ ಟಿವಿಎಸ್ ದೂ: 8971628452, ಮಾರತಹಳ್ಳಿ: ತ್ರಿಜಲ್ ಟಿವಿಎಸ್ ದೂ: 8971599450, ವೈಟ್‌ಫೀಲ್ಡ್: ತ್ರಿಜಲ್ ಟಿವಿಎಸ್ ದೂ: 8971598119, ಯಲಹಂಕ: ಹೇಮಂತ್ ಟಿವಿಎಸ್ ದೂ: 9740180379, ವಿದ್ಯಾರಣ್ಯಪುರ: ಹೇಮಂತ್ ಟಿವಿಎಸ್ ದೂ: 9740180379, ದೊಡ್ಡಬಳ್ಳಾಪುರ: ಹೇಮಂತ್ ಟಿವಿಎಸ್ ದೂ: 9740180379, ರಾಜರಾಜೇಶ್ವರಿ ನಗರ: ಸೋಲಾರ್ ಟಿವಿಎಸ್ ದೂ: 9066032272, ಕೆಂಗೇರಿ: ಸೋಲಾರ್ ಟಿವಿಎಸ್ ದೂ: 9066032272, ಕೃಷ್ಣರಾಜಪುರಂ: ಸೂರ್ಯಪ್ರತಾಪ್ ಟಿವಿಎಸ್ ದೂ: 9870327108, ಥಣಿಸಂದ್ರ: ಸೂರ್ಯಪ್ರತಾಪ್ ಟಿವಿಎಸ್ ದೂ: 9986716999/9449847671, ಟನ್ ಫ್ಯಾಕ್ಟರಿ: ಡಿಂಪಲ್ ಟಿವಿಎಸ್ ದೂ: 8147117435 / 36, ಲಾಲ್‌ಬಾಗ್ ರಸ್ತೆ: ಹಿಮಾಲಯ ಟಿವಿಎಸ್ 9513077787, ಕೋರಮಂಗಲ: ಫ್ಲಾಗ್‌ಶಿಪ್ ಟಿವಿಎಸ್ 9008684578, ಬಿಟಿಎಂ ಲೇಔಟ್: ಸಿನರ್ಜಿ ಟಿವಿಎಸ್ 8792499453, ಮಾರನಹಳ್ಳಿ: ಸಿನರ್ಜಿ ಟಿವಿಎಸ್ 8951890800, ಬಿ.ಹೆಚ್.ಇ.ಎಲ್ ಮೈಸೂರು ರೋಡ್: ಪ್ರಕೃತಿ ಟಿವಿಎಸ್ 9972448917, ಅತ್ತಿಬೆಲೆ: ಬಾಲಕೃಷ್ಣ ಟಿವಿಎಸ್ ದೂ: 8971703849, ಜಿಗಣಿ: ಶ್ರೀ ಬಾಲಾಜಿ ಟಿವಿಎಸ್ ದೂ: 9845762549, ಹೊಸಕೋಟೆ: ನಿತಿನ್ ಟಿವಿಎಸ್ ದೂ: 7811021081, ನೆಲಮಂಗಲ: ನವಯುಗ್ ಟಿವಿಎಸ್ ದೂ: 8971630975, ಕನಕಪುರ: ಅಂಜನಾದ್ರಿ ಟಿವಿಎಸ್ ದೂ: 9066064491, ರಾಮನಗರ: ಸಮರ್ಥ ಟಿವಿಎಸ್ ದೂ: 9066064383, ಕೋಲಾರ: ಸರವಣ ಟಿವಿಎಸ್ ದೂ: 8971676986, ಕೆ.ಜಿ.ಎಫ್: ಸರವಣ ಟಿವಿಎಸ್ ದೂ: 9066064490, ಚಿಂತಾಮಣಿ: ಬಾಲಾಜಿ ಟಿವಿಎಸ್ ದೂ: 9066064551, ಚಿಕ್ಕಬಳ್ಳಾಪುರ: ಮಾರುತಿ ಟಿವಿಎಸ್ ದೂ: 9870327133, ತುಮಕೂರು: ಶ್ರೀ ಬಾಲಾಜಿ ಟಿವಿಎಸ್ ದೂ: 8971657342, ತುಮಕೂರು: ಶ್ರೀಗಿರಿ ಟಿವಿಎಸ್ ದೂ: 8971657691, ತಿಪಟೂರು: ನಿಕಿತ ಟಿವಿಎಸ್ ದೂ: 8971675903, ಚನ್ನಪಟ್ಟಣ: ಸಮರ್ಥ್ ಟಿವಿಎಸ್ 9513949993, ಹಾಸನ: ಶ್ರೀ ಕೃಷ್ಣ ಟಿವಿಎಸ್ 9739306696, (ಬ್ರಾಂಚ್) ಜಯನಗರ: ಶ್ರೀ ಕೃಷ್ಣ ಟಿವಿಎಸ್, ದೂ: 7829928314, ಅಧಿಕೃತ ವಿತರಕರು: ಬೆಂಗಳೂರು: ಮಾಗಡಿ ಮೈನ್ ರೋಡ್: ಸೋಲಾರ್ ಟಿವಿಎಸ್ ದೂ: 080-23400193, ವಿಜಯನಗರ: ಸೋಲಾರ್ ಟಿವಿಎಸ್ ದೂ: 7829066661, ಮತ್ತಿಕೆರೆ: ಫಾಸ್ಟ್‌ಬೈಕ್ ಟಿವಿಎಸ್ ದೂ: 9986837771, ಬಸವೇಶ್ವರನಗರ: ಸ್ಪೀಡ್ ಟಿವಿಎಸ್ ದೂ: 080-41287182, ಮಲ್ಲೇಶ್ವರಂ: ಕುಬೇರ ಟಿವಿಎಸ್, ದೂ: 7624988146, ಹನುಮಂತ ನಗರ: ಸ್ಕಂದ ಟಿವಿಎಸ್ ದೂ: 9008533899, ಜೆಪಿ ನಗರ 6ನೇ ಸ್ಟೇಜ್: ಶ್ರೀಸುಕ್ರಾ ಟಿವಿಎಸ್ ದೂ: 988696609, ಮರಿಯಪ್ಪನ ಪಾಳ್ಯ: ವಿವಿಕೆ ಟಿವಿಎಸ್ ದೂ: 080 - 23241116, ಶಿವಾಜಿನಗರ: ಅಂಬಿಕಾ ಟಿವಿಎಸ್ ದೂ: 9980510555, ಮಡಿವಾಳ: ಇಂಡಿಯನ್ ಟಿವಿಎಸ್ ದೂ: 9916870260, ವಿಜ್ಞಾನನಗರ: ಸಂಚ್ಯೂರಿ ಟಿವಿಎಸ್ ದೂ: 9886823174, ಹೆಣ್ಣೂರು: ನಕ್ಷತ್ರ ಟಿವಿಎಸ್ ದೂ: 9738101956, ತಾವರೆಕೆರೆ: ಕಿರಣ್ ಟಿವಿಎಸ್ ದೂ: 080 28434049, ಸುಂಕದಕಟ್ಟೆ: ನಮನ ಟಿವಿಎಸ್ ದೂ: 9900307123, ಬೈದರಹಳ್ಳಿ: ಸ್ವಸ್ತಿಕ್ ಟಿವಿಎಸ್ ದೂ: 9141151132, ಎಲೆಕ್ಟ್ರಾನಿಕ್ ಸಿಟಿ: ಶ್ರೀ ಟಿವಿಎಸ್ 9845260065, ಬೇಗೂರು ರೋಡ್: ದೇವಾ ಟಿವಿಎಸ್ 9538313497, ಗೊಟ್ಟಿಗೆರೆ: ಎಸ್.ಜಿ. ಟಿವಿಎಸ್ ದೂ: 9845762549, ವರ್ತೂರು: ಹೃತಿಕ್ ಟಿವಿಎಸ್ ದೂ: 9886100299, ಹಾರೋಹಳ್ಳಿ: ಎಸ್.ಎಂ. ಟಿವಿಎಸ್ ದೂ: 9845002176, ಚಂದಾಪುರ: ಮುರಳಿ ಟಿವಿಎಸ್ ದೂ: 9448081601, ಆನೇಕಲ್: ಶ್ರೀ ವೆಂಕಟೇಶ್ವರ ಟಿವಿಎಸ್ ದೂ: 7411626961, ಚನ್ನಪಟ್ಟಣ: ಕೆಎಂ ಟಿವಿಎಸ್ ದೂ: 9845188443, ದಾಬಸ್ ಪೇಟ್: ನವಯುಗ ಟಿವಿಎಸ್ ದೂ: 080 27734188, ಕಗ್ಗಲಿಪುರ: ಸಾತ್ವಿಕ್ ಟಿವಿಎಸ್ ದೂ: 9845041803, ದೇವನಹಳ್ಳಿ: ಸುಪ್ರತೀಕ್ ಟಿವಿಎಸ್ ದೂ: 9845832523, ವಿಜಪುರ: ಶ್ರೀ ದುರ್ಗಾ ಟಿವಿಎಸ್ 8892762610, ಬಾಗಲೂರು: ಮಾದವ ಟಿವಿಎಸ್ ದೂ: 9620000329, ಮಾಗಡಿ: ಶ್ರೀ ನರಸಿಂಹ ಟಿವಿಎಸ್ ದೂ: 9742248691, ಬಾಗೇಪಲ್ಲಿ: ಶ್ರೀ ಸಾಯಿ ಟಿವಿಎಸ್ ದೂ: 9945513446, ಶಿಡ್ಲಘಟ್ಟ: ಶ್ರೀ ರಾಯಲ್ ಟಿವಿಎಸ್ ದೂ: 9845088868, ಗುಡಿಬಂಡೆ: ಮಂಜು ಟಿವಿಎಸ್ ದೂ: 9379268678. ಗೌರಿಬಿದನೂರು: ಸಾಯಿ ಟಿವಿಎಸ್ ದೂ: 9448310962. ಮಾಲೂರು: ಸರವಣ ಟಿವಿಎಸ್ 9449715731, ಶ್ರೀನಿವಾಸಪುರ: ವಿಘ್ನೇಶ್ ಟಿವಿಎಸ್ 9972885552, ಮುಳಬಾಗಿಲು: ಗರುಡ ಮೋಟಾರ್ಸ್ ದೂ: 789982232, ತುರುವೇಕೆರೆ: ಗದ್ದೆ ಕೆಂಪಮ್ಮ ಟಿವಿಎಸ್ ದೂ: 9986155108. ಗುಬ್ಬಿ: ಮನು ಟಿವಿಎಸ್ ದೂ: 9886989839. ಮಧುಗಿರಿ: ಶ್ರೀ ಸ್ಕಂದ ಟಿವಿಎಸ್ ದೂ: 9242455433. ಪಾವಗಡ: ಶ್ರೀ ನಿವಾಸ ಟಿವಿಎಸ್ ದೂ: 9448038368. ಕುಣಿಗಲ್: ಶ್ರೀ ಮಾರುತಿ ಟಿವಿಎಸ್ ದೂ: 9945938606. ನಿಟ್ಟೂರು: ಎಸ್.ಎಸ್. ಟಿವಿಎಸ್ ದೂ: 9164479810, ಹೊನ್ನುಡುಕೆ: ಶ್ರೀ ಎಸ್.ಎಲ್.ವಿ. ಟಿವಿಎಸ್ 9845802853, ಚಿಕ್ಕನಾಯಕನಹಳ್ಳಿ: ವಿಜಯಶ್ರೀ ಟಿವಿಎಸ್ ದೂ: 9742429149. ಸಿರಾ: ಸಪ್ತಗಿರಿ ಟಿವಿಎಸ್ ದೂ: 9844354422, ಹುಲಿಯಾರ: ವಿಜಯಶ್ರೀ ಟಿವಿಎಸ್ ದೂ: 9742429149. ಅರಕಲಗುಡು: ವೈ.ಜಿ. ಟಿವಿಎಸ್ 9448413894, ಬೇಲೂರು: ಶ್ರೀ ಕೃಷ್ಣ ಟಿವಿಎಸ್ 9448330165, ಹೊಳೆನರಸೀಪುರ: ಸಾಗರ ಟಿವಿಎಸ್ 9448721807, ಚೆನ್ನರಾಯಪಟ್ಟಣ: ಮಹಾಲಕ್ಷ್ಮಿ ಟಿವಿಎಸ್ 99945722711, ಸಕ್ಲೇಶ್ ಪುರ: ಸೋನಾ ಬೈಕ್ ಟಿವಿಎಸ್ 9739046149, ಹಳೇಬೀಡು: ರವಿ ಟಿವಿಎಸ್ 8747939399.

dentsu/pv blr/05/23